ಶನಿವಾರ, ಡಿಸೆಂಬರ್ 30, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 360 | ಪುಟ 20

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ಹೊಸ ವರ್ಷದ ಸಂಕಲ್ಪಗಳು ದಿನಚರಿಯಾಗಿ ಬದಲಾಗುತ್ತವೆಯೇ?

2023 ಮರೆಯುವ ಮುನ್ನ... 11

ಪ್ರಧಾನಿ ಭೇಟಿಗೆ ಅಯೋಧ್ಯೆ ಸಜ್ಜು 12

ಡೆಂಗಿ: ವಾರದಲ್ಲಿ 263 ಪ್ರಕರಣ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,240 ▼	21,731 ▼	₹65,200 (ಬೆಂಗಳೂರು) ▼	₹76,200 (ಬೆಂಗಳೂರು) ▲	83.16 ▲

ಒಳ ಪುಟಗಳು

ಪಾಳು ಮನೆಯಲ್ಲಿ ಐವರ ಅಸ್ಥಿಪಂಜರ ಪತ್ತೆ 8

ಸುಕನ್ಯಾ ಸಮೃದ್ಧಿ ಬಡ್ಡಿದರ ಹೆಚ್ಚಳ 13

ಬಸವರಾಜ ರಾಯರಡ್ಡಿ, ಬಿ.ಆರ್. ಪಾಟೀಲರಿಗೆ ಸಂಪುಟ ದರ್ಜೆ ಸ್ಥಾನ

ಅತೃಪ್ತರಿಗೆ 'ಸಂಪುಟ'ದ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿರುದ್ಧ ಬಹಿರಂಗವಾಗಿ ನಿರಂತರ ವಾಗ್ದಾಳಿ ನಡೆಸಿ ಮುಜುಗರಕ್ಕೆ ಸಿಲುಕಿಸಿದ್ದ ಶಾಸಕರಾದ ಬಸವರಾಜ ರಾಯರಡ್ಡಿ ಮತ್ತು ಬಿ.ಆರ್. ಪಾಟೀಲ ಅವರಿಗೆ ಸಂಪುಟ ದರ್ಜೆ ಸ್ಥಾನದೊಂದಿಗೆ ಸಲಹೆಗಾರರ ಹುದ್ದೆ ನೀಡುವ ಮೂಲಕ ಅತೃಪ್ತಿ ಶಮನದ ಯತ್ನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ್ದಾರೆ.

ರಾಯರಡ್ಡಿ

ಬಿ.ಆರ್. ಪಾಟೀಲ

ಸಿದ್ದರಾಮಯ್ಯ ಅವರ ದೀರ್ಘಕಾಲದ ರಾಜಕೀಯ ಒಡನಾಡಿಗಳಾದ ರಾಯರಡ್ಡಿ ಮತ್ತು ಪಾಟೀಲ, ಸಚಿವ ಸಂಪುಟ ರಚನೆಯ ಬಳಿಕ ಅಸಮಾಧಾನಗೊಂಡಿದ್ದರು. ಸಂಪುಟ ಸದಸ್ಯರು ಹಾಗೂ ಸರ್ಕಾರದ ಕಾರ್ಯವೈಖರಿ ವಿರುದ್ಧ ಆಗಾಗ ಟೀಕೆ ಮಾಡುತ್ತಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಸಚಿವರ ನಡೆಯ ವಿರುದ್ಧ ಶಾಸಕರಿಂದ ಸಹಿ ಹಾಕಿಸಿದ್ದರೆಂಬ ಆರೋಪಕ್ಕೂ ಗುರಿಯಾಗಿದ್ದ ಇಬ್ಬರೂ ತಮ್ಮ ನಡೆಗಳ ಮೂಲಕ ಪಕ್ಷವನ್ನು ಮುಜುಗರಕ್ಕೆ ದೂಡಿದ್ದರು.

ರಾಯರಡ್ಡಿ ಅವರಿಗೆ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರ ಹುದ್ದೆ ನೀಡಿದ್ದರೆ, ಬಿ.ಆರ್. ಪಾಟೀಲ ಅವರನ್ನು ಮುಖ್ಯಮಂತ್ರಿಯವರ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ವಿಧಾನಸಭೆಯ ಅತ್ಯಂತ ಹಿರಿಯ ಸದಸ್ಯ, ಮುಖ್ಯಮಂತ್ರಿಯವರ ನಿಕಟ ಒಡನಾಡಿಗಳಲ್ಲಿ ಒಬ್ಬರಾದ ಹಳಿಯಾಳ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮೂವರಿಗೂ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ.

8ನೇ ಪುಟ ನೋಡಿ

ಸಿ.ಎಂ ತಂಡದಲ್ಲಿ 'ಸಂಪುಟ' ದಂಡು

ಬಸವರಾಜ ರಾಯರಡ್ಡಿ	ಆರ್ಥಿಕ ಸಲಹೆಗಾರ
ಬಿ.ಆರ್. ಪಾಟೀಲ	ಸಲಹೆಗಾರ
ಎ.ಎಸ್.ಪೊನ್ನಣ್ಣ	ಕಾನೂನು ಸಲಹೆಗಾರ
ಸುನೀಲ್ ಕನುಗೋಲು	ಮುಖ್ಯ ಸಲಹೆಗಾರ
ಕೆ.ವಿ. ಪ್ರಭಾಕರ್	ಮಾಧ್ಯಮ ಸಲಹೆಗಾರ
ಕೆ.ಗೋವಿಂದರಾಜು	ರಾಜಕೀಯ ಕಾರ್ಯದರ್ಶಿ
ನಾಸೀರ್ ಅಹಮದ್	ರಾಜಕೀಯ ಕಾರ್ಯದರ್ಶಿ

3 ಡಿಸಿಎಂ: ಮತ್ತೆ ಮುನ್ನೆಲೆಗೆ

ಲೋಕಸಭಾ ಚುನಾವಣೆಗೂ ಮುನ್ನ ಇನ್ನೂ ಮೂವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬುದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಅಭಿಪ್ರಾಯಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಸಹಮತ ವ್ಯಕ್ತಪಡಿಸಿದರು. 'ಜಾತಿವಾರು ಡಿಸಿಎಂ ಹುದ್ದೆಗಳನ್ನು ನೀಡಿದರೆ ಲೋಕಸಭೆ ಚುನಾವಣೆಯಲ್ಲಿ ಅನುಕೂಲವಾಗಲಿದೆ. ಶಾಸಕರಿಂದಲೂ ಈ ಕುರಿತು ಬೇಡಿಕೆ ಇದೆ. ಸಚಿವರನ್ನೂ ಜಾತಿ ಆಧಾರದಲ್ಲೇ ಮಾಡುವುದರಿಂದ ಡಿಸಿಎಂ ಹುದ್ದೆಗಳನ್ನು ಹಾಗೆಯೇ ನೀಡಿದರೆ ಲಾಭವಾಗುತ್ತದೆ. ಈ ಬಗ್ಗೆ ಅಧ್ಯಕ್ಷರು ಮಾತನಾಡಬೇಕು' ಎಂದು ಸತೀಶ ಅವರು ಗುರುವಾರ ಹೇಳಿದ್ದರು.

ಇದಕ್ಕೆ ಶುಕ್ರವಾರ ಪ್ರತಿಕ್ರಿಯಿಸಿದ ಪರಮೇಶ್ವರ ಅವರು, ಈ ವಿಚಾರವಾಗಿ ಹೈಕಮಾಂಡ್ ಮೇಲೆ ಒತ್ತಡ ಹೇರಬೇಕು ಎನ್ನುವ ಸತೀಶ ಅವರ ಹೇಳಿಕೆಯಲ್ಲಿ ತಪ್ಪೇನಿಲ್ಲ. ಅಭಿಪ್ರಾಯ ತಿಳಿಸಲು ನಿರ್ಬಂಧವಿಲ್ಲ. ನಿರ್ಬಂಧ ಹಾಕುವುದೂ ಸರಿಯಲ್ಲ ಎಂದರು.

8ನೇ ಪುಟ ನೋಡಿ

ಅಲ್ಪಸಂಖ್ಯಾತರ ಕಾಲೊನಿಗೆ ₹1,000 ಕೋಟಿ ಅನುದಾನ

ಪಿ.ಎಂ ಆವಾಸ್: ಫಲಾನುಭವಿ ವಂತಿಗೆ ₹1 ಲಕ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಕಾಲೊನಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹1,000 ಕೋಟಿ ವೆಚ್ಚದ ಕಾಮಗಾರಿಗಳಿಗೆ ಪ್ರಸ್ತಾವವನ್ನು ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಶುಕ್ರವಾರ ಅಲ್ಪಸಂಖ್ಯಾತರ ಅಭಿವೃದ್ಧಿ ಹಾಗೂ ವಸತಿ ಇಲಾಖೆಯ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಅಲ್ಪಸಂಖ್ಯಾತರ ಕಾಲೊನಿಗಳನ್ನು ಗುರುತಿಸಿ, ಅಭಿವೃದ್ಧಿಗೆ ಕ್ರಿಯಾಯೋಜನೆ ಸಿದ್ಧಪಡಿಸುವಂತೆ ನಿರ್ದೇಶನ ನೀಡಿದರು.

ಅಲ್ಪಸಂಖ್ಯಾತರಿಗೆ ಸೌಲಭ್ಯ ಒದಗಿಸುವ ವಿವಿಧ ಯೋಜನೆಗಳಿಗೆ ಭಾರಿ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗಿರುವ ಕುರಿತು ಸಭೆಯಲ್ಲಿ ಪ್ರಸ್ತಾಪವಾಯಿತು. ಗಣನೀಯ ಪ್ರಮಾಣದಲ್ಲಿ ಅರ್ಜಿಗಳು ಬಂದಿರುವುದರಿಂದ ಅನುದಾನದ ಕೊರತೆ ಎದುರಾಗಿರುವುದನ್ನು ಅಧಿಕಾರಿಗಳು ವಿವರಿಸಿದರು. ಮುಂದಿನ ವರ್ಷದ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

52 ಸಾವಿರ ಮನೆಗಳಿಗೆ ಅನುದಾನ: 'ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಪ್ರಧಾನ ಮಂತ್ರಿ ಆವಾಸ್ (ನಗರ) ವಸತಿ ಯೋಜನೆಯಡಿ ಕೈಗೆತ್ತಿಕೊಂಡಿರುವ 52,189 ಮನೆಗಳ ಫಲಾನುಭವಿಗಳ ವಂತಿಗೆ ಬಾಬ್ತು ತಲಾ ₹3 ಲಕ್ಷವನ್ನು ಸರ್ಕಾರದಿಂದಲೇ ಭರಿಸಲು ಮುಖ್ಯಮಂತ್ರಿಯವರು ಒಪ್ಪಿಗೆ ಸೂಚಿಸಿದ್ದಾರೆ' ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

8ನೇ ಪುಟ ನೋಡಿ

ರಾಜ್ಯ ಸರ್ಕಾರದಿಂದಲೇ ವಿದ್ಯಾರ್ಥಿವೇತನ

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನವನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿರುವುದರಿಂದ ರಾಜ್ಯ ಸರ್ಕಾರದಿಂದಲೇ ಆ ಸೌಲಭ್ಯ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು. ಅಲ್ಪಸಂಖ್ಯಾತ ಸಮುದಾಯಗಳ 6.4 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಬೇಕಿದೆ. ಈ ಬಾರಿ ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಗೆ ₹60 ಕೋಟಿ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ₹40 ಕೋಟಿಯನ್ನು ವಿದ್ಯಾರ್ಥಿವೇತನ ವಿತರಣೆಗೆ ಬಳಸಿಕೊಳ್ಳುವಂತೆ ನಿರ್ದೇಶನ ನೀಡಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅತಿಥಿ ಉಪನ್ಯಾಸಕರ ಗೌರವಧನ ₹5 ಸಾವಿರ ಹೆಚ್ಚಳಕ್ಕೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನವನ್ನು ₹5 ಸಾವಿರದಷ್ಟು ಹೆಚ್ಚಳ ಮಾಡಿದ್ದು, ಜ.1ರಿಂದಲೇ ಹೆಚ್ಚಳದ ಪ್ರಯೋಜನ ದೊರೆಯಲಿದೆ.

ಅತಿಥಿ ಉಪನ್ಯಾಸಕರ ಸಂಘಟನೆಗಳ ಮುಖಂಡರ ಜತೆ ಶುಕ್ರವಾರ ನಡೆದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು, ವಿದ್ಯಾರ್ಹತೆ, ಅನುಭವದ ಆಧಾರದ ಮೇಲೆ ಅತಿಥಿ ಉಪನ್ಯಾಸಕರ ಗೌರವಧನ ಪ್ರಸ್ತುತ ₹26,000ದಿಂದ ₹32,000 ಇದೆ. ಸದ್ಯ ಕಾರ್ಯನಿರ್ವಹಿಸುತ್ತಿರುವ 10,600 ಅತಿಥಿ ಉಪನ್ಯಾಸಕರಿಗೂ ವೇತನ ಹೆಚ್ಚಳದ ಲಾಭ ಸಮಾನವಾಗಿ ದೊರಕಲಿದೆ. ಇದರಿಂದ ಸರ್ಕಾರಕ್ಕೆ ವಾರ್ಷಿಕ ₹55 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ ಎಂದರು.

ನಿವೃತ್ತರಿಗೆ ₹5 ಲಕ್ಷ ಧನ ಸಹಾಯ: ಅತಿಥಿ ಉಪನ್ಯಾಸಕರಾಗಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದವರಿಗೆ, ಅವರು 60ನೇ ವರ್ಷಕ್ಕೆ ನಿವೃತ್ತರಾಗುವ ವೇಳೆ ₹5 ಲಕ್ಷ ಧನಸಹಾಯ ನೀಡಲಾಗುವುದು. ಅದಕ್ಕಾಗಿ ₹72 ಕೋಟಿ ನಿಗದಿ ಮಾಡಲಾಗಿದೆ ಎಂದರು.

9ನೇ ಪುಟ ನೋಡಿ

ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಉಲ್ಫಾ

ನವದೆಹಲಿ (ಪಿಟಿಐ): ಹಿಂಸಾಚಾರವನ್ನು ತ್ಯಜಿಸಿ, ಪ್ರಜಾಪ್ರಭುತ್ವದ ಮುಖ್ಯವಾಹಿನಿಯನ್ನು ಸೇರಲು ಸಮ್ಮತಿಸಿರುವ ನಿಷೇಧಿತ ಉಲ್ಫಾ (ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ) ಸಂಘಟನೆಯ ಒಂದು ಗುಂಪು, ಕೇಂದ್ರ ಮತ್ತು ಅಸ್ಸಾಂ ಸರ್ಕಾರದ ಜತೆ ಶಾಂತಿ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆಗೆ ಸಾಕ್ಷಿಯಾದರು. ಅರವಿಂದ ರಾಜಖೋವಾ ನೇತೃತ್ವದ ಉಲ್ಫಾ ಸಂಘಟನೆ ಜತೆ ಶಾಂತಿ ಒಪ್ಪಂದಕ್ಕಾಗಿ 12 ವರ್ಷಗಳಿಂದಲೂ ಮಾತುಕತೆ ನಡೆಯುತ್ತಿತ್ತು. ಇದೀಗ ಒಪ್ಪಂದ ಏರ್ಪಟ್ಟಿದೆ. ಈ ಒಪ್ಪಂದದಿಂದ, ದಶಕಗಳಿಂದಲೂ ಅಸ್ಸಾಂನಲ್ಲಿ ನಡೆಯುತ್ತಿದ್ದ ಹಿಂಸಾಚಾರ ಇನ್ನಷ್ಟು ತಗ್ಗುವ ವಿಶ್ವಾಸ ವ್ಯಕ್ತವಾಗಿದೆ.

'ಈ ಬೆಳವಣಿಗೆಯು ಅಸ್ಸಾಂ ಜನತೆಗೆ ಮಹತ್ವದ್ದಾಗಿದೆ. ಉಲ್ಫಾ ಸಂಘಟನೆಯ ಹಿಂಸಾಚಾರದಿಂದಾಗಿ ಅಸ್ಸಾಂ ಹಲವು ವರ್ಷ ನರಳಿದೆ. 1979ರಿಂದ ಈವರೆಗಿನ ಹಿಂಸಾಚಾರದಲ್ಲಿ ಸುಮಾರು 10 ಸಾವಿರ ಮಂದಿ ಬಲಿಯಾಗಿದ್ದಾರೆ' ಎಂದು ಶಾ ಅವರು ಹೇಳಿದರು.

'ಹಿಂಸಾಚಾರ ತೊರೆದು ಸಂಘಟನೆಯನ್ನು ವಿಸರ್ಜಿಸಲು ಒಪ್ಪಿರುವ ಉಲ್ಫಾ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಒಪ್ಪಿಕೊಂಡಿದೆ. ಈ ಒಪ್ಪಂದದ ಭಾಗವಾಗಿ ದೊಡ್ಡ ಅಭಿವೃದ್ಧಿ ಯೋಜನೆಯನ್ನು ಅಸ್ಸಾಂಗೆ ನೀಡಲಾಗುತ್ತದೆ. ಈ ಒಪ್ಪಂದದ ಪ್ರತಿಯೊಂದು ಅಂಶವನ್ನೂ ಜಾರಿಗೊಳಿಸಲಾಗುತ್ತದೆ' ಎಂದು ಭರವಸೆ ನೀಡಿದರು.

ಪರೇಶ್ ಬರುವಾ ನೇತೃತ್ವದ ಉಲ್ಫಾ ಸಂಘಟನೆಯ ಮತ್ತೊಂದು ಗುಂಪು ಈ ಒಪ್ಪಂದದ ಭಾಗವಾಗಿಲ್ಲ. ಬರುವಾ ಅವರು ಚೀನಾ–ಮ್ಯಾನ್ಮಾರ್ ಗಡಿಯಲ್ಲಿ ನೆಲೆಸಿರುವ ಮಾಹಿತಿ ಇದೆ.

'ಸಾರ್ವಭೌಮ ಅಸ್ಸಾಂ' ಸ್ಥಾಪನೆಯ ಬೇಡಿಕೆಯೊಂದಿಗೆ 1979ರಲ್ಲಿ ಉಲ್ಫಾ ಸಂಘಟನೆ ಅಸ್ತಿತ್ವಕ್ಕೆ ಬಂತು. ಆ ಬಳಿಕ ಹಲವು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ ಕಾರಣ ಕೇಂದ್ರ ಸರ್ಕಾರವು 1990ರಲ್ಲಿ ಈ ಸಂಘಟನೆಯನ್ನು ನಿಷೇಧಿಸಿತ್ತು.

ರಾಜಖೋವಾ ನೇತೃತ್ವದ ಗುಂಪು 2011ರ ಸೆಪ್ಟೆಂಬರ್ 3ರಂದು ತನ್ನ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವುದಾಗಿ ಘೋಷಿಸಿ, ಸರ್ಕಾರದೊಂದಿಗೆ ಶಾಂತಿ ಒಪ್ಪಂದದ ಮಾತುಕತೆಗೆ ಒಪ್ಪಿಗೆಯನ್ನು ಸೂಚಿಸಿತ್ತು.

ಅಪರಾಧ, ಅವಘಡಗಳ ವರ್ಷ

2023 ಮರೆಯುವ ಮುನ್ನ...

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಜನಸಂಖ್ಯೆ ಜೊತೆಯಲ್ಲಿ ಅಪರಾಧಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. 2023ರಲ್ಲಿ ಅಪರಾಧಗಳ ಜೊತೆಗೆ, ರಸ್ತೆಗಳಲ್ಲಿ ಕಾರುಗಳು ಹೊತ್ತಿ ಉರಿದವು, ಕಟ್ಟಡಗಳಲ್ಲಿ ಸರಣಿ ಬೆಂಕಿ ಅಪಘಾತಗಳು ಸಂಭವಿಸಿದವು. ಎನ್‌ಐಎ ಅಧಿಕಾರಿಗಳು ಮೇಲಿಂದ ಮೇಲೆ ದಾಳಿ ನಡೆಸಿ, ಶಂಕಿತ ಉಗ್ರರನ್ನು ಬಂಧಿಸಿದರು. ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧವೂ ಪೊಲೀಸರು ಕಾರ್ಯಾಚರಣೆ ನಡೆಸಿದರು. ಇವೆಲ್ಲದರ ಜೊತೆಗೆ, ಈ ವರ್ಷದಲ್ಲಿ ನಡೆದ ಪ್ರಮುಖ ಅಪರಾಧಗಳ ಹಿನ್ನೋಟ ಇಲ್ಲಿದೆ.

- **ಜ .5:** ವಿಧಾನಸೌಧಕ್ಕೆ ಬಂದಿದ್ದ ಲೋಕೋಪಯೋಗಿ ಇಲಾಖೆಯ ಮಂಡ್ಯದ ಕಿರಿಯ ಎಂಜಿನಿಯರ್ ಜೆ. ಜಗದೀಶ್ ಬ್ಯಾಗ್‌ನಲ್ಲಿ ₹ 10 ಲಕ್ಷ ಪತ್ತೆ. ಅಕ್ರಮ ಹಣವೆಂದು ಪೊಲೀಸರಿಂದ ಜಪ್ತಿ.
- **ಜ. 10:** ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಬಿದ್ದು ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಬಿಎಂಆರ್‌ಸಿಎಲ್ ಹಾಗೂ ನಾಗಾರ್ಜುನ್ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಪ್ರತಿನಿಧಿಗಳ ವಿರುದ್ಧ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ
- **ಜ. 21:** ನೇಪಾಳದ ಗಡಿ ಮೂಲಕ ದೇಶದೊಳಗೆ ಅಕ್ರಮವಾಗಿ ನುಸುಳಿ ಬೆಂಗಳೂರಿನಲ್ಲಿ ವಾಸವಿದ್ದ ಪಾಕಿಸ್ತಾನದ ಯುವತಿ ಇಕ್ರಾ ಜೀವನಿ (19) ಅವರನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದರು. ಇಕ್ರಾ, ಡೇಟಿಂಗ್ ಆ್ಯಪ್ ಮೂಲಕ ಉತ್ತರ ಪ್ರದೇಶದ ಮುಲಾಯಂ ಸಿಂಗ್ (25) ಅವರನ್ನು ಪರಿಚಯ ಮಾಡಿಕೊಂಡು ಆತನ ಜೊತೆ ಬೆಂಗಳೂರಿನಲ್ಲಿದ್ದರು
- **ಜ. 24:** ಕೆ.ಆರ್. ಮಾರುಕಟ್ಟೆ ಮೇಲ್ಸೇತುವೆಯಿಂದ ₹ 10 ಮುಖಬೆಲೆ ನೋಟುಗಳನ್ನು ಎಸೆದಿದ್ದ ಆರೋಪದಡಿ ವಿ ಡಾಟ್ 9 ಇವೆಂಟ್ಸ್ ಇಂಡಿಯಾ ಕಂಪನಿ ಕಾರ್ಯನಿರ್ವಾಹಕ ಅಧಿಕಾರಿಯೂ (ಸಿಇಒ) ಆ್ಯಂಕರ್ ಅರುಣ್ ಅವರನ್ನು ಸಿಟಿ ಮಾರ್ಕೆಟ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದರು
- **ಫೆ. 10:** ಉಗ್ರ ಸಂಘಟನೆ 'ಅಲ್‌ಕೈದಾ' ಜೊತೆ ನಂಟು ಹೊಂದಿ ಸಿರಿಯಾಗೆ ಹೋಗಲು ಸಿದ್ಧತೆ ನಡೆಸಿದ್ದ ಆರೋಪದಡಿ ಸಾಫ್ಟ್‌ವೇರ್ ಉದ್ಯೋಗಿ ಶಂಕಿತ ಮೊಹಮ್ಮದ್ ಆರೀಫ್‌ನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು
- **ಏಪ್ರಿಲ್ 11:** ಅರೆಕಾಲಿಕ ಕೆಲಸ ಕೊಡುವ ಆಮಿಷವೊಡ್ಡಿ ತಮ್ಮ ಆ್ಯಪ್ ಪ್ರಚಾರಕ್ಕೆ ಬಳಸಿಕೊಂಡು ಹಣ ನೀಡದೇ ವಂಚಿಸಿರುವ ಆರೋಪದಡಿ 'ಇಂಡಿಯನ್ ಮನಿ ಫ್ರೀಡಂ' ಕಂಪನಿ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಿ.ಎಸ್. ಸುಧೀರ್ ಹಾಗೂ ಇತರರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದರು
- **ಜುಲೈ 3:** ಬಿಟ್ ಕಾಯಿನ್ (ಬಿಟಿಸಿ) ಪ್ರಕರಣದ ತನಿಖೆಗಾಗಿ ಎಡಿಜಿಪಿ ನೇತೃತ್ವದಲ್ಲಿ ಎಸ್‌ಐಟಿ ರಚನೆ
- **ಜುಲೈ 11:** ಯಲಹಂಕ ತಾಲ್ಲೂಕು ಹುಣಸಮಾರನಹಳ್ಳಿ ಹಾಗೂ ಸೊಣ್ಣಪ್ಪನಹಳ್ಳಿ ಜಮೀನುಗಳಲ್ಲಿ ಬಂಡೆಗಳನ್ನು ಅಕ್ರಮವಾಗಿ ಸ್ಫೋಟಿಸಿ ಕಲ್ಲು ಗಣಿಗಾರಿಕೆ ನಡೆಸಿದ್ದ ಆರೋಪದಡಿ ಶಾಸಕ ಎನ್. ಮುನಿರತ್ನ ಸೇರಿ ನಾಲ್ವರ ವಿರುದ್ಧ ಚಿಕ್ಕಜಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು
- **ಜುಲೈ 18:** ಸುಲ್ತಾನ್‌ಪಾಳ್ಯದ ಮನೆಯೊಂದರ ಮೇಲೆ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ಶಂಕಿತರಾದ ಸೈಯದ್ ಸುಹೇಲ್ ಖಾನ್ (24), ಜಾಹೀದ್ ತಬ್ರೇಜ್ (25), ಸೈಯದ್ ಮುದಾಸೀರ್ ಪಾಷಾ (28), ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು (29) ಬಂಧಿಸಿದ್ದರು. ನಾಲ್ಕು ಗ್ರೆನೇಡ್, 7 ನಾಡ ಪಿಸ್ತೂಲ್, 45 ಗುಂಡುಗಳು, 12 ಮೊಬೈಲ್, ಡ್ಯಾಗರ್ ಹಾಗೂ 4 ವಾಕಿಟಾಕಿ ಮಾದರಿ ಉಪಕರಣಗಳನ್ನು ಆರೋಪಿಗಳಿಂದ ಜಪ್ತಿ ಮಾಡಿದ್ದರು
- **ಆಗಸ್ಟ್ 5:** ರಾಜ್ಯದ 41ನೇ ಡಿಜಿ–ಐಜಿಪಿ ಪ್ರವೀಣ್ ಸೂದ್ ಅವರು ಸಿಬಿಐ ನೂತನ ನಿರ್ದೇಶಕರಾಗಿ ನಿಯೋಜನೆ. ಇದೇ ಹುದ್ದೆಯನ್ನು ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದ ಅಲೋಕ್ ಮೋಹನ್ ಅವರನ್ನು 42ನೇ ಡಿಜಿ– ಐಜಿಪಿ ಆಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು
- **ಆಗಸ್ಟ್ 13:** ಭಾಷಣದಲ್ಲಿ ಜಾತಿ ನಿಂದನೆ ಪದ ಬಳಸಿದ್ದಾರೆ ಎಂಬ ಆರೋಪದಡಿ ನಟ ಉಪೇಂದ್ರ ವಿರುದ್ಧ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು
- **ಸೆ. 30:** ಸಾಹಿತಿಗಳು ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರ ಬರೆಯುತ್ತಿದ್ದ ಆರೋಪ ದಡಿ ಹಿಂದೂ ಜಾಗರಣಾ ವೇದಿಕೆಯ ದಾವಣಗೆರೆ ಜಿಲ್ಲಾ ಘಟಕದ ಸಹ ಸಂಚಾಲಕ ಶಿವಾಜಿರಾವ್ ಜಾಧವ್‌ನನ್ನು (30) ಸಿಸಿಬಿ ಪೊಲೀಸರು ಬಂಧಿಸಿದ್ದರು
- **ಸೆ. 30:** ಉತ್ತರಹಳ್ಳಿಯ ವಸಂತಪುರ ಮುಖ್ಯರಸ್ತೆಯಲ್ಲಿ ನಟ ನಾಗಭೂಷಣ್ ಕಾರು ಗುದ್ದಿ ಸುಪ್ರಭಾತ್ ಶ್ರೀಮ್ ಬ್ರೀಜೆ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ಎಸ್. ಪ್ರೇಮಾ (48) ಮೃತಪಟ್ಟಿದ್ದರು. ನಾಗಭೂಷಣ್ ಬಂಧಿಸಿ, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿತ್ತು.
- **ಅಕ್ಟೋಬರ್ 3:** ನೈಸ್ ರಸ್ತೆಯ ಸೋಂಪುರ ಬಳಿ ಸಂಭವಿಸಿದ್ದ ಅಪಘಾತದಲ್ಲಿ ಕಾರು ಸುಟ್ಟು ಭಸ್ಮವಾಗಿ ಒಳಗಿದ್ದ ರಾಮಮೂರ್ತಿನಗರದ ಸಿಂಧು (31), ಕಿರಿಯ ಮಗಳು ಕಾಸವಿ (4) ಸಜೀವವಾಗಿ ದಹನವಾಗಿದ್ದರು. ಗಾಯಗೊಂಡಿದ್ದ ಹಿರಿಯ ಮಗಳು ಪ್ರಣವಿ (6) ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು
- **ಅ. 18:** ಕೋರಮಂಗಲದ ಮಡ್‌ಪೈಪ್ ಕೆಫೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ. ಪ್ರಾಣ ಉಳಿಸಿಕೊಳ್ಳಲು ಅಡುಗೆ ಸಿಬ್ಬಂದಿಯೊಬ್ಬರು ನಾಲ್ಕು ಅಂತಸ್ತಿನ ಕಟ್ಟಡದಿಂದ ಜಿಗಿದಿದ್ದರು
- **ಅ. 15:** ಗರ್ಭಿಣಿಯರನ್ನು ಅಕ್ರಮವಾಗಿ ಸ್ಕ್ಯಾನಿಂಗ್‌ಗೆ ಒಳಪಡಿಸಿ ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದ ಜಾಲ ಭೇದಿಸಿದ್ದ ಬೈಯಪ್ಪನಹಳ್ಳಿ ಪೊಲೀಸರು, ನಾಲ್ವರನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ವೈದ್ಯರು, ಶುಶ್ರೂಷಕಿಯರು ಸಿಕ್ಕಿಬಿದ್ದರು. ಸುಮಾರು 900 ಭ್ರೂಣ ಹತ್ಯೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು
- **ಅ. 22:** ಹುಲಿ ಉಗುರು ಧರಿಸಿದ್ದ ಆರೋಪದಡಿ 'ಬಿಗ್‌ಬಾಸ್' ಸ್ಪರ್ಧಿ ವರ್ತೂರು ಸಂತೋಷ್ (34) ಅವರನ್ನು ಕಗ್ಗಲೀಪುರ ವಲಯ ಅರಣ್ಯಾಧಿಕಾರಿ ನೇತೃತ್ವ ತಂಡ ಬಂಧಿಸಿತ್ತು
- **ಅ. 31:** ಬನಶಂಕರಿ 3ನೇ ಹಂತದ ವೀರಭದ್ರನಗರದ ಎಸ್.ವಿ.ಕೋಚ್ ವರ್ಕ್ಸ್ ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಬೆಂಕಿ ಅವಘಡ ಸಂಭವಿಸಿ 19 ಖಾಸಗಿ ಬಸ್‌ಗಳು ಸುಟ್ಟವು
- **ನ. 4:** ದೊಡ್ಡಕಲ್ಲಸಂದ್ರದ ಮನೆಯಲ್ಲಿ ವಾಸವಿದ್ದ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ (43) ಹತ್ಯೆ.
- **ನ. 6:** ರೈಲು ಪ್ರಯಾಣಿಕರ ಬ್ಯಾಗ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಚಿಕ್ಕಬಳ್ಳಾಪುರ ರೈಲ್ವೆ ಉಪ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸಿದ್ದರಾಮ್ ರೆಡ್ಡಿ ಹಾಗೂ ಯಾದಗಿರಿ ಜಿಲ್ಲೆಯ ಸಾಬಣ್ಣ (38) ಅವರನ್ನು ಕಂಟೋನ್ಮೆಂಟ್ ರೈಲ್ವೆ ಠಾಣೆ ಪೊಲೀಸರು ಬಂಧಿಸಿದ್ದರು

ಹೆಣ್ಣೂರು ಕ್ರಾಸ್ ಬಳಿ ಉರುಳಿಬಿದ್ದಿದ್ದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು

- **ಡಿ. 1:** ಬೆಂಗಳೂರು ನಗರ ಹಾಗೂ ಗ್ರಾಮಾಂತರ ವಿಭಾಗ ವ್ಯಾಪ್ತಿಯ 68 ಶಾಲೆಗಳಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿತ್ತು
- **ಡಿ. 9ರಂದು:** ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ್ದ ಎನ್‌ಐಎ ಅಧಿಕಾರಿಗಳು, ಪುಲಿಕೇಶಿನಗರದಲ್ಲಿ ವಾಸವಿದ್ದ ಮುಂಬೈ ಐಐಟಿ ಪದವೀಧರ ಅಲಿ ಹಫೀಜ್‌ನನ್ನು ವಶಕ್ಕೆ ಪಡೆದಿದ್ದರು. ನಾಲ್ಕು ದಿನಗಳ ನಂತರ ಬಂಧಿಸಿದ್ದರು
- **ಡಿಸೆಂಬರ್ 11:** ರಾಜಭವನದಲ್ಲಿ ಬಾಂಬ್ ಇರಿಸಿರುವುದಾಗಿ ಬೆದರಿಕೆ ಕರೆ ಬಂದಿತ್ತು. ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಆರೋಪಿ ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದರು

- **ನ. 19:** ಕಾಡುಗೋಡಿ ಬಳಿಯ ಹೋಪ್ ಫಾರ್ಮ್ ಜಂಕ್ಷನ್ ಸಮೀಪ ರಸ್ತೆಯಲ್ಲಿ ತುಂಡರಿಸಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಎ.ಕೆ. ಗೋಪಾಲ್ ಕಾಲೊನಿ ನಿವಾಸಿ ಸೌಂದರ್ಯ (23) ಹಾಗೂ ಅವರ 9 ತಿಂಗಳ ಹೆಣ್ಣುಮಗು ಸುವಿಕ್ಷಾ ಲಿಯಾ ಮೃತಪಟ್ಟಿದ್ದರು.

ಬೆಂಗಳೂರಿನ ಬಿಎಸ್‌ಕೆ 3ನೇ ಹಂತದ ವೀರಭದ್ರನಗರದಲ್ಲಿರುವ ಎಸ್‌ವಿ ಕೋಚ್ ವರ್ಕ್ಸ್‌ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಸಂಭವಿಸಿದ್ದ ಭಾರಿ ಅಗ್ನಿ ಅವಘಡದ ಚಿತ್ರಣ

ಬಿಬಿಎಂಪಿಯಲ್ಲಿ ಪೂರ್ವಭಾವಿ ಸಭೆ ನಡೆಸಿದ ಡಿಸಿಎಂ

ಜ.3ರಿಂದ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಾಗರಿಕರಿದ್ದಲ್ಲಿಗೇ ಸರ್ಕಾರದ ಜನಪ್ರತಿನಿಧಿಗಳು, ಅಧಿಕಾರಿಗಳು ತೆರಳಿ ಅವರ ಅಹವಾಲುಗಳನ್ನು ಆಲಿಸಲು 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಈ ಕಾರ್ಯಕ್ರಮದ ಕುರಿತು ಬಿಬಿಎಂಪಿಯಲ್ಲಿ ಶುಕ್ರವಾರ ಪೂರ್ವಭಾವಿ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿ, 'ಜ.3ರಿಂದ ಜ.31ರ ನಡುವೆ 10 ದಿನಗಳು ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಜನರ ಅಹವಾಲು ಆಲಿಸಲಾಗುವುದು' ಎಂದು ಹೇಳಿದರು.

ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಬಿಎಂಟಿಸಿ, ಕಂದಾಯ ಇಲಾಖೆಯ ಖಾತೆ ಸಮಸ್ಯೆ, ನಗರಾಭಿವೃದ್ಧಿ ಯೋಜನೆ, ಸರ್ಕಾರದ ಐದು ಗ್ಯಾರಂಟಿಗಳು ಸೇರಿದಂತೆ ಜನರ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನನ್ನನ್ನೂ ಸೇರಿದಂತೆ, ಮುಖ್ಯಮಂತ್ರಿ ಹಾಗೂ ಮತ್ತಿತರರ ಬಳಿ ಜನರು ಅರ್ಜಿ ಹಿಡಿದು ಓಡಾಡುವುದನ್ನು ಕಡಿಮೆ ಮಾಡಲು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

'ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಜನರ ಅಹವಾಲು ಸ್ವೀಕರಿಸಲು ಜನಸ್ಪಂದನ ಕಾರ್ಯಕ್ರಮ ನಡೆಸುವಂತೆ ಸರ್ಕಾರವು ಈಗಾಗಲೇ ಸಚಿವರಿಗೆ ಆದೇಶ ನೀಡಿದೆ. ನಾನು ಈಗಾಗಲೇ ಕನಕಪುರ ಹಾಗೂ ಆನೇಕಲ್‌ನಲ್ಲಿ ಇಂತಹ ಕಾರ್ಯಕ್ರಮ ಮಾಡಿದ್ದು, ನಗರದಲ್ಲೂ ಮುಂದುವರಿಸುತ್ತಿದ್ದೇನೆ. ಈ ಅವಕಾಶವನ್ನು ಎಲ್ಲರೂ ಬಳಸಿಕೊಳ್ಳಬೇಕು' ಎಂದು ತಿಳಿಸಿದರು.

ನಗರದಲ್ಲಿ ಒಂದೇ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಬಾರದು ಎಂಬ ಕಾರಣಕ್ಕೆ ವಿಧಾನಸಭಾ ಕ್ಷೇತ್ರಗಳನ್ನು ವಿಭಾಗಿಸಿ ಆಯಾ ವಲಯದಲ್ಲಿ ಒಂದೊಂದು ದಿನ ಮೀಸಲಿಡಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳಗಳನ್ನು ನಿಗದಿ ಮಾಡಲಾಗಿದ್ದು, ಆ ಮಾಹಿತಿಯನ್ನು ಪ್ರಕಟಿಸಲಾಗುವುದು. ಅಹವಾಲು ನೀಡಲು ಬರುವವರಿಗೆ ಊಟದ ವ್ಯವಸ್ಥೆಯನ್ನೂ ಕಲ್ಪಿಸಲಾಗುವುದು ಎಂದು ವಿವರಿಸಿದರು.

ಹೆಸರು ನೋಂದಣಿ ಮಾಡಿಕೊಂಡು ಅಹವಾಲು ಸ್ವೀಕರಿಸಲಾಗುವುದು. ಸಮಸ್ಯೆಗೆ ಪರಿಹಾರ ನೀಡಲು ಅಧಿಕಾರಿಗಳು ಸ್ಥಳದಲ್ಲಿಯೇ ಇರುತ್ತಾರೆ. ಯಾವುದೇ ದೂರು, ಅಹವಾಲು ಇದ್ದರೂ ತರಬಹುದು. ಕಾನೂನು ಚೌಕಟ್ಟಿನಲ್ಲಿ ಅವರಿಗೆ ಪರಿಹಾರ ನೀಡುವ ಪ್ರಯತ್ನ ಮಾಡಲಾಗುವುದು. ನಿಯಮ ಉಲ್ಲಂಘನೆಯ ದೂರಿದ್ದರೆ ಅವನ್ನು ಪರಿಹರಿಸಲು ಬೇರೆ ವ್ಯವಸ್ಥೆ ಮಾಡಲಾಗುವುದು ಎಂದು ಕಾರ್ಯಕ್ರಮದ ರೂಪುರೇಷೆ ವಿವರಿಸಿದರು.

ತೆರಿಗೆ ಕಟ್ಟದಿದ್ದರೆ ಕ್ರಮ: ಡಿಕೆಶಿ

'ತೆರಿಗೆ ಹಣದಿಂದಲೇ ನಗರದಲ್ಲಿ ಮೂಲ ಸೌಕರ್ಯ ಕಲ್ಪಿಸಬೇಕು. ತೆರಿಗೆ ಪಾವತಿಸದೇ ಇದ್ದರೆ ಕ್ರಮ ಕೈಕೊಳ್ಳಬೇಕಾಗುತ್ತದೆ. ದೊಡ್ಡ ಮಾಲ್‌ಗಳನ್ನು ಹುಡುಕಿ ಮೊದಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸ್ವಯಂ ಘೋಷಣೆ ವ್ಯವಸ್ಥೆಯಲ್ಲಿ ಸರಿಯಾಗಿ ತೆರಿಗೆ ಪಾವತಿ ಮಾಡುತ್ತಾರೆ ಎಂದು ಭಾವಿಸಿದ್ದೆವು. ಈಗ ನಾವು ಎಲ್ಲಾ ದಾಖಲೆ ಪರಿಶೀಲಿಸುತ್ತಿದ್ದೇವೆ. ನಮ್ಮದೇ ಆದ ರೀತಿಯಲ್ಲಿ ಪ್ರತಿ ಮನೆ ವಿಸ್ತೀರ್ಣವನ್ನು ಅಳತೆ ಮಾಡುತ್ತಿದ್ದೇವೆ. ಆನಂತರ ಆಸ್ತಿ ಮಾಲೀಕರು ತಮ್ಮ ಆಸ್ತಿಗೆ ತಕ್ಕಂತೆ ತೆರಿಗೆ ಪಾವತಿ ಮಾಡಬೇಕು. ತೆರಿಗೆ ಕಟ್ಟದವರ ಮಳಿಗೆ ಮತ್ತಿತರ ಆಸ್ತಿಗಳಿಗೆ ಬೀಗ ಹಾಕುವ ಪ್ರಕ್ರಿಯೆ ಆರಂಭವಾಗಿದೆ. ನಾನು ಟ್ರಸ್ಟಿಯಾಗಿದ್ದ ಶಾಲೆಗೂ ಬೀಗ ಹಾಕಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

'ಪೊಲೀಸರ ಕಾರ್ಯವೈಖರಿಯಲ್ಲಿ ಹೆಚ್ಚು ಹಸ್ತಕ್ಷೇಪ ಮಾಡಲು ಆಗುವುದಿಲ್ಲ' ಎಂದು ಕರವೇ ಕಾರ್ಯಕರ್ತರ ಬಂಧನ ಕುರಿತು ಪ್ರತಿಕ್ರಿಯಿಸಿದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಸ್ನೇಹ–ಸಮ್ಮಿಲನ, 'ಸೇವಾ ಪ್ರಶಸ್ತಿ' ಪ್ರದಾನ: ಅತಿಥಿ: ಎಸ್.ಆರ್. ನಿರಂಜನ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಆಯೋಜನೆ: ಶೇಷಾದ್ರಿಪುರ ವಿದ್ಯಾಸಂಸ್ಥೆಗಳು, ಸ್ಥಳ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಳಿಗ್ಗೆ 8

ಜಿ.ವಿ. ಆನಂದಮೂರ್ತಿ ಅವರ 'ಡಾ. ರಾಜ್‌ಕುಮಾರ್ ನಾಡು ನುಡಿಯ ಅಸ್ಮಿತೆ' ಪುಸ್ತಕ ಬಿಡುಗಡೆ: ಲಕ್ಷ್ಮಿಗೋವಿಂದ ರಾಜು, ಪೂರ್ಣಿಮಾ ರಾಮ್‌ಕುಮಾರ್, ಅಧ್ಯಕ್ಷತೆ: ಕೆ.ವಿ. ನಾರಾಯಣ, ಅತಿಥಿ: ಎನ್. ವಿದ್ಯಾಶಂಕರ್, ಉಪಸ್ಥಿತಿ: ಬಿ.ಎಸ್. ಮಧುವತಿ, ಆಯೋಜನೆ: ಪ್ರೀತಿ ಪುಸ್ತಕ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

'ನಳಪಾಕ' ನಾಟಕೋತ್ಸವ: ರಚನೆ: ಸಂತೋಷ್ ಪವಾರ್, ನಿರ್ದೇಶನ: ಯಶವಂತ ಸರದೇಶಪಾಂಡೆ, ಸಂಗೀತ: ಪ್ರವೀಣ್ ಡಿ. ರಾವ್, ಆಯೋಜನೆ: ಹೋಟೆಲ್ ನಳಪಾಕ, ಸ್ಥಳ: ಎಡಿಎ ರಂಗಮಂದಿರ, ಬೆಳಿಗ್ಗೆ 10.30

'ನಿಡುಮಾಮಿಡಿ ಪೀಠಾರೋಹಣ-33' 'ಹೋರಾಟಕ್ಕೆ ಸಾವಿಲ್ಲ' 'ಓಲೆ ಒಳದನಿ' ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಸಾರಂಗಧರ ದೇಶೀಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಮಲ್ಲಿಕಾರ್ಜುನ್ ಖರ್ಗೆ, ಅತಿಥಿಗಳು: ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಆಯೋಜನೆ: ನಿಡುಮಾಮಿಡಿ ಮಹಾಸಂಸ್ಥಾನ ಮಠ ಮಾನವ ಧರ್ಮ ಪೀಠ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ, ಬಾ.ನಾ. ಸುಬ್ರಹ್ಮಣ್ಯ ಅವರಿಗೆ ಸನ್ಮಾನ: ಅಧ್ಯಕ್ಷತೆ: ಶಿವಾನಂದ ತಗಡೂರು, ದಿನದರ್ಶಿಕೆ ಬಿಡುಗಡೆ: ಬಿ.ವಿ. ಮಲ್ಲಿಕಾರ್ಜುನಯ್ಯ, ಅಭಿನಂದಿಸುವವರು: ಎನ್.ಆರ್. ನಂಜುಂಡೇಗೌಡ, ಅತಿಥಿ: ಚೇತನ್ ನಾಡಿಗೇರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಳಿಗ್ಗೆ 11.15

'ಮುಖ್ಯಮಂತ್ರಿ' ನಾಟಕ ಪ್ರದರ್ಶನ: ಮುಖ್ಯಪಾತ್ರದಲ್ಲಿ: 'ಮುಖ್ಯಮಂತ್ರಿ' ಚಂದ್ರು, ನಿರ್ದೇಶನ: ಬಿ.ವಿ. ರಾಜಾರಾಂ, ಮಧ್ಯಾಹ್ನ 3.30ಕ್ಕೆ, 'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾಗಂಗೋತ್ರಿ, ಸ್ಥಳ: ರಂಗಶಂಕರ, ಜೆ.ಪಿ. ನಗರ

ಜಚನಿಯವರ 115ನೇ ಜಯಂತಿ: ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ: ಶಾಮನೂರು ಶಿವಶಂಕರಪ್ಪ, ಅತಿಥಿಗಳು: ಶಿವಾನಂದ ಪಾಟೀಲ, ಲಕ್ಷ್ಮೀ ಹೆಬ್ಬಾಳ್ಕರ್, ಎಂ.ಜಿ. ನಾಗರಾಜ್, ಸಿ.ಸಿ. ಪಾಟೀಲ, ನುಡಿನಮನ: ಹಂ.ಪ. ನಾಗರಾಜಯ್ಯ, ಡಿ.ವಿ. ಪರಮಶಿವಮೂರ್ತಿ, ಆಯೋಜನೆ: ನಿಡುಮಾಮಿಡಿ ಮಹಾಸಂಸ್ಥಾನ ಮಠ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಹಂ.ಪ ನಾಗರಾಜಯ್ಯ

ರಾಷ್ಟ್ರಕವಿ ಕುವೆಂಪು ಸಂಭ್ರಮ: ಉದ್ಘಾಟನೆ: ಮನು ಬಳಿಗಾರ, ಅಧ್ಯಕ್ಷತೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಶಯ ನುಡಿ: ಎಚ್. ಶಿವರಾಮೇಗೌಡ, ಸನ್ಮಾನ: ಅ.ತಿ. ರಂಗನಾಥ್, ಕನ್ನಡ ಕೃಷ್ಣ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಮಲ್ಲೇಶ್ವರ ವೃತ್ತದ ಮೇಲ್ಸೇತುವೆ ಬಳಿ, ಮಲ್ಲೇಶ್ವರ, ಸಂಜೆ 4

ಸಂಗೀತ ಕಾರ್ಯಕ್ರಮ: ಕೊಳಲು: ಪ್ರಸನ್ನ, ಬದರಿನಾಥ್, ಮನುದ್ಯುತ್, ಮೃದಂಗ: ಅಭಿಜಿತ್, ಆಯೋಜನೆ ಮತ್ತು ಸ್ಥಳ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ರಾಜಾಜಿನಗರ, ಸಂಜೆ 4

'ನವಸಂಧಿ' ನೃತ್ಯ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ವೀಣಾ ಮೂರ್ತಿ ವಿಜಯ್, ಪ್ರಸ್ತುತಿ: ಸಂಗೀತಾ ಫಣೀಶ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 4

ವಿಷ್ಣುವರ್ಧನ್ ಪುಣ್ಯಸ್ಮರಣೆ: ಗೀತ–ಗಾಯನ: ರವಿರಾಜ್, ಎಚ್.ಕೆ. ರಘು, ಸಂಗೀತ ಸುಧೀಂದ್ರ, ಕವಿತಾ ಆಚಾರ್ಯ, ಸಿರಿ ಚಂದ್ರಶೇಖರ್, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4

ಹಿಮವತ್ ಕೇದಾರ ಪೂಜಾ ಸಮಿತಿಯ ಏಕಾದಶಮಾನೋತ್ಸವ: ನಂದಿಧ್ವಜ, ಉತ್ಸವದ ಉದ್ಘಾಟನೆ: ಗಂಗಾಂಬಿಕೆ ಮಲ್ಲಿಕಾರ್ಜುನ, ನಿರ್ಮಲ ಯಲಿಗಾರ, ಸ್ಥಳ: ಉದಯಭಾನು ಕಲಾಸಂಘದ ಆಟದ ಮೈದಾನದಿಂದ–ನಿಜಗುಣ ಕಲ್ಯಾಣ ಮಂಟಪ ಬಸವನಗುಡಿವರೆಗೆ ಸಂಜೆ 4ಕ್ಕೆ, ಜನಜಾಗೃತಿ ಧರ್ಮ ಸಮಾರಂಭ: ಸಾನ್ನಿಧ್ಯ: ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ, ಜಗದೀಶ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಈಶ್ವರ್ ಖಂಡ್ರೆ, ಎಲ್.ಎ. ರವಿಸುಬ್ರಮಣ್ಯ, ಸ್ಥಳ: ನಿಜಗುಣ ಕಲ್ಯಾಣ ಮಂಟಪ, ದೊಡ್ಡಗಣೇಶ ದೇವಸ್ಥಾನದ ಎದುರು, ಬಸವನಗುಡಿ, ಸಂಜೆ 6ಕ್ಕೆ

'ಕೆಂಪೇಗೌಡರ' ಕೊಡುಗೆ ಕುರಿತು ವಿಚಾರಸಂಕಿರಣ, 'ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಬಸವರಮಾನಂದ ಸ್ವಾಮೀಜಿ, ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಸರಸ್ವತಿ ಚಿಮ್ಮಲಗಿ, ಪ್ರಶಸ್ತಿ ಪ್ರದಾನ: ಸತೀಶಕುಮಾರ ಎಸ್. ಹೊಸಮನಿ, ನೆ.ಲ. ನರೇಂದ್ರಬಾಬು, ಮಹಾಂತೇಶ ಮಲ್ಲನಗೌಡರ, ಪ್ರಶಸ್ತಿ ಪುರಸ್ಕೃತರು: ಶಿವಶರಣಪ್ಪ ವಾಲಿ, ತಲಕಾಡು ಚಿಕ್ಕರಂಗೇಗೌಡ, ಸದಾನಂದ ನಾರಾವಿ, ಎಸ್.ವಿ. ಪ್ರಭಾವತಿ, ಬೆ.ಗೋ. ರಮೇಶ, ತಲ್ಲೂರು ಶಿವರಾಮ ಶೆಟ್ಟಿ, ಆಯೋಜನೆ: ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5ರಿಂದ

ಬಾ ಇಲ್ಲಿ ಸಂಭ್ರಮಿಸು 'ಸಿ. ಅಶ್ವತ್ಥ' ಅವರಿಗೆ ನುಡಿ–ಗೀತ ನಮನ: ಉಪಸ್ಥಿತಿ: ಟಿ.ಎಸ್. ನಾಗಾಭರಣ, ಟಿ.ಎನ್. ಸೀತಾರಾಮ್, ಬಿ.ಆರ್. ಲಕ್ಷ್ಮಣರಾವ್,, ಶ್ರೀನಿವಾಸ್ ಜಿ. ಕಪ್ಪಣ್ಣ, ಎಸ್. ಬಾಲಿ, ಎನ್.ಎಸ್. ಪ್ರಸಾದ್, ಮಾಲತಿ ಶರ್ಮ, ಲಹರಿ ವೇಲು, ಕಟ್ಟೆ ಸತ್ಯನಾರಾಯಣ, ಉಪಾಸನಾ ಮೋಹನ್, ಚಂದ್ರ ಅಶ್ವತ್ಥ, ಗಾಯನ: ಸುಪ್ರಿಯಾ ರಘುನಂದನ್, ಮಂಗಳಾ ರವಿ, ರಕ್ಷಾ ಪ್ರಿಯಾರಾಮ್, ಪಂಚಮ್ ಹಳಿಬಂಡಿ, ಪ್ರವೀಣ್ ಬಿ.ವಿ., ರವಿಕೃಷ್ಣ ಮೂರ್ತಿ, ಆಯೋಜನೆ: ಗಾನ ಸಂಭ್ರಮ ಟ್ರಸ್ಟ್ ಮತ್ತು ಸಮುದ್ಯತಾ ಸಂಗೀತ ಶಾಲೆ, ಸ್ಥಳ: ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5.30

ನಾಗಾಭರಣ

ಕುವೆಂಪು ಜನ್ಮದಿನಾಚರಣೆ: ಉದ್ಘಾಟನೆ: ಕೆ.ಎನ್. ಲಕ್ಷ್ಮೀಗೌಡ, ಅಧ್ಯಕ್ಷತೆ: ಗಂಗಸಿದ್ದಪ್ಪ ಶಿವಲಿಂಗಯ್ಯ, ಉಪನ್ಯಾಸ: ಬೈರಮಂಗಲ ರಾಮೇಗೌಡ, ಆಯೋಜನೆ: ಕುವೆಂಪು ಸಾಹಿತ್ಯ ಪ್ರಚಾರ ವೇದಿಕೆ, ಸ್ಥಳ: ಶ್ರೀಕೃಷ್ಣರಾಜ ಪರಿಷನ್ಮಂದಿರ, ಕಸಾಪ, ಚಾಮರಾಜಪೇಟೆ, ಸಂಜೆ 5.30

'ದ್ರೌಪದಿ ಪ್ರತಾಪ' ಯಕ್ಷಗಾನ ಪ್ರದರ್ಶನ: ಆಯೋಜನೆ: ಸಾಮರಸ್ಯ ಟ್ರಸ್ಟ್, ಸ್ಥಳ: ಯೋಗೀಶ್ವರಾನಂದ ಶಾಲೆ, ರಾಮಕೃಷ್ಣ ಮಠದ ರಸ್ತೆ, ಹಲಸೂರು, ಸಂಜೆ 6

'ಒಕ ಊರಿ ಕಥಾ'ದಲ್ಲಿ ಕಾಣುವ ತೆಲಂಗಾಣದ ಉಳಿಗಮಾನ್ಯ ವ್ಯವಸ್ಥೆ ಕುರಿತು ಉಪನ್ಯಾಸ: ನಿಖಿಲ್ ಜಿ., ಸಂವಾದ ನಿರ್ವಹಣೆ: ಕೆ. ಫಣಿರಾಜ್, ಆಯೋಜನೆ: ಜನಶಕ್ತಿ ಮೀಡಿಯಾ, ಸಂಜೆ 6 (ಎನ್‌ಲೈನ್ ಕಾರ್ಯಕ್ರಮ)

ಬಾಲಕಿ ಮೇಲೆ ಅತ್ಯಾಚಾರ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಕೋಲಾರ: ಕೆಜಿಎಫ್ ತಾಲ್ಲೂಕಿನ ಗ್ರಾಮವೊಂದರ 14 ವರ್ಷದ ದಲಿತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಪೋಕ್ಸೊ ಕಾಯ್ದೆಯಡಿ ಐವರನ್ನು ಬಂಧಿಸಲಾಗಿದೆ.

ಆರೋಪಿಗಳೂ ದಲಿತ ಸಮುದಾಯಕ್ಕೆ ಸೇರಿದವರು ಎಂಬುದು ಗೊತ್ತಾಗಿದೆ.

9ನೇ ತರಗತಿ ಓದುತ್ತಿರುವ ಬಾಲಕಿಯ ದೇಹದಲ್ಲಾದ ಬದಲಾವಣೆ ಗಮನಿಸಿದ ಪೋಷಕರು ಗುರುವಾರ (ಡಿ.28) ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸಂತ್ರಸ್ತ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗುತ್ತಿದೆ.

'ಪರಸ್ಪರ ಪರಿಚಿತರಾಗಿದ್ದ ಐವರು ಆರೋಪಿಗಳೂ ವಿವಿಧ ಸಂದರ್ಭಗಳಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಾರೆ. ಪ್ರಮುಖ ಆರೋಪಿ ಬಹಳ ತಿಂಗಳಿಂದ ಬಾಲಕಿಗೆ ಪರಿಚಿತನಾಗಿದ್ದ. ಪ್ರೀತಿಯ ನೆಪದಲ್ಲಿ ಲೈಂಗಿಕ ಸಂಪರ್ಕ ಬೆಳೆಸಿದ್ದ. ಸಂತ್ರಸ್ತೆ ಹಾಗೂ ಆರೋಪಿಗಳು ಒಂದೇ ಸಮುದಾಯಕ್ಕೆ ಸೇರಿದವರು. ಎಲ್ಲಾ ಆರೋಪಿಗಳನ್ನು ಬಂಧಿಸಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಪ.ಅ/18/2023–24 ದಿನಾಂಕ: 29–12–2023

ಪ್ರಕಟಣೆ

ವಿಷಯ: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಮ್ಮಸಂದ್ರ ಗ್ರಾಮದ ಸ.ನಂ. 39/4 ರ ಪೈಕಿ 01 ಎಕರೆ 15 3/4 ಗುಂಟೆ ಮತ್ತು ಸ.ನಂ. 39/3ಎ ರಲ್ಲಿನ 20 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಬದಲಾವಣೆ ಮಾಡಿಕೊಡಲು ಕೋರಿರುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: ಎಎಲ್‌ಎನ್[ಇಬಿಬಿ]ಸಿಆರ್/24/2023–24, ದಿನಾಂಕ: 19.12.2023 (ಶ್ರೀ ಬಿ.ಸಿ. ರಾಮಕೃಷ್ಣಪ್ಪ ಬಿನ್ ಲೇಟ್ ಚಿಕ್ಕಣ್ಣ)
2) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 237 ಬೆಮಪ್ರಾ 2009, ದಿನಾಂಕ: 19.09.2009.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಮ್ಮಸಂದ್ರ ಗ್ರಾಮದ ಸ.ನಂ. 39/4 ರ ಪೈಕಿ 01 ಎಕರೆ 15 3/4 ಗುಂಟೆ ಮತ್ತು ಸ.ನಂ. 39/3ಎ ರಲ್ಲಿನ 20 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಶೈಕ್ಷಣಿಕ ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾಪಿತ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಂತೆ **ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು,** ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಸತಿ ವಲಯದಲ್ಲಿ ನರ್ಸರಿ, ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯವರೆಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅನುಮತಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಪ್ರಸ್ತಾಪಿತ ಜಮೀನುಗಳಲ್ಲಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಿದಲ್ಲಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2764/ಅಡ್ವರ್ಟೋರ್/2023–24

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.
(ಎ) ಎಸ್‌ಡಬ್ಲ್ಯುಆರ್‌ಎಸ್‌ಬಿಸಿಎಂಇಡಿಎಲ್‌ಪಿಐಆರ್‌ಇಪಿಎಸ್2023 ದಿನಾಂಕ : 21–12–2023 & (ಬಿ) ಎಂಡಿಎಲ್‌ಪಿಎಸ್‌ಎಸ್2023–25 ದಿನಾಂಕ : 21–12–2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
ಎ	ವಿಭಾಗೀಯ ರೈಲ್ವೆ ಆಸ್ಪತ್ರೆ	ರೂ. 70,00,000/–
	ಬೆಂಗಳೂರಿನ ಮೆಡಿಕಲ್ ಸ್ಟೋರ್ಸ್‌ಗೆ 2 ವರ್ಷಗಳ ಅವಧಿಗಾಗಿ ಎಲ್ಲಾ ವಿಧದ ಔಷಧಿಗಳ ಸ್ಥಳೀಯ ಖರೀದಿಗಾಗಿ ಸರಬರಾಜುದಾರರ ಎಂಪ್ಯಾನೆಲ್‌ಮೆಂಟ್.	
ಬಿ	ವಿಭಾಗೀಯ ರೈಲ್ವೆ ಆಸ್ಪತ್ರೆ	ರೂ. 8,00,000/–
	ಬೆಂಗಳೂರಿನ ಸರ್ಜಿಕಲ್ ಸ್ಟೋರ್ಸ್‌ಗೆ 2 ವರ್ಷಗಳ ಅವಧಿಗಾಗಿ ಸರ್ಜಿಕಲ್ / ಕನ್ಸ್ಯೂಮಬಲ್ ಐಟಂಗಳ ಸ್ಥಳೀಯ ಖರೀದಿಗಾಗಿ ಸರಬರಾಜುದಾರರ ಎಂಪ್ಯಾನೆಲ್‌ಮೆಂಟ್.	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31–01–2024 ರಂದು 15:00 ಗಂಟೆಗಳವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ವೈದ್ಯಕೀಯ ಅಧೀಕ್ಷಕರು
ಪಿಐಬಿ/593/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24 ಬೆಂಗಳೂರು
South Western Railway - SWR | SWRRLY | SWRRLY

ಸೂಚನೆ

ಕಂಪನಿಗಳ ಕಾಯಿದೆ 2013ರ ('ಆಕ್ಟ್') ಸೆಕ್ಷನ್ 201ರ ಅನುಸಾರವಾಗಿ ಮೆಡ್ರೀಚ್ ಲಿಮಿಟೆಡ್‌ನ ('ಕಂಪನಿ') ಸದಸ್ಯರಿಗೆ ನೋಟಿಸ್ ನೀಡಲಾಗಿದೆ. ಕಂಪನಿಗಳ ಕಾಯಿದೆ 1956ರ ಅನ್ವಯ ಸಂಯೋಜಿತವಾದ ಕಂಪನಿಯು ಮೆಡ್ರೀಚ್ ಹೌಸ್, ನಂ.12/8, ಸರಸ್ವತಿ ಅಮ್ಮಾಳ್ ಸ್ಟ್ರೀಟ್, ಮಾರುತಿ ಸೇವಾನಗರ, ಬೆಂಗಳೂರು, ಕರ್ನಾಟಕ–560033 ಇಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ. ಕಂಪನಿಯು ಸೆಕ್ಷನ್ 196ರ ಅನ್ವಯ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ ಮತ್ತು ಇತರೆ ಅನ್ವಯವಾಗುವ ನಿಬಂಧನೆಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ಕಾಯಿದೆಯ ಷೆಡ್ಯೂಲ್ V ನ್ನು ಓದಿದಂತೆ 24ನೇ ಜುಲೈ 2023ರಿಂದ ಜಾರಿಗೆ ಬರುವಂತೆ 3 ವರ್ಷಗಳ ಅವಧಿಗೆ ಡೆಪ್ಯುಟಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡ ಶ್ರೀ ಯಸುಹಿರೋ ಗ್ಯೋಬು (ಡಿಐಎನ್: 10238754) ಅವರನ್ನು ಪೂರ್ಣಾವಧಿ ನಿರ್ದೇಶಕರಾಗಿ ನೇಮಕ ಮಾಡಲು 31ನೇ ಜುಲೈ 2023ರಂದು ನಡೆದ ಸಭೆಯಲ್ಲಿ ಮಂಡಳಿಯ ನಿರ್ಣಯವನ್ನು ಅನುಮೋದಿಸಲಾಗಿದೆ.

ಮೆಡ್ರೀಚ್ ಲಿಮಿಟೆಡ್ ಪರವಾಗಿ
ವೈ. ವೆಂಕಟೇಶ್
ಕಂಪನಿ ಕಾರ್ಯದರ್ಶಿ
ಪ್ಯಾನ್: ABAPY3222B
ವಿಳಾಸ: 101, ಲಕ್ಷ್ಮಿ ಎನ್ಕ್ಲೇವ್ ಎಂ.ಎಸ್. ಪಾಳ್ಯ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು–560033.
ದಿನಾಂಕ: 28/12/2023
ಸ್ಥಳ: ಬೆಂಗಳೂರು

PUBLIC NOTICE

It is hereby notified that, my clients have entered into an agreement to purchase 1937.45 Sq.ft. of undivided share in the Schedule property from its owners: **(1) SRI.SHIVA PRASAD** S/o Late G.Shivanna, his wife **(2) SMT.SUDHA SHIVA PRASAD** and their children namely, **(3) SMT.MAMATHA.S, (4) SMT.SANGEETHA SUNIL & (5) SMT.GEETHA.S,** all are residing at the Schedule property.

If any person/s have any manner of right, title, interest or claim or charge or lien over the Schedule property or otherwise have any lawful objection/s for sale of the Schedule property by the aforesaid owners, they are hereby called upon to file their objections in writing, along with the supporting legal documents on which they rely, with the undersigned, within 14 days from the date of publication of this notice. Objection/s received thereafter will not be binding on my clients.

SCHEDULE

All that piece and parcel of the immovable property bearing Municipal No.10, PID No.28-97-10, measuring East to West 61'9" and North to South 62'6" in all measuring 3874.9 Sq.ft., together with a building thereon, situated at 2nd Cross, Kempegowda Road Extension, Bangalore-560009 and bounded on:

East by : Road
West by : Private Property
North by : Silk Merchants Association Building
South by : Kabadi Eswarsa's property

Sd/- Goutam Chand .S.F
Advocate
Goutam Associates
No.60, 2nd Floor, Kanakapura Road, Basavanagudi, Bangalore-560 004.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ಸಮೂಹ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2 ನೇ ಹಂತ, ಬೆಂಗಳೂರು.
ದೂ.ಸಂ: 080–25037–131/174/214

ದಿನಾಂಕ: 29.12.2023

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ (ಬಿ) ಕ್ಯಾಂಪಸ್‌ನಲ್ಲಿರುವ ಹಳೆಯ ಎಕ್ಸ್ ರೇ ಸೌಲಭ್ಯ ಇಲ್ಲಿಗೆ ಲೆಡ್ ಲೈನ್ಡ್ ಬಾಗಿಲುಗಳನ್ನು ಒದಗಿಸುವುದು ಹಾಗೂ ಅಳವಡಿಸುವುದು.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ಎಲ್‌ಪಿಎಸ್‌ಸಿ(ಬಿ)/ಸಿ/ಎಂಐ/31/2023–24 ದಿನಾಂಕ: 08.12/2023
ಅಂದಾಜು ಮೊತ್ತ	₹ 22.92 ಲಕ್ಷಗಳು
ಪೂರ್ಣಗೊಳಿಸುವ ಅವಧಿ	02 ತಿಂಗಳು
ಮಾರಾಟದ ಅವಧಿ	29.12.2023 ರಿಂದ 07.01.2024 ರವರೆಗೆ
ಇಎಂಡಿ	₹ 45,840/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ (ಕೆರೆಗಳು–ದಕ್ಷಿಣ),
ಅನೆಕ್ಸ್–3 ಕಟ್ಟಡ, 3ನೇ ಮಹಡಿ, ನರಸಿಂಹರಾಜ ಚೌಕ, ಬೆಂಗಳೂರು – 560002

ಸಂ. ಕಾಅ–ದಕ್ಷಿಣ ವಲಯ & ಬೊಕ್ಷೇ/ಕೆರೆಗಳು/04/2023–24 ದಿನಾಂಕ : 29–12–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಮಾತ್ರ)

ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೆ / ಎಂಇಎಸ್ ಅಥವಾ ಕೇಂದ್ರ / ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಗಳಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಇ–ಪಾವತಿಯ (ಹಿಂದಿರುಗಿಸಲಾಗದ) ರೂಪದಲ್ಲಿ ಪ್ರತೀ ಕಾಮಗಾರಿಯ ಮುಂದೆ ಸೂಚಿಸಲಾದ ನಿಗದಿತ ಶುಲ್ಕವನ್ನು ಪಾವತಿಸಿದ ನಂತರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದು. ಟೆಂಡರ್‌ದಾರರು, 2024ರವರೆಗೆ ಸಿಂಧುತ್ವವಿರುವ ನೋಂದಣಿ ಪ್ರಮಾಣಪತ್ರದ ಪ್ರತಿಯನ್ನು ಹೊಂದಿರಬೇಕು ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಸಲ್ಲಿಸಬೇಕು.

ಕ್ರ ಸಂ.	ಕಾಮಗಾರಿಯ ಹೆಸರು	ಇಎಂಡಿ (ರೂ.ಗಳಲ್ಲಿ)	ಯೋಜನೆಯ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
1	ಮಡಿವಾಳ ಕೆರೆಯ ಸಮಗ್ರ ಅಭಿವೃದ್ಧಿಗಾಗಿ ವಿವರವಾದ ಯೋಜನಾ ವರದಿಯ ತಯಾರಿಕೆ	50,000/–	1500

ವೇಳಾಪಟ್ಟಿ : (1) ಟೆಂಡರ್ ದಾಖಲೆಗಳ ಲಭ್ಯತೆ : **30–12–2023** ರಿಂದ (2) ಬಿಡ್ – ಪೂರ್ವ ಸಭೆಯ ದಿನಾಂಕ : **06–01–2024 ರಂದು 16:00 ಗಂಟೆಗೆ** (3) ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕ : **16–01–2024 ರಂದು 16:00** ಗಂಟೆಗಳು ಅಥವಾ ಮುಂಚಿತವಾಗಿ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **18–01–2024 ರಂದು 16:30 ಗಂಟೆಗೆ** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : ನಂತರ ಸೂಚಿಸಲಾಗುವುದು

ಕಾಮಗಾರಿಯ ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ದಿನಗಳಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
(ದಕ್ಷಿಣ ವಲಯ & ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ),
ಕೆರೆಗಳ ವಿಭಾಗ, ಬೃಬೆಂಮಪಾ

ಚುನಾವಣೆ ಪ್ರಕಟಣೆ

ದಿ ಕರ್ನಾಟಕ ವೃತ್ತ ಅಂಚೆ ಪತ್ತಿನ ಸಹಕಾರ ಸಂಘ ನಿಯಮಿತ
ನಂ.5, ಶಿರೂರ್ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು - 560020

ದಿ ಕರ್ನಾಟಕ ವೃತ್ತ ಅಂಚೆ ಪತ್ತಿನ ಸಹಕಾರ ಸಂಘ ನಿಯಮಿತ, ಶೇಷಾದ್ರಿಪುರಂ, ಬೆಂಗಳೂರು - 560020 ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕ -ದಿಂದ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸಲು ದಿನಾಂಕ: 14.01.2024 ಭಾನುವಾರದಂದು ಬೆಳಿಗ್ಗೆ 9.00 ಗಂಟೆ -ಯಿಂದ ಸಂಜೆ 4.00 ಗಂಟೆಯವರೆಗೆ ಬಿ.ಚನ್ನಬಸಪ್ಪ ಸಭಾಂಗಣ, ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್ **(Govt Secretariate Club)** ಕಬ್ಬನ್ ಉದ್ಯಾನವನ, ಬೆಂಗಳೂರು - 560 001, ಇಲ್ಲಿ ಚುನಾವಣೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಹಾಗೂ ಸಂಘದ ಎಲ್ಲಾ ಅರ್ಹ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದೆ. ನಾಮ ಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ 02.01.2024, ಮಂಗಳವಾರ, ಕೊನೆಯ ದಿನಾಂಕ 06.01.2024 ಶನಿವಾರ ಆಗಿರುತ್ತದೆ. ಒಂದು ವೇಳೆ ಚುನಾವಣಾ ನೋಟೀಸು ತಲುಪದೇ ಇದ್ದಲ್ಲಿ ಇದನ್ನೆ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ, ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.

ಸ್ಥಳ: ಬೆಂಗಳೂರು ದಿ: 28.12.2023

ಸಹಿ/- ರಿಟರ್ನಿಂಗ್ ಅಧಿಕಾರಿಗಳು ದಿ ಕರ್ನಾಟಕ ವೃತ್ತ ಅಂಚೆ ಅತ್ತಿನ ಸಹಕಾರ ಸಂಘ ನಿ., ಶೇಷಾದ್ರಿಪುರಂ, ಬೆಂಗಳೂರು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

NEW YEAR SALE

MEGA DISCOUNT SALE
ASSURED LOWEST PRICES

EXCHANGE BONANZA

UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಎಕ್ಸ್‌ಚೇಂಜ್ ಮೇಲೆ*

WELCOME 2024 WITH SAVINGS

UPTO 70% OFF

CASH BACK BONANZA

UPTO 20% ಕ್ಯಾಶ್ ಬ್ಯಾಕ್*

AXIS BANK | citi | HDFC BANK | HSBC | ICICI Bank | IndusInd Bank | kotak | RBL BANK | Union Bank | YES BANK | Standard Chartered | Bank of Baroda | FEDERAL BANK | SBI card

ಉಚಿತ FIRE-BOLTT SMART CALLING WATCH WORTH ₹20000

FINANCE BONANZA
1 ಇ.ಎಮ್.ಐ ಉಚಿತ*

FINANCE POWERED BY Groww
0% EMI | 2,000 Cash Back
MIN PRODUCT VALUE ₹10,000

MobiKwik 5% CASH BACK* on UPI
MINIMUM TRANSACTION ₹5000
MAXIMUM CASHBACK UPTO ₹1000

ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*

INSTANT LOAN APPROVAL
UPTO ₹4,00,000*

ASSURED GIFTS ON ALL LG PRODUCTS*
BT SPEAKER | INDUCTION COOKER | STEAM IRON | KETTLE | DRY IRON

24 HOURS EXPRESS DELIVERY*

ಇಂದು ಮಹೋನ್ನತ ಪ್ರಾರಂಭೋತ್ಸವ ಬೆಳಗ್ಗೆ 10.40 ಶಿರಾದಲ್ಲಿ (ದೂ: 9035023188)

LG 65 4K SMART OLED OLED65C3PSA — ಇ.ಎಮ್.ಐ ₹4,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG 65 OLED 4K SMART TV 65S90C — ಇ.ಎಮ್.ಐ ₹13,606 — ಉಚಿತ: ₹48,900 ಮೌಲ್ಯದ SAMSUNG SOUNDBAR

NEVER BEFORE PRICES — NV PRIDE OF INDIA
43 4K SMART LED ₹18,990 ಇ.ಎಮ್.ಐ: ₹1,583 | 55 4K SMART LED ₹29,990 ಇ.ಎಮ್.ಐ: ₹2,499 | 65 4K SMART LED ₹49,990 ಇ.ಎಮ್.ಐ: ₹4,166

Haier 65 QLED SMART GOOGLE TV — ಇ.ಎಮ್.ಐ ₹4,994 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SONY 55 4K HD SMART LED 55X75L — ಇ.ಎಮ್.ಐ ₹5,500

vivo Y56 (5G*) — ₹14,990* ONWARDS — ಇ.ಎಮ್.ಐ ₹1,249 — ಉಚಿತ: ₹1,599 ಮೌಲ್ಯದ SMART WATCH+ 70% OFF ON DAMAGE PROTECTION

Redmi 12 5G 6/128 — OFFER PRICE ₹14,999* — ಇ.ಎಮ್.ಐ ₹1,250 — 70% OFF ON DAMAGE PROTECTION

ONEPLUS NORD CE 3 -8/128 — OFFER PRICE ₹24,990* — ಇ.ಎಮ್.ಐ ₹2,083* — 70% OFF ON DAMAGE PROTECTION

OPPO RENO 10 – 8/256 GB — OFFER PRICE ₹32,999* — UPTO 10% CASH BACK — ಇ.ಎಮ್.ಐ ₹2,750 — ಉಚಿತ: ₹3999 ಮೌಲ್ಯದ SMART WATCH+ 70% OFF ON DAMAGE PROTECTION

SAMSUNG Galaxy S23FE/S23/S23 Ultr — STARTS FROM ₹49,999* — ಇ.ಎಮ್.ಐ ₹4,166 — PAY 99 AND GET BT CALLING SMART WATCH WORTH ₹7999+ 70% OFF ON DAMAGE PROTECTION

iPhone 15\15 PRO\ PRO MAX — STARTS FROM ₹74,990* — ಇ.ಎಮ್.ಐ ₹6,249 — 70% OFF ON DAMAGE PROTECTION

hp 15s — HOT DEAL — FREE BACK PACK — N4500, 8GB,512GB SSD, 15.6" HD, WIN 11, MSO 2021 — ಇ.ಎಮ್.ಐ ₹2,499 — OFFER PRICE ₹29,990* — FREE: SMART WATCH WORTH ₹3999 + PAY RS. 2499 AND GET GOODIES WORTH ₹10999

Lenovo SLIM 3i — FREE BACK PACK — RYZEN 7 5700U, 16GB, 512GB SSD, 15.6 FHD, INT AMD RADEON GFX, WIN 11 MSO 21 — ಇ.ಎಮ್.ಐ ₹4,166 — OFFER PRICE ₹49,990* — FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

DELL INS 3520 — FREE BACK PACK — 12TH GEN I5-1235U, 16GB DDR4, 512GB SSD/15.6 FHD, WIN 11 MSO 2021 — ಇ.ಎಮ್.ಐ ₹4,790 — OFFER PRICE ₹57,490* — FREE: METAL BT SMART WATCH WORTH ₹7999+ PAY ₹2499 AND GET GOODIES WORTH ₹12199

Lenovo GAMING 3 — FREE BACK PACK — RYZEN 5 6600, 8GB, 512GB SSD, NVIDIA RTX 3050 4GB GFX, 15.6 FHD, WIN 11 MSO 21 — ಇ.ಎಮ್.ಐ ₹5,166 — OFFER PRICE ₹61,990* — FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

DELL INS 3530 — FREE BACK PACK — 13TH GEN I7/1355U, 16GB DDR4 / 512GB SSD/15.6 FHD WVA, BACKLIT FP READER, WIN 11+MSO H&S 2021 — ಇ.ಎಮ್.ಐ ₹6,166 — OFFER PRICE ₹73,990* — FREE: METAL BT SMART WATCH WORTH ₹7999+ PAY ₹2499 AND GET GOODIES WORTH ₹12199

LG 650 Ltr, CONVERTIBLE SIDE-BY-SIDE REFRIGERATOR B257EPZ3 — ಇ.ಎಮ್.ಐ ₹4,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL — ಇ.ಎಮ್.ಐ ₹6,033

Godrej 564 LTRS SIDE BY SIDE — ಇ.ಎಮ್.ಐ ₹5,466 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

IFB 8 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,314 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Haier 7 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,025 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

LG SOUND BAR OK55 — 500W for Karaoke Playback, Recording, Echo Effects and Vocal Effects, DJ Effects, DJ Wheel, DJ Loop, Party Thruster, DJ Pad and Multi-Color Lighting, Bass Blast, XBOOM App (Black) — ಇ.ಎಮ್.ಐ ₹1,833 — OFFER PRICE ₹21,990*

LG SOUND BAR SC9S — 3.1.3 Ch, 400W, DOLBY ATMOS & IMAX ENHANCED. — ಇ.ಎಮ್.ಐ ₹2,666 — OFFER PRICE ₹31,990*

BOSCH 13 PLACE SETTINGS DISHWASHER — ಇ.ಎಮ್.ಐ ₹4,205 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Whirlpool 29ಲೀ ಕನ್‌ವೆಕ್ಷನ್ ಮೈಕ್ರೋವೇವ್ — ಇ.ಎಮ್.ಐ ₹1,388

Greenchef MIXER GRINDERS:TULIP 3 JAR 600W + PRESSURE COOKERS:3 LTR NAMO — OFFER PRICE: ₹2,024 COMBI MRP: ₹4,798

Greenchef GAS STOVES:BLISS 2 BURNER + NON STICK COOKWARE:2PC DUET PACK — OFFER PRICE: ₹2,024 COMBI MRP: ₹4,798

Greenchef CLASSIC SS 2IN1 COMBO (3LTRS + 2LTRS PAN) KETTLES:S S KETTLE 1.5LTRS - SWIFT — OFFER PRICE: ₹2,024 COMBI MRP: ₹4,798

NIRLEP NON STICK COOKWARE: ASPA 4 Pc SET + VL IRON BOX:ECO DRY IRON — OFFER PRICE: ₹2,024 COMBI MRP: ₹4,798

LG | SAMSUNG | SONY | Panasonic | Haier | NV | IFB | Godrej | LLOYD | Whirlpool | BOSCH | Electrolux | PHILIPS | hp | acer | DELL | Lenovo | ASUS | vivo | OPPO | ONEPLUS | mi | iPhone | JBL
BLUE STAR | HAFELE | Symphony | HAVELLS | USHA | DAIKIN | GENERAL | Prestige | VOLTAS | VOLTAS beko | Butterfly | Preethi | VIJAYALAKSHMI | ULTRA | EUREKA FORBES | pureit | Livpure | FABER | KENSTAR | Pigeon | BAJAJ | Crompton | MAHARAJA WHITELINE | V-GUARD | ZEBRONICS | KAFF | OZONE

GIRIAS THE CONSUMER DURABLE PEOPLE Since 1971

ಶಿರಾ 9035023188 | ಬಾಗೇಪಲ್ಲಿ 9036289562 | ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881| ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್ ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 90354 99233| ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633.

STORE LOCATOR

*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition. Free smart watch valid on 20000 & above Purchase on select models & brands.

150+ ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA

ಕನ್ನಡ ಭಾಷೆ ಕುರಿತು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ● ಕಸಾಪ ನವೀಕೃತ ಸಭಾಂಗಣ ಉದ್ಘಾಟನೆ

‘ಕಾನೂನು ಜಾರಿಗೆ ಆಗ್ರಹಿಸಿ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾನೂನನ್ನು ಸಮರ್ಪಕವಾಗಿ ಜಾರಿ ಮಾಡದಿದ್ದರಿಂದ ಕನ್ನಡ ಪರ ಸಂಘಟನೆಗಳು ಹೋರಾಟದ ಹಾದಿ ಹಿಡಿಯಬೇಕಾಗಿದೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನವೀಕೃತ ಕುವೆಂಪು ಸಭಾಂಗಣ ಹಾಗೂ ಕುವೆಂಪು ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಸೇರಿ ಕನ್ನಡ ಪರ ಹೋರಾಟಗಾರರನ್ನು ಸರ್ಕಾರ ಜೈಲಿಗೆ ಹಾಕಿರುವುದು ದುಃಖವನ್ನುಂಟುಮಾಡಿದೆ. ಕನ್ನಡಪರ ಹೋರಾಟಗಾರರನ್ನು ನಾವು ಬೆಂಬಲಿಸಬೇಕು. ನಾನು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಕನ್ನಡಪರ ಹೋರಾಟಗಾರರ ಮೇಲಿನ ಸುಮಾರು ಎರಡು ಸಾವಿರ ಪ್ರಕರಣಗಳನ್ನು ವಾಪಸ್ ಪಡೆಯಲಾಗಿತ್ತು. ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸಬೇಕೆಂಬ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡದಿರುವುದರಿಂದ ಈ ಪರಿಸ್ಥಿತಿ ಬಂದಿದೆ. ಆಡಳಿತಗಾರರಿಗೆ ಸೂಕ್ಷ್ಮತೆ ಇರಬೇಕು’ ಎಂದು ಹೇಳಿದರು.

‘ನಮ್ಮ ಸರ್ಕಾರದ ಅವಧಿಯಲ್ಲಿ ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ಮಸೂದೆ-2022 ಜಾರಿಗೊಳಿಸಿದ್ದೇವು. ಇದನ್ನು ಹಾಲಿ ಸರ್ಕಾರ ಅನುಷ್ಠಾನ ಮಾಡದಿದ್ದರಿಂದ ಕನ್ನಡಪರ ಹೋರಾಟಗಾರರು ಪ್ರತಿಭಟನೆಗೆ ಇಳಿದಿದ್ದಾರೆ. ಕನ್ನಡ ನಿತ್ಯ ನಿರಂತರ ಆಗಬೇಕಾದರೆ ಕನ್ನಡಿಗರು ಜಾಗೃತರಾಗಿರಬೇಕು’ ಎಂದು ತಿಳಿಸಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ವೈಚಾರಿಕತೆಯ ವಾಣಿಯಾಗಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಮರ್ಶಕ ಎಚ್.ಎಸ್. ಸತ್ಯನಾರಾಯಣ, ‘ಕನ್ನಡದಲ್ಲಿ ಇಡೀ ಆಧುನಿಕ ಸಾಹಿತ್ಯಗಳ ಪ್ರಕಾರಗಳು ಆರಂಭವಾದದ್ದು ಕುವೆಂಪು ಅವರಿಂದ. ಅವರನ್ನು ಅಪ್ರಸ್ತುತಗೊಳಿಸುವ ಪ್ರಯತ್ನಗಳನ್ನು ನೋಡಿದ್ದೇವೆ. ಅವರನ್ನು ಹೊಸ ತಲೆಮಾರಿನವರಿಗೆ ತಲುಪಿಸುವ ಕೆಲಸವಾಗಬೇಕು’ ಎಂದು ಹೇಳಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಅವರು ಕುವೆಂಪು ರಚನೆಯ ‘ಹೃದಯ ಪ್ರಪಾತಕ್ಕೆ ಧುಮುಕುತಿದೆ ರಸದದ್ವನಿ..’ ಗೀತೆಯನ್ನು ಪ್ರಸ್ತುತಪಡಿಸಿದರು. ಬಳಿಕ ಕುವೆಂಪು ಅವರ ಬಗ್ಗೆ ವಿಶೇಷ ಉಪನ್ಯಾಸ, ಕವಿತೆ ವಾಚನ ಹಾಗೂ ಗೀತ ಗಾಯನ ನಡೆಯಿತು.

ನವೀಕೃತ ಕುವೆಂಪು ಸಭಾಂಗಣ ಉದ್ಘಾಟಿಸಿದ ಬಸವರಾಜ ಬೊಮ್ಮಾಯಿ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕಸಾಪ ಅಧ್ಯಕ್ಷ ಮಹೇಶ ಜೋಶಿ ಹಾಗೂ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಎಲ್ಲರಿಗೂ ಬೇಕಿದೆ ‘ವಿಶ್ವಮಾನವ ಸಂದೇಶ’: ಮರುಳಸಿದ್ದಪ್ಪ

ಬೆಂಗಳೂರು: ಕುವೆಂಪು ಅವರ ವಿಶ್ವಮಾನವ ಸಂದೇಶ ಅರ್ಥ ಮಾಡಿಕೊಂಡರೆ ದೇಶ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ ಎಂದು ಸಾಹಿತಿ ಕೆ.ಮರುಳಸಿದ್ದಪ್ಪ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರ–ಕಾವ್ಯ ಸಂಜೆ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಶುಕ್ರವಾರ ಹಮ್ಮಿಕೊಂಡಿದ್ದ ಮಹಾಕವಿ ಕುವೆಂಪು ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನಸಾಮಾನ್ಯರಿಂದ ಆಡಳಿತ ನಡೆಸುವ ಉನ್ನತ ಸ್ಥಾನದಲ್ಲಿ ಇರುವವರೂ ವಿಶ್ವಮಾನವ ಸಂದೇಶ ಅರ್ಥಮಾಡಿಕೊಳ್ಳಬೇಕು. ಅಳವಡಿಸಿಕೊಳ್ಳಬೇಕು ಎನ್ನುವುದು ಕುವೆಂಪು ಅವರ ಆಶಯವಾಗಿತ್ತು. ದೇಶಪ್ರೇಮ ಎನ್ನುವುದು ಅಹಂಕಾರವಾದರೆ ಹಿಂಸೆಗೆ ದಾರಿ ಮಾಡಿಕೊಡುತ್ತದೆ. ಅಂತಹ ಹಿಂಸೆಯಿಂದ ಶಾಂತಿ, ನೆಮ್ಮದಿಯ ಆಶಯಗಳಿಗೆ ಧಕ್ಕೆಯಾಗುತ್ತದೆ ಎಂದರು.

ಪ್ರಸ್ತುತ ಒಂದು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಆತಂಕಕಾರಿಯಾಗಿವೆ. ಇಂತಹ ಆತಂಕಗಳು ದೂರವಾಗಿ ಜಾತಿ, ಧರ್ಮಗಳ ಗೊಡವೆ ಇಲ್ಲದೇ ಬದುಕು ಸಾಗಿಸಬೇಕಿದೆ ಎಂದರು.

ಇದೇ ವೇಳೆ ಕುವೆಂಪು ಕವಿಗೋಷ್ಠಿ ನಡೆಯಿತು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಚಿಂತಕರಾದ ಎಸ್. ಮಹಾದೇವಯ್ಯ, ಎಂ.ತಿಮ್ಮಯ್ಯ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಕಾವ್ಯ ಸಂಜೆ ಪ್ರಧಾನ ಸಂಚಾಲಕಿ ಮಮತಾ ಸಾಗರ್, ಬಸವ ಅಂತರ ರಾಷ್ಟ್ರೀಯ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ ಉಪಸ್ಥಿತರಿದ್ದರು.

ಕನ್ನಡ ಜನಶಕ್ತಿ ಕೇಂದ್ರ–ಕಾವ್ಯ ಸಂಜೆ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಶುಕ್ರವಾರ ಹಮ್ಮಿಕೊಂಡಿದ್ದ ಮಹಾಕವಿ ಕುವೆಂಪು ಜಯಂತಿ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೇರಿದಂತೆ ಗಣ್ಯರು ಕುವೆಂಪು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಸುದ್ದಿ 2 ನಿಮಿಷ

ಅಪಘಾತ: ಚಾಲಕ ಸಾವು

ಬೆಂಗಳೂರು: ತಲಘಟ್ಟಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನಾಗೇಗೌಡನ ಪಾಳ್ಯದ ಸೇತುವೆ ಬಳಿ ಲಾರಿ ಹಾಗೂ ಐಷರ್ ವಾಹನದ ನಡುವೆ ಶುಕ್ರವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಐಷರ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಭುವನೇಶ್ವರಿ ನಗರದ ನಿವಾಸಿ ಶಿವ (47) ಮೃತಪಟ್ಟವರು.

‘ನಾಗೇಗೌಡನ ಪಾಳ್ಯದ ಸೇತುವೆ ಮಾರ್ಗವಾಗಿ ಕೊಯಮತ್ತೂರು ಕಡೆಗೆ ಲಾರಿ ಚಲಿಸುತ್ತಿತ್ತು. ಹಿಂಬದಿಯಿಂದ ಬಂದ ಐಷರ್ ವಾಹನವು ಲಾರಿಗೆ ಡಿಕ್ಕಿಯಾಗಿದೆ. ಡಿಕ್ಕಿ ರಭಸಕ್ಕೆ ಚಾಲಕನಿಗೆ ಗಂಭೀರ ಸ್ವರೂಪದ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದರು.

‘ಐಷರ್ ವಾನಹದಲ್ಲಿ ಕೋಳಿ ಸಾಗಣೆ ಮಾಡಲಾಗುತ್ತಿತ್ತು. ಚಾಲಕ ಅತಿವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ. ಅದೇ ಅಪಘಾತಕ್ಕೆ ಕಾರಣ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಹೊಸ ವರ್ಷಾಚರಣೆ: ಹೆಚ್ಚಿನ ಭದ್ರತೆ

ಬೆಂಗಳೂರು: ಹೊಸ ವರ್ಷಾಚರಣೆಗೆ ನಗರ ಸಜ್ಜಾಗುತ್ತಿದೆ. ಸೂಕ್ಷ್ಮ ಪ್ರದೇಶ ಹಾಗೂ ಸಂಭ್ರಮಾಚರಣೆ ನಡೆಯುವ ರಸ್ತೆಗಳಲ್ಲಿ ಈ ಬಾರಿ ಹೆಚ್ಚಿನ ಭದ್ರತೆಗೆ ಪೊಲೀಸರು ಮುಂದಾಗಿದ್ದಾರೆ.

ಸಂಭ್ರಮಾಚರಣೆ ವೇಳೆ ಮದ್ಯ ಸೇವಿಸಿ ರಸ್ತೆಗಳ ಮೇಲೆ ಬಾಟಲಿ ಒಡೆಯುವುದು ಹಾಗೂ ಖಾಲಿ ಬಾಟಲಿ ಎಸೆದು ದಾಂದಲೆ ಮಾಡುವವರನ್ನು ವಶಕ್ಕೆ ಪಡೆದು ಕ್ರಮ ಕೈಗೊಳ್ಳುವಂತೆ ಆಯಾ ಠಾಣೆಗಳು ಇನ್‌ಸ್ಪೆಕ್ಟರ್‌ಗಳಿಗೆ ಸೂಚನೆ ನೀಡಲಾಗಿದೆ. ಹೆಚ್ಚು ಜನರು ಸೇರುವ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಕೋರಮಂಗಲ ಹಾಗೂ ಇತರೆ ಸ್ಥಳಗಳ ಮೇಲೆ ಹೆಚ್ಚಿನ ನಿಗಾ ವಹಿಸುವಂತೆ ಸೂಚಿಸಲಾಗಿದೆ.

ಹೊಸ ವರ್ಷಾಚರಣೆಗೆ ಬರುವ ಯುವತಿಯರಿಗೆ ಯಾವುದೇ ತೊಂದರೆ ಆಗಬಾರದು. ಮದ್ಯ ಸೇವಿಸಿ ಕಿಡಿಗೇಡಿತನ ತೋರುವ ಯುವಕರ ಮೇಲೆ ಹದ್ದಿನ ಕಣ್ಣಿಡಬೇಕು. ಯಾವುದಾದರೂ ಅಹಿತಕರ ಘಟನೆ ನಡೆದರೆ ಆರೋಪಿಗಳನ್ನು ತಕ್ಷಣವೇ ವಶಕ್ಕೆ ಪಡೆದುಕೊಳ್ಳಬೇಕು ಎಂದು ಪೊಲೀಸ್ ಕಮಿಷನರ್ ಸೂಚನೆ ನೀಡಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಡಿ.31ರಂದು ರಾತ್ರಿ 1 ಗಂಟೆಯವರೆಗೆ ಮಾತ್ರ ಸಂಭ್ರಮಾಚರಣೆಗೆ ಅವಕಾಶ ಕಲ್ಪಿಸಲಾಗಿದೆ.

ಕುವೆಂಪು ಕನ್ನಡದ ಪ್ರಜ್ಞೆ: ರಾಗಂ

ಬೆಂಗಳೂರು: ‘ಕುವೆಂಪು ಕನ್ನಡದ ಪ್ರಜ್ಞೆಯಾಗಿದ್ದರು. ಅವರು ಚಿರಸ್ಥಾಯಿಯಾಗಿದ್ದಾರೆ’ ಎಂದು ಸಾಹಿತಿ ರಾಜಶೇಖರ ಮಠಪತಿ (ರಾಗಂ) ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಾಗೂ ಕನ್ನಡ ಸಂಘರ್ಷ ಸಮಿತಿ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕುವೆಂಪು ಜಯಂತಿ ಕಾರ್ಯಕ್ರಮದಲ್ಲಿ ತ.ನಂ.ಜ್ಞಾನೇಶ್ವರ ಅವರು ಸಂಪಾದಿಸಿದ ‘ಕುವೆಂಪು ಸಂದೇಶ’ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

‘ಕುವೆಂಪು ಅವರು ಕವಿ ಕ್ಷಾತ್ರ ನುಡಿ ಹಾಗೂ ವೈಚಾರಿಕತೆಯ ಮೂಲಕ ನಾಡು ಕಟ್ಟುವ ಕೆಲಸ ಮಾಡಿದರು. ಅರವಿಂದ, ಟ್ಯಾಗೋರ್ ಅವರ ನಂತರ ಒಂದು ಭೂ ಖಂಡದ ಸಂಸ್ಕೃತಿ ಕಟ್ಟಿಕೊಟ್ಟರು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರುನಾಡು ಗೆಳೆಯರ ಜಗದೀಶ್ ಅವರು ವಿನ್ಯಾಸಗೊಳಿಸಿದ ಕನ್ನಡ ಅಂಕಿಗಳ ಕ್ಯಾಲೆಂಡರನ್ನು ಪತ್ರಕರ್ತ ರಾಮಣ್ಣ ಕೋಡಿಹೊಸಹಳ್ಳಿ ಅವರು ಬಿಡುಗಡೆ ಮಾಡಿದರು. ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು ರೇಸ್

ಫಿಲಾಸಫಿ ಗೆಲ್ಲುವ ನಿರೀಕ್ಷೆ

ಐಸ್‌ಬ್ರೇಕರ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಿಲಾಸಫಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00 ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಇಂತಿದೆ:

1ನೇ ರೇಸ್: ವಫಾದಾರ್ 3, ಹಿಲಿಯೋಸ್ 1, ಸ್ಕಾರ್ಲೆಟ್ ಲೇಡಿ 6
2ನೇ ರೇಸ್: ಬೆನಿಗ್ನಿಟಿ 1, ಪ್ರಿನ್ಸೆಸ್ ಜಾಸ್ಮೈನ್ 2, ಡಾನ್ ರೈಸಿಂಗ್ 3
3ನೇ ರೇಸ್: ಶೀಈಸ್ ಎ ಲೇಡಿ 1, ಸೇಕ್ರೆಡ್ ಕ್ರಿಯೇಟರ್ 8, ಅಪೊಲೊ ಲೈಟ್ 2
4ನೇ ರೇಸ್: ಅಗೆರಾ 2, ಟ್ವಿಂಕಲ್ ಫೀಟ್ 1, ಗ್ಲೋ ಇನ್ ದಿ ಡಾರ್ಕ್ 4
5ನೇ ರೇಸ್: ಗ್ರೀಲಿ 7, ಸೂಪರ್ ಸಫೈರ್ 1, ಇನ್‌ಸ್ಟ್ರಕ್ಟರ್ 3
6ನೇ ರೇಸ್: ಸೋಫಿಯಾ 7, ಫಾಂಡ್‌ನೆಸ್ ಆಫ್ ಯೂ 1, ಲೆದರ್ ಬ್ಯಾಕ್ 3
7ನೇ ರೇಸ್: ಫಿಲಾಸಫಿ 1, ನಿಕೊಲಿನ 3, ಎಕ್ಸಲೆಂಟ್ ರೇ 7
8ನೇ ರೇಸ್: ಕ್ರಾಸ್‌ವಾಟರ್ 5, ಬೋಲ್ಡ್ ಆಕ್ಟ್ 2, ಸ್ಟೆಪ್ ಟು ಡೆಸ್ಟಿನಿ 1
9ನೇ ರೇಸ್: ಬ್ರೀಝ್ ಬಸ್ಟರ್ 6, ಅಹರ್ನೆ 1, ಸೆಕ್‌ಮೆಟ್ 5

ಉತ್ತಮ ಬೆಟ್: ಶೀಈಸ್ ಎ ಲೇಡಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
5,6,7,8,9	1,2,3	4,5,6

‘ಸಂವಿಧಾನಕ್ಕೂ ಅಸ್ಪೃಶ್ಯತೆಯ ಕಳಂಕ’

ಕುವೆಂಪು ಜನ್ಮ ದಿನ, ಸಂವಿಧಾನ ಸಮರ್ಪಣಾ ದಿನಾಚರಣೆಯಲ್ಲಿ ಮಾವಳ್ಳಿ ಶಂಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಬಂದ ಮೇಲೆ 75 ವರ್ಷಗಳಲ್ಲಿ ಸಾಕ್ಷರತೆ ಹೆಚ್ಚಿದೆ. ಆದರೆ, ಸಂವಿಧಾನದ ಬಗ್ಗೆ ಅನಕ್ಷರತೆ ಅಧಿಕವಾಗಿದೆ. ಸಂವಿಧಾನವು ಅಸ್ಪೃಶ್ಯತೆಯ ಕಳಂಕಕ್ಕೆ ಒಳಗಾಗುತ್ತಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಬೇಸರ ವ್ಯಕ್ತಪಡಿಸಿದರು.

ಮಹಾಕವಿ ಕುವೆಂಪು ಜನ್ಮದಿನ ಮತ್ತು ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಶುಕ್ರವಾರ ಹಮ್ಮಿಕೊಂಡಿದ್ದ ‘ಸಂವಿಧಾನ ರಕ್ಷಣೆಗಾಗಿ, ಪ್ರಜಾಪ್ರಭುತ್ವ ಉಳಿವಿಗಾಗಿ’ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

ಎಲ್ಲ ಜನಾಂಗದವರು ಸಂವಿಧಾನವನ್ನು ಸ್ವೀಕರಿಸಿ, ಅದರಲ್ಲಿರುವ ಜೀವಪರ ನಿಲುವುಗಳನ್ನು ಅನುಸರಿಸಿದಾಗ ಸಂವಿಧಾನ ಉಳಿಯಲು ಸಾಧ್ಯ. ಸಂವೇದನೆ ರಹಿತ ಸಮಾಜದಲ್ಲಿ ಯಾವ ಕಾನೂನು ಕೂಡ ಕೆಲಸ ಮಾಡದು. ಸಂವೇದನಶೀಲ ಸಮಾಜವನ್ನಾಗಿ ಪರಿವರ್ತಿಸುವ ಜವಾಬ್ದಾರಿ ಬೌದ್ಧಿಕ ಪ್ರಗತಿಪರರ ಮೇಲಿದೆ ಎಂದು ತಿಳಿಸಿದರು.

ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮಾತನಾಡಿ, ‘ಹಿಂದುಳಿದವರ ಸಮಸ್ಯೆ ಒಂದೇ ಆಗಿದ್ದರೂ, ಒಂದು ಜಾತಿಗೂ ಇನ್ನೊಂದು ಜಾತಿಗೂ ಆಗಲ್ಲ. ನಮ್ಮ ಕಿತ್ತಾಟದಲ್ಲಿ ಪ್ರಬಲ ಸಮುದಾಯಗಳೆರಡು ನಿರಂತರ ಅಧಿಕಾರವನ್ನು ಅನುಭವಿಸುತ್ತಾ ಬಂದಿವೆ. ಮನೆ ಮನೆಗೆ ಭೇಟಿ ನೀಡಿ ಕೈಗೊಂಡ ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯನ್ನು ಜನರ ಎದುರು ಇಡದೇ, ಅದರಲ್ಲೇನಿದೆ ಎಂದು ತಿಳಿಯದೇ ಅವೈಜ್ಞಾನಿಕ ಎಂದು ಕರೆಯುವವರಿಗೆ ಪಾಠ ಕಲಿಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಸಮೀಕ್ಷೆ ವರದಿ ಬಿಡುಗಡೆಯನ್ನು ವಿರೋಧಿಸುವವರಿಗೆ ಸಂದೇಶ ಕಳುಹಿಸಲು ಜ.28ರಂದು ಚಿತ್ರದುರ್ಗದಲ್ಲಿ ಹಿಂದುಳಿದವರ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ತಿಳಿಸಿದರು.

‘ದಲಿತರಿಗೆ ಉಪದೇಶ ನೀಡುವುದನ್ನು ಬಿಟ್ಟು, ಶೋಷಕರ ಮನಪರಿವರ್ತನೆ ಮಾಡಬೇಕು.. ಕುವೆಂಪು ವಿವೇಕ, ಪ್ರಜ್ಞೆ ಎಲ್ಲರಲ್ಲೂ ಮೂಡಬೇಕು’ ಎಂದು ಚಿಂತಕ ರವಿಕುಮಾರ್ ಬಾಗಿ ಸಲಹೆ ನೀಡಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಡಿಎಸ್‌ಎಸ್ ರಾಜ್ಯ ಸಮಿತಿ ಸದಸ್ಯೆ ಇಂದಿರಾ ಕೃಷ್ಣಪ್ಪ, ಚಿಂತಕರಾದ ಶ್ರೀಪಾದ ಭಟ್, ರಮೇಶ್ ಡಾಕುಳಗಿ, ನಿರ್ಮಲಾ, ಮಣಿಪಾಲ ರಾಜಪ್ಪ, ನಾಗಣ್ಣ ಬಡಿಗೇರ ಮಾತನಾಡಿದರು.

ಮಹಾಕವಿ ಕುವೆಂಪು ಜನ್ಮದಿನ ಆಚರಣೆ ಮತ್ತು ಸಂವಿಧಾನ ಸಮರ್ಪಣ ದಿನದ ಅಂಗವಾಗಿ ಶುಕ್ರವಾರ ನಡೆದ ‘ಸಂವಿಧಾನ ರಕ್ಷಣೆಗಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ’ ಜಾಗೃತಿ ಸಮಾವೇಶದಲ್ಲಿ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್‌ವಾದ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಮಾಜಿ ಸಚಿವ ಎಚ್. ಆಂಜನೇಯ, ಡಿಎಸ್‌ಎಸ್ ಮುಖಂಡರಾದ ಇಂದಿರಾ ಕೃಷ್ಣಪ್ಪ, ರವಿಕುಮಾರ್ ಬಾಗಿ ಅವರು ಅಂಬೇಡ್ಕರ್ ಪ್ರತಿಮೆಗೆ, ಕುವೆಂಪು, ಬಿ.ಕೃಷ್ಣಪ್ಪ, ಬಿ. ಬಸವಲಿಂಗಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

‘ಮಂದಿರ ಸಾಕು, ಮನೆ–ಮನ ಕಟ್ಟಿ’

ಮಂದಿರ ಕಟ್ಟಿದ್ದೀರಿ. ಸಾಕು ಮಾಡಿ. ಮುಂದೆ ಮನೆ–ಮನಗಳನ್ನು ಕಟ್ಟಿ. ಲಕ್ಷಾಂತರ ಮಂದಿ ಇಂದಿಗೂ ಇರಲೊಂದು ಮನೆ ಇಲ್ಲದೇ ಬದುಕುತ್ತಿದ್ದಾರೆ. ಅವರಿಗೆ ಬದುಕು ಕಟ್ಟಿಕೊಡಿ ಎಂದು ಮಾಜಿ ಸಚಿವ ಎಚ್. ಆಂಜನೇಯ ತಿಳಿಸಿದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ನಮ್ಮ ತೆರಿಗೆ ಹಣದಲ್ಲಿ ಮಂದಿರ ಕಟ್ಟಬೇಡಿ. ಚರಂಡಿ, ರಸ್ತೆ ಬದಿಯಲ್ಲಿ, ಶೌಚಾಲಯದ ಬದಿಯಲ್ಲಿ ಬದುಕುತ್ತಿರುವವರಿಗೆ ಸೂರು ನೀಡಿ’ ಎಂದರು.

‘ಚೆಕ್ ಬೌನ್ಸ್ ಪ್ರಕರಣ: ಸಚಿವ ಮಧು ಬಂಗಾರಪ್ಪ ತಪ್ಪಿತಸ್ಥ’

ಬೆಂಗಳೂರು (ಪಿಟಿಐ): ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ತಪ್ಪಿತಸ್ಥ ಎಂದು ತೀರ್ಪು ನೀಡಿದ್ದು, ಶಿಕ್ಷೆಗೆ ಗುರಿಪಡಿಸಿದೆ.

ಈ ಪ್ರಕರಣದಲ್ಲಿ ದೂರುದಾರರಾಗಿದ್ದ ರಾಜೇಶ್ ಎಕ್ಸ್‌ಪೋರ್ಟ್ ಸಂಸ್ಥೆಗೆ ₹ 6.96 ಕೋಟಿ ಹಾಗೂ ಸರ್ಕಾರದ ಸಕ್ಷಮ ಸಂಸ್ಥೆಗೆ ₹ 10 ಸಾವಿರ ಪಾವತಿಸಬೇಕು. ತಪ್ಪಿದ್ದಲ್ಲಿ 6 ತಿಂಗಳು ಸಾದಾ ಸಜೆ ಅನುಭವಿಸಬೇಕು ಎಂದೂ ಕೋರ್ಟ್ ಆದೇಶಿಸಿದೆ. 42ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶರಾದ ಪ್ರೀತ್ ಜೆ ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ.

ಈ ಪ್ರಕರಣದಲ್ಲಿ ಆಕಾಶ್ ಆಡಿಯೊ–ವಿಡಿಯೊ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಮೊದಲ ಆರೋಪಿಯಾಗಿ ಹಾಗೂ ಸಂಸ್ಥೆಯ ನಿರ್ದೇಶಕರಾಗಿದ್ದ ಎಸ್.ಬಿ.ಮಧುಚಂದ್ರ (ಎಸ್. ಮಧು ಬಂಗಾರಪ್ಪ) ಅವರನ್ನು ಎರಡನೇ ಆರೋಪಿಯಾಗಿ ಹೆಸರಿಸಲಾಗಿತ್ತು.

‘ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆಯ ಸೆಕ್ಷನ್ 138ರ ಅನುಸಾರ ಆರೋಪಿ 1 ಮತ್ತು 2 ತಪ್ಪಿತಸ್ಥರು. ಇವರು ಒಟ್ಟು ₹ 6,96,70,000 ಪಾವತಿಸಬೇಕು. ತಪ್ಪಿದ್ದಲ್ಲಿ ಎರಡನೇ ಆರೋಪಿ ಆರು ತಿಂಗಳು ಸಾದಾ ಸಜೆ ಅನುಭವಿಸಬೇಕು’ ಎಂದು ಆದೇಶಿಸಿದೆ.

ದೂರಿನ ಪ್ರಕಾರ, ಆಕಾಶ್ ಆಡಿಯೊ ವಿಡಿಯೊ ಸಂಸ್ಥೆಯು ರಾಜೇಶ್ ಎಕ್ಸ್‌ಪೋರ್ಟ್ಸ್ ಸಂಸ್ಥೆಯಿಂದ ಅಂತರ ಕಾರ್ಪೊರೇಟ್ ಠೇವಣಿಯಾಗಿ ₹ 6 ಕೋಟಿ ಪಡೆದುಕೊಂಡಿತ್ತು. ಈ ಸಂಬಂಧ ನಿರ್ದೇಶಕರಾಗಿದ್ದ ಮಧು ಬಂಗಾರಪ್ಪ ₹ 6.6 ಕೋಟಿಗೆ ಚೆಕ್ ಕೊಟ್ಟಿದ್ದರು. ಆದರೆ, ಚೆಕ್ 2011ರ ನವೆಂಬರ್ 27ರಂದು ಬೌನ್ಸ್ ಆಗಿತ್ತು. ಬಳಿಕ ರಾಜೇಶ್ ಎಕ್ಸ್‌ಪೋರ್ಟ್ ಸಂಸ್ಥೆ 2012ರಲ್ಲಿ ಮತ್ತೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 2022ರಲ್ಲಿ ಈ ಪ್ರಕರಣವನ್ನು ವಿಶೇಷ ಕೋರ್ಟ್‌ಗೆ ವರ್ಗಾಯಿಸಲಾಗಿತ್ತು.

‘ಚರ್ಚಿಸಿ ಇತ್ಯರ್ಥ ಮಾಡಿಕೊಂಡಿದ್ದೇವೆ’

ಹುಬ್ಬಳ್ಳಿ: ‘ಪ್ರಕರಣವನ್ನು ನಾವು ಪರಸ್ಪರ ಚರ್ಚಿಸಿ ಬಗೆಹರಿಸಿಕೊಂಡಿದ್ದೇವೆ’ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

‘ಪರಸ್ಪರ ಚರ್ಚಿಸಿ ಇತ್ಯರ್ಥ ಪಡಿಸಿಕೊಳ್ಳುವುದಾಗಿ ಕೋರ್ಟ್‌ಗೆ ಲಿಖಿತವಾಗಿ ತಿಳಿಸಿದ್ದೇನೆ. ಇದು 12 ವರ್ಷದ ಹಿಂದಿನ ವ್ಯಾಜ್ಯ. ಅಲ್ಲದೇ ಇದು ವೈಯಕ್ತಿಕವೂ ಅಲ್ಲ. ಮಾಧ್ಯಮದವರು ಜವಾಬ್ದಾರಿಯಿಂದ ಮಾಹಿತಿ ನೀಡಬೇಕು’ ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

ವಿದ್ಯುತ್ ಆಘಾತದಿಂದ ದುರಂತ: ಕುಟುಂಬಸ್ಥರು, ನಿವಾಸಿಗಳ ಆರೋಪ

ಈಜುಕೊಳದಲ್ಲಿ ಬಾಲಕಿ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವರ್ತೂರು ಪೊಲೀಸ್ ಠಾಣೆ ವ್ಯಾಪ್ತಿಯ ಪ್ರೆಸ್ಟೀಜ್ ಲೇಕ್ ಹ್ಯಾಬಿಟೆಟ್ ಅಪಾರ್ಟ್‌ಮೆಂಟ್ ಆವರಣದ ಈಜುಕೊಳಕ್ಕೆ ಬಿದ್ದು ಮಾನ್ಯ ದಾಮೇರ್ಲ (10) ಎಂಬ ಬಾಲಕಿ ಮೃತಪಟ್ಟಿದ್ದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ

ಸಾವಿನ ಕುರಿತು ಪೋಷಕರು ಅನುಮಾನ ವ್ಯಕ್ತಪಡಿಸಿ ವರ್ತೂರು ಠಾಣೆಗೆ ದೂರು ನೀಡಿದ್ದಾರೆ.

ಗುರುವಾರ ರಾತ್ರಿ 8.30ರ ಸುಮಾರಿಗೆ ಈ ಘಟನೆ ನಡೆದಿದೆ. ಅಪಾರ್ಟ್‌ಮೆಂಟ್ ಸಮೀಪದ ಶಾಲೆಯೊಂದರಲ್ಲಿ ಬಾಲಕಿ ನಾಲ್ಕನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು.

ಈಜುಕೊಳದ ನೀರಿನಲ್ಲಿ ಮುಳುಗುತ್ತಿದ್ದ ಬಾಲಕಿಯನ್ನು ಕಂಡ ನಿವಾಸಿಗಳು ಆಕೆಯನ್ನು ಮೇಲಕ್ಕೆ ಎತ್ತಿ ಸಮೀಪದ ಸಹಸ್ರ ಆಸ್ಪತ್ರೆಗೆ ದಾಖಲಿಸಿದ್ದರು. ಪರಿಶೀಲಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದರು. ತಮ್ಮ ಮಗಳ ಸಾವಿನ ಬಗ್ಗೆ ಅನುಮಾನವಿದ್ದು ತನಿಖೆ ನಡೆಸುವಂತೆ ಮೃತ ಬಾಲಕಿ ತಂದೆ ರಾಜೇಶ್ ಕುಮಾರ್ ದಾಮೇರ್ಲ ದೂರು ನೀಡಿದ್ದಾರೆ.

ಆಂಧ್ರಪ್ರದೇಶದ ರಾಜೇಶ್ ಕುಟುಂಬ ಅಪಾರ್ಟ್‌ಮೆಂಟ್ 13ನೇ ಮಹಡಿಯಲ್ಲಿ ನೆಲೆಸಿತ್ತು. ರಾಜೇಶ್ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶ: ಈಜುಕೊಳದ ಬಳಿ ವಿದ್ಯುತ್ ತಂತಿಯಿದ್ದು ಆ ತಂತಿ ಸ್ಪರ್ಶಿಸಿ ಬಾಲಕಿ ನೀರಿಗೆ ಬಿದ್ದು ಮೃತಪಟ್ಟಿದ್ದಾಳೆ ಎಂದು ಕುಟುಂಬಸ್ಥರು ಹಾಗೂ ನಿವಾಸಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ನಿರ್ಲಕ್ಷ್ಯ– ನಿವಾಸಿಗಳ ಪ್ರತಿಭಟನೆ: ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ನಿರ್ಲಕ್ಷ್ಯದಿಂದ ದುರಂತ ಸಂಭವಿಸಿದೆ ಎಂದು ಆರೋಪಿಸಿ ನಿವಾಸಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು. ಅಪಾರ್ಟ್‌ಮೆಂಟ್ ಎದುರು ಜಮಾಯಿಸಿ ಘೋಷಣೆ ಕೂಗಿದರು. ಈಜುಕೊಳದ ಸುತ್ತಮುತ್ತ ಜಂಕ್ಷನ್ ಬಾಕ್ಸ್‌ಗಳನ್ನು ಹಾಗೆಯೇ ಬಿಡಲಾಗಿದೆ. ವಿದ್ಯುತ್ ತಂತಿಗಳೂ ಅಪಾಯಕಾರಿಯಾಗಿ ಕಾಣಿಸುತ್ತಿವೆ. ಯಾವುದೇ ಸುರಕ್ಷತೆ ಇಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಈಜುಕೊಳ ಬಳಿಯ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರೂ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ, ಬಾಲಕಿ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬರುವುದು ತಡವಾಗಲಿದೆ. ವರದಿ ಬಂದ ಮೇಲೆ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

75 ಉಪ ವಿಭಾಗ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 225 ವಾರ್ಡ್‌ಗಳನ್ನು 75 ಕಂದಾಯ, ಆರೋಗ್ಯ, ಕಾಮಗಾರಿ ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

225 ವಾರ್ಡ್‌ಗಳನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಇದನ್ನು ಪಾಲಿಕೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಉಪ ವಿಭಾಗಗಳನ್ನೂ ಪುನರ್ ವಿಂಗಡಿಸಲಾಗಿದೆ.

ಪ್ರತಿ ಉಪ ವಿಭಾಗದಲ್ಲಿ ಎರಡರಿಂದ ನಾಲ್ಕು ವಾರ್ಡ್‌ಗಳಿರುವಂತೆ ವಿಂಗಡಿಸಲಾಗಿದೆ. ಎಂಟು ವಲಯಗಳಲ್ಲಿ 30 ವಿಭಾಗಗಳನ್ನು ರಚಿಸಿ ಅದರಡಿ 75 ಉಪ ವಿಭಾಗಗಳಲ್ಲಿ ಕೆಲಸ ನಿರ್ವಹಿಸುವಂತೆ ಮುಖ್ಯ ಆಯುಕ್ತರು ಡಿ.29ರಂದು ಆದೇಶ ಹೊರಡಿಸಿದ್ದಾರೆ.

ವಿಭಾಗ, ಉಪ ವಿಭಾಗಗಳ ವಿವರ

ವಲಯ	ವಿಭಾಗ	ಉಪ ವಿಭಾಗ
ಬೊಮ್ಮನಹಳ್ಳಿ	3	9
ದಾಸರಹಳ್ಳಿ	2	4
ಪೂರ್ವ	6	13
ಮಹದೇವಪುರ	2	9
ರಾಜರಾಜೇಶ್ವರಿ ನಗರ	3	7
ದಕ್ಷಿಣ	6	14
ಯಲಹಂಕ	2	6
ಪಶ್ಚಿಮ	6	13

ಪ್ರಾಣಿ ವಿಜ್ಞಾನ: ಸಂಶೋಧನೆಗೆ ಹೆಚ್ಚಿನ ಅವಕಾಶ– ರಾಮಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವ ಜನರು ಕೇವಲ ಎಂಜಿನಿಯರ್ ಹಾಗೂ ವೈದ್ಯಕೀಯ ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಇತರೆ ವಿಷಯಗಳ ಅಧ್ಯಯನ ನಡೆಸುವತ್ತ ಕುರಿತು ಗಮನ ಹರಿಸಬೇಕು’ ಎಂದು ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದ ನಿವೃತ್ತ ನಿರ್ದೇಶಕ ಡಾ.ಎ.ವಿ.ರಾಮಕೃಷ್ಣ ಸಲಹೆ ಮಾಡಿದರು.

ನಗರದ ಶೇಷಾದ್ರಿ ರಸ್ತೆ ಬಬ್ಬೂರುಕಮ್ಮೆ ಸಮುದಾಯ ಭವನದಲ್ಲಿ ನಡೆದ ಜೋಡಿಗುಬ್ಬಿ ವಿಪ್ರವೃಂದದ 11ನೇ ವಾರ್ಷಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಭೂಗರ್ಭ ವಿಜ್ಞಾನ, ಪ್ರಾಣಿ ವಿಜ್ಞಾನದಲ್ಲಿ ಸಂಶೋಧನೆಗೆ ಹಲವು ರೀತಿಯ ಅವಕಾಶಗಳು ಲಭ್ಯವಿದೆ. ಆದರೆ, ಈ ಕುರಿತು ಕೆಲವೇ ಮಂದಿ ಮಾತ್ರ ಆಸಕ್ತಿ ತೋರುತ್ತಾರೆ. ಈ ಕ್ಷೇತ್ರಗಳನ್ನು ಬಳಸಿಕೊಳ್ಳುವತ್ತ ಚಿಂತನೆ ನಡೆಯಬೇಕಿದೆ’ ಎಂದರು.

ನಿವೃತ್ತ ಕೆಎಎಸ್ ಅಧಿಕಾರಿ ಎ.ವಿ.ಪ್ರಸನ್ನ ಅವರು, ವಿಪ್ರವೃಂದದ ಸದಸ್ಯರು ಪರಸ್ಪರ ಸಂಪರ್ಕ ಸಾಧಿಸಲು ನೆರವಾಗುವಂತೆ ವಿಪ್ರ ಸಂಪರ್ಕ ದಿಪೀಕಾ ಪುಸ್ತಕ ಪ್ರಕಟಿಸಿರುವ ಕಾರ್ಯ ಪ್ರಶಂಸನೀಯ. ಹಾಸನ ಜಿಲ್ಲೆ, ಜೋಡಿ ಗುಬ್ಬಿಯಂತಹ ಸಣ್ಣ ಗ್ರಾಮದ ವಿಪ್ರ ಸಮುದಾಯದವರು ಒಗ್ಗೂಡಿ ವಾರ್ಷಿಕವಾಗಿ ಈ ರೀತಿಯ ದೊಡ್ಡಮಟ್ಟದ ಕಾರ್ಯಕ್ರಮ ನಡೆಸುತ್ತಾ ಬಂದಿರುವುದು ಹೆಮ್ಮೆಯ ಸಂಗತಿ ಎಂದರು.

ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಡಾ.ವೈ.ವಿ.ಮುರಳಿ ಮಾತನಾಡಿದರು. ಬಳಗದ ಅಧ್ಯಕ್ಷ ಜಿ.ಎನ್.ರಾಮಚಂದ್ರ ಬಳಗದ ಕಾರ್ಯ ಚಟುವಟಿಕೆ ಕುರಿತು ವಿವರಿಸಿದರು.

2024ನೇ ಸಾಲಿನ ದಿನದರ್ಶಿಕೆ, ವಾರ್ಷಿಕ ಸ್ಮರಣ ಸಂಚಿಕೆ ಹಾಗೂ ವಿಪ್ರ ಸಂಪರ್ಕ ದೀಪಿಕಾ ಪುಸ್ತಕ ಬಿಡುಗಡೆ ಮಾಡಲಾಯಿತು. ಸಾಧಕರು, ಹಿರಿಯ ದಂಪತಿಗಳನ್ನು ಗೌರವಿಸಲಾಯಿತು. ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ವಾರ್ಷಿಕ ಸಮಾವೇಶದ ಪ್ರಯುಕ್ತ ಏರ್ಪಡಿಸಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ವಿಪ್ರ ಬಳಗದ ಉಪಾಧ್ಯಕ್ಷೆ ಶೈಲಜಾ ಶೇಷಾದ್ರಿ, ಕಾರ್ಯದರ್ಶಿ ಜಿ.ವಿ.ರಮೇಶ್, ಸಹ ಕಾರ್ಯದರ್ಶಿ ನಾಗು ಪ್ರವೀಣ್, ಶ್ಯಾಮಸುಂದರ್, ರಂಗನಾಥ್ ಇದ್ದರು.

ಜೋಡಿ ಗುಬ್ಬಿ ವಿಪ್ರವೃಂದದ 11ನೇ ವಾರ್ಷಿಕ ಸಮಾವೇಶದಲ್ಲಿ ಜಿ.ಎನ್. ರಾಮಚಂದ್ರ, ಎ.ವಿ.ರಾಮಕೃಷ್ಣ, ವೈ.ವಿ. ಮುರಳಿ, ಎ.ವಿ.ಪ್ರಸನ್ನ, ಶೈಲಜಾ ಶೇಷಾದ್ರಿ, ಜಿ.ವಿ.ರಮೇಶ್ ಭಾಗವಹಿಸಿದ್ದರು

ಕಿರುಕುಳ ಆರೋಪ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ನಗರದ ಬನ್ನೇರುಘಟ್ಟ ರಸ್ತೆಯ ಎಎಂಸಿ ಕಾಲೇಜಿನಲ್ಲಿ ಪ್ರಥಮ ವರ್ಷದ ಹೋಟೆಲ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಾಗರಬಾವಿಯ ಪಿ.ಜಿ ಯೊಂದರಲ್ಲಿದ್ದ ನಿಖಿಲ್ (22) ಆತ್ಮಹತ್ಯೆ ಮಾಡಿಕೊಂಡಿದ್ದು, ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪಿ.ಜಿಯಿಂದ ಕಾಲೇಜಿಗೆ ತೆರಳುತ್ತಿದ್ದ. ಮಾತ್ರೆ ಸೇವಿಸಿ, ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಕಾಲೇಜಿನ ಡೀನ್ ಕಿರುಕುಳವೇ ಕಾರಣವೆಂದು ಪೋಷಕರು ದೂರು ನೀಡಿದ್ದಾರೆ. ಡೀನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಡೀನ್ ಕಿರುಕುಳದ ವಿಚಾರವನ್ನು ಪುತ್ರ ತಿಳಿಸಿದ್ದ. ಬೇಸತ್ತು ಮನೆಯಲ್ಲಿದ್ದ ಮಾತ್ರೆ ಸೇವಿಸಿದ್ದು ಗೊತ್ತಾದ ಕೂಡಲೇ ನಾಗರಬಾವಿ ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು’ ಎಂದು ಪೋಷಕರು ತಿಳಿಸಿದರು.

ನಗರದಲ್ಲಿ ವಿವಿಧ ಸಂಘಟನೆಗಳೊಂದಿಗೆ ಕರವೇ ಪ್ರತಿಭಟನೆ

ಕಾರ್ಯಕರ್ತರ ಬಂಧನಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದಲ್ಲಿ ನಾಮಫಲಕ ಅಳವಡಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಿರುವ ಪೊಲೀಸರ ಕ್ರಮ ಖಂಡಿಸಿ ಶುಕ್ರವಾರ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಮಾತನಾಡಿ, ‘ರಾಜ್ಯಗಳು ಉದಯ ಆಗಿರುವುದೇ ಭಾಷೆಯ ಆಧಾರದ ಮೇಲೆ. ಕನ್ನಡ ಕಡ್ಡಾಯ ಎನ್ನುವ ಕಾನೂನು ಇದ್ದರೂ ಪಾಲಿಸದೇ ಇದ್ದಾಗ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದರು. ಅದನ್ನು ಎತ್ತಿ ತೋರಿಸಿದ್ದಕ್ಕೆ ಕನ್ನಡಪರ ಹೋರಾಟಗಾರರನ್ನು ಬಂಧಿಸಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಮಾತನಾಡಿ, ‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎಂ.ಬಿ. ಪಾಟೀಲ ಅವರು ಯಾರ ಪರವಾಗಿ ಇದ್ದಾರೆ? ಅವರು ತಮ್ಮ ಸ್ವಾರ್ಥಕ್ಕೆ ರಾಜ್ಯವನ್ನು ಬಲಿ ಕೊಡುತ್ತಿದ್ದಾರೆ’ ಎಂದರು.

ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ರಮೇಶ್ ಬೆಲ್ಲಂಕೊಂಡ, ಜಗದೀಶ್ ವಿ. ಸದಂ, ಜಗದೀಶ್ ಚಂದ್ರ, ಸುಷ್ಮಾ ವೀರ, ಅಶೋಕ್ ಮೃತ್ಯುಂಜಯ, ಜಗದೀಶ್ ಬಾಬು ಹಾಗೂ ನಾರಾಯಣ ಗೌಡ ಬಣದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಯವರು ಪಾಲ್ಗೊಂಡಿದ್ದರು.

ಕರವೇ ಕಾರ್ಯಕರ್ತರ ಬಿಡುಗಡೆಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು

‘ಬಂಧಿತರ ಬಿಡುಗಡೆ ಮಾಡದಿದ್ದರೆ ಬೆಂಗಳೂರು ಬಂದ್’

ಬೆಂಗಳೂರು: ‘ವಾಣಿಜ್ಯ ಮಳಿಗೆಗಳ ನಾಮ ಫಲಕಗಳಲ್ಲಿ ಕನ್ನಡ ಬಳಕೆಗೆ ಹೋರಾಡಿ ಬಂಧನಕ್ಕೆ ಒಳಗಾಗಿರುವ ಕನ್ನಡ ಪರ ಹೋರಾಟಗಾರರನ್ನು ಬಿಡುಗಡೆ ಮಾಡದಿದ್ದರೆ ಬೆಂಗಳೂರು ಬಂದ್‌ಗೆ ಕರೆ ನೀಡಲಾಗುವುದು’ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯ ಘಟಕದ ಅಧ್ಯಕ್ಷ ಪ್ರವೀಣ್ ಶೆಟ್ಟಿ ಎಚ್ಚರಿಕೆ ನೀಡಿದ್ದಾರೆ.

ಇಂಗ್ಲಿಷ್ ನಾಮಫಲಕಗಳನ್ನು ಕಿತ್ತು ಬಿಸಾಡಿ, ಮಸಿ ಬಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಟಿ.ಎ. ನಾರಾಯಣಗೌಡ ಸೇರಿ ಕರ್ನಾಟಕ ರಕ್ಷಣಾ ವೇದಿಕೆಯ 53 ಮಂದಿಯನ್ನು ಬಿಡುಗಡೆಗೆ ಆಗ್ರಹಿಸಿ ಕನ್ನಡಪರ ಹೋರಾಟಗಾರರು ಹಾಗೂ ಸಾಹಿತಿಗಳು ನಗರದಲ್ಲಿ ಶುಕ್ರವಾರ ಸಭೆ ನಡೆಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ದೊಡ್ಡರಂಗೇಗೌಡ ಸೇರಿ ವಿವಿಧ ಕನ್ನಡ ಪರ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿ, ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು.

ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...

LG OLED C3 195cm (77) / 164cm (65) 139cm (55) / 121cm (48)
- OLED evo 4K with Brightness Booster Max
- Self-LIT Pixels / α9 AI Processor 4K Gen6 / 120Hz
- Dolby Vision & Dolby Atmos
- 2.2 Ch / 40W Sound* with Virtual Surround 9.1.2
- NVIDIA G-Sync / AMD FreeSync / VRR

EMI: ₹999*

LG 75NANO75 190cm (75)
- Real 4K NanoCell / α5 AI Processor 4K Gen5
- AI Brightness Control / AI Sound Pro (Virtual 5.1.2 Up-mix)
- Built-in Google Assistant & Alexa / Apple Airplay & HomeKit
- webOS 22 with User Profiles
- 3 x HDMI / 2 x USB

EMI: ₹999*

LG 65QNED90 164cm (65) NEW ARRIVAL
- Quantum Dot NanoCell Technology for Richer & More Accurate Colours in 4K
- MiniLED with Precision Dimming Pro for Fantastic Contrast & Brightness
- α7 Gen5 AI Processor with AI Picture Pro & AI 4K Upscaling

EMI: ₹999*

LG UHDTV UR9050 190cm (75) / 164cm (65) / 139cm (55) / 127cm (50) / 108cm (43)
- 4K Display / α5 AI Processor 4K Gen6
- Built-in Alexa / Apple Airplay & HomeKit / Works with Hey Google
- 60 Hz

EMI: ₹999*

LG UHDTV UR8040 164cm (65) / 139cm (55) 127cm (50) / 108cm (43)
- 4K Display / α5 AI Processor 4K Gen6
- Built-in Alexa / Apple Airplay & HomeKit / Works with Hey Google
- 60 Hz

EMI: ₹999*

LG UHDTV 43UR7790 108cm (43)
- 4K Display with Ultra Bright Panel
- α5 AI Processor 4K Gen6
- 2.1 Ch / 35W Powerful Sound / Built-in Woofer
- AI Brightness Control / HLG / HDR10 / 4K Upscaler
- Built-in Alexa / Apple Airplay & HomeKit / Works with Hey Google

EMI: ₹999*

SONY 4K ULTRA UHD 55X75L
- 4K X-Reality™ PRO • Motionflow™ XR
- Auto HDR Tone Mapping • Chromecast built-in™
- Slim Blade Stand

EMI: ₹2,995*

BOSCH 7 KG FRONT LOAD
- Anti Stain Program • SpeedPerfect™
- AutoStain Removal • 7 kg Loading Capacity
- Multiple water protection

EMI: ₹2,999*

LG DISH WASHER DFB532FP
- TrueSteam®
- QuadWash™
- EasyRack™ Plus
- Inverter Direct Drive
- 100% Stainless Steel
- LG ThinQ
- Capacity: 14 Place Settings
- Auto-Restart
- Colour: Platinum Silver

EMI: ₹2,999*

LG WATER PURIFIER WW155NPB
Capacity: 8 Litres
- Type: RO+STS Tank+UV
- Dual Protection Stainless Steel Tank
- Multi-Stage Filtration
- Mineral Booster
- In-Tank UV LED

EMI: ₹888*

LG MICROWAVE OWEN MJEN326SFW (32L) / MJEN286UFW (28L)
- Scan to Cook Wi-Fi Model- ThinQ Enabled
- Charcoal Lighting Heater™
- 30 Healthy Heart™ Recipes~
- Motorised Rotisserie
- Pasteurize Milk
- Multicook Tawa
- Indian Roti Basket**
- Steam Chef

EMI: ₹1,499*

iPhone 15

MRP	₹79,900
Instore Discount	₹5,000
Exchange Value	₹25,000
Exchange Bonus Upto*	₹6,000
HDFC Bank Cash Back*	₹5,000
Effective Price*	₹38,900
EMI per month* 24 months	₹1,829

BUY APPLE IPHONE 15 SERIES, GET BACK CASE & TEMPER GLASS WORTH ₹2,000 FREE

MATHIKERE: Old Raghu Med. **Ph: 91484 50662. K R PURAM :** Nr. TC Palya signal, **Ph: 76195 55537. BANASHANKARI:** Opp. Big Bazaar, **Ph: 99000 46931. MARATHAHALLI:** Opp. Innovative, **Ph: 91484 50665/64. BOMMANAHALLI:** Next to Shell Petrol , **Ph: 99000 46913. YELAHANKA NEW TOWN:** Opp Yelahanka Central Mall, **Ph: 99000 46918. SAHAKAR NAGAR:** Next to Swati Garden, **Ph: 99000 46937. HEBBAGODI:** Opp SKF, Next to KFC, **Ph: 76195 55541. BASVESHWARA NAGAR:** Modi Hospital Road,**Ph: 99000 46934. R.T NAGAR:** Next to Police Station, **Ph:99000 29308. SANJAY NAGAR:** Next to HDFC Bank, **Ph: 99000 46928. DEVANAHALLI:** Opp. Indian Oil, **Ph: 91481 40111. HOSAKOTE:** Next to Chemmanur, **Ph: 91081 78999. AKSHAY NAGAR:** DLF City, Opp. Hiranandani, **Ph: 99000 46943. HONGASANDRA:** Opp SBI, Begur Road, **Ph: 95915 26018. COX TOWN:** Next to Gymkhana, **Ph: 99000 46930. FRAZER TOWN:** Opp. Canara Bank , **Ph: 99000 12851. GANGA NAGAR:** Opp Vishal Medicals, **Ph: 99000 46949. HANUMANTH NAGAR:** Opp. Canara Bank, **Ph: 99000 46940. HEGGANAHALLI:** Opp Bus Stop, **Ph: 76195 55506. HESARAGHATTA MN RD:** Opp. Karnataka Bank, **Ph: 76195 55543. HRBR LAYOUT:** Near Banaswadi Club, **Ph: 99000 46946. HSR LAYOUT:** Opp NIFT, 27 Main, **Ph: 99000 18126. KOTHANUR:** Next to Empire Hotel, **Ph: 99002 37116. NAGARBHAVI:** Ambedkar Col. Signal, **Ph: 99725 97017. SUNKADAKATTE:** Magadi Road, **Ph: 76195 55509. RR NAGAR:** Opp. BBMP Office, **Ph: 99000 18217. PEENYA T DASARAHALLI :** Next to Honda Showroom, **Ph: 91485 70490 . VIJAYANAGAR:** Opp. Water Tank, **Ph: 99000 12420. KENGERI:** Opp. DS Max, **Ph: 99000 12609. RAMANAGARA:** Near Izoor P Stn., **Ph: 99000 98795. NELAMANGALA:** Opp. Shell Petrol Station, **Ph: 99001 15781. KOLAR:** Opp Honda, **Ph: 99001 09852. TUMKUR:** Opp. SIT, Batwadi, **Ph: 91086 71999. DODDABALLAPUR:** Taluk Office Road, **Ph: 9900046923.**
LG BEST SHOPS: BANGALORE: RAMA MURTHY NAGAR, Ph:99000 46915. BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559. MYSORE: Kuvempunagar, **Ph: 91489 99894**

*Terms and conditions apply. On select brands and products. Limited period offers. Images are for representation only, not actual products. Free gift not applicable for samsung. Finance at the sole discretion of the financier. #20% cash back as per the offers by banks and finance companies.

50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | **www.uniletstores.com**

ಜಲಸಂಪನ್ಮೂಲ ಇಲಾಖೆ
ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ರಾಯಚೂರು ಜಿಲ್ಲೆ, ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ

109.00 ಕೋಟಿ ರೂ.ಗಳ ತಿಮ್ಮಾಪೂರ ಏತ ನೀರಾವರಿ ಯೋಜನೆ

ಲೋಕಾರ್ಪಣೆ ಕಾರ್ಯಕ್ರಮ

ಹಾಗೂ

ಕರ್ನಾಟಕ ಸಂಭ್ರಮ-50 : ಕನ್ನಡ ರಥ ಮೆರವಣಿಗೆಗೆ ಚಾಲನೆ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಹಾಗೂ ಜಲಸಂಪನ್ಮೂಲ ಸಚಿವರು
ಕರ್ನಾಟಕ ಸರ್ಕಾರ

ದಿನಾಂಕ: 30.12.2023ನೇ ಶನಿವಾರ । ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಸರ್ಕಾರಿ ಪದವಿ ಮಹಾವಿದ್ಯಾಲಯ, ಕುಷ್ಟಗಿ ರಸ್ತೆ, ಸಿಂಧನೂರು.

ತಿಮ್ಮಾಪೂರ ಏತ ನೀರಾವರಿ ಯೋಜನೆಯ ವೈಶಿಷ್ಟ್ಯತೆಗಳು:

- ತಿಮ್ಮಾಪುರ ಏತ ನೀರಾವರಿ ಯೋಜನೆಗೆ ತುಂಗಭದ್ರಾ ನದಿಯ ಮೂಲದಿಂದ 1.85 ಟಿ.ಎಂ.ಸಿ. ನೀರಿನ ಬೇಡಿಕೆ. ರೂ 90.60 ಕೋಟಿ ಮೊತ್ತದ ಟೆಂಡರ್ ಕಾಮಗಾರಿ ಟರ್ನ್‌ಕೀ ಆಧಾರದ ಯೋಜನೆ.
- ತುಂಗಭದ್ರಾ ಎಡದಂಡೆ ಕಾಲುವೆಯ 54ನೇ ವಿತರಣಾ ಕಾಲುವೆ ಅಡಿಯಲ್ಲಿ ಬರುವ ವಂಚಿತ ಸುಮಾರು 34948 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ.
- ಸದರಿ ಯೋಜನೆಯಿಂದ ಸಿಂಧನೂರು ತಾಲೂಕಿನ ಸುಲ್ತಾನಪುರ, ರಾಮತ್ನಾಳ, ದಿಬ್ಬನಖೇಡ, ತುರಕಟ್ಟಿ, ಕನಕರೆಡ್ಡಿ, ಮಂದಾವಸೂರು, ವಲ್ಕಂದಿನ್ನಿ, ಯಾಪಲರ್ವಿ, ರಾಗಲಪರ್ವಿ, ಮುಲದಿನ್ನಿ, ಧುಮತಿ, ಒಳಬಳ್ಳಾರಿ, ಗೋಸ್ವಾರ, ಹುಲಗುಂಚಿ, ಆಚಿದನೂರು, ಚಿಂತಮಾನದೊಡ್ಡಿ, ಚಿತ್ರಾಲಿ, ಬಾದರ್ಲಿ, ಪುಲಮೇಶ್ವರದಿನ್ನಿ, ಹೆಡಿಗಿನಾಳ, ಯದ್ದಲದೊಡ್ಡಿ, ತಿಮ್ಮಾಪುರ, ಮಲದಿನ್ನಿ ಮತ್ತು ಬನ್ನಿಗನೂರು ಒಟ್ಟು 24 ಗ್ರಾಮಗಳ ಅಚ್ಚುಕಟ್ಟು ಪ್ರದೇಶದ ಜಮೀನುಗಳಿಗೆ ನೀರಾವರಿ ಸೌಲಭ್ಯ.
- ಮುಖ್ಯ ವಿತರಣಾ ಕಾಲುವೆ 54ರ 2ನೇ ಹಂತದ ಕಾಲುವೆಯಡಿ ಬರುವ ಬಾಧಿತ ಅಚ್ಚುಕಟ್ಟು ಪ್ರದೇಶದಲ್ಲಿ ಮುಂಗಾರು ಹಂಗಾಮಿನಲ್ಲಿ 20565 ಎಕರೆ ಮತ್ತು ಹಿಂಗಾರು ಹಂಗಾಮಿನಲ್ಲಿ 14383 ಎಕರೆ ಒಟ್ಟು 34948 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ.

ಉದ್ಘಾಟನೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಹಾಗೂ ಜಲಸಂಪನ್ಮೂಲ ಸಚಿವರು

ಘನ ಉಪಸ್ಥಿತಿ

ಡಾ॥ ಶರಣಪ್ರಕಾಶ್ ಪಾಟೀಲ್
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು

ಡಾ. ಜಿ. ಪರಮೇಶ್ವರ
ಮಾನ್ಯ ಗೃಹ ಸಚಿವರು

ಶ್ರೀ ಪ್ರಿಯಾಂಕ ಖರ್ಗೆ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಶ್ರೀ ಶಿವರಾಜ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ಶ್ರೀ ಎನ್.ಎಸ್. ಭೋಸರಾಜು
ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಡಾ. ಎಂ.ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು

ಶ್ರೀ ಅಜಯ್ ಸಿಂಗ್
ಮಾನ್ಯ ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ

ಘನ ಅಧ್ಯಕ್ಷತೆ

ಶ್ರೀ ಹಂಪನಗೌಡ ಬಾದರ್ಲಿ
ಮಾನ್ಯ ಶಾಸಕರು, ಸಿಂಧನೂರು ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ಕರಡಿ ಸಂಗಣ್ಣ
ಮಾನ್ಯ ಲೋಕಸಭಾ ಸದಸ್ಯರು, ಕೊಪ್ಪಳ

ಶ್ರೀ ರಾಜಾ ಅಮರೇಶ್ವರ ನಾಯಕ್
ಮಾನ್ಯ ಲೋಕಸಭಾ ಸದಸ್ಯರು, ರಾಯಚೂರು

ಉಪಸ್ಥಿತಿ

ಡಾ. ರಜನೀಶ್ ಗೋಯಲ್, ಭಾಆಸೇ
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀ ರಾಕೇಶ್ ಸಿಂಗ್, ಭಾಆಸೇ
ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ

ರಾಜೇಶ ಅಮ್ಮಿನಭಾವಿ, ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನೀರಾವರಿ ನಿಗಮ ನಿ.,

ಕೃಷ್ಣಮೂರ್ತಿ ಬಿ. ಕುಲಕರ್ಣಿ, ಕೆ.ಇ.ಎಸ್.
ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ

ಸರ್ವರಿಗೂ ಆದರದ ಸ್ವಾಗತ

ಜಲ ಉಳಿಸಿ ಜೀವ ರಕ್ಷಿಸಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ, 4ನೇ ಮಹಡಿ, ಕಾಫಿ ಬೋರ್ಡ್ ಬಿಲ್ಡಿಂಗ್, ನಂ. 1, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.

ಹೊಸ ವರ್ಷದ ಸಂಕಲ್ಪ

ಹೊಸ ವರ್ಷದ ಹೊಸ್ತಿಲಿಗೆ ಬಂದಂತೆ 'ಈ ವರ್ಷವಾದರೂ ಈ ಯೋಜನೆ' ಪೂರ್ಣಗೊಳಿಸಬೇಕು ಎಂದು ಮನಸ್ಸು ಸಂಕಲ್ಪ ಮಾಡುತ್ತದೆ. ಯಾವೆಲ್ಲ ಹೊಸ ಹೊಸ ಸಂಕಲ್ಪಗಳನ್ನು ಆಯ್ಕೆ ಮಾಡಿಕೊಳ್ಳುವುದು, ಕಾರ್ಯಗತ ಮಾಡುವುದು ಎಂಬ ಪಟ್ಟಿ ಮಾಡಿಕೊಳ್ಳುತ್ತದೆ. ಈ ಸಂಕಲ್ಪಗಳ ಬಗ್ಗೆ ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವವರ ಅಭಿಪ್ರಾಯ ಹೀಗಿದೆ....

ಹೊಸವರ್ಷಕ್ಕೆ ದಿನದರ್ಶಿ ಬದಲಾಗುವುದಷ್ಟೇ ಅಲ್ಲ, ದಿನಚರಿಯೂ ಬದಲಾಗಲಿ ಎಂದು ಬಯಸುತ್ತೇವೆ. ಇದು ದಿನಗಳೆದಂತೆ ನಾವು ನಾವಾಗುವ, ಮಾಗುವ ಪ್ರಕ್ರಿಯೆ. ಸಂಕಲ್ಪಗಳು ಈ ಪ್ರಕ್ರಿಯೆಯಲ್ಲಿ ನಿಮಿತ್ತ ಮಾತ್ರ

'ಗುಲ್ಬರ್ಗದಾಕಿ' ಆಗುವ ಹುಕಿ

ಜನರೊಟ್ಟಿಗೆ ಹೆಚ್ಚು ಬೆರೆತು, ಸಮುದಾಯಕ್ಕಾಗಿ ಕೆಲಸ ಮಾಡುವುದು 2024ರ ಗುರಿ. ಜತೆಗೆ ಕಲಾವಿದೆಯಾಗಿ ಆದಷ್ಟು ಆರ್ಥಿಕವಾಗಿ ಸದೃಢಳಾಗಬೇಕು. ಬೆಂಗಳೂರಿನಿಂದ ಗುಲ್ಬರ್ಗಕ್ಕೆ ತೆರಳಿದ್ದೀನಿ. ಇನ್ನು ಮುಂದೆ 'ಗುಲ್ಬರ್ಗದಾಕಿ'ಯಾಗಲು ಏನೇಲ್ಲ ಕಲಿಯಬೇಕು ಎಂಬುದು ನನ್ನ ಮುಂದೆ ಇದೆ. ಭಾಷೆಯನ್ನು ಸಲೀಸಾಗಿ ಕಲಿಯಬೇಕು. ಭಾಷೆ ಚೆನ್ನಾಗಿದ್ದರೆ ಜನರೊಂದಿಗೆ ಬೆರೆಯಲು ಸಾಧ್ಯವಾಗುತ್ತದೆ. ಹಾಗಾಗಿ ಕನ್ನಡ ಓದಿನ ಬಗ್ಗೆ ಹೆಚ್ಚು ಗಂಭೀರವಾಗಿ ಆಲೋಚಿಸಿದ್ದೀನಿ. ಕಾರ್ಯಕ್ರಮ ನೀಡಲು ಹೋದ ಕಡೆಗಳಲ್ಲಿ ಹಲವು ಅಕಾಡೆಮಿಷಿಯನ್, ಕಲಾವಿದರು ಜನಪದ ಸಂಗೀತಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ನೀಡಿದ್ದಾರೆ. ಅವನ್ನೆಲ್ಲ ಒಂದಡೆ ಕುಳಿತು ಓದುವ ಹುಕಿ ಇದೆ. ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತ ಸಮುದಾಯದ ಜತೆ ಬೆರೆತರೆ ಬೇರಿನ ಬಂಧ ಗಟ್ಟಿಯಾಗುತ್ತದೆ. ಆ ನಿಟ್ಟಿನಲ್ಲಿ ಕೆಲಸ ಮಾಡುವ ಇರಾದೆಯಿದೆ.

ಶಿಲ್ಪಾ ಮುಡುಬಿ, ಜನಪದ ಗಾಯಕಿ

ಥೀಮ್ ಬೇಸ್ಡ್ ಶೂಟ್‌ನ ಗುರಿ

ಹೊಸ ವರ್ಷ ಎಂದರೆ ಹೊಸ ಹುಟ್ಟು ಇದ್ದ ಹಾಗೆ. ಇದ್ದಲ್ಲೇ ಎಲ್ಲ ಹೊಸತಾದ ಹಾಗೆ. ಅದಕ್ಕೇ ನಮಗೆಲ್ಲ ಈ ಬಗೆಯ ಸಂಭ್ರಮವೇನೋ! ಎಲ್ಲ ವರ್ಷಗಳಂತೆ ಈ ವರ್ಷವೂ ಹೊಸ ವಿಷಯಗಳ ಕಲಿಕೆಗೆ ಆದ್ಯತೆ ನೀಡುವುದು ನನ್ನ ರೆಸಲ್ಯೂಷನ್‌ಗಳಲ್ಲಿ ಒಂದು. ಕ್ಯಾಮೆರಾ ವಿಷಯದಲ್ಲಿನ ಕಲಿಕೆಗೆ ಮಿತಿಯೇ ಇಲ್ಲ. ಆ ಕಲಿಕೆಯ ಜೊತೆಗಿದ್ದಷ್ಟೂ ನನಗೆ ಹೆಚ್ಚೆಚ್ಚು ಖುಷಿ. ಈಗ ನನ್ನ 'ಡಿಮ್ ಎನ್ ಡಿಪ್' ತಂಡ ಪ್ರೊಡಕ್ಷನ್ ಹೌಸ್ ಆಗಿಯೂ ನೋಂದಣಿಗೊಂಡಿರುವುದರಿಂದ ಹೆಚ್ಚು ಹೆಚ್ಚು ಪ್ರಾಜೆಕ್ಟ್‌ಗಳನ್ನು ಕೈಗೊಂಡು ತಂಡದ ಬೆಳವಣಿಗೆಯ ಕಡೆ ಗಮನ ನೀಡಬೇಕು ಎಂಬ ಹಂಬಲವಿದೆ.

2024ರಲ್ಲಿ ಒಂದಿಷ್ಟು ಕಿರುಚಿತ್ರಗಳನ್ನು ನಿರ್ದೇಶಿಸುವ ಆಸೆಯಿದೆ. ಆ ಕುರಿತು ಮಾತುಕತೆಗಳೂ ನಡೆದಿವೆ. ಹಾಗೇ ಪೂರ್ಣ ಪ್ರಮಾಣದ ಫೀಚರ್ ಸಿನೆಮಾಗಳಿಗೆ ಕೆಲಸ ಮಾಡುವ ಆಸೆಯೂ ಇದೆ. ನಾನೊಬ್ಬ ಸಿನಿಮಾ ವಿದ್ಯಾರ್ಥಿ. ಹಾಗಾಗಿ ಸಿನಿಮಾಗಳನ್ನು ಕೇವಲ ಮನರಂಜನೆಗೋಸ್ಕರ ಮಾತ್ರ ನೋಡದೇ ಸಿನಿಮಾ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಆ ಕುರಿತು ಗಂಭೀರವಾಗಿ, ಆಳವಾಗಿ ಅಧ್ಯಯನ ಮಾಡಲು ಪ್ರಯತ್ನಿಸುವೆ. ಜತೆಗೆ ಸಾಹಿತ್ಯ ಹಾಗೂ ಸಿನಿಮಾದ ಓದು ಈ ವರ್ಷ ಹೆಚ್ಚಿಸಬೇಕು ಎಂಬ ಷರತ್ತನ್ನು ನನಗೆ ನಾನೇ ವಿಧಿಸಿಕೊಂಡಿದ್ದೇನೆ.

ಮುಖ್ಯವಾಗಿ ತಂಡದಲ್ಲಿ ಹೆಚ್ಚಾಗಿ ಹೆಣ್ಣು ಜೀವಗಳನ್ನು ಸೇರಿಸಿಕೊಂಡು ಕಳೆದ ವರ್ಷ ಕಲಿತ ಮಾಡೆಲಿಂಗ್- ಫುಡ್- ಕಿಡ್ಸ್ ಫೊಟೋಗ್ರಫಿಯನ್ನು ಗಮನದಲ್ಲಿಟ್ಟು, ಇತರ ಕಲಾವಿದರ ಜೊತೆ ಸೇರಿ ಥೀಮ್ ಬೇಸ್ಡ್ ಶೂಟ್‌ಗಳನ್ನು ನಡೆಸುವ ಮಹಾದಾಸೆಯೂ ಇದೆ. ಹೊಚ್ಚ ಹೊಸ ಪುಟವನ್ನು ಅಕ್ಕರೆಯಿಂದ ತೆರೆದು ಕೊಡುತ್ತಿರುವ ಈ ಹೊಸ ವರ್ಷವನ್ನು ಈ ರೀತಿ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದೇನೆ.

ನವ್ಯಾ ಕಡಮೆ, ಛಾಯಾಗ್ರಾಹಕಿ

ಕಾದಂಬರಿ ಬರೆಯುವಾಸೆ

ದೈಹಿಕ ಚಟುವಟಿಕೆಗಳಾದ ಜಿಮ್, ಯೋಗ ಇಂಥವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬೇಕು ಅಂತ ಪ್ರತಿವರ್ಷದಂತೆ ಈ ವರ್ಷವೂ ಅಂದುಕೊಂಡಿದ್ದೇನೆ. ತುಂಬಾ ಓದಬೇಕು. ನನಗೆ ಸಣ್ಣ ಕತೆಗಳು ಇಷ್ಟವಾಗುವುದರಿಂದ ಮಾಸ್ತಿ ಹಾಗೂ ಚಿತ್ತಾಲರ ಸಮಗ್ರ ಕಥೆಗಳನ್ನು ಈ ವರ್ಷವಾದರೂ ಓದಿ ಮುಗಿಸಬೇಕು. 'ಬೈಕಿಂಗ್' ಬಗ್ಗೆ ಕಾದಂಬರಿ ಬರೆಯಬೇಕು ಅಂದುಕೊಂಡಿದ್ದೀನಿ.

ಪೂರ್ಣಿಮಾ ಮಾಳಗಿಮನಿ, ಕಥೆಗಾರ್ತಿ

ನನ್ನದೇ ಬ್ಯಾಂಡ್ ಕಟ್ಟುವ ಇರಾದೆ

2023ರಲ್ಲಿ ಅಂದುಕೊಂಡಿದ್ದಕ್ಕಿಂತ ಜಾಸ್ತಿ ಕೆಲಸ ಮಾಡಿದ್ದೀನಿ ಎನ್ನುವುದರ ಬಗ್ಗೆ ಖುಷಿ ಇದೆ. ಹೊಸದನ್ನು ಕಲಿತೆ. ಸಿನಿಮಾ ಅಂದರೆ ಸಿಕ್ಕಾಪಟ್ಟೆ ಪ್ರೀತಿ. ಹಾಗಾಗಿ 'ಮೆಟ್ರೊ ಸಾಗ'ಗೆ ಒಂದಷ್ಟು ಸಿನಿಮಾ ತಂಡಗಳ ಸಂದರ್ಶನ ಮಾಡಿದೆ. ಸಪ್ತಸಾಗರ ತಂಡ, ಟೋಬಿ ತಂಡ, ಶಿವರಾಜ್‌ಕುಮಾರ್, ಯೋಗರಾಜ್ ಭಟ್, ಪವನ್‌ಕುಮಾರ್ ಹೀಗೆ ನನ್ನಿಷ್ಟದ ನಟರನ್ನು, ತಂಡಗಳನ್ನು ಸಂದರ್ಶನ ಮಾಡಿದೆ. ಜತೆಗೆ ಹಲವು ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ಕೊಟ್ಟೆ. ಮೈಸೂರು ಅರಮನೆಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದು ನನಗೆ ನೆನಪಿನಲ್ಲಿಟ್ಟುಕೊಳ್ಳುವಂಥದ್ದು. ಜತೆಗೆ ಒಂದಷ್ಟು ವೆಬ್‌ಸಿರೀಸ್‌ಗೂ ಕೆಲಸ ಮಾಡಿದ್ದೀನಿ.

2024ರ ರೆಸಲ್ಯೂಷನ್ ಅಂದರೆ ನಂದೇ ಒಂದು ಸಂಗೀತ ತಂಡ (ಬ್ಯಾಂಡ್) ಕಟ್ಟಬೇಕು ಅಂತ ಅಂದುಕೊಂಡಿದ್ದೀನಿ. ಕರ್ನಾಟಕ, ದೇಶ ಹಾಗೂ ವಿದೇಶಗಳಲ್ಲಿಯೂ ಈ ತಂಡದಿಂದ ಸಂಗೀತ ಕಾರ್ಯಕ್ರಮ ನೀಡಬೇಕು ಅನ್ನುವ ಆಸೆಯಿದೆ. ಸಂಗೀತ ಸಂಯೋಜನೆ ಮಾಡಬೇಕು, ಆಲ್ಬಂ ಬಿಡುಗಡೆ ಮಾಡಬೇಕು ಅಂತನೂ ಅಂದುಕೊಂಡಿದ್ದೀನಿ. ಅಮ್ಮ ಎಂ.ಆರ್. ಕಮಲಾ ಅವರು ಹೊರ ತಂದಿರುವ 'ಕಾಳನಾಮ ಚರಿತೆ' ಪುಸ್ತಕವನ್ನು ಆ್ಯನಿಮೇಷನ್ ರೂಪಕ್ಕೆ ತರಬೇಕು. ಇವೆಲ್ಲವೂ ವೃತ್ತಿಗೆ ಸಂಬಂಧಪಟ್ಟಿದ್ದು. ವೈಯಕ್ತಿಕವಾಗಿ ಹೆಚ್ಚು ಸೋಲೋ ಟ್ರಿಪ್ ಮಾಡಬೇಕು ಮತ್ತು ಫ್ರೆಂಡ್ಸ್ ಜತೆ ಟ್ರಿಪ್ ಮಾಡಬೇಕು ಎನ್ನುವ ಆಸೆಯಿದೆ. ಯಾವುದಾದರೂ ಹೊಸ ಭಾಷೆ ಕಲಿಯಬೇಕು ಅಂತ ಅಂದುಕೊಂಡಿದ್ದೀನಿ.

ಸ್ಪರ್ಶಾ ಆರ್.ಕೆ.
ಗಾಯಕಿ/ ಕಂಠದಾನ ಕಲಾವಿದೆ

ನನ್ನನ್ನು ನಾನು ಕಂಡುಕೊಳ್ಳುವಿಕೆ

ನನಗೆ 'ಗೋ ವಿಥ್ ದ ಫ್ಲೋ' ಎನ್ನುವಲ್ಲಿ ಹೆಚ್ಚು ನಂಬಿಕೆ. ಆದರೂ 2023ರಲ್ಲಿ ಅಂದುಕೊಂಡಿದ್ದ ಎಲ್ಲ ಗುರಿಗಳನ್ನು ಸಾಧಿಸಿರುವ ಖುಷಿ ಇದೆ. 2024ಅನ್ನು ಸಂಪೂರ್ಣವಾಗಿ 'ನನ್ನನ್ನು ನಾನು ಕಂಡುಕೊಳ್ಳುವಿಕೆ'ಗೆ ಸಮರ್ಪಿಸಬೇಕು ಅಂದುಕೊಂಡಿದ್ದೀನಿ. ಮನಃಶಾಂತಿ ಇದ್ದರೆ ಏನು ಬೇಕಾದರೂ ಸಾಧಿಸಬಹುದು. ಈಗಾಗಲೇ ನಿತ್ಯ ಆಯಾ ದಿನದ ಗುರಿಯನ್ನು ಪುಸ್ತಕದಲ್ಲಿ ಬೆಳಿಗ್ಗೆ ರಾತ್ರಿ ಎರಡು ಹೊತ್ತು ಬರೆಯಲು ಆರಂಭಿಸಿದ್ದೇನೆ. ಇದು ಫಲದಾಯಕ ಎನಿಸಿದೆ. ನಾವು ಏನು ಯೋಚಿಸುತ್ತೇವೋ ಅದನ್ನು ಬರೆಯುವುದರಿಂದ ಇನ್ನಷ್ಟು ಸಾಧನೆಗೆ ಪ್ರೇರಣೆ ಸಿಗುತ್ತದೆ.

ಈ ವರ್ಷ ನನ್ನ ಮನಸ್ಸನ್ನು ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಲು, ಅದಕ್ಕಾಗಿಯೇ ಸಮಯ ಮೀಸಲಿಡಬೇಕು ಎನ್ನುವ ಗುರಿ ಹೊಂದಿದ್ದೇನೆ. ತುಂಬಾ ಬ್ಯುಸಿ ಆಗಿರೋದಷ್ಟೆ ಮುಖ್ಯ ಅಲ್ಲ, 20 ನಿಮಿಷ ಮೌನವಾಗಿದ್ದು ನಮಗಾಗಿ ನಾವು 'ಸ್ಪೇಸ್' ಮಾಡಿಕೊಳ್ಳುವುದು ಅಷ್ಟೆ ಮುಖ್ಯ. ಇದನ್ನು ಹೊರತುಪಡಿಸಿದರೆ ನನ್ನ ಆರಂಗ್ರೇಟ್ ಆಗಿ ಹತ್ತು ವರ್ಷ ಕಳೆದಿದೆ. ಈ ವರ್ಷ 'ಕಥಕ್' ಏಕವ್ಯಕ್ತಿ ಪ್ರದರ್ಶನ ನೀಡಬೇಕು ಅಂಥ ಮನಸ್ಸು ಮಾಡಿದ್ದೇನೆ. ಶಾನುಭೋಗರ ಮಗಳು ಸಿನಿಮಾವೂ ತೆರೆಗೆ ಬರುತ್ತಿದೆ.

ರಾಗಿಣಿ ಪ್ರಜ್ವಲ್, ನಟಿ

ಸಂಕಲ್ಪಗಳು, ದೃಢ ಸಂಕಲ್ಪವಾಗುವುದು ಹೇಗೆ?

ಅತ್ಯುತ್ಸಾಹವೂ ಕೆಲವೊಮ್ಮೆ ನಮ್ಮ ಸಂಕಲ್ಪಗಳು ಈಡೇರದಂತೆ ಮಾಡುತ್ತವೆ.ನಿತ್ಯ ವಾಕ್ ಹೋಗುವ ಸಂಕಲ್ಪ ಮಾಡುವವರು ಅದನ್ನು ಮುಂದುವರಿಸಲು ಆಗುವುದೇ ಇಲ್ಲ. ಮೊದಲ ದಿನವೇ ಕೈಲಾಗದಷ್ಟು ಅಥವಾ ಕಾಲಿಗಾಗದಷ್ಟು ನಡೆದು ದಣಿವು ಮಾಡಿಕೊಳ್ಳುತ್ತಾರೆ. ದೇಹದಂಡನೆಯಂಥ ಸಂಕಲ್ಪಗಳಿದ್ದರೆ ನಿಧಾನವಾಗಿ ತೆಗೆದುಕೊಂಡು ಹೋಗಬೇಕು. ಮೊದಲ ದಿನದಿಂದಲೇ ಸಂಯಮ ರೂಢಿಸಿಕೊಳ್ಳಬೇಕು. ಜಂಕ್ ತಿನ್ನುವುದಿಲ್ಲ ಎಂದು ಕೊಂಡವರು ತಿಂಗಳಿಗೆ ಒಂದು ದಿನವಾದರೂ ಜಂಕ್ ಡೇ ಇಟ್ಕೊಂಡಿರಬೇಕು. ಆಸೆಗಳನ್ನು ಅದುಮಿಟ್ಟಿಕೊಳ್ಳುವುದು, ನಾವೇ ನಮಗೆ ಮೋಸ ಮಾಡಿಕೊಳ್ಳಲು ಸುಲಭವಾಗುತ್ತದೆ. ಚೀಟ್ ಡೇ ಇದ್ದರೆ ಸಂಯಮ ಸಾಧಿಸುವುದು ಸರಳವಾದೀತು.

ಮಹಿಳೆಯರು 'ಒಳ್ಳೆಯ' ಸ್ವಾರ್ಥಿಗಳಾಗಬೇಕು!

- **ನಾನೊಬ್ಬ ಗೃಹಿಣಿ. ಗಂಡ, ಮನೆ, ಅತ್ತೆ ಮಾವ, ಅಕ್ಕ ಭಾವ, ಅಪ್ಪ ಅಮ್ಮ ಎಂದು ನಮ್ಮವರಿಗಾಗಿಯೇ ದುಡಿದ ಗೃಹಿಣಿ. ಎಲ್ಲರೂ ನಮ್ಮವರೇ ಎಂದುಕೊಂಡು ಮೋಸ ಹೋಗಿದ್ದೇನೆ. ನನ್ನಿಂದ ಲಾಭ ಪಡೆದವರೆಲ್ಲ ಹಿಂದಿನಿಂದ ಆಡಿಕೊಂಡು ನಗುವ ಮಾರಿಗಳು ಎನಿಸಿವೆ. ಸ್ವಲ್ಪವಾದರೂ ಸ್ವಾರ್ಥ ಬೆಳೆಸಿಕೊಳ್ಳಬೇಕು ಎಂದರೂ ಆಗುತ್ತಿಲ್ಲ. ಸ್ವಾರ್ಥ ಬೆಳೆಸಿಕೊಳ್ಳುವುದು ಹೇಗೆ ಎಂದು ಹೇಳುವಿರಾ ಸರ್?**
ಹೆಸರು ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆ ಮೇಲುನೋಟಕ್ಕೆ ಹಾಸ್ಯಾಸ್ಪದ ಎನ್ನಿಸಿದರೂ ಬಹಳ ಅರ್ಥವತ್ತಾಗಿದೆ. ಪತ್ರದಲ್ಲಿ ನಿಮ್ಮ ವ್ಯಕ್ತಿತ್ವ ಸ್ವಂತಿಕೆಯನ್ನು ಕಳೆದುಕೊಂಡು ಮೋಸಹೋದ ನೋವಿದೆ. 'ಮಾರಿಗಳು' ಎಂದು ಕರೆಯುವಾಗ ಸುತ್ತಲಿನವರ ಕುರಿತು ಆಕ್ರೋಶವೂ ಇದೆ. ಬಹಳ ಒಳ್ಳೆಯವರು ಎಂದು ಎಲ್ಲರೂ ಹೊಗಳುವ ಸಾಕಷ್ಟು ಜನರ ನೋವು, ಆಕ್ರೋಶಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಹಳಷ್ಟು ಮಹಿಳೆಯರ ಮನದಾಳದ ಬಯಕೆ ನಿಮ್ಮ ಪತ್ರದಲ್ಲಿದೆ. ನಿಮ್ಮ ನೋವು ಆಕ್ರೋಶಗಳ ಮೂಲ ಎಲ್ಲಿರಬಹುದು? ಪ್ರಕೃತಿ ನಿಯಮದಂತೆ ಎಲ್ಲಾ ಸಂಬಂಧಗಳ ನಡುವೆ ಗಡಿರೇಖೆಗಳಿರಲೇಬೇಕು. ಆತ್ಮೀಯ ಸಂಬಂಧಗಳಲ್ಲಿಯೂ ಇವುಗಳು ಅತ್ಯಗತ್ಯ. ನಮ್ಮ ವ್ಯಕ್ತಿತ್ವದ ಗಡಿಯೊಳಗೆ ಎಲ್ಲರೂ ನುಸುಳಿ ನಮ್ಮ ಇಚ್ಚೆಗೆ ವಿರುದ್ಧವಾಗಿ ತಮಗೆ ಬೇಕಾಗಿರುವುದನ್ನು ಪಡೆಯಲು ಸಾಧ್ಯವಾದಾಗ ನಮಗೆ ಸ್ವಂತಿಕೆ ಕಳೆದುಕೊಂಡ ಅನುಭವವಾಗುತ್ತದೆ. ಎಲ್ಲರೂ ನಮ್ಮನ್ನು ಬಳಸಿ ಬಿಸಾಕುತ್ತಿದ್ದಾರೆ ಎನ್ನಿಸಿದಾಗ ನೋವು ಕೋಪಗಳು ಸಹಜ. ನಮ್ಮ ದೇಹ ಮನಸ್ಸುಗಳನ್ನು ತೊಡಗಿಸಲಾಗದ ಸಂಬಂಧಗಳು ಅರ್ಥಹೀನ ಎನ್ನಿಸುತ್ತದೆ.

ಏನಾದ್ರೂ ಕೇಳ್ಬೋದು
ನಡಹಳ್ಳಿ ವಸಂತ್

ನಮ್ಮ ವ್ಯಕ್ತಿತ್ವದ ಗಡಿರೇಖೆಗಳನ್ನು ರಕ್ಷಿಸಿಕೊಳ್ಳುವುದು ಹೇಗೆ? ಇದಕ್ಕಾಗಿ ಮೊದಲು ಕಲಿಯಬೇಕಾಗಿರುವುದು 'ಇಲ್ಲ' ಎಂದು ಹೇಳುವುದನ್ನು. ನಮಗೆ ಆಸಕ್ತಿಯಿರದ, ಹಿತವೆನ್ನಿಸಿದ ಎಲ್ಲಾ ಮಾತು ಕ್ರಿಯೆಗಳಿಗೆ 'ಇಲ್ಲ' ಎಂದು ಹೇಳಿ ತಡೆಯೊಡ್ಡುವುದನ್ನು ಅಭ್ಯಾಸಮಾಡಬೇಕು. ಅನಿವಾರ್ಯದ ಪ್ರಸಂಗಗಳಲ್ಲಿ ಕೆಲವೊಮ್ಮೆ ಮಾಡಲೇಬೇಕಾಗಿದ್ದರೂ ನಮ್ಮ ಪ್ರತಿಭಟನೆಯನ್ನು ವಿನಯದಿಂದ ಆದರೆ ಸ್ಪಷ್ಟವಾಗಿ ಹೇಳಲೇಬೇಕು. ಉದಾಹರಣೆಗೆ ನಿಮಗೆ ಮಾಡಲು ಇಷ್ಟವಿರದ ಕೆಲಸಗಳಿಗೆ ಬೇಡಿಕೆ ಬಂದಾಗ, 'ಕ್ಷಮಿಸಿ ನನ್ನ ಈಗಿನ ಪರಿಸ್ಥಿತಿಯಲ್ಲಿ ಇದನ್ನು ನಾನು ಮಾಡಲಾರೆ' ಎಂದು ಧೃಡವಾಗಿ ಹೇಳಬೇಕು. ಹೀಗೆ ಹೇಳಲು ಸಿಟ್ಟು, ದೂಷಣೆ, ಕೆಟ್ಟ ಮಾತು ಅಥವಾ ವರ್ತನೆಗಳನ್ನು ಬಳಸದಂತೆ ಎಚ್ಚರವಹಿಸಬೇಕು.

ಇದರ ಇನ್ನೊಂದು ಮುಖವೇನೆಂದರೆ ನಮ್ಮ ಅಗತ್ಯಗಳನ್ನು ಬೇರೆಯವರೆದುರು ಸ್ಪಷ್ಟವಾಗಿ ವ್ಯಕ್ತಪಡಿಸಲು ಹಿಂಜರಿಯಬಾರದು. ಹೀಗೆ 'ಇಲ್ಲ ಮತ್ತು ಬೇಡ' ಹಾಗೂ 'ಹೌದು ಮತ್ತು ಬೇಕು' ಎರಡನ್ನು ನಮ್ಮ ಅಗತ್ಯಗಳಿಗೆ ಅನುಗುಣವಾಗಿ ವ್ಯಕ್ತಪಡಿಸುವುದನ್ನು ಕಲಿಯಬೇಕು. ಇದರಿಂದ ತಾತ್ಕಾಲಿಕವಾಗಿ ಸಂಬಂಧಗಳು ಬಿರುಕು ಬಿಡಬಹುದು. ಆದರೆ ನಿಮ್ಮ ಧೃಢತೆ ಮತ್ತು ಘನತೆಯನ್ನು ನಿಧಾನವಾಗಿ ಇತರರು ಗುರುತಿಸಲೇಬೇಕಾಗುತ್ತದೆ. ಅಲ್ಲಿಯವರೆಗೆ ಸಹನೆ ಕಳೆದುಕೊಂಡು ಮಾತು ವರ್ತನೆಗಳ ಹಿಡಿತ ಕಳೆದುಕೊಳ್ಳಬಾರದು.

ಪುರುಷಪ್ರಧಾನ ವ್ಯವಸ್ಥೆಯ ಕಲಿಕೆಗಳಿಂದಾಗಿ ಮಹಿಳೆಯರಿಗೆ ತಮ್ಮ ಬೇಕು ಬೇಡಗಳನ್ನು ವ್ಯಕ್ತಪಡಿಸುವುದು ಹೆಚ್ಚು ಕಷ್ಟವಾಗುತ್ತದೆ. ಕುಟುಂಬಗಳಲ್ಲಿ ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ತಗ್ಗಿಬಗ್ಗಿ ನಡೆಯುವುದರ ಮತ್ತು ಹೊಂದಿಕೊಂಡು ಹೋಗುವುದರ ವಿಶೇಷ ತರಬೇತಿ ನೀಡಲಾಗುತ್ತದೆ. ಹಾಗಾಗಿ ಅವರು ತಮ್ಮ ಅಗತ್ಯಗಳನ್ನು ಗುರುತಿಸುವುದನ್ನು ಮತ್ತು ಅವುಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದನ್ನು ಕಲಿತಿರುವುದೇ ಇಲ್ಲ. ಎಲ್ಲರಿಗೂ ಹೊಂದಿಕೊಂಡು ಹೋಗುವುದೇ ಅವರಿಗೆ ಜೀವನ ಮೌಲ್ಯವಾಗುತ್ತದೆ. ನಿಧಾನವಾಗಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡ ನೋವು ಅವರನ್ನು ಆವರಿಸಿಕೊಳ್ಳುತ್ತದೆ. ನೀವು 'ಒಳ್ಳೆಯ ಸ್ವಾರ್ಥಿ' ಗಳಾಗಲು ನಿಧಾನವಾಗಿ ಪ್ರಯತ್ನಿಸಿ. ಈ ಸ್ವಾರ್ಥದಲ್ಲಿ ಬೇರೆಯವರನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶವಿರುವುದಿಲ್ಲ. ಬದಲಾಗಿ ನಿಮ್ಮ ವ್ಯಕ್ತಿತ್ವದ ಘನತೆಯನ್ನು ರಕ್ಷಿಸಿಕೊಳ್ಳುವ ಮತ್ತು ನಿಮ್ಮ ಸಂತೋಷ ಸಮಾಧಾನಗಳನ್ನು ಕಂಡುಕೊಳ್ಳುವ ಉದ್ದೇಶವಿರಬೇಕು. ಅಗತ್ಯವಿದ್ದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ. ಶುಭವಾಗಲಿ.

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ನುಗ್ಗೆ ಆರೋಗ್ಯದ ಬುಗ್ಗೆ

ನುಗ್ಗೇಕಾಯಿಯಂತೆಯೇ ನುಗ್ಗೆಸೊಪ್ಪು ರುಚಿಕರವಾಗಿದೆ .ಪಾಲಕ್ ಸೊಪ್ಪಿಗಿಂತ ಹೆಚ್ಚಿನ ಪೋಷಕಾಂಶ ಇರುವ ನುಗ್ಗೆಸೊಪ್ಪು ರಕ್ತದ ಒತ್ತಡ ಮತ್ತು ರಕ್ತಹೀನತೆಗೆ ಸಿದ್ದೌಷಧ. ಇದರ ರೆಸಿಪಿಯನ್ನು ಕವಿತಾ ಹೆಗಡೆ ನೀಡಿದ್ದಾರೆ.

ನುಗ್ಗೆಸೊಪ್ಪಿನ ಸ್ಟೀಮ್ ಬಾಲ್ಸ್

ಬೇಕಾಗುವ ಸಾಮಗ್ರಿಗಳು: ನುಗ್ಗೆಸೊಪ್ಪು-2 ಕಪ್, ದೋಸೆ ಅಕ್ಕಿ -4 ಕಪ್, ಅಕ್ಕಿ ರವಾ -2 ಕಪ್,ತೆಂಗಿನ ತುರಿ -3 ಕಪ್, ಹುಣಸೆ ರಸ 4 ಚಮಚ, ಬೆಲ್ಲ 5 ಚಮಚ,ಒಣ ಮೆಣಸು -7,ಧನಿಯಾ 2 ಚಮಚ, ಜೀರಿಗೆ -1ಚಮಚ,ಉಪ್ಪು ರುಚಿಗೆ ತಕ್ಕಷ್ಟು, ಅರಿಶಿನ ಪುಡಿ1/4 ಚಮಚ

ವಿಧಾನ: ಮೊದಲು ದೋಸೆ ಅಕ್ಕಿಯನ್ನು ಎಂಟು ಗಂಟೆಗಳ ಕಾಲ ನೆನೆಹಾಕಿ. ಮಿಕ್ಸಿಯಲ್ಲಿ ತರಿತರಿಯಾಗಿ ರುಬ್ಬಿಕೊಳ್ಳಿ . ನಂತರ ತೆಂಗಿನ ತುರಿ, ಧನಿಯಾ, ಜೀರಿಗೆ,ಉಪ್ಪು ಬೆಲ್ಲ , ಹುಣಸೆ ರಸ,ಮೆಣಸು ಹಾಕಿ ನುಣ್ಣಗೆ ಮಸಾಲೆಯ ಪೇಸ್ಟ್ ಮಾಡಿಕೊಳ್ಳಿ. ಒಂದು ಬಾಣಲೆಯಲ್ಲಿ ಅಕ್ಕಿ ರವಾ , ರುಬ್ಬಿದ ಅಕ್ಕಿಯ ಮಿಶ್ರಣ , ಮಸಾಲೆ ಪೇಸ್ಟ್ , ಹೆಚ್ಚಿದ ನುಗ್ಗೆಸೊಪ್ಪು ಎಲ್ಲವನ್ನೂ ಹಾಕಿ ಬೇಕಾಗುವಷ್ಟು ನೀರು ಸೇರಿಸಿ ಕುದಿಸಿ. ಮಿಶ್ರಣ ಗಟ್ಟಿಯಾಗಿ ಉಂಡೆ ಕಟ್ಟುವ ಹದಕ್ಕೆ ಬಂದಾಗ ಉರಿ ಆರಿಸಿ ತಣಿಸಿ ರವೆಉಂಡೆಯಂತೇ ಬಾಲ್ಸ್ ಮಾಡಿಟ್ಟುಕೊಳ್ಳಿ. ಈಗ ಸ್ಟೀಮರ್ ನಲ್ಲಿ ಅಥವಾ ಇಡ್ಲಿ ಕುಕ್ಕರ್‌ನಲ್ಲಿ ಅರ್ಧ ಗಂಟೆ ಹಬೆಯಲ್ಲಿ ಬೇಯಿಸಿದರೆ ನುಗ್ಗೆಸೊಪ್ಪು ಸ್ಟೀಮ್ ಬಾಲ್ಸ್ ಸವಿಯಲು ಸಿದ್ಧ.

ನುಗ್ಗೆ ಸೊಪ್ಪಿನ ಪಡ್ಡು

ಬೇಕಾಗುವ ಸಾಮಗ್ರಿಗಳು: ಅಕ್ಕಿ 2 ಕಪ್, ಉದ್ದಿನಬೇಳೆ 1/2 ಕಪ್, ಅವಲಕ್ಕಿ 1/4 ಕಪ್, ಮೆಂತ್ಯ 1 ಚಮಚ, ನುಗ್ಗೆ ಸೊಪ್ಪು 2 ಹಿಡಿ, ರುಚಿಗೆ ತಕ್ಕಷ್ಟು ಉಪ್ಪು, ಸೋಡಾ1/4 ಚಮಚ, ಶುಂಠಿ ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಈರುಳ್ಳಿ 2, ಕೊತ್ತಂಬರಿ ಸೊಪ್ಪು ಸ್ವಲ್ಪ, ಎಣ್ಣೆ 5 ಚಮಚ

ವಿಧಾನ: ಅಕ್ಕಿ ,ಉದ್ದಿನಬೇಳೆ, ಮೆಂತ್ಯ ಮೂರನ್ನು ನೀರಿನಲ್ಲಿ ಆರು ಗಂಟೆ ನೆನೆಸಿ. ಅವಲಕ್ಕಿ ಹಾಕಿ ರುಬ್ಬಿ ಹುದುಗಲು ಬಿಡಿ. ರುಬ್ಬಿದ ಮಿಶ್ರಣಕ್ಕೆ ಹೆಚ್ಚಿದ ನುಗ್ಗೆ ಸೊಪ್ಪು, ಈರುಳ್ಳಿ, ಕೊತ್ತಂಬರಿ ಸೊಪ್ಪು, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಸೋಡಾ ಹಾಕಿ ಮಿಕ್ಸ್ ಮಾಡಿಕೊಳ್ಳಿ. ಕಾದ ಪಡ್ಡು ಹೆಂಚಿನ ಮೇಲೆ ಎಣ್ಣೆ ಹಚ್ಚಿ ಒಂದೊಂದೇ ಸೌಟು ಹಿಟ್ಟು ಹಾಕಿ ಎರಡೂ ಕಡೆ ಚೆನ್ನಾಗಿ ಬೇಯಿಸಿ ತೆಗೆಯಿರಿ. ಚಟ್ನಿ ಜೊತೆಗೆ ಸರ್ವ್ ಮಾಡಿ.

ನುಗ್ಗೆಸೊಪ್ಪಿನ ದೋಸೆ

ಬೇಕಾಗುವ ಸಾಮಗ್ರಿಗಳು: ದೋಸೆ ಅಕ್ಕಿ 2 ಕಪ್, ನುಗ್ಗೆಸೊಪ್ಪು 1/2 ಕಪ್, ಮೆಂತೆ -1ಚಮಚ,ಕೊತ್ತಂಬರಿ - 1ಚಮಚ ಜೀರಿಗೆ -1/2ಚಮಚ,ಉಪ್ಪು ರುಚಿಗೆ ತಕ್ಕಷ್ಟು, ಬೆಲ್ಲ 2 ಚಮಚ, ಹುಣಸೆ ರಸ 1 ಚಮಚ, ತೆಂಗಿನ ತುರಿ 1/4 ಕಪ್, ಒಣಮೆಣಸು -5, ಅರಿಶಿನ ಪುಡಿ ಚಿಟಿಕೆ

ವಿಧಾನ: ಮೊದಲು ಅಕ್ಕಿ ಮೆಂತ್ಯವನ್ನು ಎರಡು ಗಂಟೆ ನೆನಸಿಡಿ . ನೆನಸಿದ ಅಕ್ಕಿಯನ್ನ ತೊಳೆದು ಧನಿಯಾ, ತೆಂಗಿನ ತುರಿ, ಒಣ ಮೆಣಸು , ಉಪ್ಪು ಹುಣಸೆರಸ , ಅರಿಶಿನ ಪುಡಿ ,ಬೆಲ್ಲ , ಜೀರಿಗೆ ಹಾಕಿ ರುಬ್ಬಿಕೊಳ್ಳಿ. ಹೆಚ್ಚಿದ ನುಗ್ಗೆ ಸೊಪ್ಪನ್ನು ಎಣ್ಣೆ ಹಾಕಿ ಹುರಿದು, ತಯಾರಿಸಿದ ದೋಸೆ ಹಿಟ್ಟಿಗೆ ಬೆರೆಸಿ.ಕಾದ ಕಾವಲಿಯ ಮೇಲೆ ದೊಸೆ ಹುಯ್ದು ಎರಡೂ ಬದಿ ಬೇಯಿಸಿ ತೆಗೆಯಿರಿ. ಉತ್ತಮ ಬಣ್ಣ ಮತ್ತು ರುಚಿಯ ನುಗ್ಗೆಸೊಪ್ಪಿನ ದೋಸೆ ಬೆಣ್ಣೆಯೊಂದಿಗೆ ಸವಿಯಲು ಸಿದ್ಧ.

ನುಗ್ಗೆಸೊಪ್ಪಿನ ಕರ್ರಿ

ಬೇಕಾಗುವ ಸಾಮಗ್ರಿಗಳು:- ನುಗ್ಗೆ ಸೊಪ್ಪು -2 ಹಿಡಿ, ತೆಂಗಿನ ತುರಿ -1 ಕಪ್, ಬ್ಯಾಡಗಿ ಮೆಣಸು -10,ಶುಂಠಿ ಬೆಳ್ಳುಳ್ಳಿ ಪೇಸ್‌ಟ್ -2 ಚಮಚ,ಧನಿಯಾ -1 ಚಮಚ,ಕರಿಬೇವು6 ಎಲೆ, ಅರಿಶಿನ ಪುಡಿ ಚಿಟಿಕೆ, ಉಪ್ಪು ರುಚಿಗೆ ತಕ್ಕಷ್ಟು ಈರುಳ್ಳಿ -3,ಹೆಸರು ಬೇಳೆ -1 ಕಪ್,ಎಣ್ಣೆ-4 ಚಮಚ, ಹುಣಸೆ ಹಣ್ಣು ಸ್ವಲ್ಪ

ವಿಧಾನ;-
ನುಗ್ಗೆ ಸೊಪ್ಪು ಮತ್ತು ಹೆಸರು ಬೇಳೆಯನ್ನು ತೊಳೆದು ಎರಡನ್ನೂ ಕುಕ್ಕರ್ ನಲ್ಲಿ ಹಾಕಿ ನಾಲ್ಕು ವಿಷಲ್ ಕೂಗಿಸಿ. ನಂತರ ಒಂದು ಬಾಣಲೆಯಲ್ಲಿ ಬ್ಯಾಡಗಿ ಮೆಣಸು , ಧನಿಯಾ , ಎಣ್ಣೆ ,ಕರಿಬೇವು ಹಾಕಿ ಹುರಿದು ತೆಂಗಿನತುರಿ ಜೊತೆಗೆ ರುಬ್ಬಿಕೊಳ್ಳಿ. ನಂತರ ಅದೇ ಬಾಣಲೆಯಲ್ಲಿ ಎಣ್ಣೆ ಹಾಕಿ ಶುಂಠಿ ಬೆಳ್ಳುಳ್ಳಿ ಪೇಸ್ಟ್, ಹೆಚ್ಚಿದ ಈರುಳ್ಳಿ ಹಾಕಿ ಪ್ರೈ ಮಾಡಿ. ನಂತರ ಬೇಯಿಸಿದ ನುಗ್ಗೆ ಸೊಪ್ಪು , ಹೆಸರು ಬೇಳೆ ಹಾಕಿ ಅದಕ್ಕೆ ಉಪ್ಪು , ಹುಣಸೆಹಣ್ಣು, ಅರಿಶಿನ ಪುಡಿ, ರುಬ್ಬಿದ ಮಸಾಲೆ ಹಾಕಿದರೆ ರುಚಿಯಾದ ನುಗ್ಗೆಸೊಪ್ಪಿನ ಕರ್ರಿ ಸವಿಯಲು ಸಿದ್ದ.

ನುಗ್ಗೆಸೊಪ್ಪಿನ ಸೂಪ್

ಬೇಕಾಗುವ ಸಾಮಗ್ರಿಗಳು: ನುಗ್ಗೆಸೊಪ್ಪು1 ಕಪ್, ಈರುಳ್ಳಿ-1, ಬೆಳ್ಳುಳ್ಳಿ -2 ಎಸಳು ಶುಂಠಿ/4 ಇಂಚು, ಎಣ್ಣೆ 1/4 ಚಮಚ,ಉಪ್ಪು ರುಚಿಗೆ ತಕ್ಕಷ್ಟು, ಕಾಳುಮೆಣಸಿನ ಪುಡಿ 1/4 ಚಮಚ, ನಿಂಬುರಸ 1/4 ಚಮಚ

ವಿಧಾನ;- ಮೊದಲು ಒಂದು ಬಾಣಲೆಗೆ ಎಣ್ಣೆ ಹಾಕಿ ಅದಕ್ಕೆ ಸಣ್ಣಗೆ ಹೆಚ್ಚಿದ ಬೆಳ್ಳುಳ್ಳಿ , ಶುಂಠಿ ಈರುಳ್ಳಿಯನ್ನು ಹಾಕಿ ಕೆಂಪಗೆ ಹುರಿದುಕೊಳ್ಳಿ. ಅದೇ ಬಾಣಲೆಯಲ್ಲಿ ನುಗ್ಗೆಸೊಪ್ಪನ್ನು ಹಾಕಿ ಬಾಡಿಸಿ.ಎಲ್ಲವನ್ನೂ ನುಣ್ಣಗೆ ರುಬ್ಬಿಕೊಂಡು ಸಾಕಷ್ಟು ನೀರು, ಉಪ್ಪು,ಕಾಳು ಮೆಣಸಿನಪುಡಿ ಹಾಕಿ ಚೆನ್ನಾಗಿ ಕುದಿಸಿ.ಸರ್ವಿಂಗ್ ಬೌಲ್‌ಗೆ ಹಾಕಿ ನಿಂಬುರಸ ಬೆರೆಸಿ ಬಿಸಿ-ಬಿಸಿಯಾಗಿ ಸವಿಯಿರಿ.

7 ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ 1 ಸಾವಿರಕ್ಕೂ ಅಧಿಕ ಕೊಠಡಿಗಳ ಅವಶ್ಯಕತೆ

17 ಸಾವಿರ ಕೊಠಡಿಗಳ ಕೊರತೆ

● ಶಿವರಾಯ ಪೂಜಾರಿ

ಹುಬ್ಬಳ್ಳಿ: ರಾಜ್ಯದ ಹಲವಾರು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಗಳಲ್ಲಿ ಶಾಲಾ ಕೊಠಡಿಗಳ ಕೊರತೆ ಇದೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಶಾಲೆಯ ಆವರಣ, ಕಟ್ಟೆ, ಗ್ರಾಮದ ಸಮುದಾಯ ಭವನಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಬೋಧಿಸಲಾಗುತ್ತದೆ.

ರಾಜ್ಯದಲ್ಲಿ 48,285 ಸರ್ಕಾರಿ ಶಾಲೆಗಳಿದ್ದು, 17,258 ಕೊಠಡಿಗಳ ಕೊರತೆ ಇದೆ. ರಾಜ್ಯದ 7 ಜಿಲ್ಲೆಗಳಲ್ಲಿ 1 ಸಾವಿರಕ್ಕೂ ಹೆಚ್ಚು ಕೊಠಡಿಗಳ ಕೊರತೆಯಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 1,664, ವಿಜಯನಗರ-1,159, ದಾವಣಗೆರೆ-1,160, ವಿಜಯಪುರ-1,144, ಬೆಳಗಾವಿ -1,089, ಕಲಬುರಗಿ- 1,025 ಮತ್ತು ರಾಯಚೂರು ಜಿಲ್ಲೆಯಲ್ಲಿ 1,023 ಕೊಠಡಿಗಳ ಕೊರತೆ ಇದೆ.

ಕೆಲವೆಡೆ ಶಾಲಾ ಕೊಠಡಿಗಳು ನಿರ್ಮಾಣ ಹಂತದಲ್ಲಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣ ಆಗಿಲ್ಲ. ಇದರ ಪರಿಣಾಮ ಕೆಲ ಕಡೆ ವಿದ್ಯಾರ್ಥಿಗಳು ಮೈದಾನದಲ್ಲಿ ಕೂತು ಪಾಠ ಆಲಿಸಬೇಕಾದ ಸ್ಥಿತಿಯಿದೆ. ಇನ್ನೂ ಕೆಲ ಕಡೆ ಮುಖ್ಯ ಶಿಕ್ಷಕರ ಕೊಠಡಿಯೇ ಇಲ್ಲದಂತಾಗಿದೆ. ಶಾಲಾ ಸಾಮಗ್ರಿಗಳನ್ನು ಒಂದು ಕೊಠಡಿಯಲ್ಲಿ ಇರಿಸಿ, ಅಲ್ಲಿಯೇ ವಿದ್ಯಾರ್ಥಿಗಳನ್ನು ಕೂರಿಸಿ ಪಾಠ ಮಾಡಲಾಗುತ್ತಿದೆ.

ಬಳ್ಳಾರಿ ಜಿಲ್ಲೆ ತೆಕ್ಕಲಕೋಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಶಿಥಿಲಗೊಂಡಿದ್ದು, ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರು ಪಾಠ ಮಾಡುತ್ತಿದ್ದರು – ಪ್ರಜಾವಾಣಿ ಚಿತ್ರ/ಚಾಂದಬಾಷ

'ಕಟ್ಟಡಗಳು ಹಳೆಯದಾಗಿದ್ದು, ಶಿಥಿಲಗೊಂಡಿವೆ. ಚಾವಣಿ ಬಿರುಕು ಬಿಟ್ಟಿದೆ. ಕೊಠಡಿಗಳ ಕೊರತೆ ಇರುವ ಕಾರಣ ಅನಿವಾರ್ಯವಾಗಿ ಕಟ್ಟಡದ ಹೊರಗೆ ವಿದ್ಯಾರ್ಥಿಗಳನ್ನು ಕೂರಿಸಿ ಪಾಠ ಮಾಡಲಾಗುತ್ತಿದೆ. ಮಳೆ, ಬಿಸಿಲಿನ ಸಂದರ್ಭದಲ್ಲಿ ನಿರ್ವಹಣೆ ಕಷ್ಟ ವಾಗುತ್ತದೆ' ಎಂದು ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'2ರಿಂದ 3 ತರಗತಿಗಳ ವಿದ್ಯಾರ್ಥಿಗಳನ್ನು ಒಂದೇ ಕೊಠಡಿಯಲ್ಲಿ ಕೂರಿಸಿ ಶಿಕ್ಷಕರು ಪಾಠ ಮಾಡುತ್ತಾರೆ. ಇದರಿಂದ ನಮಗೆ ಪಾಠ ಸರಿಯಾಗಿ ಅರ್ಥವಾಗುವುದಿಲ್ಲ. ಕೂರಲು ಸಹ ಕಷ್ಟವಾಗುತ್ತದೆ. ಶಾಲೆಗೆ ಭೇಟಿ ನೀಡುವ ಅಧಿಕಾರಿಗಳ ಬಳಿ ನಮ್ಮ ಸಮಸ್ಯೆ ತೋಡಿಕೊಂಡಿದ್ದೇವೆ. ಆದರೆ, ಈವರೆಗೆ ಅವರು ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ' ಎಂದು ಬಾಗಲಕೋಟೆಯ ವಿದ್ಯಾರ್ಥಿಗಳು ಸಮಸ್ಯೆ ತೋಡಿಕೊಂಡರು.

> **ಧಾರವಾಡ ಜಿಲ್ಲೆಯಲ್ಲಿ 295 ಸರ್ಕಾರಿ ಶಾಲಾ ಕೊಠಡಿಗಳು ನಿರ್ಮಾಣ ಹಂತದಲ್ಲಿವೆ. ಫೆಬ್ರುವರಿಯೊಳಗೆ ಕಾಮಗಾರಿ ಮುಗಿಸಲು ಸೂಚಿಸಲಾಗಿದೆ.**
> **ಎಸ್.ಎಸ್. ಕೆಳದಿಮಠ,** ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ, ಧಾರವಾಡ

> **ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳ ಸಮಸ್ಯೆ ಗಮನಕ್ಕೆ ಬಂದಿದೆ. ಪ್ರಸಕ್ತ ಸಾಲಿನಲ್ಲಿ 7,098 ಶಾಲೆಗಳಿಗೆ 9,604 ಕೊಠಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ**
> **ಮಧು ಬಂಗಾರಪ್ಪ,** ಸಚಿವ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಜಿಲ್ಲೆಗಳಲ್ಲಿ ಕೊಠಡಿಗಳ ಕೊರತೆ	
ತುಮಕೂರು	942
ಶಿವಮೊಗ್ಗ	744
ಬಳ್ಳಾರಿ	740
ಮೈಸೂರು	646
ಯಾದಗಿರಿ	641
ದಕ್ಷಿಣ ಕನ್ನಡ	508
ಕೊಪ್ಪಳ	392
ಬೆಂಗಳೂರು ನಗರ	363
ಉತ್ತರ ಕನ್ನಡ	360
ಹಾಸನ	354
ರಾಮನಗರ	353
ಕೋಲಾರ	351
ಧಾರವಾಡ	332
ಚಿಕ್ಕಮಗಳೂರು	282
ಹಾವೇರಿ	277
ಮಂಡ್ಯ	208
ಬೆಂಗಳೂರು ಗ್ರಾಮಾಂತರ	202
ಉಡುಪಿ	149
ಗದಗ	125
ಚಾಮರಾಜನಗರ	94
ಕೊಡಗು	21

'ರಾತ್ರಿ ಉಳಿದ ಆಹಾರ ಬೆಳಿಗ್ಗೆ ನೀಡುತ್ತಾರೆ'

ವಸತಿ ಶಾಲೆ ಮಕ್ಕಳ ಅಳಲು: ಪ್ರಾಚಾರ್ಯರಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ರಾತ್ರಿ ಉಳಿದ ಆಹಾರವನ್ನು ಬೆಳಿಗ್ಗೆ ಮತ್ತು ಬೆಳಗಿನ ಆಹಾರ ಮಧ್ಯಾಹ್ನ ನೀಡುತ್ತಾರೆ. ಹೊಟ್ಟೆ ತುಂಬ ಊಟ ಕೊಡಲ್ಲ' ಎಂದು ವಸತಿ ಶಾಲೆಯ ಮಕ್ಕಳು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ.ರಾಮತ್ನಾಳ ಅವರ ಬಳಿ ದುಃಖ ತೋಡಿಕೊಂಡರು.

ಹಾವೇರಿ ತಾಲ್ಲೂಕಿನ ಕರ್ಜಗಿಯ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಗೆ ಶುಕ್ರವಾರ ಭೇಟಿ ನೀಡಿದ ಶೇಖರಗೌಡ ಅವರು ಅಲ್ಲಿನ ಅವ್ಯವಸ್ಥೆ ಕಂಡು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಬೆಳಿಗ್ಗಿನ ಉಪಾಹಾರಕ್ಕೆ ಸಿದ್ಧಪಡಿಸಿದ್ದ ಪಲಾವ್ ಅನ್ನು ಮತ್ತೆ ಮಧ್ಯಾಹ್ನದ ಊಟಕ್ಕೆ ಮಕ್ಕಳಿಗೆ ಬಡಿಸಿದ್ದು ಕಂಡಿತು. ನಿತ್ಯ ರಾತ್ರಿ ಊಟವನ್ನು ಬೆಳಿಗ್ಗೆ ತಿನ್ನಲು ಬಲವಂತವಾಗಿ ಕೊಡುತ್ತಾರೆ ಎಂದು ಮಕ್ಕಳು ದೂರಿದರು. ಅಡುಗೆ ಸಿಬ್ಬಂದಿ ಮತ್ತು ಪ್ರಾಚಾರ್ಯರಿಗೆ 'ಪ್ರಮಾಣೀಕೃತ ಆಹಾರ ಪಟ್ಟಿ' ಬಗ್ಗೆ ಮಾಹಿತಿ ಇಲ್ಲದಿರುವುದನ್ನು ತಿಳಿದ ಆಯೋಗದ ಸದಸ್ಯರು ತರಾಟೆಗೆ ತೆಗೆದುಕೊಂಡರು.

ಈ ವರ್ಷದಿಂದ ಪ್ರಾರಂಭಗೊಂಡಿರುವ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಕೊಟ್ಟಿರುವ ನೋಟ್ ಪುಸ್ತಕ ಮತ್ತು ಪೆನ್ ನೀಡದಿರುವ ಬಗ್ಗೆ ವಿದ್ಯಾರ್ಥಿಗಳು ಆಯೋಗದ ಸದಸ್ಯರ ಗಮನಕ್ಕೆ ತಂದರು.

ಮಕ್ಕಳ ಹೇಳಿಕೆಯನ್ನು ಗಂಭೀರ ವಾಗಿ ಪರಿಗಣಿಸಿದ್ದು, ಆಯೋಗದಲ್ಲಿ ಸ್ವಯಂ ದೂರು ದಾಖಲಿಸಿಕೊಂಡು, ಕರ್ಜಗಿ ಮತ್ತು ಗಂಜೀಗಟ್ಟಿಯ ಪ್ರಾಚಾರ್ಯ, ವಾರ್ಡನ್‌ಗಳಿಗೆ ಸಮನ್ಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಶಿಗ್ಗಾವಿ ತಾಲ್ಲೂಕಿನ ಗಂಜೀಗಟ್ಟಿ ಮೊರಾರ್ಜಿ ವಸತಿ ಶಾಲೆಗೆ ಶುಕ್ರವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಭೇಟಿ ನೀಡಿ, ಮಕ್ಕಳ ಅಹವಾಲು ಆಲಿಸಿದರು

'ಸ್ವಚ್ಛತೆ: ಯಾರ ಕೆಲಸ?'

ಶಿವಮೊಗ್ಗ: 'ವಿದ್ಯಾರ್ಥಿಗಳಿಂದ ಶಾಲೆಯ ಶೌಚಾಲಯ ಸ್ವಚ್ಛಗೊಳಿಸಕೂಡದು ಎನ್ನುವುದಾದರೆ, ಅದು ಯಾರ ಕೆಲಸ? ಶಿಕ್ಷಕರು ಸ್ವಚ್ಛಗೊಳಿಸಬೇಕೇ' ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಪ್ರಶ್ನಿಸಿದರು. ಶುಕ್ರವಾರ ಇಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರೌಢಶಾಲಾ ಮುಖ್ಯಶಿಕ್ಷಕರ ಶೈಕ್ಷಣಿಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. 'ಶಾಲೆ-ಕಾಲೇಜುಗಳಲ್ಲಿ ಶೌಚಾಲಯ ಸ್ವಚ್ಛಗೊಳಿಸಲು ಸಿಬ್ಬಂದಿ ಕೊರತೆ ಇದೆ. ಈ ಕುರಿತು ಸರ್ಕಾರ ಗಮನಹರಿಸಬೇಕು' ಎಂದರು.

ಶೌಚಾಲಯ ಶುಚಿತ್ವ, ಶೀಘ್ರ ಆದೇಶ: ಮಧು ಬಂಗಾರಪ್ಪ

ಹುಬ್ಬಳ್ಳಿ: 'ಪ್ರಸ್ತುತ ವರ್ಷದಿಂದ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ಅದನ್ನು ಶೌಚಾಲಯದ ಶುಚಿತ್ವ ಹಾಗೂ ನಿರ್ವಹಣೆಗೆ ಬಳಸಬೇಕೆಂದು ಶೀಘ್ರ ಆದೇಶ ಹೊರಡಿಸಲಾಗುವುದು' ಎಂದು ಪ್ರಾಥಮಿಕ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು. 'ಶಾಲೆಗಳಲ್ಲಿ ಮಕ್ಕಳು ಶೌಚಾಲಯ ಶುಚಿಗೊಳಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಇದರ ನಿಯಂತ್ರಣಕ್ಕೆ ಶಾಲಾಭಿವೃದ್ಧಿ ಸಮಿತಿ ಮತ್ತು ಶಾಲೆ ಜಂಟಿಯಾಗಿ ಕಾರ್ಯ ನಿರ್ವಹಿಸಲು ಹೊಸ ಆದೇಶ ಹೊರಡಿಸಲಾಗುವುದು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಕಲ್ಲಡ್ಕ ವಿರುದ್ಧ ಬಲವಂತದ ಕ್ರಮ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ವೇದಿಕೆಯಲ್ಲಿ ಮಾಡಿದ ಭಾಷಣದಲ್ಲಿ ಮುಸ್ಲಿಂ ಮಹಿಳೆಯರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್. ಎಸ್. ಎಸ್) ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಪ್ರಭಾಕರ ಭಟ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಭಾಕರ ಭಟ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಅರ್ಜಿದಾರರ ವಿರುದ್ಧ ರಾಜಕೀಯಪ್ರೇರಿತ ಎಫ್ಐಆರ್ ದಾಖಲು ಮಾಡಲಾಗಿದೆ. ಅವರು ಯಾವುದೇ ಪ್ರಚೋದನಕಾರಿ ಹೇಳಿಕೆ ನೀಡಿಲ್ಲ. ಸಾಂವಿಧಾನಿಕವಾಗಿ ತಮಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯದಡಿ ಕೆಲವು ವಾಸ್ತವಾಂಶಗಳನ್ನು ಜನರ ಮುಂದೆ ತೆರೆದಿಟ್ಟಿದ್ದಾರೆ. ಅವರ ತೇಜೋವಧೆ ಮಾಡುವ ಏಕೈಕ ದುರುದ್ದೇಶದಿಂದ ಇಂತಹ ದೂರು ದಾಖಲಿಸಲಾಗಿದೆ. ದೂರುದಾರರು ರಾಜಕೀಯ ಪಕ್ಷದ ಪದಾಧಿಕಾರಿಯಾಗಿದ್ದು ಇಂತಹುದೇ ಅಪರಾಧಿಕ ಕಲಂಗಳಡಿ ದೂರು ದಾಖಲಿಸಬೇಕು, ಅವರ ವಿರುದ್ಧ ರೌಡಿ ಶೀಟ್ ತೆರೆಯಬೇಕು ಎಂದು ಪೊಲೀಸರಿಗೆ ಸೂಚಿಸುವ ಮೂಲಕ ಕಾನೂನಿನ ದುರುಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ, ಈ ದೂರು ಮತ್ತು ಕೋರ್ಟ್ ವಿಚಾರಣೆಯನ್ನು ರದ್ದುಗೊಳಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಪೊಲೀಸರು ಮುಂದಿನ ವಿಚಾರಣೆ ತನಕ ಯಾವುದೇ ಬಲವಂತದ ಕ್ರಮಕೈಗೊಳ್ಳಬಾರದು' ಎಂದು ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲರಿಗೆ ಮಧ್ಯಂತರ ನಿರ್ದೇಶನ ನೀಡಿತು.

ಪ್ರತಿವಾದಿ ಪ್ರಾಸಿಕ್ಯೂಷನ್ ಹಾಗೂ ದೂರುದಾರರಾದ ನಜ್ಮಾ ನಜೀರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

'ಪ್ರಭಾಕರ ಭಟ್ ಅವರ ವಿರುದ್ಧ ಸಾಮಾಜಿಕ ಕಾರ್ಯಕರ್ತೆ ನಜ್ಮಾ ನಜೀರ್ ಚಿಕ್ಕನೇರಳೆ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿನ ಅನ್ವಯ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ.

ತೋಟಗಾರಿಕೆ ಇಲಾಖೆ
ತೋಟಗಾರಿಕೆ ನಿರ್ದೇಶನಾಲಯ, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಬೆಂಗಳೂರು–04
ಮೊಬೈಲ್ ಸಂಖ್ಯೆ: 8553884517

ಸಂ.: ತೋಇ/ತೋಉನಿ/ತೋಮಾಕೇ/ವಿನಿ2/03/2023–24 ದಿನಾಂಕ: 28–12–2023

ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ, ದ್ವಿ–ಲಕೋಟೆ ವಿಧಾನ)

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್ ಬಾಗ್, ಬೆಂಗಳೂರು ರವರು ತೋಟಗಾರಿಕಾ ಇಲಾಖಾ ವತಿಯಿಂದ ನಡೆಯುವ ಸಭೆ/ಸಮಾರಂಭ/ತರಬೇತಿ/ಕಾರ್ಯಾಗಾರಗಳಿಗೆ ಕೇಟರಿಂಗ್ ಸೇವೆ ಒದಗಿಸಲು ಅನುಭವಿ ಕೇಟರರ್ಸ್ ರವರಿಂದ ಇ–ಬಿಡ್ ಅನ್ನು ಆಹ್ವಾನಿಸುತ್ತಿದ್ದಾರೆ.

ಘಟನಾವಳಿಗಳ ವೇಳಾಪಟ್ಟಿ: 1) ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಿಂದ ಪಡೆದುಕೊಳ್ಳುವ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲಕ್ಕೆ ಭರ್ತಿ (ಅಪ್‌ಲೋಡ್) ಮಾಡುವ ಅವಧಿ: 30–12–2023 ರಿಂದ 12–01–2024 ರ ಅಪರಾಹ್ನ 3.00 ಗಂಟೆವರೆಗೆ. 2) ಬಿಡ್ ಪೂರ್ವ (ಪ್ರೀ ಬಿಡ್) ಸಭೆಯ ದಿನಾಂಕ ಮತ್ತು ಸಮಯ: 09–01–2024, ಬೆಳಗ್ಗೆ 11.30 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 16–01–2024, ಬೆಳಗ್ಗೆ 11.30 ಗಂಟೆಗೆ. 4) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 17–01–2024, ಬೆಳಗ್ಗೆ 11.30 ಗಂಟೆಗೆ. 5) ಬಿಡ್ಡು ಪೂರ್ವ ಸಭೆ ನಡೆಯುವ ಮತ್ತು ಬಿಡ್ಡುಗಳನ್ನು ತೆರೆಯುವ ಸ್ಥಳದ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ತೋಟಗಾರಿಕೆ ಉಪ ನಿರ್ದೇಶಕರು, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್ ಬಾಗ್, ಬೆಂಗಳೂರು–04. ಫೋನ್ ಸಂಖ್ಯೆ: 8553884517 ಇ–ಮೇಲ್: ddhhiclalbagh@gmail.com 6) ಟೆಂಡರ್ ಅಂದಾಜು ಮೊತ್ತ: ರೂ. 35,00,000/– 7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಮೊತ್ತ (ಇ.ಎಂ.ಡಿ): ರೂ. 70,000/–

ಸಹಿ/–
ತೋಟಗಾರಿಕೆ ಉಪನಿರ್ದೇಶಕರು
(ತೋಟಗಾರಿಕೆ ಮಾಹಿತಿ ಕೇಂದ್ರ)
DIPR/CP/2760/GREENFMC/2023-24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿ:6:ಸಿಆರ್– :2022–23 ದಿನಾಂಕ:28–12–2023

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಅವಶ್ಯವಿರುವ ವಾಹನ, ಯಂತ್ರೋಪಕರಣ ಮತ್ತು ಸಾಮಗ್ರಿಗಳನ್ನು ಖರೀದಿಸಲು ಕೆ.ಜಿ ಡಾಕುಮೆಂಟ್ ಉಪಯೋಗಿಸಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ನ್ನು ಆಹ್ವಾನಿಸಲಾಗಿದೆ.ಟೆಂಡರ್ ಸಲ್ಲಿಸಲು ಕೊನೆಯ ದಿ:12–01–2024 ರಂದು 17–00 ಘಂಟೆವರೆಗೆ ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿ:16–01–2024 ರಂದು 10–30 ಗಂಟೆ ನಂತರ ಇರುತ್ತದೆ. ಪೂರೈಕೆದಾರರು www.kppp. karnataka.gov.in ಮೂಲಕ ಟೆಂಡರ್ ಡೌನ್ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ವಿವರ ಈ ಕೆಳಗಿನಂತಿದೆ. **(ರೂ. ಲಕ್ಷಗಳಲ್ಲಿ)**

ಕ್ರ. ಸಂ	ಪೂರೈಸಬೇಕಿರುವ ವಾಹನ/ ಯಂತ್ರೋಪಕರಣ/ಸಾಮಗ್ರಿಗಳ ವಿವರ	ಅಂದಾಜು ಮೊತ್ತ (ಎಲ್ಲ ತೆರಿಗೆಗಳು ಸೇರಿ	ಇ.ಎಂ.ಡಿ ಮೊತ್ತ
1	ಟಿಪ್ಪರ್ ಟ್ರಕ್ (5 ಕ್ಯೂ.ಮಿ) (ಇಂಡೆಂಟ್ ನಂ. DMA/2023-24/IND0799).	55.50	1.11
2	ಟ್ರ್ಯಾಕ್ಟರ್ ವಿತ್ ಟ್ರೇಲರ್ (45 ಹೆಚ್.ಪಿ) (ಇಂಡೆಂಟ್ ನಂ.DMA/2023-24/ IND0800).	85.20	1.70
3	ಹೈಡ್ರಾಲಿಕ್ ಟ್ರೇಲರ್ (3 ಟನ್) ಮತ್ತು ವಾಟರ್ ಟ್ಯಾಂಕರ್ (3000ಲೀ.) (ಇಂಡೆಂಟ್ ನಂ.DMA/2023-24/ IND0828).	26.05	0.52
4	ಪುಶ್ ಕಾರ್ಟ್(6 Bins) and ಬಿನ್ಸ್(10 ಲೀ), ವಾಣಿಜ್ಯ ಟ್ವಿನ್ ಬಿನ್ಸ್ (60ಲೀ.), ಬಿನ್ಸ್ (100ಲೀ) & ಬಿನ್ಸ್ (200ಲೀ.) (ಇಂಡೆಂಟ್ ನಂ.DMA/2023-24/ IND0817).	85.18	1.70
5	ಟ್ರೇಲರ್ ಮೌಂಟೆಡ್ ಸಕ್ಷನ್ ಮಶೀನ್ (4000ಲೀ.) ಮತ್ತು ಆಟೋ ಮೌಂಟೆಡ್ ಜೆಟ್ಟಿಂಗ್ ಮಶೀನ್ (500ಲೀ.) (ಇಂಡೆಂಟ್ ನಂ.DMA/2023-24/ IND08 18).	33.00	0.66
6	ಆಟೋ ಮೌಂಟೆಡ್ ಫಾಗಿಂಗ್ ಮಶೀನ್ & ಹ್ಯಾಂಡ್ ಹೆಲ್ಡ್ ಫಾಗಿಂಗ್ ಮಶೀನ್ (ಇಂಡೆಂಟ್ ನಂ.DMA/2023-24/ IND0819).	22.00	0.50
7	ಪ್ಲಾಸ್ಟಿಕ್ ಬೇಲಿಂಗ್ ಮಶೀನ್(ಸಿಂಗಲ್ ಬಾಕ್ಸ್)ಮತ್ತು (ಡಬಲ್ ಬಾಕ್ಸ್) (ಇಂಡೆಂಟ್ ನಂ. DMA/2023-24/ IND0821).	16.84	0.42
8	ಫೈಬರ್ ಟೈಲೆಟ್ (2ಸೀಟು) (ಇಂಡೆಂಟ್ ನಂ. DMA/2023-24/IND0822).	19.80	0.50
9	ಡಿಸೇಲ್ ಜನರೇಟರ್ ಸೆಟ್ (ಇಂಡೆಂಟ್ ನಂ. DMA/2023-24/IND0823).	6.93	0.17
10	ಮೊಬೈಲ್ ಟೈಲೆಟ್ ಅಟಾಚಮೆಂಟ್(10 ಸೀಟು) (ಇಂಡೆಂಟ್ ನಂ.DMA/2023-24/IND0824).	7.00	0.17
11	ಡೋಜರ್ ಬ್ರೂಮರ್ (ಇಂಡೆಂಟ್ ನಂ. DMA/2023-24/IND0825).	9.00	0.23
12	ಇನ್ಸಿನೆರೆಟರ್ (ಇಂಡೆಂಟ್ ನಂ. DMA/2023-24/IND0829).	9.00	0.23
13	ಶ್ರೇಡ್ಡರ್ ಮಶೀನ್ (ಇಂಡೆಂಟ್ ನಂ. DMA/2023-24/IND0830).	9.43	0.24

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-852/MCA/2023-24

ಕರ್ನಾಟಕ ಸರ್ಕಾರ
ಜಿಲ್ಲಾಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ.
Telephones: 08392 -276250 e-mail: dhobellari@gmail.com
No.DHOB/ZPAPAITEMS/01/2023-24. Date 27.12.2023.

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಹಾಗೂ ಜಿಆಕುಕ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಒಳಗೊಂಡಿರುವ ವಿವಿಧ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಐಸಿಟಿ ಉಪಕರಣಗಳು, ಪಿಠೋಪಕರಣಗಳು & ವೈದ್ಯಕೀಯ ಉಪಕರಣಗಳನ್ನು ಜಿ.ಪಂ.ಅನುದಾನದ ಅಡಿಯಲ್ಲಿ ಖರೀದಿಸಲು ಇ–ಸಂಗ್ರಹಣೆ ವೇದಿಕೆಯ ಮೂಲಕ ಗ್ರೂಪ್–ವೈಸ್ ಐಟಂ–ವೈಸ್ ಪದ್ಧತಿನ್ವಯ ಇ–ಟೆಂಡರ್ ಆಹ್ವಾನಿಸಲಾಗಿದೆ, ಇ–ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ **https://kppp.karnataka.gov.in/#/portal/portal-home** ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ. (ಆನ್ ಲೈನ್‌ನಲ್ಲಿ ಇ–ಟೆಂಡರ್‌ನ್ನು ಅಪ್ಲೋಡ್ ಮಾಡಲು ಕೊನೆಯ **ದಿನಾಂಕ 05–01–2024 @ 17.00** ಗಂಟೆಯವರೆಗೆ ನಿಗಧಿಪಡಿಸಲಾಗಿದೆ ಇ–ಟೆಂಡರ್ ಮೊತ್ತ **ರೂ.54.17** ಲಕ್ಷಗಳು

TENDER INDENT No. DHFWS/2023-24/IND0378.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/657/ಕೆಎಸ್‌ಎಂಸಿಎ/2023–24

ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ
ಕರ್ನಾಟಕ ಸರ್ಕಾರ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
3ನೇ ಮಹಡಿ, ಫೆಡರೇಷನ್ ಹೌಸ್, ಎಫ್.ಕೆ.ಸಿ.ಸಿ.ಐ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು–09
ಸಂ: ಕಗಪ್ರಅಪ್ರಾ/41/ಆ/2023–24 ದಿನಾಂಕ: 29.12.2023

ಟೆಂಡರ್ ಪ್ರಕಟಣೆ

ಕಾರ್ಯದರ್ಶಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, 3ನೇ ಮಹಡಿ, ಫೆಡರೇಷನ್ ಹೌಸ್, ಎಫ್.ಕೆ.ಸಿ.ಸಿ.ಐ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು–560009 ರವರ **ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಣೆಗಾಗಿ ವಿವಿಧ ಶ್ರೇಣಿಯ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು** ಅರ್ಹ ನಿರ್ವಹಣಾ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ ಸಂಖ್ಯೆ: KBADA/2023-24/SE0001

(1) ಟೆಂಡರ್ ಮಾಹಿತಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು. (2) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 25–01–2024, ಸಂಜೆ 5.00 ಗಂಟೆ. (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 29–01–2024, ಬೆಳಗ್ಗೆ 11.00 ಗಂಟೆ.

ಷರತ್ತುಗಳು: ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/–
ಕಾರ್ಯದರ್ಶಿ,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
DIPR/CP/SPAN/2778/2023-24

ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
ಸಂಖ್ಯೆ: ಅಸಂನಿ/ಮದರಸಾ/ಸಿಆರ್–01/2023–24 ದಿನಾಂಕ: 29.12.2023

ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಮದರಸಾಗಳಲ್ಲಿ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು (Online-Offline Coaching) ನೀಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಪ್ರಕಟಣೆಯ ದಿನಾಂಕ: **29.12.2023**. 2) ಟೆಂಡರ್ ಕುರಿತು ಪೂರ್ವಭಾವಿ ಸಭೆ: **08.01.2024 ಬೆಳಿಗ್ಗೆ 11:30 ಗಂಟೆಗೆ**. 3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: **29.01.2024 ಸಂಜೆ 5:30 ಗಂಟೆಯೊಳಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **31.01.2024 ಬೆಳಿಗ್ಗೆ 11:30 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಪರಿಶೀಲಿಸಿದ ನಂತರ. 6) ಟೆಂಡರ್ ತೆರೆಯವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052. 7) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902/080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/2786/ಎಂಎಎ/2023–24

ಅಲ್ಲಮಾ ಇಕ್ಬಾಲ್ ಶಿಕ್ಷಣ ಸಂಸ್ಥೆ, ಬೀದರ್(ರಿ)
ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಅಲ್ಲಮಾ ಇಕ್ಬಾಲ್ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಶಾಹೀನ್ ಉರ್ದು ಪ್ರೌಢಶಾಲೆ ಅನುದಾನಿತ ಖಾಲಿ ಇರುವ ಹುದ್ದೆಗೆ ಭರ್ತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರ ಜ್ಞಾಪನ ಆದೇಶ ಪತ್ರ ಸಂ: ಸಿ4 (4) ಖಾಪ್ರೌಶಾ/ಖಾಹುತು/ಅನು 168/2018–19 ದಿನಾಂಕ: 03–11–2023 ರಂತೆ ಅನುಮತಿ ನೀಡಿರುವ ಪ್ರಯುಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರಸಂ	ಹುದ್ದೆ ಹೆಸರು	ಹುದ್ದೆ ಸಂಖ್ಯೆ	ಮೀಸಲಾತಿ	ವಿದ್ಯಾರ್ಹತೆ
01	ಗಣಿತ (ಸ. ಶಿಕ್ಷಕ)	01	ಮತೀಯ ಅಲ್ಪಸಂಖ್ಯಾತರ ಶಾಲೆಯಾಗಿರುವ ಪ್ರಯುಕ್ತ ರೋಸ್ಟರ್ ಬಿಂದು ಅನ್ವಯಿಸುವುದಿಲ್ಲ	ಬಿ.ಎಸ್ಸಿ, ಬಿ.ಎಡ್. (PCM), (PMCS)

ಷರತ್ತುಗಳು: 1) ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 291 ಎಲ್ ಎಇಡಿ 2015 ದಿನಾಂಕ : 29–09–2016ರ ವೃಂದ ಮತ್ತು ನೇಮಕಾತಿ ನಿಯಮಗಳ ಆದೇಶಗಳ ಪ್ರಕಾರ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. 2) ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರದ ವೃಂದ ಮತ್ತು ನೇಮಕಾತಿ ನಿಯಮಗಳಂತೆ ವಯೋಮಿತಿಯವರಿರಬೇಕು. 3) ಕರ್ನಾಟಕ ರಾಜ್ಯ ಸರ್ಕಾರದ ನಿಯಮಗಳಂತೆ ವೇತನ ಶ್ರೇಣಿ ಇರುತ್ತದೆ. 4) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ291 ಎಲ್.ಎಇಡಿ 2015. ದಿನಾಂಕ: 29–09–2016ರನ್ವಯ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸ್ವಂತ ವಿಳಾಸದ ವಿವರಗಳು ನಮೂದಿಸಿದ ಲಕೋಟೆ, ವಿದ್ಯಾರ್ಹತೆಯ ದೃಢೀಕೃತ ಪ್ರಮಾಣ ಪತ್ರಗಳು ದ್ವಿ ಪ್ರತಿಯಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಮುಖ್ಯಗುರುಗಳು, ಶಾಹೀನ್ ಉರ್ದು ಪ್ರೌಢ ಶಾಲೆ ಬೀದರ್– 585401, ಜಿಲ್ಲಾ ಬೀದರ್ ಇವರಿಗೆ ತಲುಪುವಂತೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವುದು. ಮತ್ತು ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪ ನಿರ್ದೇಶಕರು, ಶಾಲಾ ಶಿಕ್ಷಣ, ಇಲಾಖೆ ಬೀದರ್ ರವರಿಗೆ ಸಲ್ಲಿಸುವುದು. 5) ರೂ. 1,000/– (ರೂಪಾಯಿ ಒಂದು ಸಾವಿರ ಮಾತ್ರ) ಮುಖ್ಯೋಧ್ಯಾಯರು, ಶಾಹೀನ್ ಉರ್ದು ಪ್ರೌಢ ಶಾಲೆ, ಬೀದರ್ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ.ಪಡೆದು ಸಲ್ಲಿಸುವುದು ಮತ್ತು ಪಾವತಿಸಿದ ಶುಲ್ಕ ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. 6) ಸರ್ಕಾರದ ಆದೇಶಗಳನ್ವಯ ಆಯ್ಕೆ ಮತ್ತು ತಿರಸ್ಕರಿಸುವ ಹಕ್ಕು ಶಾಲಾ ಆಡಳಿತ ಮಂಡಳಿಯ ಅಧೀನಕ್ಕೆ ಒಳಪಟ್ಟಿರುತ್ತದೆ. ಅರ್ಜಿ ಸಲ್ಲಿಸಿದ ಮತ್ತು ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಯ ಹಕ್ಕು ಚಲಾಯಿಸುವಂತಿಲ್ಲ. 7) ಅರ್ಜಿ ಸಲ್ಲಿಸಿದವರಿಗೆ ಪತ್ರದ ಮೂಲಕ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು. ಸಂದರ್ಶಕ್ಕೆ ಸ್ವಂತ ಖರ್ಚಿನಲ್ಲಿ ಹಾಜರಾಗುವುದು. ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ ಅಲ್ಲಮಾ ಇಕ್ಬಾಲ್ ಶಿಕ್ಷಣ ಸಂಸ್ಥೆ, ಬೀದರ್

ಬಮೂಲ್
ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
Nandini
ಬೆಂಗಳೂರು ಡೇರಿ ಪ್ರಾಂಗಣ: ಡಾ॥ ಎಂ.ಹೆಚ್.ಮರೀಗೌಡ ರಸ್ತೆ, ಡಿ. ಆರ್. ಕಾಲೇಜ್ ಅಂಚೆ. ಬೆಂಗಳೂರು–560029
IFT.NO:kmf:ಬಮೂಲ್:ಮಾರುಕಟ್ಟೆ(ಸಾರಿಗೆ):ಇ–ಟೆಂಡರ್:557:2023:24 ದಿನಾಂಕ:30.12.2023

ಸಾರಿಗೆ ಟೆಂಡರ್ ಪ್ರಕಟಣೆ, ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ., ಬೆಂಗಳೂರುರವರಿಂದ ಇನ್ಸುಲೇಟೆಡ್ ಕಂಟೈನರ್‌ವುಳ್ಳ ವಾಹನ ಹೊಂದಿರುವ ಮಾಲೀಕರಿಂದ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ದ್ವೈವಾರ್ಷಿಕ ಗುತ್ತಿಗೆಗೆ ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

1. ಮುಖ್ಯಡೇರಿ, ಮತ್ತು ಹೊಸಕೋಟೆ ಡೇರಿಯಿಂದ ಬೆಂಗಳೂರು ನಗರ ಹಾಗೂ ವಿವಿಧ ಗ್ರಾಮಾಂತರ ಪ್ರದೇಶಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿ ವಿತರಿಸುವ ಸಲುವಾಗಿ 2011ನೇ ಇಸವಿಗಿಂತ ಹಾಗೂ ಮೇಲ್ಪಟ್ಟು ತಯಾರಾದ ವರ್ಷ ಅಥವಾ ನೋಂದಾವಣಿಯಾಗಿರುವ ಇನ್ಸುಲೇಟೆಡ್ ಕಂಟೈನರ್‌ವುಳ್ಳ 1.0 ಟನ್, 2.0 ಟನ್, 3.0 ಟನ್ ಮತ್ತು 6.0 ಟನ್ ಸಾಮರ್ಥ್ಯದ ಸಾಗಾಣಿಕಾ ವಾಹನಗಳಿಗೆ ದ್ವೈವಾರ್ಷಿಕ ಗುತ್ತಿಗೆ ಟೆಂಡರ್ ಆಹ್ವಾನಿಸಲಾಗಿದೆ.

2. ಮಾರುಕಟ್ಟೆ ವಿಭಾಗದ ಕಚೇರಿ ಕೆಲಸಕಾರ್ಯಗಳಿಗಾಗಿ 2014ನೇ ಮಾದರಿ ಮತ್ತು ಮೇಲ್ಪಟ್ಟ Swift Dzire/XCENT/ TOYOTA ETIOS/HONDA AMAZE/TATA INDICA ಹಳದಿ ಬೋರ್ಡ್‌ನ ಕಾರುಗಳನ್ನು ಹೊಂದಿರುವ ವಾಹನ ಮಾಲಿಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 30.12.2023 ರಿಂದ 6.01.2024ರ ಸಂಜೆ 6.00 ಘಂಟೆಯವರೆಗೆ.
2	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ:16.01.2024 ರಂದು ಸಂಜೆ 6.00 ಘಂಟೆಯವರೆಗೆ
3	ತಾಂತ್ರಿಕ ಟೆಂಡರ್ ಭಾಗ–1 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:18.01.2024 ರಂದು ಮಧ್ಯಾಹ್ನ 2.30ಘಂಟೆ
4	ವಾಣಿಜ್ಯ ಟೆಂಡರ್ ಭಾಗ–2 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:20.01.2024 ರಂದು ಮಧ್ಯಾಹ್ನ 2.30ಘಂಟೆ
5	ತಾಂತ್ರಿಕ/ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	**ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.,**

ಸೂಚನೆ:– ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ, ಭದ್ರತಾಠೇವಣಿ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ **https:// kppp.karnataka.gov.in**ನಲ್ಲಿ ಲಭ್ಯವಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಬಮೂಲ್, ಕಚೇರಿ ದೂರವಾಣಿ ಸಂಖ್ಯೆ:7760966816\9731537770\7760967170

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.,
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಇ– ಟೆಂಡರ್ ಆಹ್ವಾನ ಪ್ರಾಧಿಕಾರ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ನಂ.29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017,
ದೂರವಾಣಿ: 0821–2343384 ಇ–ಮೇಲ್: gmhrd@cescmysore.org ವೆಬ್‌ಸೈಟ್:www.cescmysore.org
ಸಂಖ್ಯೆ:CESC/AHR/TRN/67/2023-TRNG/17676 ದಿನಾಂಕ: 28.12.2023

ಪತ್ರಿಕಾ ಪ್ರಕಟಣೆ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ), ಮೈಸೂರು ರವರ ವತಿಯಿಂದ 2023–24ನೇ ಸಾಲಿನ **Engineering Graduates/Non-Engineering Graduates/Diploma ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ** ಈ ಕೆಳಕಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು (Onlineನಲ್ಲಿ ಮಾತ್ರ) ಆಹ್ವಾನಿಸಲಾಗಿದೆ.

ಕ್ರ.ಸಂ.	ಶಿಶಿಕ್ಷು ವೃತ್ತಿಯ ವರ್ಗ	ವಿಷಯ	ಶಿಶಿಕ್ಷು ಸಂಖ್ಯೆ	ಪ್ರತಿ ಮಾಹೆಯ ಶಿಶಿಕ್ಷು ವೇತನ (ರೂ.)	ಶಿಶಿಕ್ಷು ತರಬೇತಿ ಅವಧಿ
1	ಇಂಜಿನಿಯರಿಂಗ್ ಪದವೀಧರ ಅಪ್ರೆಂಟಿಸ್‌ಶಿಪ್	ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್	77	9,000/-	ಒಂದು (01) ವರ್ಷ
		ಸಿವಿಲ್ ಇಂಜಿನಿಯರಿಂಗ್	03		
		ಒಟ್ಟು	80		
2	ಡಿಪ್ಲೊಮಾ ಅಪ್ರೆಂಟಿಸ್‌ಶಿಪ್	ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್	51	8,000/-	
		ಸಿವಿಲ್ ಇಂಜಿನಿಯರಿಂಗ್	04		
		ಒಟ್ಟು	55		
3	ಪದವೀಧರ (Non-Engineering) ಅಪ್ರೆಂಟಿಸ್‌ಶಿಪ್	ಬಿ.ಕಾಂ.	30	9,000/-	
		ಬಿ.ಬಿ.ಎ.	10		
		ಬಿ.ಸಿ.ಎ	10		
		ಬಿ.ಎ	08		
		ಬಿ.ಎಸ್ಸಿ.	07		
		ಒಟ್ಟು	65		
		ಒಟ್ಟು ಸಂಖ್ಯೆ	200		

ಕ್ರ.ಸಂ.	ವಿವರ (ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ)	ದಿನಾಂಕ
1	ಆನ್‌ಲೈನ್ ಅಪ್ಲಿಕೇಷನ್ ಸಲ್ಲಿಸಲು ಪ್ರಾರಂಭದ ದಿನಾಂಕ	30.12.2023
2	Online ಅಪ್ಲಿಕೇಷನ್ ಸಲ್ಲಿಸಲು ಕೊನೆಯ ದಿನಾಂಕ	19.01.2024

ಇಂಜಿನಿಯರಿಂಗ್ ಪದವೀಧರ /ಪದವೀಧರ (Non-Engineering)/ ಡಿಪ್ಲೊಮಾ ಇಂಜಿನಿಯರಿಂಗ್‌ನಲ್ಲಿ 2019, 2020, 2021, 2022 ಮತ್ತು 2023ನೇ ಸಾಲಿನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಅಪ್ರೆಂಟಿಸ್‌ಶಿಪ್‌ಗೆ ಚಾವಿಸನಿನಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಯನ್ನು ಚಾವಿಸನಿನಿಯ ಅಧಿಕೃತ ವೆಬ್‌ಸೈಟ್ **https://cescmysore.karnataka.gov.in** (ಪ್ರಕಟಣೆಗಳು/ಪ್ರಕಟಣೆಗಳು2023–24/ಇಲ್ಲಿ ಕ್ಲಿಕ್ ಮಾಡಿ) ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ, ಚಾ.ವಿ.ಸ.ನಿ.ನಿ, ಮೈಸೂರು
DIPR/MYS/KAVITA/827/2022-23

ಕರ್ನಾಟಕ ಸರ್ಕಾರ
ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101, ಜಿಲ್ಲಾ ಗದಗ ರಾಜ್ಯ : ಕರ್ನಾಟಕ
ದೂರವಾಣಿ : 08372–259932 ಇ–ಮೇಲ್ : ka.gadagbetagericmc@gmail.com
ಸಂಖ್ಯೆ : ಗಬೆನಸ/ತಾಂತ್ರಿಕ/ಸ್ವಭಾಮಿ 2.0 /2023–24 ದಿನಾಂಕ : 28–12–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ 2.0 ಯೋಜನೆ (ನಗರ) ಯೋಜನೆ ಅನುದಾನದಡಿ ಸಾರ್ವಜನಿಕ ಶೌಚಾಲಯ ಮತ್ತು ಸಾರ್ವಜನಿಕ ಮೂತ್ರಾಲಯಗಳನ್ನು ನಿರ್ಮಿಸುವ ಸಂಬಂಧ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಇಚ್ಛೆಯುಳ್ಳವರು ಇ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬಹುದು. ಇ ಎಂ ಡಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ ನಿಂದ https://kppp.karnataka.gov.in ಡೌನಲೋಡ್ ಮಾಡಿಕೊಳ್ಳಲು ತಿಳಿಸಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ವರ್ಗ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2023-24/BD/WORK_INDENT10609 Construction Of Urinal Infront of gouri Shnakar Lodge At Ward No 26 CMC Limits	ಇತರೆ ವರ್ಗಕ್ಕೆ	5.00
2	DMA/2023-24/BD/ WORK_INDENT10607 Construction of Urinal In Near Infront Of Bus Stop SM Krushna Nagar At Ward No 01	ಎಸ್ ಟಿ ವರ್ಗಕ್ಕೆ	5.00
3	DMA/2023-24/BD/ WORK_INDENT10603 Construction of Urinal In Near Hathalgeri Naka At Ward No 28 CMC Limits.	ಇತರೆ ವರ್ಗಕ್ಕೆ	5.00
4	DMA/2023-24/BD/ WORK_INDENT10601 Construction Of Urinal in Near Veernarayan Temple At Ward No 19 CMC Limits.	ಎಸ್ ಸಿ ವರ್ಗಕ್ಕೆ	5.00
5	DMA/2023-24/BD/ WORK_INDENT10599 Construction Of Urinal in Hathikal Koot At Ward No 26 CMC Limits.	ಇತರೆ ವರ್ಗಕ್ಕೆ	5.00
6	DMA/2023-24/BD/WORK_INDENT10573 Construction Of Urinal in Hudco Colony Mulagund Road at Ward No 35 CMC Limits.	ಎಸ್ ಸಿ ವರ್ಗಕ್ಕೆ	5.00
7	DMA/2023-24/BD/ WORK_INDENT10570 Construction Of Urinls in Betageri Bus Stand At CMC Limit	ಇತರೆ ವರ್ಗಕ್ಕೆ	5.00
8	DMA/2023-24/BD/ WORK_INDENT10566 Construction Of Public Toilet In Betageri Bus Stand At CMC	ಇತರೆ ವರ್ಗಕ್ಕೆ	20.00

ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **04–01–2024** ಸಾಯಂಕಾಲ 4.30 ಗಂಟೆ
ಸ್ವೀಕೃತಗೊಂಡ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **05–01–2024** ಸಾಯಂಕಾಲ 5.00 ಗಂಟೆ

ಸಹಿ/– (ಗಂಗಪ್ಪ ಎಂ)ಕೆಎಎಸ್
ಪೌರಾಯುಕ್ತರು,
ನಗರಸಭೆ, ಗದಗ–ಬೆಟಗೇರಿ

ಸಹಿ/– (ಉಷಾ ಮಹೇಶ ಎಂ. ದಾಸರ)
ಅಧ್ಯಕ್ಷರು,
ನಗರಸಭೆ, ಗದಗ–ಬೆಟಗೇರಿ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/410/2023–24

ಲೋಕಸಭೆ ಚುನಾವಣೆ: ಕನಿಷ್ಠ 20 ಕ್ಷೇತ್ರ ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ನಾಯಕರ ಕಾರ್ಯತಂತ್ರ

‘ಕೈ’ ಟಿಕೆಟ್: ಯುವ ಮುಖಗಳ ಪೈಪೋಟಿ?

ಪ್ರಜಾವಾಣಿ ವಾರ್ತೆ

ಸುದ್ದಿ ವಿಶ್ಲೇಷಣೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ನಾಯಕರು ಕಾರ್ಯತಂತ್ರ ಹೆಣೆಯುತ್ತಿದ್ದಾರೆ. ಅದಕ್ಕಾಗಿ ಜನವರಿ ಅಂತ್ಯದ ವೇಳೆಗೆ ಬಹುತೇಕ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಪಕ್ಷದ ನಾಯಕರು ಮುಂದಾಗಿದ್ದಾರೆ. ಆ ಬೆನ್ನಲ್ಲಿ, ಆಕಾಂಕ್ಷಿಗಳು ಟಿಕೆಟ್‌ಗಾಗಿ ತೆರೆಮರೆಯಲ್ಲಿ ಕಸರತ್ತು ಆರಂಭಿಸಿದ್ದಾರೆ.

ಕೆಲವು ಕ್ಷೇತ್ರಗಳಲ್ಲಿ ಸಚಿವರನ್ನು ಕಣಕ್ಕಿಳಿಸುವ ಇರಾದೆ ಕಾಂಗ್ರೆಸ್ ವರಿಷ್ಠರದ್ದಾಗಿದೆ. ಆದರೆ, ಲೋಕಸಭೆಯ ಅಖಾಡಕ್ಕೆ ಇಳಿಯಲು ಸಚಿವರು ಉತ್ಸುಕರಾಗಿಲ್ಲ. ಕೆಲವು ಕ್ಷೇತ್ರಗಳಲ್ಲಿ ಯುವ, ಹೊಸ ಮುಖಗಳಿಗೆ ಮಣೆ ಹಾಕಿ, ಮತ ಸೆಳೆದು ಯಶಸ್ಸು ಕಾಣುವ ಯೋಚನೆಯೂ ನಾಯಕರಲ್ಲಿದೆ. ಈ ನಡುವೆ ತಮ್ಮ ಸಂಬಂಧಿಕರಿಗೆ ಟಿಕೆಟ್ ಗಿಟ್ಟಿಸಲು ಕೆಲವು ಪ್ರಮುಖ ನಾಯಕರು ಯತ್ನ ನಡೆಸಿದ್ದಾರೆ. ಪಕ್ಷದ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ತಮ್ಮ ಮಗ ಸುನೀಲ್ ಬೋಸ್ ಅವರನ್ನು ಚಾಮರಾಜನಗರ ಮೀಸಲು ಕ್ಷೇತ್ರದಲ್ಲಿ ಕಣಕ್ಕಿಳಿಸಲು ಸಮಾಜ ಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪ ಬಯಸಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಪ್ರಬಲ ಆಕಾಂಕ್ಷಿಗಳು ಇಲ್ಲ. ಈ ಕ್ಷೇತ್ರ ವ್ಯಾಪ್ತಿಯ ಕೈ ಶಾಸಕರು ಮಹದೇವಪ್ಪ ಅವರ ಹೆಸರನ್ನೇ ಸೂಚಿಸುತ್ತಿದ್ದಾರೆ. ಆದರೆ, ಮಹದೇವಪ್ಪ ಅವರು ಒಪ್ಪುತ್ತಿಲ್ಲ. ಬದಲಿಗೆ ಸುನೀಲ್ ಬೋಸ್‌ಗೆ ಟಿಕೆಟ್ ಕೊಟ್ಟರೆ ಗೆಲ್ಲಿಸಿಕೊಂಡು ಬರುವುದಾಗಿ ಹೇಳುತ್ತಿದ್ದಾರೆ ಎನ್ನಲಾಗಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ತಮ್ಮ ಸೋದರಿ ಗೀತಾ ಶಿವರಾಜ್ ಕುಮಾರ್ ಅವರನ್ನು ಶಿವಮೊಗ್ಗದಿಂದ ಕಣಕ್ಕಿಳಿಸಲು ಇಚ್ಛಿಸಿದ್ದಾರೆ. ಗೀತಾ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ನಟ ಶಿವರಾಜ್ ಕುಮಾರ್ ಬಳಿ ಇತ್ತೀಚೆಗೆ ಕೋರಿಕೆ ಮುಂದಿಟ್ಟಿದ್ದರು. ಆದರೆ, ಗೀತಾ ಅವರ ಸ್ಪರ್ಧೆಗೆ ಅವಕಾಶ ನೀಡುವಂತೆ ಬಹಿರಂಗವಾಗಿಯೇ ಶಿವರಾಜ್ ಕುಮಾರ್ ಕೋರಿದ್ದಾರೆ.

ಬಾಗಲಕೋಟೆಯಿಂದ ತಮ್ಮ ಪತ್ನಿ ವೀಣಾ ಅವರಿಗೆ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ್ ಟಿಕೆಟ್ ಬಯಸಿದ್ದಾರೆ. 2019ರಲ್ಲಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದ ವೀಣಾ ಕಾಶಪ್ಪನವರ್ ಮತ್ತೆ ಅಖಾಡಕ್ಕಿಳಿಯಲು ಬಯಸಿದ್ದು, ಟಿಕೆಟ್‌ಗಾಗಿ ತೀವ್ರ ಪ್ರಯತ್ನ ನಡೆಸುತ್ತಿರುವುದಾಗಿ ವಿಜಯಾನಂದ ಕಾಶಪ್ಪನವರ್ ಬಹಿರಂಗವಾಗಿ ಹೇಳಿದ್ದಾರೆ.

ಉಡುಪಿ– ಚಿಕ್ಕಮಗಳೂರು ಕ್ಷೇತ್ರದಿಂದ ಸುಧೀರ್ ಕುಮಾರ್ ಮುರೊಳ್ಳಿ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಕ್ಷೇತ್ರದಾದ್ಯಂತ ಓಡಾಡುತ್ತಿರುವ ಅವರು, ಪಕ್ಷದ ಸಂಘಟನೆಯಲ್ಲೂ ಸಕ್ರಿಯರಾಗಿದ್ದಾರೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಪಕ್ಷಕ್ಕೆ ತಂದು ಇಲ್ಲಿ ಕಣಕ್ಕಿಳಿಸಲು ಕಾಂಗ್ರೆಸ್ ಯತ್ನ ನಡೆಸಿದೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಬೆಳಗಾವಿಯಿಂದ ಪುತ್ರಿ ಪ್ರಿಯಾಂಕಾ ಅವರ ರಾಜಕೀಯ ಪ್ರವೇಶದ ಕನಸು ಕಾಣುತ್ತಿದ್ದಾರೆ. ಮತ್ತೊಂದೆಡೆ ಪುತ್ರ ಮೃಣಾಲ್ ಅವರನ್ನು ಕಣಕ್ಕಿಳಿಸಲು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಯೋಚನೆಯಲ್ಲಿದ್ದಾರೆ. ಮೈಸೂರು-ಕೊಡಗು ಕ್ಷೇತ್ರದಿಂದ ಪುತ್ರ ಯತೀಂದ್ರ ಅವರನ್ನು ಕಣಕ್ಕಿಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು ಹೊಂದಿದ್ದಾರೆ ಎಂಬ ಮಾತುಗಳೂ ರಾಜಕೀಯ ವಲಯದಲ್ಲಿದೆ.

ದಾವಣಗೆರೆ ಕ್ಷೇತ್ರದಲ್ಲಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಇನ್‌ಸೈಟ್ಸ್ ಐಎಎಸ್ ಕೋಚಿಂಗ್ ಸೆಂಟರ್ ಸಂಸ್ಥಾಪಕ ವಿನಯ್ ಕುಮಾರ್ ಹೆಸರು ಓಡಾಡುತ್ತಿದೆ. ಕಾಂಗ್ರೆಸ್‌ನ ಯುವ ನಾಯಕ ನಿಖಿಲ್ ಕೊಂಡಜ್ಜಿ ಹೆಸರೂ ತೆರೆಮರೆಯಲ್ಲಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಅವರು ಪ್ರಬಲ ಆಕಾಂಕ್ಷಿ. ಆದರೆ, ಇಲ್ಲಿನ ಮಾಜಿ ಸಂಸದ ವೀರಪ್ಪ ಮೊಯಿಲಿ ಕೂಡಾ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿಯುವ ಕಾತುರದಲ್ಲಿದ್ದಾರೆ.

ಹಾವೇರಿ ಮತ್ತು ಬೆಂಗಳೂರು ಕೇಂದ್ರ ಸೇರಿದಂತೆ ಕನಿಷ್ಠ ಎರಡು ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂದು ಸಚಿವ ಜಮೀರ್ ಅಹಮದ್ ಬಯಸಿದ್ದಾರೆ. ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ಎಐಸಿಸಿಗೆ ಕಳುಹಿಸಲಾಗುವುದು, ನಂತರ ಕೇಂದ್ರ ಮತ್ತು ರಾಜ್ಯ ಕಾಂಗ್ರೆಸ್ ನಾಯಕರು ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲು ಎರಡು ಸಮೀಕ್ಷೆಗಳನ್ನು ನಡೆಸುತ್ತಾರೆ. ಜನವರಿ ಅಂತ್ಯದ ವೇಳೆಗೆ ಪಟ್ಟಿ ಸಿದ್ಧವಾಗುತ್ತದೆಂಬ ನಿರೀಕ್ಷೆ ನಮ್ಮದು ಎನ್ನುತ್ತಾರೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್.

ಲೋಕಸಭೆ ಚುನಾವಣೆಗೆ ತಯಾರಿ 10ರಂದು ಸಭೆ: ಡಿಕೆಶಿ

‘ಲೋಕಸಭೆ ಚುನಾವಣೆ ತಯಾರಿಗೆ ಜ. 10ರಂದು ಕೇಂದ್ರ ನಾಯಕರು ಹಾಗೂ ಎಲ್ಲ ಶಾಸಕರ ಸಭೆ ನಡೆಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಿಗೆ ಮನವರಿಕೆ ಮಾಡುವುದರ ಬಗ್ಗೆ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಲಾಗುವುದು. ಮನೆ ಮನೆಗೆ ತೆರಳಿ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಚಾರ ಮಾಡುವಂತೆಯೂ ಕಾರ್ಯಕರ್ತರಿಗೆ ತಿಳಿಸಲಾಗುವುದು’ ಎಂದರು.

‘ಪ್ರತಿಯೊಂದು ವಾರ್ಡ್, ಪಂಚಾಯಿತಿಯಲ್ಲಿ ಆಶ್ರಯ ಸಮಿತಿ ಸೇರಿದಂತೆ ಅನೇಕ ಸಮಿತಿಗಳಿವೆ. ಆ ಸಮಿತಿಗಳಲ್ಲಿ ಕಾರ್ಯಕರ್ತರಿಗೆ ಶೀಘ್ರ ಸ್ಥಾನಗಳನ್ನು ಕಲ್ಪಿಸಲಾಗುವುದು. ಎರಡು ವರ್ಷಗಳಿಗೆ ಒಮ್ಮೆ ಬದಲಾವಣೆ ಮಾಡಬೇಕೆಂಬ ಚಿಂತನೆಯಿದೆ’ ಎಂದರು.

ಸುದ್ದಿ 2 ನಿಮಿಷ

ಸ್ವರ್ಣವಲ್ಲಿ ಸ್ವಾಮೀಜಿ ಶಿಷ್ಯ ಸ್ವೀಕಾರ

ಶಿರಸಿ: ಸ್ವರ್ಣವಲ್ಲಿ ಮಹಾ ಸಂಸ್ಥಾನದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರು ಯಲ್ಲಾಪುರ ತಾಲ್ಲೂಕಿನ ಈರಾಪುರದ (ಗಂಗೆಮನೆ) ವಿದ್ವಾನ್ ನಾಗರಾಜ ಭಟ್ಟ ಅವರನ್ನು ನೂತನ ಶಿಷ್ಯನನ್ನಾಗಿ ಸ್ವೀಕರಿಸಲು ತೀರ್ಮಾನಿಸಿದ್ದು, 2024ರ ಫೆ.22ರಂದು ಶಿಷ್ಯ ಸ್ವೀಕಾರ ಪ್ರಕ್ರಿಯೆ ನಡೆಯಲಿದೆ.

‘ಸ್ವಾಮೀಜಿ ಅವರ ಅಪೇಕ್ಷೆ ಮತ್ತು ಸೂಚನೆಯಂತೆ ಹಲವು ವರ್ಷಗಳಿಂದ ಶಿಷ್ಯರ ಹುಡುಕಾಟ ನಡೆದಿತ್ತು. ಸ್ವರ್ಣವಲ್ಲೀ ಮಠದಲ್ಲಿ ಒಂದು ದಶಕದಿಂದ ವೇದಾಧ್ಯಯನ ನಡೆಸಿ, ಇದೀಗ ವೇದಾಂತ ಶಾಸ್ತ್ರ ಅಧ್ಯಯನ ಮಾಡುತ್ತಿರುವ 23 ವರ್ಷದ ನಾಗರಾಜ ಭಟ್ಟ ಅವರ ಕುಂಡಲಿಯನ್ನು ಮೂರು ಪ್ರಮುಖ ಜ್ಯೋತಿಷಿಗಳ ಮೂಲಕ ಪರಿಶೀಲಿಸಿ ಒಪ್ಪಿಗೆ ಪಡೆದು ಈ ಆಯ್ಕೆ ಮಾಡಲಾಗಿದೆ. ನಾಗರಾಜ ಅವರು ಕೃಷಿಕ ಗಣಪತಿ ಭಟ್ಟ ಹಾಗೂ ಭುವನೇಶ್ವರಿ ದಂಪತಿಯ ಮೊದಲ ಪುತ್ರ’ ಎಂದು ಮಠದ ಆಡಳಿತ ಮಂಡಳಿ ಅಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ ತಿಳಿಸಿದ್ದಾರೆ.

ಮರ ಕಡಿದ ಪ್ರಕರಣ: ಉಪ ಅರಣ್ಯ ಸಂರಕ್ಷಣಾಧಿಕಾರಿ ಅಮಾನತು

ಹಾಸನ: ಬೇಲೂರು ತಾಲ್ಲೂಕಿನ ನಂದಗೋಡನಹಳ್ಳಿ ಗ್ರಾಮದ ಸರ್ವೆ ನಂಬರ್ 16ರಲ್ಲಿ ಅಕ್ರಮವಾಗಿ 126 ಮರಗಳನ್ನು ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಿ. ಮೋಹನ್‌ಕುಮಾರ್ ಅವರನ್ನು ಅಮಾನತು ಮಾಡಲಾಗಿದೆ.

ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಿ.ಮೋಹನ್‌ಕುಮಾರ್ ಅವರ ಕರ್ತವ್ಯ ಲೋಪ ಮೇಲ್ನೋಟಕ್ಕೆ ಸಾಬೀತಾಗಿದ್ದು, ಅವರನ್ನು ತಕ್ಷಣದಿಂದಲೇ ಅಮಾನತುಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ.

‘ಅನುಮತಿ ಇಲ್ಲದೇ ಮರ ಕಡಿಯುವುದು ಅಪರಾಧವಾಗಿದೆ. ಹಾಗಿದ್ದರೂ ಸರ್ಕಾರಿ ಜಮೀನಿನಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಮರಗಳನ್ನು ಕಡಿಯಲಾಗಿದೆ. ಅದು ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿ ಗಮನಕ್ಕೆ ಬಾರದೇ ಇರುವುದು ಕರ್ತವ್ಯ ಲೋಪಕ್ಕೆ ಸಾಕ್ಷ್ಯವಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಉಪ ವಿಭಾಗದ ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭುಗೌಡ ಬಿರಾದಾರ, ಬೇಲೂರು ವಲಯ ಅರಣ್ಯಾಧಿಕಾರಿ ವಿನಯ್‌ಕುಮಾರ್, ಅದೇ ವಲಯದ ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ ಗುರುರಾಜ್ ಡಿ. ಹಾಗೂ ಅರಣ್ಯ ಗಸ್ತು ಪಾಲಕ ರಘುಕುಮಾರ್ ಎಚ್.ಬಿ. ಅವರನ್ನು ಗುರುವಾರ ಅಮಾನತು ಮಾಡಲಾಗಿತ್ತು. ಐಎಫ್‌ಎಸ್ ಅಧಿಕಾರಿ ಡಿ.ಮೋಹನ್‌ಕುಮಾರ್ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿತ್ತು.

ಸನ್ಮಾನ

ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ರಾಷ್ಟ್ರ ಕವಿ ಕುವೆಂಪು ಅವರ 119ನೇ ಜನ್ಮದಿನೋತ್ಸವದ ಅಂಗವಾಗಿ ಶುಕ್ರವಾರ ನಡೆದ ವಿಶ್ವಮಾನವ ದಿನಾಚರಣೆಯಲ್ಲಿ ಬಂಗಾಳಿ ಭಾಷೆಯ ಹೆಸರಾಂತ ಸಾಹಿತಿ ಶಿರ್ಷೇಂಧು ಮುಖ್ಯೋಪಾಧ್ಯಾಯ ಅವರಿಗೆ 2023ನೇ ಸಾಲಿನ ‘ಕುವೆಂಪು ರಾಷ್ಟ್ರೀಯ ಪುರಸ್ಕಾರ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 5 ಲಕ್ಷ ನಗದು ಒಳಗೊಂಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಶಾಸಕ ಆರಗ ಜ್ಞಾನೇಂದ್ರ, ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್.ಶಂಕರ್, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಭಾಗವಹಿಸಿದ್ದರು

ವಿದ್ಯಾರ್ಥಿಗೆ ಮುತ್ತು: ಶಿಕ್ಷಕಿ ಅಮಾನತು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಪ್ರವಾಸದ ವೇಳೆ ವಿದ್ಯಾರ್ಥಿ ಜೊತೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ಸರ್ಕಾರಿ ಪ್ರೌಢಶಾಲೆಯ ಪ್ರಭಾರ ಮುಖ್ಯಶಿಕ್ಷಕಿಯನ್ನು ಕೆಲಸದಿಂದ ಅಮಾನತುಗೊಳಿಸಲಾಗಿದೆ.

‘ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ’ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನೇಯಪ್ಪ ಅಮಾನತು ಆದೇಶದಲ್ಲಿ ತಿಳಿಸಿದ್ದಾರೆ.

ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಉಮಾದೇವಿ ಶಾಲೆಗೆ ಭೇಟಿ ನೀಡಿ ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಮಾಹಿತಿ ಪಡೆದು ಉಪನಿರ್ದೇಶಕ ರಿಗೆ ವರದಿ ಸಲ್ಲಿಸಿದ್ದರು.

‘ಪ್ರವಾಸದ ಸಮಯದಲ್ಲಿ ತೋಟದಲ್ಲಿ ಮನರಂಜನೆಗಾಗಿ ಮಕ್ಕಳಿಂದ ಹಾಡು ಹೇಳಿಸುವಾಗ ವಿದ್ಯಾರ್ಥಿಗಳ ಕೆನ್ನೆಗೆ ಮುತ್ತು ನೀಡಲಾಗಿತ್ತು. ಅದರ ಫೋಟೊ ತೆಗೆಯಲಾಗಿದೆ. ಮಕ್ಕಳೊಂದಿಗೆ ಕೆಟ್ಟ ಉದ್ದೇಶದಿಂದ ನಡೆದುಕೊಂಡಿಲ್ಲ’ ಎಂದು ಮುಖ್ಯಶಿಕ್ಷಕಿ ಸಮಜಾಯಿಷಿ ನೀಡಿದ್ದಾರೆ.

ಕುತ್ತು ತಂದ ಮುತ್ತು

ಶಾಲೆಯಿಂದ ಈಚೆಗೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ವೇಳೆ ಹತ್ತನೇ ತರಗತಿ ವಿದ್ಯಾರ್ಥಿಗೆ ಮುಖ್ಯಶಿಕ್ಷಕಿ ಮುತ್ತಿಡುತ್ತಿರುವುದು, ಕೈಯಲ್ಲಿ ಹೂ ಹಿಡಿದು ವಿದ್ಯಾರ್ಥಿಯನ್ನು ಬರ ಸೆಳೆಯುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದ ಪೋಷಕರು ಮತ್ತು ಶಾಲಾಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಮುಖ್ಯ ಶಿಕ್ಷಕಿಯನ್ನು ಕೂಡಲೇ ಬೇರೆ ಕಡೆ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದ್ದರು.

ಅತೃಪ್ತರಿಗೆ ‘ಸಂಪುಟ’ದ ಗರಿ

ಒಂದನೇ ಪುಟದಿಂದ...

ರಾಜ್ಯ ಪರಿವರ್ತನಾ ಸಂಸ್ಥೆ (ಯೋಜನಾ ಮಂಡಳಿ) ಸೇರಿದಂತೆ ವಿವಿಧ ಹುದ್ದೆಗಳ ಪ್ರಸ್ತಾವವನ್ನು ರಾಯರಡ್ಡಿ ಮತ್ತು ಪಾಟೀಲರ ಮುಂದಿಡಲಾಗಿತ್ತು. ಆದರೆ, ಯಾವುದೇ ಸಚಿವರ ಅಧಿಕಾರ ವ್ಯಾಪ್ತಿಯ ಅಧೀನದಲ್ಲಿರುವ ಹುದ್ದೆಗಳನ್ನು ಒಪ್ಪಿಕೊಳ್ಳಲು ಇಬ್ಬರೂ ನಿರಾಕರಿಸಿದ್ದರು. ತಮ್ಮ ಹಿರಿತನವನ್ನು ಪರಿಗಣಿಸಿ ಮುಖ್ಯಮಂತ್ರಿಯವರ ಅಧಿಕಾರ ವ್ಯಾಪ್ತಿಯಲ್ಲಿರುವ ಹುದ್ದೆಗಳನ್ನೇ ನೀಡುವಂತೆ ಪಟ್ಟು ಹಿಡಿದಿದ್ದರು.

ಸಲಹೆಗಾರರ ಹೆಚ್ಚಳ: ಇಬ್ಬರು ಸಲಹೆಗಾರರನ್ನು ನೇಮಿಸಿ ಶುಕ್ರವಾರ ಆದೇಶ ಹೊರಡಿಸುವುದರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಲಹೆಗಾರರ ಪಟ್ಟಿ ಮತ್ತಷ್ಟು ದೊಡ್ಡದಾಗಿದೆ. ಎಲ್ಲರಿಗೂ ಸಚಿವ ಸಂಪುಟ ದರ್ಜೆಯ ಸ್ಥಾನ ಮತ್ತು ಸೌಲಭ್ಯ ನೀಡಲಾಗಿದೆ.

3ನೇ ಆಯೋಗಕ್ಕೆ ದೇಶಪಾಂಡೆ ಸಾರಥ್ಯ

ರಾಜ್ಯದ ಮೂರನೇ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ನೇಮಿಸಲಾಗಿದೆ.

ಹಾರನಹಳ್ಳಿ ರಾಮಸ್ವಾಮಿ ಅವರ ಅಧ್ಯಕ್ಷತೆಯಲ್ಲಿ 2000ನೇ ಇಸವಿಯ ಏಪ್ರಿಲ್ 17ರಂದು ರಾಜ್ಯದ ಮೊದಲನೇ ಆಡಳಿತ ಸುಧಾರಣಾ ಆಯೋಗವನ್ನು ನೇಮಿಸಲಾಗಿತ್ತು. 2001ರಲ್ಲಿ ಆಯೋಗವು ಅಂತಿಮ ವರದಿ ಸಲ್ಲಿಸಿತ್ತು.

ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯಲ್ಲಿ ರಾಜ್ಯದ ಎರಡನೇ ಆಡಳಿತ ಸುಧಾರಣಾ ಆಯೋಗ ನೇಮಿಸಿ 2021ರ ಜನವರಿ 7ರಂದು ಆದೇಶ ಹೊರಡಿಸಲಾಗಿತ್ತು. ಈ ಆಯೋಗವು ಇದುವರೆಗೆ ಹಲವು ವರದಿಗಳನ್ನು ಸಲ್ಲಿಸಿದೆ.

ಮೂವರು ಡಿಸಿಎಂ: ಮತ್ತೆ ಮುನ್ನೆಲೆಗೆ

ಒಂದನೇ ಪುಟದಿಂದ...

‘ಸತೀಶ ಅವರ ಅಭಿಪ್ರಾಯವನ್ನು ಪರಿಗಣಿಸುವುದು ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಅವರ ದೃಷ್ಟಿಯಲ್ಲಿ ಆಯಾ ಸಮುದಾಯಕ್ಕೆ ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ ಉತ್ತೇಜನ ನೀಡಿದ ಹಾಗೆ ಆಗುತ್ತದೆ. ಇದರಿಂದ ಆ ಸಮುದಾಯದ ಜನ ಕಾಂಗ್ರೆಸ್‌ಗೆ ಮತ ಹಾಕುತ್ತಾರೆ ಎನ್ನುವ ಅಭಿಪ್ರಾಯ ಸರಿ ಇದೆ’ ಎಂದರು.

ಮೂವರು ಡಿಸಿಎಂ ಸೃಷ್ಟಿ ಕುರಿತು ಪ್ರತಿಕ್ರಿಯಿಸಿದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ‘ಈ ಬಗ್ಗೆ ಪಕ್ಷದ ಚೌಕಟ್ಟಿನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕುಳಿತು ನಾಯಕರ ಮುಂದೆ ನಮ್ಮ ಅಭಿಪ್ರಾಯ ಹೇಳುತ್ತೇವೆ. ಸಾರ್ವಜನಿಕವಾಗಿ ಮಾತನಾಡುವುದು ಅಗತ್ಯವಿಲ್ಲ’ ಎಂದು ಅವರು ಹೇಳಿದರು.

‘ವಂಶವೃಕ್ಷ’ ಅನುವಾದ: ₹5 ಲಕ್ಷ ಪರಿಹಾರ

ಕಾಪಿರೈಟ್ ಉಲ್ಲಂಘನೆ ಪ್ರಕರಣ: ಮೈಸೂರಿನ ನ್ಯಾಯಾಲಯದ ಆದೇಶ

ಪ್ರಜಾವಾಣಿ ವಾರ್ತೆ

ಮೈಸೂರು: ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ‘ವಂಶವೃಕ್ಷ’ ಕೃತಿಯನ್ನು ಅನಧಿಕೃತವಾಗಿ ತೆಲುಗು ಭಾಷೆಗೆ ಅನುವಾದ ಮಾಡಿ ಪ್ರಕಟಿಸಿ ಕಾಪಿರೈಟ್ ಉಲ್ಲಂಘಿಸಿದ್ದ ಹೈದರಾಬಾದ್‌ನ ‘ಪ್ರಿಯದರ್ಶಿನಿ ಪ್ರಚುರಣಾಲು ಪ್ರಕಾಶನ’ದ ವತ್ಸಲಾ ಅವರು ₹5.05 ಲಕ್ಷ ನಷ್ಟ ಪರಿಹಾರ ನೀಡುವಂತೆ ನಿರ್ದೇಶಿಸಿ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಡಿ.21ರಂದು ತೀರ್ಪು ನೀಡಿದೆ.

ಭೈರಪ್ಪ ಅವರು ‘ವಂಶವೃಕ್ಷ’ವನ್ನು ತೆಲುಗು ಭಾಷೆಗೆ ಅನುವಾದಿಸುವ ಹಕ್ಕನ್ನು ಸನಗರಂ ನಾಗಭೂಷಣಂ ಎಂಬವರಿಗೆ ನೀಡಿದ್ದರು. ಅವರು ‘ವಂಶವೃಕ್ಷಂ’ ಎಂಬ ಹೆಸರಿನಲ್ಲಿ ತೆಲುಗಿಗೆ ಅನುವಾದಿಸಿದ್ದರು. ಕೆಲವು ವರ್ಷಗಳ ಹಿಂದೆ ನಿಧನರಾದರು. ಭೈರಪ್ಪ ಅವರು ತೆಲುಗಿಗೆ ಅನುವಾದಿಸಲು ನಾಗಭೂಷಣಂ ಬಿಟ್ಟು ಬೇರಾರಿಗೂ ಅನುಮತಿ ನೀಡಿರಲಿಲ್ಲ.

ಪ್ರಿಯದರ್ಶಿನಿ ಪ್ರಚುರಣಾಲು ಪ್ರಕಾಶನದ ಸಂಪಾದಕಿ ವತ್ಸಲಾ ಅವರು ‘ವಂಶವೃಕ್ಷಂ’ ಅನುವಾದಿತ ಕೃತಿಯನ್ನು ಹೊಸದಾಗಿ ಪ್ರಕಟಿಸಿದ್ದಾರೆಂಬ ಮಾಹಿತಿಯು ಭೈರಪ್ಪ ಅವರಿಗೆ 2021ರ ನವೆಂಬರ್‌ನಲ್ಲಿ ತಿಳಿಯಿತು. ಆ ಕೃತಿ ಅವಲೋಕಿಸಿದಾಗ ‘ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ’ ಎಂಬ ಘೋಷಣೆಯೂ ಇರುವುದು ಗಮನಕ್ಕೆ ಬಂದಿತ್ತು. ತೆಲುಗಿಗೆ ಅನುವಾದಿಸಿ ಮರುಮುದ್ರಿಸುವ ಹಕ್ಕನ್ನು ವತ್ಸಲಾ ಅವರಿಗೆ ಭೈರಪ್ಪ ಅವರು ನೀಡಿರಲಿಲ್ಲ. ಈ ಮೂಲಕ, ವತ್ಸಲಾ ಕಾಪಿರೈಟ್ ಕಾಯ್ದೆ ಉಲ್ಲಂಘಿಸಿದ್ದರು. ಸಾವಿರ ಪ್ರತಿಯನ್ನು ಅನಧಿಕೃತವಾಗಿ ಮುದ್ರಿಸಿ, ಆ ಪುಸ್ತಕಕ್ಕೆ ₹360 ದರ ನಿಗದಿಪಡಿಸಿದ್ದರು.

ಕಾಪಿರೈಟ್ ಉಲ್ಲಂಘನೆ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ಪಿ.ಜೆ.ರಾಘವೇಂದ್ರ ಅವರು ಮೈಸೂರಿನಲ್ಲಿ ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಅವರ ಸಾಕ್ಷ್ಯ ವಿಚಾರಣೆಯನ್ನು ಡಿ.6ರಂದು ನಡೆಸಿದ್ದರು. ವಕೀಲ ಮಂಜುನಾಥ್ ಹಾಗೂ ಕೋರ್ಟ್ ಸಿಬ್ಬಂದಿ ಪುರುಷೋತ್ತಮ್ ಪಾಲ್ಗೊಂಡಿದ್ದರು

ಈ ವಿಚಾರ ತಿಳಿದ ಭೈರಪ್ಪ 2021ರ ನ.15ರಂದು ತಮ್ಮ ವಕೀಲರ ಮೂಲಕ ನೋಟಿಸ್ ನೀಡಿ, ಅನಧಿಕೃತವಾಗಿ ಪ್ರಕಟಿಸಿದ ‘ವಂಶವೃಕ್ಷಂ’ ಕಾದಂಬರಿಯ ಪ್ರತಿಗಳನ್ನು ಮಾರದಂತೆ ಹಾಗೂ ಮುದ್ರಿತ ಪ್ರತಿಗಳನ್ನು ತಮಗೆ ಒಪ್ಪಿಸುವಂತೆ ವತ್ಸಲಾ ಅವರಿಗೆ ಸೂಚಿಸಿದ್ದರು. ಕಾನೂನುಬಾಹಿರ ಕೃತ್ಯ ಎಸಗಿದ್ದಕ್ಕಾಗಿ ₹5 ಲಕ್ಷ ನೀಡುವಂತೆಯೂ ತಿಳಿಸಿದ್ದರು. ಇದಕ್ಕೆ ವತ್ಸಲಾ ಸ್ಪಂದಿಸಿರಲಿಲ್ಲ. ಆದ್ದರಿಂದ ₹5.05 ಲಕ್ಷ ನಷ್ಟ ಪರಿಹಾರ ಕೊಡಿಸುವಂತೆ ಕೋರಿ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ಪಿ.ಜೆ.ರಾಘವೇಂದ್ರ ಅವರು ಭೈರಪ್ಪ ಮನೆಗೆ ಡಿ.6ರಂದು ತೆರಳಿ ಸಾಕ್ಷ್ಯ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ವರದಿ ನೀಡಿದ್ದರು.

ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಪ್ರಭಾವತಿ ಎಂ. ಹಿರೇಮಠ್ ಅವರು, ತೀರ್ಪು ನೀಡಿದ್ದಾರೆ.

ಭೈರಪ್ಪ ಪರವಾಗಿ ವಕೀಲ ಓ.ಶ್ಯಾಮ್ ಭಟ್ ವಕಾಲತ್ತು ವಹಿಸಿದ್ದರು.

ಅಲ್ಪಸಂಖ್ಯಾತರ ಕಾಲೊನಿಗೆ ₹1,000 ಕೋಟಿ ಅನುದಾನ

ಒಂದನೇ ಪುಟದಿಂದ...

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘2013ರಲ್ಲಿ ಫಲಾನುಭವಿಗಳ ಆಯ್ಕೆಯಾಗಿದೆ. ಆದರೆ, ಫಲಾನುಭವಿಗಳ ವಂತಿಗೆ ಪಾವತಿಯಾಗದ ಕಾರಣದಿಂದ ಈ ಮನೆಗಳ ನಿರ್ಮಾಣ ಪೂರ್ಣಗೊಂಡಿಲ್ಲ. ಕೊಳೆಗೇರಿ ಅಭಿವೃದ್ಧಿ ಮಂಡಳಿ ವಸತಿ ಯೋಜನೆ ಫಲಾನುಭವಿಗಳಿಗೆ ನೆರವು ನೀಡಿದಂತೆ ಪ್ರಧಾನಮಂತ್ರಿ ಆವಾಸ್ ಯೋಜನೆ ಫಲಾನುಭವಿಗಳಿಗೆ ನೆರವು ನೀಡಬೇಕೆಂಬ ಬೇಡಿಕೆಯನ್ನು ಮುಖ್ಯಮಂತ್ರಿಯವರು ಪುರಸ್ಕರಿಸಿದ್ದಾರೆ’ ಎಂದರು.

ಈ ಯೋಜನೆಯಡಿ ಒಟ್ಟು ₹7.5 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಲಾಗುತ್ತದೆ. ₹3.5 ಲಕ್ಷ ಸಹಾಯಧನ ನೀಡಲಾಗುತ್ತದೆ. ₹4 ಲಕ್ಷವನ್ನು ಫಲಾನುಭವಿ ಭರಿಸಬೇಕಿತ್ತು. ₹1 ಲಕ್ಷವನ್ನು ಮಾತ್ರ ಫಲಾನುಭವಿಗಳು ಭರಿಸಲಿದ್ದು, ₹3 ಲಕ್ಷವನ್ನು ಸರ್ಕಾರವೇ ಭರಿಸಲಿದೆ. ₹1,879 ಕೋಟಿ ಫಲಾನುಭವಿಗಳ ವಂತಿಗೆ ಮತ್ತು ₹289 ಕೋಟಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರವೇ ಅನುದಾನ ಒದಗಿಸಲಿದೆ ಎಂದು ಹೇಳಿದರು.

ಪ್ರಸಕ್ತ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಆರಂಭಿಸಿರುವ 3 ಲಕ್ಷ ಮನೆಗಳಲ್ಲಿ 1.31 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ಬಾಕಿ ಉಳಿದಿರುವ 1.69 ಲಕ್ಷ ಮನೆಗಳ ನಿರ್ಮಾಣವನ್ನು 2024ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಕೊಳೆಗೇರಿ ಅಭಿವೃದ್ಧಿ ಮಂಡಳಿ ವಸತಿ ಯೋಜನೆಯಡಿ ಈ ಅವಧಿಯಲ್ಲಿ 25 ಸಾವಿರ ಮನೆಗಳ ನಿರ್ಮಾಣ ಪೂರ್ಣಗೊಳಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್, ಹಣಕಾಸು ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್, ವಸತಿ ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್ ಸಭೆಯಲ್ಲಿದ್ದರು.

‘ಕನ್ನಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ’

ಪ್ರಜಾವಾಣಿ ವಾರ್ತೆ

ತುಮಕೂರು: ಬ್ಯಾಂಕ್, ರೈಲ್ವೆ, ಎಸ್‌ಎಸ್‌ಸಿ ಸೇರಿದಂತೆ ಕೇಂದ್ರ ಸರ್ಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಎಚ್.ಎಸ್.ಶಿವಪ್ರಕಾಶ್ ಅವರು ಒತ್ತಾಯಿಸಿದ್ದಾರೆ.

ಸಮ್ಮೇಳನದಲ್ಲಿ ಶುಕ್ರವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡದಲ್ಲೇ ಪರೀಕ್ಷೆ ನಡೆದರೆ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ದೊರೆಯುತ್ತವೆ. ಹಲವರಲ್ಲಿ ಜ್ಞಾನ ಪಡೆಯಲು ಇಂಗ್ಲಿಷ್ ಒಂದೇ ಮಾರ್ಗ ಎಂಬ ಭಾವನೆ ಇದೆ. ಇದು ದೂರವಾಗಬೇಕು ಎಂದರು.

ಬೆಳಗಾವಿ ಜಿಲ್ಲಾ ಪಂಚಾಯ್ತಿ ಕಚೇರಿ ಆವರಣದಲ್ಲಿ ಗುತ್ತಿಗೆದಾರ ಅಶೋಕ ಚೌಗಲಾ ಅವರು ತಮ್ಮ ತಾಯಿ ಮತ್ತು ಪತ್ನಿಯೊಂದಿಗೆ ಶುಕ್ರವಾರ ಪ್ರತಿಭಟನೆ ನಡೆಸಿದರು
–ಪ್ರಜಾವಾಣಿ ಚಿತ್ರ

ತಾಯಿ, ಪತ್ನಿ ಜತೆ ಗುತ್ತಿಗೆದಾರ ಧರಣಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಹುಕ್ಕೇರಿ ತಾಲ್ಲೂಕಿನ ಕರಗುಪ್ಪಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯ ₹19 ಲಕ್ಷ ಬಿಲ್ ಬಾಕಿ ಉಳಿದಿದೆ. ಅದನ್ನು ಪಾವತಿಸುತ್ತಿಲ್ಲ’ ಎಂದು ಆರೋಪಿಸಿ ಗುತ್ತಿಗೆದಾರ ಅಶೋಕ ಚೌಗಲಾ ಅವರು ತಾಯಿ ಮತ್ತು ಪತ್ನಿ ಜೊತೆ ಇಲ್ಲಿನ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ವಿಷದ ಬಾಟಲಿಯೊಂದಿಗೆ ಬಂದ ಅವರು, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರು ವಿಷದ ಬಾಟಲಿ ವಶಕ್ಕೆ ಪಡೆದರು.

‘ನಾನು ಕರಗುಪ್ಪಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ₹1.5 ಕೋಟಿ ವೆಚ್ಚದ ಕಾಮಗಾರಿ ಕೈಗೊಂಡಿದ್ದೇನೆ. ಕೆಲಸ ಮುಗಿಸಿ ಐದಾರು ವರ್ಷಗಳಾದರೂ, ₹19 ಲಕ್ಷ ಬಾಕಿ ಬಿಲ್ ಪಾವತಿಸುತ್ತಿಲ್ಲ. ಕೆಡಿಪಿ ಸಭೆಯಲ್ಲಿ ನಮ್ಮ ಅಹವಾಲು ಆಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸೂಚಿಸಿದರೂ ಪಿಡಿಒ ಜಯಪ್ರಕಾಶ ಹಣ ಬಿಡುಗಡೆ ಮಾಡುತ್ತಿಲ್ಲ’ ಎಂದು ಅಶೋಕ ತಿಳಿಸಿದರು.

ಸ್ಥಳಕ್ಕೆ ಬಂದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರ್ಷಲ್ ಭೊಯರ್, ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆ ಪರಿಶೀಲಿಸಿದರು. ನ್ಯಾಯ ಒದಗಿಸುವುದಾಗಿ ಭರವಸೆ ನೀಡಿದರು.

ಸ್ಥಳದಲ್ಲೇ ಮೊಕ್ಕಾಂ ಹೂಡಿದ ವಿಧಿ ವಿಜ್ಞಾನ ಪ್ರಯೋಗಾಲಯದ ತಂಡ • ಮಾಹಿತಿ ಸಂಗ್ರಹ

ಪಾಳು ಮನೆಯಲ್ಲಿ ಐವರ ಅಸ್ಥಿಪಂಜರ ಪತ್ತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಕಾರಾಗೃಹ ರಸ್ತೆಯ ಪಾಳು ಮನೆಯೊಂದರಲ್ಲಿ ಐವರು ವ್ಯಕ್ತಿಗಳು ಮತ್ತು ಒಂದು ನಾಯಿಯ ಅಸ್ಥಿಪಂಜರಗಳು ಗುರುವಾರ ಸಂಜೆಯ ವೇಳೆಗೆ ಪತ್ತೆಯಾಗಿದೆ.

ಮನೆಯಲ್ಲಿರುವ ಎಲ್ಲ ಐವರು 2019ರಲ್ಲಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದ್ದು, ಗುರುವಾರ ರಾತ್ರಿಯಿಂದಲೇ ಪೊಲೀಸರು, ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಸ್ಥಳದಲ್ಲೇ ಮೊಕ್ಕಾಂ ಹೂಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಚಳ್ಳಕೆರೆ ಗೇಟ್ ಬಳಿಯ ಕಾರಾಗೃಹ ರಸ್ತೆಗೆ ಹೊಂದಿಕೊಂಡಿರುವ ಮನೆ ಎದುರು ಜಗನ್ನಾಥ ರೆಡ್ಡಿ ಎಂಬ ನಾಮಫಲಕ ಇದೆ. ಈ ಮನೆ ಹಲವು ವರ್ಷಗಳಿಂದ ಬಾಗಿಲು ಮುಚ್ಚಿತ್ತು. ಮನೆಯ ಸುತ್ತ ಗಿಡಗಂಟಿಗಳು ಬೆಳೆದಿವೆ. 2019ರಲ್ಲಿ ಈ ಮನೆಯಿಂದ ದುರ್ವಾಸನೆ ಬರುತ್ತಿದೆ ಎಂದು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದಾಗ ನಾಯಿ ಸತ್ತಿರುವ ವಾಸನೆ ಎಂದು ನಿರ್ಲಕ್ಷಿಸಲಾಗಿತ್ತು. ಆದರೆ, ಗುರುವಾರ ಸ್ಥಳೀಯರೊಬ್ಬರು ನೀಡಿದ ಖಚಿತ ಮಾಹಿತಿ ಮೇರೆಗೆ ಮನೆಗೆ ಬಂದ ಪೊಲೀಸರು ಒಳಗಡೆ ಅಸ್ಥಿಪಂಜರಗಳನ್ನು ಕಂಡಿದ್ದಾರೆ.

ಗುರುವಾರ ತಡರಾತ್ರಿವರೆಗೂ ಮನೆಯಲ್ಲಿ ಪರಿಶೀಲನೆ ನಡೆಸಿದ ತಜ್ಞರ ತಂಡಕ್ಕೆ ಮನೆಯಲ್ಲಿ ನಾಯಿ ಜತೆ ಐವರ ಅಸ್ಥಿ ಪಂಜರಗಳಿರುವುದು ಖಚಿತವಾಗಿದೆ. ಲೋಕೋಪಯೋಗಿ ಇಲಾಖೆಯ ನಿವೃತ್ತ ಸಿವಿಲ್ ಎಂಜಿನಿಯರ್, ದೊಡ್ಡಸಿದ್ದವ್ವನಹಳ್ಳಿ ಮೂಲದ ಜಗನ್ನಾಥ ರೆಡ್ಡಿ (70), ಪತ್ನಿ ಪ್ರೇಮಾವತಿ (60), ಮಗಳು ಎನ್.ಜೆ. ತ್ರಿವೇಣಿ (42), ಪುತ್ರರಾದ ಕೃಷ್ಣ ರೆಡ್ಡಿ (40) ಹಾಗೂ ನರೇಂದ್ರ ರೆಡ್ಡಿ (38) ವಾಸವಾಗಿದ್ದರು ಎಂದು ತಿಳಿದು ಬಂದಿದೆ. ಪತ್ತೆಯಾಗಿರುವ ಅಸ್ಥಿ ಪಂಜರಗಳು ಇವರದ್ದೇ ಇರಬಹುದು ಎನ್ನಲಾಗಿದೆ.

ಅಸ್ಥಿಪಂಜರಗಳನ್ನು ಬಸವೇಶ್ವರ ವೈದ್ಯಕೀಯ ಸಂಶೋಧನಾ ಕೇಂದ್ರಕ್ಕೆ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ದಾವಣಗೆರೆಯಿಂದ ಬಂದಿರುವ ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳಿಸಿದ್ದಾರೆ.

‘ಕೋವಿಡ್ ಲಾಕ್‌ಡೌನ್‌ಗೆ ಕೆಲ ತಿಂಗಳ ಮುಂಚೆಯಿಂದ ಈ ಮನೆಯ ಬಾಗಿಲು ತೆರೆದಿಲ್ಲ. ನಾಯಿ ಸತ್ತಿರಬಹುದು ಎಂದು ನಾವು ಸುಮ್ಮನಾಗಿದ್ದೆವು. ಬಳಿಕ ವಾಸನೆ ಬರುವುದು ನಿಂತಿತು’ ಎಂದು ಅಕ್ಕಪಕ್ಕದ ನಿವಾಸಿಗಳು ಹೇಳಿದ್ದಾರೆ.

‘ತೀವ್ರವಾಗಿ ಕಾಡುತ್ತಿದ್ದ ಅನಾರೋಗ್ಯ, ಮಕ್ಕಳಿಗೆ ಮದುವೆ ಆಗದಿರುವುದು ಹಾಗೂ ದರೋಡೆ ಪ್ರಕರಣದಲ್ಲಿ ಪುತ್ರನೊಬ್ಬನ ಮೇಲೆ ಆರೋಪ ಕೇಳಿಬಂದದ್ದರಿಂದ ಮನನೊಂದ ಕುಟುಂಬದ ಮುಖ್ಯಸ್ಥ ಜಗನ್ನಾಥ ರೆಡ್ಡಿ ಮತ್ತು ಸದಸ್ಯರು ಏಳೆಂಟು ವರ್ಷಗಳಿಂದ ಬಂಧು– ಬಳಗ, ಸ್ನೇಹಿತರಿಂದ ದೂರವೇ ಉಳಿದಿತ್ತು. ಕೇರಳ, ತಮಿಳುನಾಡಿನ ಅನಾಥಾಶ್ರಮಕ್ಕೆ ಸೇರುತ್ತೇವೆ ಎಂದು ಮನೆಯವರು ಹಲವು ಬಾರಿ ಹೇಳಿದ್ದರು. ವರ್ಷದಿಂದ ವರ್ಷಕ್ಕೆ ಈ ಕುಟುಂಬ ಇತರರ ಸಂಪರ್ಕದಿಂದ ದೂರ ಹೋಯಿತು’ ಎಂಬ ಆಘಾತಕಾರಿ ಅಂಶವನ್ನು ಜಗನ್ನಾಥ ರೆಡ್ಡಿ ಅವರ ಸೊಸೆ ಕೊಲ್ಲಿ ಲಕ್ಷ್ಮೀ ಸುದ್ದಿಗಾರರಿಗೆ ತಿಳಿಸಿದರು.

‘ಇವರ ಇನ್ನೊಬ್ಬ ಮಗ ಮಂಜುನಾಥ ರೆಡ್ಡಿ ಕೆಲವು ವರ್ಷಗಳ ಹಿಂದೆ ಮೃತಪಟ್ಟಿದ್ದರು. ಮಕ್ಕಳಿಗೆ ಮದುವೆ ಮಾಡಲಿಲ್ಲ ಎಂಬ ನೋವು ಇವರನ್ನು ಕಾಡುತ್ತಿತ್ತು’ ಎಂದು ಪ್ರೇಮಾವತಿ ಅವರ ಅಕ್ಕ ಲಲಿತಮ್ಮ ಕಣ್ಣೀರು ಸುರಿಸಿದರು.

ಜಗನ್ನಾಥ ರೆಡ್ಡಿ ಸಂಬಂಧಿ ಪವನ್ ಕುಮಾರ್ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ‘ಇಲ್ಲಿ ಪತ್ತೆಯಾಗಿರುವ ಅಸ್ಥಿಪಂಜರಗಳು ಜಗನ್ನಾಥ ರೆಡ್ಡಿ ಕುಟುಂಬದ್ದೇ ಎಂಬ ಶಂಕೆಯಿದೆ. ಈ ನಿಗೂಢ ಸಾವಿನ ಬಗ್ಗೆ ಅನುಮಾನವಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಾಹಿತಿ ತಿಳಿಯುತ್ತಿದ್ದಂತೆಯೇ ದಾವಣಗೆರೆ ಪೂರ್ವ ವಲಯ ಡಿಐಜಿ ತ್ಯಾಗರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಡಿವೈಎಸ್‌ಪಿ ಅನಿಲ್ ಕುಮಾರ್, ಸಿಪಿಐ ನಯೀಂ ಸೇರಿದಂತೆ ಬಡಾವಣೆ ಠಾಣೆ ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಐವರು ವ್ಯಕ್ತಿಗಳ ಅಸ್ಥಿಪಂಜರ ಪತ್ತೆಯಾದ ಚಿತ್ರದುರ್ಗ ನಗರದ ಕಾರಾಗೃಹ ರಸ್ತೆಯಲ್ಲಿರುವ ಜಗನ್ನಾಥ ರೆಡ್ಡಿ ಅವರ ನಿವಾಸ

> **2019ರ ಜನವರಿಯಲ್ಲಿ ಜಗನ್ನಾಥ ರೆಡ್ಡಿ ಅವರ ಮನೆಯ ವಿದ್ಯುತ್ ಸಂಪರ್ಕ ಕಡಿತವಾಗಿದೆ. ಜನವರಿ-ಏಪ್ರಿಲ್ ನಡುವೆ ಘಟನೆ ನಡೆದಿರಬಹುದು**
> **ಧರ್ಮೇಂದ್ರ ಕುಮಾರ್ ಮೀನಾ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಯನೈಡ್ ಸೇವನೆ ಶಂಕೆ

ಮನೆಯೊಳಗೆ ಬೆಳಕು ಬಾರದಂತೆ ಕಿಟಕಿ, ಬಾಗಿಲನ್ನು ಸಂಪೂರ್ಣ ಮುಚ್ಚಿದ್ದ ಕುಟುಂಬ, ಸಯನೈಡ್ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಮನೆಯಲ್ಲಿ ಪತ್ತೆಯಾಗಿರುವ ಅಸ್ಥಿ ಪಂಜರದ ಸ್ಥಿತಿ ಗಮನಿಸಿದ ಪೊಲೀಸರಲ್ಲಿ ಸಯನೈಡ್ ಸೇವನೆ ಶಂಕೆ ಮೂಡಿದೆ.

ಅಸ್ಥಿಪಂಜರಗಳಲ್ಲಿ ಮೂರು ಮಂಚದ ಮೇಲೆ, ಒಂದು ಮಂಚದ ಕೆಳಗೆ, ಮತ್ತೊಂದು ನಡುಮನೆಯಲ್ಲಿ ಪತ್ತೆಯಾಗಿವೆ. ಮಲಗಿದವರ ಹೊದಿಕೆಯೂ ಆಚೀಚೆ ಕದಲಿಲ್ಲ. ಇದನ್ನು ಗಮನಿಸಿದರೆ ಸಯನೈಡ್ ಸೇವಿಸಿ ತಕ್ಷಣ ಪ್ರಾಣ ಕಳೆದುಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

‘ತಮ್ಮ ನರೇಂದ್ರ ರೆಡ್ಡಿ ವಿಚಾರದಲ್ಲಿ ನೊಂದಿದ್ದ ಕೃಷ್ಣ ರೆಡ್ಡಿ, 2008ರಲ್ಲೇ ಬಳ್ಳಾರಿಯಿಂದ ಸಯನೈಡ್ ಖರೀದಿಸಿ ತಂದು ಮನೆಯಲ್ಲಿಟ್ಟಿದ್ದರು. ನಮ್ಮಲ್ಲಿ ಒಬ್ಬರು ಇಲ್ಲವಾದರೂ ಮನೆಯವರೆಲ್ಲ ಜಗತ್ತಿನಿಂದ ಕಣ್ಮರೆಯಾಗುತ್ತೇವೆ’ ಎಂದು ಆಗಾಗ್ಗೆ ಹೇಳುತ್ತಿದ್ದರು ಎನ್ನುತ್ತಾರೆ ಸಂಬಂಧಿಕರು.

ಕೆಲವು ವರ್ಷಗಳಿಂದ ಪ್ರಜ್ಞಾಪೂರ್ವಕವಾಗಿ ನಾಗರಿಕ ಸಮಾಜದಿಂದ ದೂರವೇ ಉಳಿದಿದ್ದ ಕುಟುಂಬ, ಹತ್ತಿರದ ಸಂಬಂಧಿಗಳು, ಆಪ್ತ ಸ್ನೇಹಿತರು ಒಳಗೊಂಡಂತೆ ಯಾರೊಬ್ಬರ ಸಂಪರ್ಕದಲ್ಲೂ ಇರಲಿಲ್ಲ. ಜೀವನದಲ್ಲಿ ಬೇಸತ್ತಿರುವುದಾಗಿಯೂ, ಕೇರಳ ಅಥವಾ ಬೇರೆ ಯಾವುದೋ ರಾಜ್ಯಕ್ಕೆ ತೆರಳುವುದಾಗಿಯೂ ಕೆಲವರಲ್ಲಿ ಹೇಳಿಕೊಂಡಿದ್ದರು ಎನ್ನಲಾಗಿದೆ. ಈ ಕಾರಣದಿಂದಾಗಿಯೇ ಅವರ ಅನುಪಸ್ಥಿತಿ ಬಗ್ಗೆ ಯಾರೊಬ್ಬರೂ ತಲೆ ಕೆಡಿಸಿಕೊಂಡಿಲ್ಲ ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರಿಗೆ ತಪಾಸಣೆ: ಲಕ್ಷಕ್ಕೂ ಹೆಚ್ಚು ಮಂದಿಯ ರಕ್ತ ಮಾದರಿ ತಪಾಸಣೆ

ಡೆಂಗಿ: ವಾರದಲ್ಲಿ 263 ಪ್ರಕರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಡೆಂಗಿ ಪ್ರಕರಣ 16,189ಕ್ಕೆ ಏರಿಕೆ
- ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿ
- ಬಿಬಿಎಂಪಿ ವ್ಯಾಪ್ತಿಯಲ್ಲಿ 8,397 ಪ್ರಕರಣಗಳು ಖಚಿತ

ಬೆಂಗಳೂರು: ಹವಾಮಾನ ಬದಲಾವಣೆಯಿಂದಾಗಿ ರಾಜ್ಯದಲ್ಲಿ ಕಳೆದ ಒಂದು ವಾರದಲ್ಲಿ 263 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಒಟ್ಟು ಪ್ರಕರಣಗಳ ಸಂಖ್ಯೆ 16,189ಕ್ಕೆ ಏರಿಕೆಯಾಗಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಈ ವರ್ಷ ಎರಡು ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ ಒಂದು ಲಕ್ಷಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಈವರೆಗೆ ರಾಜ್ಯದ 31 ಜಿಲ್ಲೆಗಳಿಂದ 7,792 ಪ್ರಕರಣಗಳು ದೃಢಪಟ್ಟರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ 8,397 ಪ್ರಕರಣಗಳು ಖಚಿತಪಟ್ಟಿವೆ.

ಕಳೆದ ವರ್ಷ ರಾಜ್ಯದಲ್ಲಿ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಲ್ಕು ಸೇರಿ ಒಟ್ಟು ಒಂಬತ್ತು ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 58,756 ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 36,622 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ಕಲಬುರಗಿ, ಮೈಸೂರು ಹಾಗೂ ಉಡುಪಿಯಲ್ಲಿ ತಲಾ 500ಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ.

28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 65 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 33 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 1,598 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ಮೈಸೂರು (210), ವಿಜಯಪುರ (172), ಕಲಬುರಗಿ (143), ಶಿವಮೊಗ್ಗದಲ್ಲಿ (137) ಹಾಗೂ ದಾವಣಗೆರೆಯಲ್ಲಿ (113) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆಯಿದೆ.

ಕೋವಿಡ್: ಸಕ್ರಿಯ ಪ್ರಕರಣ 702ಕ್ಕೆ ಏರಿಕೆ

ರಾಜ್ಯದಲ್ಲಿ ಶುಕ್ರವಾರ ಹೊಸದಾಗಿ 173 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 702ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ ಇಬ್ಬರು ಬೆಂಗಳೂರಿನಲ್ಲಿ ಮೃತಪಟ್ಟಿರುವುದು ಖಚಿತಪಟ್ಟಿದೆ. ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆ ಕಾರಣ 59 ವರ್ಷದ ಪುರುಷ ಡಿ.15ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಡಿ. 29ರಂದು ಮೃತಪಟ್ಟಿದ್ದು, ಮಧುಮೇಹ ಸಮಸ್ಯೆ ಎದುರಿಸುತ್ತಿದ್ದರು.

69 ವರ್ಷದ ಇನ್ನೋರ್ವ ವ್ಯಕ್ತಿ ಐಎಲ್‌ಐ ಸಮಸ್ಯೆ (ಶೀತ ಜ್ವರ ಮಾದರಿ ಅನಾರೋಗ್ಯ ಸಮಸ್ಯೆ) ಕಾರಣ ಡಿ.25ರಂದು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಡಿ.27ರಂದು ಮೃತಪಟ್ಟಿದ್ದು, ಶ್ವಾಸಕೋಶ, ಹೃದಯ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದರು. ಇಬ್ಬರೂ ಕೋವಿಡ್ ತಡೆ ಲಸಿಕೆ ಪಡೆದವರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ 24 ಗಂಟೆಯಲ್ಲಿ 8,349 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಶೇ 2.07ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 649 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 12 ಮಂದಿ ತೀವ್ರ ನಿಗಾ ಘಟಕ ಹಾಗೂ 41 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 37 ಮಂದಿ ಚೇತರಿಸಿಕೊಂಡಿದ್ದಾರೆ.

21 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ 2,616 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ 82 ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 471ಕ್ಕೆ ಏರಿಕೆಯಾಗಿದೆ.

ಮನುಸ್ಮೃತಿಯ ಪುಟಗಳಿಗೆ ಬೆಂಕಿ

ಬೆಂಗಳೂರು ವಿಶ್ವವಿದ್ಯಾಲಯದ ಬಿ. ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆಯು (ಬಿ. ಬಿಡ್ಸ್) ಬಿ. ಬಸವಲಿಂಗಪ್ಪ ಅವರ ಪರಿನಿರ್ವಾಣ ದಿನ, ಡಾ.ಬಿ.ಆರ್. ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟ ದಿನದ ಸ್ಮರಣಾರ್ಥದ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ 'ಕನ್ನಡ ಸಾಹಿತ್ಯ ಮತ್ತು ಬೂಸಾ ಸಾಂಸ್ಕೃತಿಕ ದಂಗೆ' ಕಾರ್ಯಕ್ರಮದ ವೇದಿಕೆಯಲ್ಲಿ, ಸಂಶೋಧನಾ ವಿದ್ಯಾರ್ಥಿನಿಯರು ಮನುಸ್ಮೃತಿಯ ಪುಟಗಳಿಗೆ ಬೆಂಕಿ ಹಚ್ಚಿ ಸುಟ್ಟರು -ಪ್ರಜಾವಾಣಿ ಚಿತ್ರ

ವಿದ್ಯುತ್ ಬಾಕಿ ಮೊತ್ತ ₹97 ಲಕ್ಷ ಪಾವತಿಗೆ ಜೆಸ್ಕಾಂನಿಂದ ನೋಟಿಸ್

ಕನ್ನಡ ವಿ.ವಿ; ಇಡೀ ದಿನ ವಿದ್ಯುತ್ ಕಡಿತ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯ ವಿದ್ಯುತ್ ಬಾಕಿ ಮೊತ್ತ ₹97.80 ಲಕ್ಷವನ್ನು ತಕ್ಷಣ ಪಾವತಿಸುವಂತೆ ನೋಟಿಸ್ ಕೊಟ್ಟಿರುವ ಗುಲಬರ್ಗಾ ವಿದ್ಯುತ್ ಪ್ರಸರಣ ಕಂಪನಿ (ಜೆಸ್ಕಾಂ) ಶುಕ್ರವಾರ ಬೆಳಿಗ್ಗೆ ಆವರಣದಲ್ಲಿ ಮೂರೂ ಟ್ರಾನ್ಸ್‌ಫಾರ್ಮರ್‌ಗಳ ಫ್ಯೂಸ್ ಕಿತ್ತೊಯ್ದು ವಿದ್ಯುತ್ ಸಂಪರ್ಕವನ್ನು ಸಂಪೂರ್ಣ ಕಡಿತಗೊಳಿಸಿದೆ.

ಡಿಸೆಂಬರ್ 21ರಂದು ಕುಲಸಚಿವರಿಗೆ ನೋಟಿಸ್ ಕಳುಹಿಸಿದ್ದ ಕಮಲಾಪುರದ ಜೆಸ್ಕಾಂ ಸಹಾಯಕ ಎಂಜಿನಿಯರ್, '₹97,80,178 ಅನ್ನು ಕೂಡಲೇ ಪಾವತಿಸಬೇಕು. ತಪ್ಪಿದಲ್ಲಿ ತಕ್ಷಣದಿಂದ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು' ಎಂದಿದ್ದರು. ಇದು ಕುಲಸಚಿವರಿಗೆ ಗುರುವಾರ ತಲುಪಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ

'ಈ ಹಿಂದೆಯೂ ಹಲವು ಬಾರಿ ನೋಟಿಸ್ ನೀಡಿದ್ದರೂ ಬಿಲ್ ಕಟ್ಟಿಲ್ಲ. ಅದಕ್ಕೆ ಎಚ್ಚರಿಕೆ ಕೊಡಲು ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದೇವೆ. ನಾವೂ ಕಷ್ಟದಲ್ಲಿದ್ದೇವೆ. ಫೆಬ್ರವರಿಯಲ್ಲಿ ಬಿಲ್ ಪಾವತಿ ಮಾಡುವುದಾಗಿ ಕುಲಸಚಿವರು ಲಿಖಿತವಾಗಿ ತಿಳಿಸಿದ್ದರಿಂದ ಸಂಜೆ 6ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇವೆ' ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ದಯಾನಂದ್.ಜೆ 'ಪ್ರಜಾವಾಣಿ'ಗೆ ತಿಳಿಸಿದರು.

> **ವಿಶ್ವವಿದ್ಯಾಲಯ ಎದುರಿಸುತ್ತಿರುವ ಆರ್ಥಿಕ ಸಂಕಷ್ಟವನ್ನು ಸರ್ಕಾರದ ಗಮನಕ್ಕೆ ಹಲವು ಸಲ ತರಲಾಗಿದೆ. ಮತ್ತೆ ಆ ಪ್ರಯತ್ನ ಮುಂದುವರಿಸಲಿದ್ದೇವೆ**
> **ಪ್ರೊ.ಡಿ.ವಿ. ಪರಮಶಿವಮೂರ್ತಿ**
> ಕುಲಪತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ

'ಕಳೆದ ಫೆಬ್ರುವರಿಯಲ್ಲೂ ಇದೇ ರೀತಿ ವಿದ್ಯುತ್ ಕಡಿತ ಮಾಡಲಾಗಿತ್ತು. ಆಗ ವಿದ್ಯುತ್ ಬಿಲ್ ಬಾಕಿ ರೂಪದಲ್ಲಿ ₹1.05 ಕೋಟಿ ಇತ್ತು. ತಕ್ಷಣ ಅನುದಾನ ಒಟ್ಟುಗೂಡಿಸಿ ₹30 ಲಕ್ಷ ಪಾವತಿಸಿದ್ದರಿಂದ ವಿದ್ಯುತ್ ಸಂಪರ್ಕ ಮರುಕಲ್ಪಿಸಲಾಗಿತ್ತು' ಎಂದು ಕುಲಸಚಿವ ಪ್ರೊ.ವಿಜಯ ಪೂಣಚ್ಚ ತಂಬಂಡ ತಿಳಿಸಿದರು.

ಇಸ್ರೊ ಅಧ್ಯಕ್ಷ ಸೋಮನಾಥ್‌ಗೆ 'ಕಾಯಕಶ್ರೀ' ಪ್ರಶಸ್ತಿ

ಸೋಮನಾಥ್

ಗೋಕಾಕ (ಬೆಳಗಾವಿ ಜಿಲ್ಲೆ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ಎಸ್. ಸೋಮನಾಥ್ ಅವರನ್ನು 'ಕಾಯಕಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

'ಇಲ್ಲಿನ ಚನ್ನಬಸವೇಶ್ವರ ವಿದ್ಯಾಪೀಠದ ಆವರಣದಲ್ಲಿ 2024ರ ಮಾರ್ಚ್ 1ರಿಂದ 4ರವರೆಗೆ 19ನೇ ಶರಣ ಸಂಸ್ಕೃತಿ ಉತ್ಸವ ಜರುಗುವ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ' ಎಂದು ಅವರು ತಿಳಿಸಿದ್ದಾರೆ.

ಭಕ್ತರಿಗೆ ಸೂರು; ರಾಮನಿಗೆ ನೀಡುವ ಸೇವೆ– ಪೇಜಾವರ ಶ್ರೀ

ಪ್ರಜಾವಾಣಿ ವಾರ್ತೆ

ಮಂಗಳೂರು: 'ದೇಶ ಸೇವೆಯೇ ಶ್ರೀರಾಮನಿಗೆ ಮಾಡುವ ಸೇವೆಯಾಗಿದೆ. ಶ್ರೀರಾಮನಿಗೆ ಮನೆ (ಮಂದಿರ) ನಿರ್ಮಾಣವಾಗಿದೆ. ಅದೇ ರೀತಿ ರಾಮರಾಜ್ಯದಲ್ಲಿ ದೀನರು, ದುರ್ಬಲರಿಗೆ ಪುಟ್ಟ ಮನೆ ನಿರ್ಮಿಸಿಕೊಡುವ ಮೂಲಕ ಶ್ರೀರಾಮನ ಸೇವೆಗೆ ಮುಕ್ತ ಅವಕಾಶ ಒದಗಿಸಲಾಗಿದೆ' ಎಂದು ಅಯೋಧ್ಯೆ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಸಮಿತಿ ಸದಸ್ಯರಾಗಿರುವ ಉಡುಪಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗಾಗಲೇ ಉಡುಪಿಯಲ್ಲಿ ಈ ಕಾರ್ಯ ಆರಂಭಿಸಲಾಗಿದ್ದು, ಮೂರ್ನಾಲ್ಕು ಜನರಿಗೆ ಮನೆ ನಿರ್ಮಿಸಿಕೊಡಲಾಗಿದೆ. ಮುಂದಿನ ದಿನಗಳಲ್ಲಿ ರಾಮರಾಜ್ಯ ಸಮಿತಿ ರಚಿಸಿ, ಈ 'ರಾಮರಾಜ್ಯ' ಅಭಿಯಾನವನ್ನು ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲಿ ನಡೆಸಲು ಯೋಚಿಸಲಾಗಿದೆ. ರಾಮನಿಗೆ ಭವ್ಯ ಮಂದಿರ ನಿರ್ಮಾಣವಾದ ಮೇಲೆ ರಾಮಭಕ್ತರಿಗೆ ಸೂರು ಇಲ್ಲದೆ ಇರಬಾರದು. ಆರ್ಥಿಕ ಶಕ್ತಿ ಇದ್ದವರು, ತಮ್ಮ ಸುತ್ತಲಿನ ಬಡವರನ್ನು ಗುರುತಿಸಿ, ನೆರವಾಗಬಹುದು. ಒಬ್ಬರ ಬಳಿ ಆಗದಿದ್ದಲ್ಲಿ ಮೂರ್ನಾಲ್ಕು ಜನರು ಸೇರಿ ಒಬ್ಬರಿಗೆ ಮನೆ ನಿರ್ಮಿಸಿಯೂ ಕೊಡಬಹುದು. ಇದಕ್ಕೆ ಒಂದು ಪ್ರತ್ಯೇಕ ವೆಬ್‌ಸೈಟ್ ಮಾಡುವ ಯೋಚನೆಯೂ ಇದೆ. ಇದರಲ್ಲಿ ರಾಮರಾಜ್ಯ ಸಮಿತಿಯ ಹಸ್ತಕ್ಷೇಪ ಇರುವುದಿಲ್ಲ' ಎಂದರು.

'ಅಯೋಧ್ಯೆಯಲ್ಲಿ ರಾಮ ಮಂದಿರ ಲೋಕಾರ್ಪಣೆಗೆ ರಾಜಕೀಯ ಬೆರೆಸುವುದು ಸರಿಯಲ್ಲ. ಮಂದಿರವನ್ನು ಎರಡೂವರೆ ವರ್ಷದಲ್ಲಿ ನಿರ್ಮಿಸುವ ಬಗ್ಗೆ ಎಲ್ ಆ್ಯಂಡ್ ಟಿ ಹಾಗೂ ಟಾಟಾ ಕಂಪನಿ ಜೊತೆ ಮಾತುಕತೆ ನಡೆಸಲಾಗಿತ್ತು. ಆಗ ಅಯೋಧ್ಯೆಯ ಮಣ್ಣಿನ ಧಾರಣಾ ಸಾಮರ್ಥ್ಯದ ಪರೀಕ್ಷೆ ನಡೆದಿರಲಿಲ್ಲ. ಮರಳು ಪ್ರದೇಶವಾಗಿದ್ದ ಅಲ್ಲಿ, 50 ಅಡಿ ಆಳದಲ್ಲಿ ಬಲವಾದ ವೇದಿಕೆ ನಿರ್ಮಿಸಿ, ಅಡಿಪಾಯ ಹಾಕಲಾಗಿದೆ. ಹೀಗಾಗಿ, ಮಂದಿರ ನಿರ್ಮಾಣಕ್ಕೆ ಹೆಚ್ಚು ಸಮಯ ಬೇಕಾಯಿತು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಶೂ ವಿನ್ಯಾಸಕಾರನ ಪತ್ತೆಗೆ ಲಖನೌ ಪೊಲೀಸ್ ನೆರವು'

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಆರೋಪಿಗಳಾದ ಸಾಗರ್ ಶರ್ಮಾ ಮತ್ತು ಮನೋರಂಜನ್ ಡಿ. ಅವರ ಶೂಗಳಲ್ಲಿ 'ಸ್ಮೋಕ್ ಕ್ಯಾನ್' (ಹಳದಿ ಬಣ್ಣದ ಹೊಗೆ ಉಗುಳುವ ಕ್ಯಾನ್) ಅಡಗಿಸಿಡಲು ಅನುವಾಗುವಂತೆ ರಂಧ್ರಗಳನ್ನು ಮಾಡಿದ್ದ ಪಾದರಕ್ಷೆ ತಯಾರಕನ ಪತ್ತೆ ಮಾಡಲು ದೆಹಲಿ ಪೊಲೀಸರು ಲಖನೌ ಪೊಲೀಸರ ನೆರವು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ವ್ಯಕ್ತಿಯನ್ನು ಈ ಪ್ರಕರಣದ ಸಾಕ್ಷಿದಾರರನ್ನಾಗಿ ಮಾಡಲು ಪೊಲೀಸರು ನಿರ್ಧರಿಸಿದ್ದಾರೆಎಂದುತಿಳಿದುಬಂದಿದೆ.

'ಸೈಕಲ್‌ನಲ್ಲಿ ಲಖನೌನ ಅಲಂಬಾಘ್‌ಗೆ ಬಂದಿದ್ದ ಆರೋಪಿ ಸಾಗರ್ ಮೊದಲಿಗೆ ಸ್ಮೋಕ್ ಕ್ಯಾನ್ ಅಡಗಿಸಿಡುವ ರೀತಿಯಲ್ಲಿ ಶೂಗಳನ್ನು ವಿನ್ಯಾಸಗೊಳಿಸಲು ಯತ್ನಿಸಿದ್ದ. ಆದರೆ, ಅದು ಸಾಧ್ಯವಾಗದ ಕಾರಣ ಪಾದರಕ್ಷೆ ತಯಾರಿಸುವ ವ್ಯಕ್ತಿಗೆ ಕೋರಿಕೊಂಡಿದ್ದ. ಆತನ ಶೋಧಕ್ಕಾಗಿ ಲಖನೌಗೆ ತೆರಳಿದ್ದ ದೆಹಲಿ ಪೊಲೀಸರು, ಚಪ್ಪಲಿ ತಯಾರಿಸುವ ಹಲವು ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಈ ವೇಳೆ ರಾಮನಗರದಲ್ಲಿರುವ ಸಾಗರ ಮನೆಯಲ್ಲಿ ಶೋಧ ನಡೆಸಿದ್ದ ದೆಹಲಿ ಪೊಲೀಸರು, ಒಂದು ಜೊತೆ ಶೂಗಳು, ಶೂ ತಳಭಾಗಗಳು, ಡೈರಿ, ಭಗತ್ ಸಿಂಗ್ ಕುರಿತಾದ ಕೆಲವು ಪುಸ್ತಕಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಸಂಸತ್ತಿನ ಪ್ರವೇಶದ ವೇಳೆ ಶೂ ಪರೀಕ್ಷಿಸುವುದಿಲ್ಲ ಎಂಬುದನ್ನು ಕಂಡುಕೊಂಡು, ಶೂನಲ್ಲಿ ರಂಧ್ರ ಇರುವಂತೆ ವಿನ್ಯಾಸಗೊಳಿಸಲು ಯತ್ನಿಸಿದೆ. ಆದರೆ, ಅದು ಸಾಧ್ಯವಾಗದ ಕಾರಣ ಮನೆಯ ಹತ್ತಿರದಲ್ಲೇ ಇದ್ದ ಅಂಗಡಿಯೊಂದರಲ್ಲಿ ₹595ಕ್ಕೆ ಜೊತೆಯಂತೆ ಎರಡು ಜೊತೆ ಶೂ ಖರೀದಿಸಿ, ಅವುಗಳಲ್ಲಿ ಸ್ಮೋಕ್ ಕ್ಯಾನ್ ಅಡಗಿಸಿಡುವಂತೆ ವಿನ್ಯಾಸಗೊಳಿಸಲು ಅಲಂಬಾಗ್‌ನಲ್ಲಿರುವ ಚಪ್ಪಲಿ ಅಂಗಡಿಗೆ ಹೋಗಿದ್ದೆ' ಎಂದು ವಿಚಾರಣೆ ವೇಳೆ ಆರೋಪಿ ಸಾಗರ್ ಹೇಳಿದ್ದ.

ಭ್ರಷ್ಟಾಚಾರ ವಿಚಾರಣೆ: ತ್ವರಿತ ಅನುಮತಿಗೆ ಸಿ.ಎಂ ತಾಕೀತು

ಬೆಂಗಳೂರು: ಭ್ರಷ್ಟಾಚಾರ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಲೋಕಾಯುಕ್ತವು ಸಲ್ಲಿಸುವ ಪ್ರಸ್ತಾವಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧದ ಪ್ರಕರಣಗಳ ತನಿಖೆಗೆ ಅನುಮತಿ ಕೋರಿ ಲೋಕಾಯುಕ್ತವು ಸಲ್ಲಿಸುವ ಪ್ರಸ್ತಾವಗಳ ಕುರಿತು ಶುಕ್ರವಾರ ಪರಿಶೀಲನಾ ಸಭೆ ನಡೆಸಿದ ಅವರು, ವಿವಿಧ ಇಲಾಖಾ ಮುಖ್ಯಸ್ಥರಿಂದ ಮಾಹಿತಿ ಪಡೆದರು.

'ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡಲು ವಿಳಂಬ ಧೋರಣೆ ಅನುಸರಿಸಕೂಡದು. ಅಂತಹ ವರ್ತನೆಯನ್ನು ಸಹಿಸುವುದಿಲ್ಲ. ಬಾಕಿ ಇರುವ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸಿ, ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಸಿ.ಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹಾಗೂ ವಿವಿಧ ಇಲಾಖೆಗಳ ಮುಖ್ಯಸ್ಥರು ಸಭೆಯಲ್ಲಿದ್ದರು.

ಅತಿಥಿ ಉಪನ್ಯಾಸಕರ ಗೌರವಧನ ₹5 ಸಾವಿರ ಹೆಚ್ಚಳಕ್ಕೆ ತೀರ್ಮಾನ

ಒಂದನೇ ಪುಟದಿಂದ

ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಕಾಯಂ ಸಿಬ್ಬಂದಿ ಅತಿಥಿ ಉಪನ್ಯಾಸಕರನ್ನು ಗೌರವದಿಂದ ಕಾಣಬೇಕು. ತಾರತಮ್ಯ ಮಾಡಬಾರದು, ಅವರ ಗೌರವಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ಒಮ್ಮೆ ಕೌನ್ಸೆಲಿಂಗ್‌ನಲ್ಲಿ ಆಯ್ಕೆಯಾದವರಿಗೆ ಕೆಲಸದ ಅವಧಿ ಕಡಿಮೆ ಇದೆ ಎಂಬ ಕಾರಣ ನೀಡಿ ತೆಗೆದುಹಾಕುವಂತಿಲ್ಲ. 10 ತಿಂಗಳು ಗೌರವಧನ ನೀಡುವುದು ಕಡ್ಡಾಯ. ಪ್ರತೀ ತಿಂಗಳು ಒಂದು ವೇತನ ಸಹಿತ ರಜೆ ನೀಡಲು ಸಮ್ಮತಿಸಲಾಗಿದೆ. ಪ್ರತಿವರ್ಷ ಕೌನ್ಸೆಲಿಂಗ್‌ಗೆ ಹಾಜರಾಗುವುದು ಕಡ್ಡಾಯವಿದ್ದರೂ ಒಮ್ಮೆ ದಾಖಲೆ ಸಲ್ಲಿಸಿದವರು ಮತ್ತೆ ಸಲ್ಲಿಸುವ ಅಗತ್ಯವಿಲ್ಲ. ಅದಕ್ಕಾಗಿ ಹೊಸ ತಂತ್ರಜ್ಞಾನ ಬಳಕೆ ಮಾಡಲಾಗುತ್ತಿದೆ ಎಂದರು.

ಆರೋಗ್ಯ ವಿಮೆ: ₹5 ಲಕ್ಷದವರೆಗೆ ಉಚಿತ ಚಿಕಿತ್ಸೆ ಸಿಗುವಂತಹ ಆರೋಗ್ಯ ವಿಮೆ ಕಲ್ಪಿಸಲಾಗುತ್ತಿದೆ. ಅತಿಥಿ ಉಪನ್ಯಾಸಕರು ತಿಂಗಳಿಗೆ ₹400 ಭರಿಸಬೇಕು. ಉಳಿದ ಹಣವನ್ನು ಸರ್ಕಾರ ತುಂಬಲಿದೆ. ಅದಕ್ಕಾಗಿ ₹5 ಕೋಟಿ ವ್ಯಯಿಸಲಾಗುತ್ತಿದೆ. ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದಲ್ಲಿರುವ ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೂ ಈ ಎಲ್ಲ ಸೌಲಭ್ಯಗಳೂ ಅನ್ವಯವಾಗಲಿವೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಕರ್, ಆಯುಕ್ತ ಜಿ.ಜಗದೀಶ್ ಇದ್ದರು.

ನೇಮಕಾತಿ ವೇಳೆ ಶೇ 5 ಕೃಪಾಂಕ

ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡುವ ಕುರಿತು ಕಾನೂನು ತಜ್ಞರು, ಆರ್ಥಿಕ ಇಲಾಖೆಯ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ. ಕಾಯಂ ಮಾಡಲು ಕಾನೂನು ತೊಡಕುಗಳಿವೆ. ಹಾಗಾಗಿ, ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕ ಮಾಡಿಕೊಳ್ಳುವಾಗ 5ವರ್ಷದಿಂದ 10 ವರ್ಷ ಕೆಲಸ ಮಾಡಿದವರಿಗೆ ವರ್ಷಕ್ಕೆ ಶೇ 1ರಂತೆ ಗರಿಷ್ಠ ಶೇ 5 ಕೃಪಾಂಕ ನೀಡಲಾಗುವುದು (5 ವರ್ಷ ಸೇವೆ ಸಲ್ಲಿಸಿದ್ದರೆ 6ನೇ ವರ್ಷಕ್ಕೆ ಶೇ 1 ಕೃಪಾಂಕ ಸಿಗುತ್ತದೆ. ಹೀಗೆ ಗರಿಷ್ಠ 10 ವರ್ಷ ಸೇವೆ ಸಲ್ಲಿಸಿದರೆ ಶೇ 5 ಕೃಪಾಂಕ ಸಿಗುತ್ತದೆ. 300 ಅಂಕಗಳಿಗೆ ಪರೀಕ್ಷೆ ನಡೆಸುವುದರಿಂದ ವರ್ಷಕ್ಕೆ 3 ಅಂಕಗಳಂತೆ ಗರಿಷ್ಠ 15 ಅಂಕ ಪಡೆಯಬಹುದು). ವಯೋಮಿತಿ ಸಡಿಲಿಕೆ ಕುರಿತೂ ಶೀಘ್ರ ನಿರ್ಧಾರ ಪ್ರಕಟಿಸಲಾಗುವುದು ಎಂದು ಸುಧಾಕರ್ ಹೇಳಿದರು.

ಇದೇ ನಿಯಮ ತಾಂತ್ರಿಕ ಶಿಕ್ಷಣ ಇಲಾಖೆಯ ಎಂಜಿನಿಯರಿಂಗ್ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೂ ಅನ್ವಯವಾಗಲಿದೆ ಎಂದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಿಂದ ಖಾಲಿಯಾಗುವ ಕೆಲಸದ ಅವಧಿ ಸರಿದೂಗಿಸಲು ಹೆಚ್ಚುವರಿ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ. ಇದರಿಂದ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಭೀತಿ ಇರದು ಎಂದು ಹೇಳಿದರು.

ಮುಷ್ಕರ ಕೈಬಿಡದಿದ್ದರೆ ಪರ್ಯಾಯ ವ್ಯವಸ್ಥೆ

ಅತಿಥಿ ಉಪನ್ಯಾಸಕರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿದೆ. ನ.23ರಿಂದ ನಡೆಸುತ್ತಿರುವ ಹೋರಾಟದಿಂದ ಮಕ್ಕಳ ಪಾಠಕ್ಕೆ ತೊಂದರೆಯಾಗಿದೆ. ಹೋರಾಟ ಕೈಬಿಟ್ಟು ಕೆಲಸಕ್ಕೆ ಮರಳುವಂತೆ ಸಂಘಟನೆಗಳ ಮುಖಂಡರಿಗೆ ಮನವಿ ಮಾಡಲಾಗಿದೆ ಎಂದು ಸಚಿವ ಸುಧಾಕರ್ ಹೇಳಿದರು.

ಒಂದು ವೇಳೆ ಕಾಲೇಜುಗಳಿಗೆ ಮರಳದಿದ್ದರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಪರ್ಯಾಯ ಮಾರ್ಗ ಕಂಡುಕೊಳ್ಳಲಿದೆ. ಹಿಂದೆ 30 ಸಾವಿರ ಅಭ್ಯರ್ಥಿಗಳು ಕೌನ್ಸೆಲಿಂಗ್‌ಗೆ ಹಾಜರಾಗಿದ್ದರು. ಅಂದು ಆಯ್ಕೆಯಾಗದವರಿಗೆ ಅವಕಾಶ ನೀಡಲಾಗುವುದು ಎಂದರು.

ಸಂಕ್ಷಿಪ್ತ ಸುದ್ದಿ

ಆಸ್ತಿ ನೋಂದಣಿ: 'ಲಿಂಗತ್ವ ಅಲ್ಪಸಂಖ್ಯಾತ' ನಮೂದು

ತಿರುವನಂತಪುರ: ದಾಖಲೆಪತ್ರಗಳಲ್ಲಿ 'ಲಿಂಗತ್ವ ಅಲ್ಪಸಂಖ್ಯಾತೆ' ಎಂದೇ ನಮೂದಿಸಿ ಫೈಸಲ್ ಫೈಸು ಎಂಬುವರು ತ್ರಿಶ್ಯೂರ್‌ನ ಚಾವಕ್ಕಾಡ್‌ನಲ್ಲಿ ಜಮೀನು ನೋಂದಣಿ ಮಾಡಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತ ಎಂದು ನಮೂದಿಸಿ ಆಸ್ತಿ ನೋಂದಣಿ ಮಾಡಿರುವ ಮೊದಲ ಪ್ರಕರಣ ಇದಾಗಿದೆ ಎಂದು ಮೂಲಗಳು ತಿಳಿಸಿವೆ.

ಫೈಸಲ್ ಫೈಸು ಅವರ ಪರಿಶ್ರಮದಿಂದಾಗಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಜಮೀನು ನೋಂದಣಿ ಮಾಡುವಾಗ ಎದುರಿಸುತ್ತಿದ್ದ ಅಡೆತಡೆಗಳಿಗೆ ಕೊನೆ ಹಾಡಿದಂತಾಗಿದೆ ಎಂದೂ ಮೂಲಗಳು ಹೇಳಿವೆ.

ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಅಲಿಗಢ (ಪಿಟಿಐ): ಉತ್ತರ ಪ್ರದೇಶದ ಅಲಿಗಢದಲ್ಲಿರುವ ಹೋಟೆಲ್‌ನಲ್ಲಿ 10ನೇ ತರಗತಿ ವಿದ್ಯಾರ್ಥಿನಿ ಮೇಲೆ ನಾಲ್ವರು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಆರೋಪಿಗಳ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಪತ್ತೆಗಾಗಿ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಘಟನೆ ನಡೆದ ಹೋಟೆಲ್ ಮಾಲೀಕ ಮತ್ತು ಆತನ ಸಂಬಂಧಿಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಬಂಧಿಸಲಾಗಿದೆ. ಹೋಟೆಲ್ ಬಂದ್ ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಅಪರಿಚಿತ ವ್ಯಕ್ತಿಯೊಬ್ಬ ಆಕೆಯನ್ನು ಹೋಟೆಲ್ ಕೋಣೆಗೆ ಕರೆದೊಯ್ದು, ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಬಾಲಕಿ ಕುಟುಂಬಸ್ಥರು ದೂರು ನೀಡಿದ್ದಾರೆ.

ಜಮ್ಮು ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಗಡಿ ಸಮೀಪದ ಪರ್ಗವಾಲ್‌ನಲ್ಲಿ ಮೈಕೊರೆಯುವ ಚಳಿಯಲ್ಲಿಯೂ ಬಿಎಸ್‌ಎಫ್ ಯೋಧರು ಶುಕ್ರವಾರ ಗಸ್ತಿನಲ್ಲಿದ್ದರು –ಪಿಟಿಐ ಚಿತ್ರ

ಸೇನಾ ಕಾರ್ಯಾಚರಣೆ: ಶಸ್ತ್ರಾಸ್ತ್ರ ಪತ್ತೆ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಭದ್ರತಾ ಸಿಬ್ಬಂದಿ ಮೂರು ಪಿಸ್ತೂಲ್, 4 ಗ್ರೆನೇಡ್ ಸೇರಿ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲ ತಿಳಿಸಿವೆ.

ಕಸಬ್ಲರಿ ಪ್ರದೇಶದ ಮನೆಯೊಂದರಲ್ಲಿ ಸ್ಫೋಟಕಗಳು ಪತ್ತೆಯಾಗಿದ್ದು, ಗಡಿ ಭಾಗದಲ್ಲಿ ಶಸ್ತ್ರಾಸ್ತ್ರಗಳ ಕಳ್ಳ ಸಾಗಾಣಿಕೆ ಪತ್ತೆ ಹಚ್ಚಲು ತನಿಖೆ ನಡೆಸಲಾಗುತ್ತದೆ' ಎಂದು ತಿಳಿಸಿದ್ದಾರೆ.

ರಜೌರಿಯಲ್ಲೂ ಕಾರ್ಯಾಚರಣೆ: ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆ ಜಮ್ಮು–ಕಾಶ್ಮೀರ ರಜೌರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಶುಕ್ರವಾರ ಶೋಧ ಕಾರ್ಯಾಚರಣೆ ನಡೆಸಿವೆ.

'ಈವರೆಗೆ ಯಾವುದೇ ಅನುಮಾನಾಸ್ಪದ ವ್ಯಕ್ತಿ ಅಥವಾ ವಸ್ತುಗಳು ಕಂಡುಬಂದಿಲ್ಲ. ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಮೊಬೈಲ್ ಇಂಟರ್‌ನೆಟ್ ಪುನರ್ ಸ್ಥಾಪನೆ: 'ಸೇನಾ ವಾಹನಗಳ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ರಜೌರಿ– ಪೂಂಛ್ ಜಿಲ್ಲೆಗಳಲ್ಲಿ ವಾರದ ಹಿಂದೆ ಸ್ಥಗಿತಗೊಳಿಸಲಾಗಿದ್ದ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಪುನರ್‌ಸ್ಥಾಪಿಸಲಾಗಿದೆ' ಎಂದು ಜಮ್ಮು ವಿಭಾಗಾಧಿಕಾರಿ ರಮೇಶ್ ಕುಮಾರ್ ಹೇಳಿದ್ದಾರೆ.

ಆಸ್ತಿ ಜಪ್ತಿಗೆ ಅನುಮತಿ ಕೋರಿದ ಇ.ಡಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಶಸ್ತ್ರಾಸ್ತ್ರ ವಿತರಕ ಸಂಜಯ್ ಭಂಡಾರಿ ಅವರ ಬ್ರಿಟನ್‌ನಲ್ಲಿರುವ ಎರಡು ಆಸ್ತಿಗಳನ್ನು ಮುಟ್ಟುಗೋಲು ಹಾಕಲು ಅನುಮತಿ ಕೋರಿ ಜಾರಿ ನಿರ್ದೇಶನಾಲಯವು (ಇ.ಡಿ) ಇಲ್ಲಿನ ನ್ಯಾಯಾಲಯದ ಮೊರೆ ಹೋಗಿದೆ.

ಈ ಸ್ವತ್ತುಗಳ ಪೈಕಿ ಒಂದನ್ನು ಉದ್ಯಮಿ ರಾಬರ್ಟ್ ವಾದ್ರಾ ಅವರು ನವೀಕರಿಸಿದ್ದರು ಮತ್ತು ಅದರಲ್ಲಿ ಉಳಿದುಕೊಂಡಿದ್ದರು ಎಂದು ಆರೋಪಿಸಲಾಗಿದೆ.

ಭಂಡಾರಿ ಅವರಿಗೆ ಸೇರಿದ ಸ್ಥಿರಾಸ್ತಿಯು ಲಂಡನ್‌ನ ಬ್ರಿಯಾನ್‌ಸ್ಟನ್ ಸ್ಕ್ವೇರ್ ಮತ್ತು ಬೌರ್ಡನ್ ಸ್ಟ್ರೀಟ್‌ನಲ್ಲಿದೆ ಎಂದು ಇ.ಡಿ ಹೇಳಿದೆ.

ಕರ್ನಾಟಕ ಕೇಂದ್ರೀಯ ವಿ.ವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 2024–25ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಎಂ.ಎ, ಎಂ.ಕಾಂ, ಎಂ.ಬಿ.ಎ, ಎಂ.ಎಸ್‌ಸಿ, ಎಂ.ಸಿ.ಎ, ಎಂ.ಟೆಕ್, ಎಲ್‌.ಎಲ್‌.ಎಂ, ಬಿ.ಇಡಿ, ಎಂ.ಇಡಿ, ಎಂ.ಪಿ.ಎ, ಮಾಸ್ಟರ್ ಆಫ್ ವಿಶ್ಯುವಲ್ ಆರ್ಟ್ಸ್ ಸೇರಿದಂತೆ ಒಟ್ಟು 29 ಕೋರ್ಸ್‌ಗಳ ಪ್ರವೇಶಕ್ಕಾಗಿ ಮಾ.11ರಿಂದ ಮಾ.28ರವರೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ.

ಪದವಿ ಪೂರ್ಣಗೊಳಿಸಿದವರು ಮತ್ತು ಪದವಿಯ ಕೊನೆಯ ಸೆಮಿಸ್ಟರ್ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಇದೇ 26ರಂದು ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, 2024ರ ಜ.24ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಜ.25 ಶುಲ್ಕ ಪಾವತಿಗೆ ಕೊನೆಯ ದಿನ. ಅರ್ಜಿಯಲ್ಲಿ ತಿದ್ದುಪಡಿಯಿದ್ದರೆ ಜ.27ರಿಂದ 29ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಪರೀಕ್ಷೆಯ ಅವಧಿ 1 ಗಂಟೆ 45 ನಿಮಿಷ ಇದ್ದು, ರಾಜ್ಯದ 19 ಕೇಂದ್ರಗಳಲ್ಲಿ ನಿತ್ಯ ಮೂರು ಶಿಫ್ಟ್‌ಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಇದು ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಿದ್ದು, ಪ್ರಶ್ನೆ ಪತ್ರಿಕೆಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿರಲಿವೆ. ಫಲಿತಾಂಶವನ್ನು NTA ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಅರ್ಜಿಗಳನ್ನು https://pgcuet.samarth.ac.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 01140759000 ಸಹಾಯವಾಣಿ ಅಥವಾ NTA at cuet-pg@nta.ac.in ಸಂಪರ್ಕಿಸಬಹುದು.

ಹಫೀಜ್ ಹಸ್ತಾಂತರಿಸಲು ಭಾರತ ಒತ್ತಾಯ

ಹಫೀಜ್

ನವದೆಹಲಿ (ಪಿಟಿಐ): 2008ರಲ್ಲಿ ಮುಂಬೈ ಮೇಲೆ ನಡೆದಿದ್ದ ದಾಳಿ ಸೇರಿ ವಿವಿಧ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಭಾರತಕ್ಕೆ ಬೇಕಾಗಿರುವ, ಲಷ್ಕರ್–ಎ–ತಯಬಾ ಉಗ್ರ ಸಂಘಟನೆ ಸಂಸ್ಥಾಪಕ ಹಫೀಜ್ ಸಯೀದ್‌ನನ್ನು ಹಸ್ತಾಂತರಿಸುವಂತೆ ಪಾಕಿಸ್ತಾನಕ್ಕೆ ಭಾರತ ಹೇಳಿದೆ.

ವಿಶ್ವಸಂಸ್ಥೆ ನಿಷೇಧ ಹೇರಿರುವ ಭಯೋತ್ಪಾದಕ ಹಫೀಜ್ ಹಸ್ತಾಂತರಕ್ಕೆ ಅಗತ್ಯವಿರುವ ಹಲವು ದಾಖಲೆಗಳೊಂದಿಗೆ ಕೋರಿಕೆಯನ್ನು ಕೆಲವು ವಾರಗಳ ಹಿಂದೆ ಪಾಕಿಸ್ತಾನ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಹಫೀಜ್ ಪುತ್ರ ತಲ್ಹಾ ಸಯೀದ್ ಪಾಕಿಸ್ತಾನದ ಸಂಸತ್ ಚುನಾವಣೆಗೆ ಸ್ಪರ್ಧಿಸಿದ್ದಾರೆ ಎಂಬ ವರದಿಗಳನ್ನು ಭಾರತ ಗಮನಿಸಿದೆ. ಅದು ಆ ದೇಶದ ಆಂತರಿಕ ವಿಚಾರ. ಆ ದೇಶದಲ್ಲಿ ಭಯೋತ್ಪಾದಕ ಸಂಘಟನೆಗಳು ಮುಖ್ಯವಾಹಿನಿಯಲ್ಲಿರುವುದು ಹೊಸದೇನಲ್ಲ ಮತ್ತು ಅದು ಅಲ್ಲಿ ದೀರ್ಘಾವಧಿಯಿಂದಲೂ ರಾಷ್ಟ್ರದ ನೀತಿಯಾಗಿದೆ' ಎಂದು ಬಾಗ್ಚಿ ಹೇಳಿದರು.

'ಇಂತಹ ಬೆಳವಣಿಗೆಗಳು ಪ್ರಾದೇಶಿಕ ಭದ್ರತೆಗೆ ಗಂಭೀರ ಪರಿಣಾಮಗಳನ್ನು ಬೀರುತ್ತವೆ. ನಮ್ಮ ರಾಷ್ಟ್ರೀಯ ಭದ್ರತೆಯ ಮೇಲೆ ಪರಿಣಾಮ ಬೀರುವ ಎಲ್ಲ ಬೆಳವಣಿಗೆಗಳ ಮೇಲೆ ನಾವು ನಿಗಾ ಇಡುವುದನ್ನು ಮುಂದುವರಿಸುತ್ತೇವೆ' ಎಂದು ಅವರು ತಿಳಿಸಿದರು.

ನಿಷೇಧಿತ ಸಂಘಟನೆ ಎಲ್‌ಇಟಿಯಲ್ಲಿ ಹಫೀಜ್ ನಂತರದ ಸ್ಥಾನದಲ್ಲಿ ಆತನ ಪುತ್ರ ತಲ್ಹಾ ಸಯೀದ್ ಇದ್ದು, ಸಂಘಟನೆಯ ಚಟುವಟಿಕೆ ನಿಭಾಯಿಸುತ್ತಿದ್ದಾನೆ.

ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿಕೆ

'ಎನ್‌ಜೆಎಸಿಗೆ ಕೆಲಸ ಮಾಡಲು ಅವಕಾಶವನ್ನೇ ನೀಡಲಿಲ್ಲ'

ನವದೆಹಲಿ (ಪಿಟಿಐ): 'ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗಕ್ಕೆ (ಎನ್‌ಜೆಎಸಿ) ಕೆಲಸ ನಿರ್ವಹಿಸಲು ಅವಕಾಶವನ್ನೇ ನೀಡಲಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿದ್ದಾರೆ.

ಸಂಜಯ್ ಕಿಶನ್ ಕೌಲ್

'ಎನ್‌ಜೆಎಸಿ ಅನ್ನು ಭಿನ್ನವಾಗಿ ನಿರ್ವಹಿಸಬಹುದಿತ್ತು. ಪ್ರಯೋಗಾರ್ಥವಾಗಿ ಉಳಿಸಬಹುದಿತ್ತು. ಆದರೆ, ಕೆಲಸ ಮಾಡಲು ಅದಕ್ಕೆ ಅವಕಾಶವ ನೀಡಲಿಲ್ಲ. ಎನ್‌ಜೆಎಸಿ ಅನ್ನು ರದ್ದುಪಡಿಸಿದಾಗ, ವ್ಯವಸ್ಥೆ ಬದಲಾಗಲು ನ್ಯಾಯಮೂರ್ತಿಗಳು ಬಿಡುತ್ತಿಲ್ಲ, ಸಂಸತ್ತಿನ ಸರ್ವಾನುಮತದ ನಿರ್ಧಾರವನ್ನು ಹೀಗೆ ರದ್ದುಪಡಿಸಲಾಗಿದೆ ಎಂದು ರಾಜಕೀಯ ವಲಯದಲ್ಲಿ ಆಕ್ರೋಶ ವ್ಯಕ್ತವಾಯಿತು. ಇದು, ನಂತರ ದಿನಗಳಲ್ಲಿ ಕೊಲಿಜಿಯಂ ವ್ಯವಸ್ಥೆ ಕಾರ್ಯವೈಖರಿಯ ಮೇಲೂ ಪರಿಣಾಮವನ್ನು ಬೀರಿತು' ಎಂದು ಅಭಿಪ್ರಾಯಪಟ್ಟರು.

ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಕೌಲ್ ಅವರು, 'ಕೊಲಿಜಿಯಂ ವ್ಯವಸ್ಥೆಯಲ್ಲಿ ಸಮಸ್ಯೆ ಇದೆ ಎಂಬುದನ್ನು ಯಾರಾದರೂ ಒಪ್ಪಲೇಬೇಕು. ಕೊಲಿಜಿಯಂ ಸರಾಗವಾಗಿ ಕಾರ್ಯನಿರ್ವಹಿಸುತ್ತಿತ್ತು ಎಂದು ಹೇಳುವುದು ಅವಾಸ್ತವಿಕವಾದುದು ಎಂದರು.

ಕೇಂದ್ರದಲ್ಲಿ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ರಚಿಸಿತ್ತು. ನ್ಯಾಯಮೂರ್ತಿಗಳ ನೇಮಕಾತಿ ಹೊಣೆ ಈ ಆಯೋಗದ್ದಾಗಿತ್ತು. ಆದರೆ, ಎನ್‌ಜೆಎಸಿ ರಚನೆಯೇ ಅಸಾಂವಿಧಾನಿಕ ಎಂದು ಹೇಳಿದ್ದ ಸುಪ್ರೀಂ ಕೋರ್ಟ್, 2015ರ ಅಕ್ಟೋಬರ್ ತಿಂಗಳಲ್ಲಿ ಇದನ್ನು ರದ್ದುಪಡಿಸಿತ್ತು

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ, ಇಬ್ಬರು ಹಿರಿಯ ನ್ಯಾಯಮೂರ್ತಿಗಳು, ಕೇಂದ್ರ ಕಾನೂನು ಸಚಿವ, ಸಿಜೆಐ ಹೆಸರು ಸೂಚಿಸುವ ಇಬ್ಬರು ಪ್ರಮುಖರು, ಪ್ರಧಾನಮಂತ್ರಿ, ಲೋಕಸಭೆಯ ಪ್ರತಿಪಕ್ಷದ ನಾಯಕ ಎನ್‌ಜೆಎಸಿ ಸದಸ್ಯರಾಗಿದ್ದರು.

ಒಂದು ವರ್ಷ ಕಾಲ ಸುಪ್ರೀಂ ಕೋರ್ಟ್‌ನ ಕೊಲಿಜಿಯಂನ ಭಾಗವಾಗಿದ್ದ ಕೌಲ್ ಅವರು, 'ಪ್ರಸ್ತುತ ಪರಿಸ್ಥಿತಿಯಲ್ಲಿ ಕೊಲಿಜಿಯಂ ವ್ಯವಸ್ಥೆಯು ಈ ದೇಶದ ಕಾನೂನು. ಅದನ್ನು ಈಗ ಇರುವಂತೆಯೇ ಪಾಲಿಸಬೇಕು' ಎಂದು ಹೇಳಿದರು.

ಸುಭಾಷಿತ

ಗುರಿ ತಪ್ಪಿದರೂ ಹಾದಿ ತಪ್ಪಬಾರದು.
-ಎಸ್.ವಿ. ಪರಮೇಶ್ವರ ಭಟ್ಟ

ಕನ್ನಡ ನಾಮಫಲಕ ಆಂದೋಲನ ಸದಾಶಯದಲ್ಲಿ ಸಂಘರ್ಷ ಬೇಡ

ನಾಮಫಲಕಗಳಲ್ಲಿ ಕನ್ನಡ ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ ನಡೆಸಿರುವ 'ನಾಮಫಲಕ ಜಾಗೃತಿ ಆಂದೋಲನ'ದ ಉದ್ದೇಶ ಸ್ವಾಗತಾರ್ಹ. ಆದರೆ, ಕಾಳಜಿಯನ್ನು ಕಾರ್ಯಗತಗೊಳಿಸುವಲ್ಲಿ ಚಳವಳಿಗಾರರು ಕಾನೂನನ್ನು ಕೈಗೆ ತೆಗೆದುಕೊಳ್ಳುವಂತೆ ವರ್ತಿಸಿರುವುದನ್ನು ಯಾವುದೇ ಕಾರಣಕ್ಕೆ ಒಪ್ಪುವುದು ಸಾಧ್ಯವಿಲ್ಲ. ಇಂಗ್ಲಿಷ್ ನಾಮಫಲಕಗಳ ವಿರೋಧ ಸೂಚಿಸಿ ಬೆಂಗಳೂರಿನಲ್ಲಿ ರಕ್ಷಣಾ ವೇದಿಕೆ ನಡೆಸಿದ ಮೆರವಣಿಗೆ ಅಹಿತಕರ ಘಟನೆಗಳಿಗೆ ಕಾರಣವಾಗಿದೆ. ಇಂಗ್ಲಿಷ್‌ನಲ್ಲಿದ್ದ ನಾಮಫಲಕಗಳನ್ನು ಕನ್ನಡ ಕಾರ್ಯಕರ್ತರು ಕಿತ್ತುಹಾಕಿದ್ದು, ಕೆಲವು ಫಲಕಗಳಿಗೆ ಮಸಿ ಬಳಿದಿದ್ದಾರೆ. ಕೆಲವು ಅಂಗಡಿಗಳ ಲೈಟಿಂಗ್ ಬೋರ್ಡ್‌ಗಳನ್ನು ಒಡೆದು ಹಾಕಲಾಗಿದೆ, ಹೋರ್ಡಿಂಗ್‌ಗಳನ್ನು ಹರಿಯಲಾಗಿದೆ. ಇಂಗ್ಲಿಷ್ ನಾಮಫಲಕಗಳನ್ನು ನಾಶಪಡಿಸುವ ಸಂದರ್ಭದಲ್ಲಿ ಕನ್ನಡ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ಸಂಘರ್ಷ ನಡೆದಿದೆ. ನಗರದ ಹಲವು ಭಾಗಗಳಲ್ಲಿ ಏಕಕಾಲಕ್ಕೆ ಆಂದೋಲನ ನಡೆದುದರಿಂದ ಸಾರಿಗೆ ಸಂಚಾರಕ್ಕೂ ಅಡಚಣೆಯುಂಟಾಗಿದೆ. ಕನ್ನಡನಾಡಿನಲ್ಲಿನ ನಾಮಫಲಕಗಳು ಕನ್ನಡದಲ್ಲಿ ಇರಬೇಕೆನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಕನ್ನಡ ನಿರ್ಲಕ್ಷ್ಯಕ್ಕೊಳಗಾದ ಸಂದರ್ಭಗಳಲ್ಲಿ ಅದನ್ನು ವಿರೋಧಿಸಿ ಪ್ರತಿಭಟಿಸುವುದು ಪ್ರಜಾಸತ್ತಾತ್ಮಕ ನಡವಳಿಕೆಯೇ ಆಗಿದೆ. ಆದರೆ, ಕನ್ನಡ ಜಾಗೃತಿಯ ಉದ್ದೇಶದ ಪ್ರಯತ್ನಗಳು ಹಿಂಸೆ ಹಾಗೂ ಆಸ್ತಿಪಾಸ್ತಿ ನಾಶಕ್ಕೆ ಕಾರಣವಾಗಬಾರದು. ಇಂಥಹ ಬೆಳವಣಿಗೆಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಸೌಹಾರ್ದ ಕರ್ನಾಟಕ'ದ ವರ್ಚಸ್ಸಿಗೆ ಧಕ್ಕೆ ಉಂಟುಮಾಡುವಂತಹವು. ಅನುನಯ, ಒತ್ತಾಯ ಹಾಗೂ ಕಾನೂನು ಮಾರ್ಗಗಳ ಮೂಲಕ ಕನ್ನಡ ಅನುಷ್ಠಾನದ ಪ್ರಯತ್ನಗಳನ್ನು ನಡೆಸಬೇಕೇ ವಿನಾ ಬಲವಂತದ ಮಾರ್ಗದಿಂದಲ್ಲ. ವಾಣಿಜ್ಯ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡದ ಬಳಕೆಯಿರಬೇಕು ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಿರ್ದೇಶನ ವಿದ್ದು, ಅದರ ಪಾಲನೆಗೆ 2024ರ ಫೆಬ್ರುವರಿ 28ರವರೆಗೆ ಸಮಯವಿದೆ. ಆ ಗಡುವಿನವರೆಗೂ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಕೋರಿದೆ. ಈ ಕೋರಿಕೆ ಸಮಂಜಸವಾದುದು. ಗೊತ್ತುಪಡಿಸಿರುವ ಸಮಯದವರೆಗೆ ತಾಳ್ಮೆಯಿಂದ ಕಾಯುವುದು ಅನಿವಾರ್ಯ. ಗಡುವಿನ ನಂತರವೂ ನಾಮಫಲಕವನ್ನು ಬದಲಿಸದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೇ ಹೊರತು, ಜನಸಾಮಾನ್ಯರು ಅಥವಾ ಸಂಘಟನೆಗಳ ಕಾರ್ಯಕರ್ತರು ಕಾನೂನನ್ನು ಕೈಗೆತ್ತಿಕೊಳ್ಳಬಾರದು.

ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಕನ್ನಡ ಪರಿಸರವನ್ನು ಮೂಡಿಸಲು ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಪ್ರಾಮಾಣಿಕವಾಗಿ ಮಾಡಬೇಕು.

ರಾಜ್ಯದಲ್ಲಿನ ಎಲ್ಲ ಅಂಗಡಿ, ಆಸ್ಪತ್ರೆ, ಹೋಟೆಲ್, ವ್ಯಾಪಾರಿ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಇರಬೇಕೆನ್ನುವುದನ್ನು ಸರ್ಕಾರವೂ ಒಪ್ಪಿಕೊಂಡಿದೆ. ಅದಕ್ಕೆ ಪೂರಕವಾಗಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಗೆ ತಿದ್ದುಪಡಿ ತರಲು ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ನಿರ್ಧಾರವನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ಮುಂದಾಗಿದೆ. ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸುವಿಕೆಯ ಕಾನೂನನ್ನು ಬಲಪಡಿಸಲು ಮುಂದಾಗಿರುವ ಸರ್ಕಾರದ ಚಿಂತನೆ ಸ್ವಾಗತಾರ್ಹ. ಆದರೆ, ಇದು ಕಾಯ್ದೆಗಳಿಂದಷ್ಟೇ ಆಗುವ ಕೆಲಸವಲ್ಲ. ಕರ್ನಾಟಕದ ರಾಜಧಾನಿಯಲ್ಲಿ ಕನ್ನಡದ ಪರಿಸರವನ್ನು ಉಳಿಸುವುದು ಸರ್ಕಾರದ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಸರ್ಕಾರದ ಈವರೆಗಿನ ಕನ್ನಡ ಕಾಳಜಿ ಹೇಳಿಕೆಗಳಲ್ಲಿದೆಯೇ ಹೊರತು, ಇಚ್ಛಾಶಕ್ತಿಯ ರೂಪದಲ್ಲಿ ಪ್ರಕಟಗೊಂಡಿಲ್ಲ. ನಾಮಫಲಕಗಳಿಗೆ ಮಸಿ ಬಳಿಯುವ ಇಲ್ಲವೇ ಅವುಗಳನ್ನು ಕಿತ್ತುಹಾಕುವ ಪ್ರಯತ್ನ ಇದು ಮೊದಲನೆಯದೇನಲ್ಲ. ಕನ್ನಡ ಚಳವಳಿ ರೂಪುಗೊಂಡಾಗಿನಿಂದ ಇಂಗ್ಲಿಷ್ ಸೇರಿದಂತೆ ಕನ್ನಡೇತರ ಭಾಷೆಯಲ್ಲಿರುವ ನಾಮಫಲಕಗಳ ವಿರುದ್ಧ ಪ್ರತಿಭಟನೆ ಆಗಾಗ ರೂಪುಗೊಳ್ಳುತ್ತಲೇ ಇದೆ. ಕನ್ನಡ ಚಳವಳಿ ಕಾರ್ಯಕರ್ತರ ನಿರಂತರ ಪ್ರಯತ್ನದ ನಂತರವೂ ಪರಿಸ್ಥಿತಿಯಲ್ಲಿ ಆಶಾದಾಯಕ ಬದಲಾವಣೆ ಆಗಿಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಅವಕಾಶವಿರಬೇಕೆಂದು ಒತ್ತಾಯಿಸಿ ಬೀದಿಗಿಳಿಯುವ ಪರಿಸ್ಥಿತಿ ಸೃಷ್ಟಿಯಾಗಿರುವುದು ದುರದೃಷ್ಟಕರ. ಬೆಂಗಳೂರು ಮಹಾನಗರವು ಅಂತರರಾಷ್ಟ್ರೀಯ ವರ್ಚಸ್ಸು ಪಡೆದ ನಂತರವಂತೂ ಹೋಟೆಲ್‌ಗಳು ಹಾಗೂ ವ್ಯಾಪಾರಿ ಮಳಿಗೆಗಳ ನಾಮಫಲಕಗಳಲ್ಲಿ ಇಂಗ್ಲಿಷ್ ಏಕಸ್ವಾಮ್ಯ ಹೆಚ್ಚಾಗುತ್ತಿದೆ. ಸಾರ್ವಜನಿಕ ಪ್ರದೇಶಗಳಲ್ಲಿನ ಸೂಚನಾಫಲಕಗಳಲ್ಲಿ ಇಂಗ್ಲಿಷ್ ಜೊತೆಗೆ ಹಿಂದಿಯೂ ಕಾಣಿಸಿಕೊಳ್ಳತೊಡಗಿ, ಕನ್ನಡ ನೇಪಥ್ಯಕ್ಕೆ ಸರಿಯುವಂತಾಗಿದೆ. ಕನ್ನಡವನ್ನು ನಿರ್ಲಕ್ಷಿಸಿ ಹಿಂದಿ ಮತ್ತು ಇಂಗ್ಲಿಷನ್ನು ಮೆರೆಸುವುದರ ವಿರುದ್ಧ ಕನ್ನಡ ಚಳವಳಿಗಾರರು ನಿರಂತರವಾಗಿ ದನಿ ಎತ್ತುತ್ತಲೇ ಇದ್ದಾರೆ. ಕನ್ನಡದ ಬಗೆಗಿನ ಅವರ ಕಾಳಜಿ ಮೆಚ್ಚುವಂತಹದ್ದು. ಆದರೆ, ಈ ಕಾಳಜಿ ಕಾನೂನಿನ ಉಲ್ಲಂಘನೆಗೆ ಕಾರಣವಾಗಬಾರದು. ಕನ್ನಡ ಅನುಷ್ಠಾನ ಸರ್ಕಾರದ ಕೆಲಸ. ಕನ್ನಡಕ್ಕೆ ಯಾವುದೇ ಹಂತದಲ್ಲಿ ಹಿನ್ನಡೆಯಾದಲ್ಲಿ, ಅದರ ಸಂಪೂರ್ಣ ಹೊಣೆ ಸರ್ಕಾರದ್ದೇ ಆಗಿದೆ. ಸಾಂವಿಧಾನಿಕ ವ್ಯವಸ್ಥೆ ಮಾಡಬೇಕಾದ ಕೆಲಸವನ್ನು ಜನಸಾಮಾನ್ಯರು ಮಾಡುವ ಸ್ಥಿತಿ ಸೃಷ್ಟಿಯಾಗಿರುವುದರ ಜವಾಬ್ದಾರಿಯೂ ಸರ್ಕಾರದ್ದೇ ಆಗಿದೆ. ಚಳವಳಿಗಾರರೊಂದಿಗೆ ಸಹಾನುಭೂತಿಯಿಂದ ನಡೆದುಕೊಳ್ಳುವ ಮೂಲಕ ಪ್ರಸಕ್ತ ಬಿಕ್ಕಟ್ಟನ್ನು ಪರಿಹರಿಸಲು ಸರ್ಕಾರ ಪ್ರಯತ್ನಿಸಬೇಕು. ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಕನ್ನಡ ಪರಿಸರವನ್ನು ಮೂಡಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಪ್ರಾಮಾಣಿಕವಾಗಿ ನಡೆಸಬೇಕು.

ದಿನದ ಟ್ವೀಟ್

ರೈತರ ಕಷ್ಟ ಯಾರಿಗೂ ಕಾಣದು

ಸಂಸದರಾಗಲೀ, ಸಚಿವರಾಗಲೀ ಅಥವಾ ರೈತರ ಮಕ್ಕಳಾಗಲೀ ಯಾರೂ ರೈತರ ಆರ್ಥಿಕ ಸ್ಥಿತಿಗತಿ ಕುರಿತು ಮಾತನಾಡುವುದಿಲ್ಲ! ಹೀಗಿರುವಾಗ, ರೈತರ ಹಕ್ಕುಗಳನ್ನು ರಕ್ಷಣೆ ಮಾಡುವವರು ಯಾರು? ರೈತರು ಸದಾ ರಾಜಕಾರಣದ ದಾಳವಾಗುತ್ತಿದ್ದಾರೆ. ಅವರ ಆರ್ಥಿಕ ಸ್ಥಿತಿ ಉತ್ತಮಪಡಿಸುವ ಕೆಲಸವನ್ನು ಯಾರೂ ಮಾಡುತ್ತಿಲ್ಲ.

ಅನಿಲ್‌ರಾಹರ್

ಕಿಡಿನುಡಿ

ಬಸನಗೌಡ ಪಾಟೀಲ ಯತ್ನಾಳ ಅವರು ಐದೂವರೆ ವರ್ಷಗಳಿಂದಲೂ ತಮ್ಮದೇ ಪಕ್ಷದ ನಾಯಕರ ವಿರುದ್ಧ ಒಂದಾದ ಮೇಲೆ ಒಂದರಂತೆ ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸಲಾರದಷ್ಟು ಕರ್ನಾಟಕ ಬಿಜೆಪಿ ದುರ್ಬಲವಾಗಿದೆ! ಯತ್ನಾಳ ಅವರ ಆರೋಪಗಳು ಸತ್ಯವಾಗಿರಬೇಕು, ಹೀಗಾಗಿಯೇ ಕ್ರಮ ಜರುಗಿಸಲು ಹೆದರುತ್ತಿದ್ದಾರೆ! ತಮ್ಮ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ನಾಯಕರು ಅವರನ್ನು ಕಾಂಗ್ರೆಸ್ ಏಜೆಂಟ್ ಎಂದು ಆರೋಪಿಸುತ್ತಿದ್ದಾರೆ. ಆದರೆ ಕಾಂಗ್ರೆಸ್‌ಗೂ ಯತ್ನಾಳ ಅವರಿಗೂ ಯಾವುದೇ ಸಂಬಂಧವಿಲ್ಲ.

ಎಂ.ಬಿ. ಪಾಟೀಲ, ಬೃಹತ್ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಬುಧವಾರ, 30-12-1998

• ಕಾಣಿಯೂರು ಶ್ರೀಗಳ ನಿಧನ

ಮಂಗಳೂರು, ಡಿ. 29– ಉಡುಪಿ ಶ್ರೀಕೃಷ್ಣ ಮಠದ ಪರ್ಯಾಯ ಪೀಠಸ್ಥರಾದ ಕಾಣಿಯೂರು ಮಠದ ಶ್ರೀ ವಿದ್ಯಾ ವಾರಿನಿಧಿ ತೀರ್ಥ ಸ್ವಾಮಿಗಳು (69) ಇಂದು ರಾತ್ರಿ 1.45ಕ್ಕೆ ಉಡುಪಿಯಲ್ಲಿ ದೇಹತ್ಯಾಗ ಮಾಡಿದರು.

ಇಂದು ಬೆಳಿಗ್ಗೆ 10 ಗಂಟೆಗೆ ಅವರಿಗೆ ಹೃದಯಾಘಾತವಾದಾಗ ಖಾಸಗಿ ನರ್ಸಿಂಗ್ ಹೋಂಗೆ ದಾಖಲು ಮಾಡಲಾಯಿತು. ಸಂಜೆ ಅವರ ಸ್ಥಿತಿ ಗಂಭೀರವಾದಾಗ ಮಠಕ್ಕೆ ಕರೆತರಲಾಯಿತು. ಅಂತಿಮ ಸಂಸ್ಕಾರ ಉಡುಪಿಯಲ್ಲಿ ಇಂದು ರಾತ್ರಿ ನಡೆಯಿತು.

• ರಾಜ್ಯ ದಳ ನಾಯಕರ ಜೊತೆ ಶರದ್ ಸಮಾಲೋಚನೆ ಮುಕ್ತಾಯ

ನವದೆಹಲಿ, ಡಿ. 29– ಕರ್ನಾಟಕದ ಆಳುವ ಜನತಾದಳದ ಮೂರು ತಿಂಗಳ ಬಿಕ್ಕಟ್ಟಿಗೆ ಪರಿಹಾರ ಸೂತ್ರ ಕಂಡುಹಿಡಿಯಲು ದಳದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಇಂದು ಉಪ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಸೇರಿದಂತೆ ರಾಜ್ಯದ ನಾಯಕರ ಜೊತೆ ಸಮಾಲೋಚನೆ ಪ್ರಕ್ರಿಯೆ ಮುಗಿಸಿದ್ದು, ನಾಳೆ ರಾಷ್ಟ್ರ ಮಟ್ಟದ ಧುರೀಣರೊಡನೆ ಚರ್ಚಿಸಲಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 30-12-1973

• ಗಡಿ ಇತ್ಯರ್ಥಕ್ಕೆ ಮುನ್ನ ಉತ್ತಮ ವಾತಾವರಣ ಅಗತ್ಯ ಎಂದ ದೀಕ್ಷಿತ್

ನವದೆಹಲಿ, ಡಿ.29 – ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆ ಇತ್ಯರ್ಥಕ್ಕೆ ಯಾವುದೇ ಕಾಲಮಿತಿ ಅಸಾಧ್ಯವೆಂದೂ, ಯಾವುದೇ ಪರಿಹಾರಕ್ಕೆ ಮುನ್ನ ವಾತಾವರಣ ಉತ್ತಮಗೊಂಡು ಎರಡೂ ರಾಜ್ಯಗಳಲ್ಲಿ ಪರಿಸ್ಥಿತಿ ಸುಧಾರಿಸುವುದು ಅಗತ್ಯವೆಂದು ಕೇಂದ್ರ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ಇಲ್ಲಿ ತಿಳಿಸಿದರು.

ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಬಹುದೀರ್ಘ ಕಾಲದಿಂದ ಇತ್ಯರ್ಥವಾಗದೆ ಉಳಿದಿರುವ ಬೆಳಗಾವಿ ಮತ್ತಿತರ ಗಡಿ ಪ್ರದೇಶಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹೊಸ ಪ್ರಯತ್ನವಾಗಿ ಕೇಂದ್ರ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಮುಖ್ಯಮಂತ್ರಿಗಳಾದ ವಿ.ಪಿ. ನಾಯಕ್ ಮತ್ತು ದೇವರಾಜ ಅರಸು ಅವರ ಜೊತೆ ಮಾತುಕತೆ ನಡೆಸಿದರು.

ವಾಸ್ತವಕ್ಕೆ ಬೆನ್ನು ತಿರುಗಿಸಿರುವ ಕಾಂಗ್ರೆಸ್‌ಗೆ ಮಿತ್ರಪಕ್ಷಗಳ ಮಾತು ರುಚಿಸುವುದೇ?

'ಇಂಡಿಯಾ' ಮೈತ್ರಿಕೂಟ: ತಂಟೆ, ತೊಡಕು...

ಸೂರ್ಯ-ನಮಸ್ಕಾರ

ಎ. ಸೂರ್ಯಪ್ರಕಾಶ್

'ಇಂಡಿಯಾ' ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಪ್ರಸ್ತಾಪಿಸಿದ ತೃಣಮೂಲ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ ಜಾಣ್ಮೆಯ ನಡೆಯು ಕಾಂಗ್ರೆಸ್ ವರಿಷ್ಠರ ಬಾಯಿಯನ್ನು ಪೂರ್ತಿಯಾಗಿ ಕಟ್ಟಿಹಾಕಿದೆ.

ಖರ್ಗೆಯವರು ದೇಶದಲ್ಲಿರುವ ಅತ್ಯಂತ ಪಳಗಿದ ರಾಜಕಾರಣಿಗಳಲ್ಲಿ ಒಬ್ಬರಾಗಿರುವುದರ ಜೊತೆಗೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಹೌದು. ಹೀಗಿದ್ದರೂ ಮಮತಾ ಬ್ಯಾನರ್ಜಿ ಮತ್ತು ಅರವಿಂದ ಕೇಜ್ರಿವಾಲ್ ಅವರು ಖರ್ಗೆ ಅವರ ಹೆಸರನ್ನು ಅತ್ಯುನ್ನತ ಹುದ್ದೆಗೆ ದಿಢೀರ್ ಸೂಚಿಸಿದ್ದರಿಂದ ಕಾಂಗ್ರೆಸ್ ಪಕ್ಷವು ನಿಬ್ಬೆರಗಾಗಿದೆ.

ಖರ್ಗೆ ಅವರಂತೆ ತನ್ನ ಕುಟುಂಬದ ಯಾರೊಬ್ಬರಿಗೂ ರಾಜಕೀಯ ಹಾಗೂ ಆಡಳಿತಾತ್ಮಕ ಅನುಭವ ಇಲ್ಲದಿದ್ದರೂ ಪಕ್ಷವನ್ನು ತನ್ನ ಹಿಡಿತದಲ್ಲಿ ಇರಿಸಿಕೊಂಡು ನಿಯಂತ್ರಿಸುವ ನೆಹರೂ-ಗಾಂಧಿ ಕುಟುಂಬವು ಮೈತ್ರಿಕೂಟಕ್ಕೆ ತನ್ನ ಕುಟುಂಬಕ್ಕೆ ಸೇರಿದವರೇ ಪ್ರಮುಖ ನಾಯಕ ಆಗಬೇಕೆಂಬ ಭಾವನೆ ಹೊಂದಿರುವುದೇ ಇದಕ್ಕೆ ಕಾರಣವಾಗಿದೆ. ಈ ಪ್ರಸ್ತಾವದ ಬಗ್ಗೆ ಕುಟುಂಬದೊಳಗೆ ಮೌನ ಆವರಿಸಿರುವುದರಿಂದ, ಪಕ್ಷದ ಇತರ ನಾಯಕರು ಈ ಬಗ್ಗೆ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ನೀಡಲು ಮುಂದಾಗುತ್ತಿಲ್ಲ.

ಇದು ದುಃಖದ ಸಂಗತಿ. ಏಕೆಂದರೆ, 1970ರ ದಶಕದ ಆರಂಭದಲ್ಲಿ ದೇವರಾಜ ಅರಸು ಅವರ ಮೂಲಕ ಬೆಳಕಿಗೆ ಬಂದ ಖರ್ಗೆ, ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯ ಶಾಸಕಾಂಗ ಅನುಭವ ಹೊಂದಿದವರಾಗಿದ್ದಾರೆ. 1972ರಲ್ಲಿ ಅವರು ಕರ್ನಾಟಕ ವಿಧಾನಸಭೆ ಪ್ರವೇಶಿಸಿದರು. ಎಸ್.ಎಂ.ಕೃಷ್ಣ, ಗುಂಡೂರಾವ್, ವೀರಪ್ಪ ಮೊಯಿಲಿ ಮತ್ತು ಧರ್ಮಸಿಂಗ್ ಅವರಂತೆಯೇ ಖರ್ಗೆ ಕೂಡ 1972ರ ಬ್ಯಾಚ್‌ಗೆ ಸೇರಿದವರು. ಇವರಲ್ಲಿ ಅನೇಕರಿಗೆ ದೇವರಾಜ ಅರಸು ಅವರು ಒತ್ತಾಸೆ ಕೊಟ್ಟು ಬೆಳೆಸಿ ನಂತರ ಮಂತ್ರಿ ಸ್ಥಾನ ಹಾಗೂ ಇನ್ನಿತರ ಹೊಣೆಗಾರಿಕೆಗಳನ್ನು ನೀಡಿದರು. ಅಲ್ಲಿಂದೀಚೆಗೆ ಖರ್ಗೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಲವಾರು ಸ್ಥಾನಗಳನ್ನು ಅವರು ನಿರ್ವಹಿಸಿದ್ದಾರೆ.

1972ರಿಂದ ಸತತವಾಗಿ ಒಂಬತ್ತು ಬಾರಿ ಅವರು ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಅಲ್ಲದೆ, ಎರಡು ಬಾರಿ ಲೋಕಸಭೆ ಚುನಾವಣೆಯಲ್ಲಿ ಗೆಲುವು ಕಂಡಿದ್ದಾರೆ. ರಾಜ್ಯದಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿರುವ ಅವರು ಪಕ್ಷದಲ್ಲಿಯೂ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಸದ್ಯ, ಖರ್ಗೆ ಅವರು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾರೆ.

ಉನ್ನತ ಸ್ಥಾನಕ್ಕೆ ಏರಿರುವ ಅವರು ದಲಿತ ಸಮುದಾಯಕ್ಕೆ ಸೇರಿದವರು ಹಾಗೂ ಪಕ್ಷನಿಷ್ಠೆ ಕಾಯ್ದುಕೊಂಡು ಬಂದವರು ಎಂಬುದು ಅವರ ಅರ್ಹತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅಷ್ಟರಮಟ್ಟಿಗೆ ಅರ್ಹತೆ ಮತ್ತು ಅನುಭವ ಇರುವ ಮತ್ತೊಬ್ಬ ರಾಜಕೀಯ ವ್ಯಕ್ತಿ ಇಲ್ಲವೆಂದೇ ಹೇಳಬಹುದಾಗಿದೆ.

ನೆಹರೂ- ಗಾಂಧಿ ಕುಟುಂಬದಿಂದ ರಾಹುಲ್ ಗಾಂಧಿಯವರನ್ನು ಮೈತ್ರಿಕೂಟದ ನಾಯಕನನ್ನಾಗಿ ಬಿಂಬಿಸುವ ನಡೆಯನ್ನು ಭಗ್ನಗೊಳಿಸುವ ಆಲೋಚನೆಯನ್ನು ಮಮತಾ ಮತ್ತು ಕೇಜ್ರಿವಾಲ್ ಹೊಂದಿದ್ದರು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಆದರೆ, ಅವರು ಅತ್ಯುತ್ತಮ ಅರ್ಹತೆಗಳಿರುವ ವ್ಯಕ್ತಿಯೊಬ್ಬರನ್ನು ಗುರುತಿಸಿದ್ದಾರೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ, ಖರ್ಗೆ ಅವರಿಗೆ ಅರ್ಹತೆಗಳಿದ್ದರೂ ನೆಹರೂ- ಗಾಂಧಿ ಕುಟುಂಬದ ಮೌನವು 'ಕುಟುಂಬವು ಪರಿವಾರವಾದದಲ್ಲಿ ಮುಳುಗಿದೆ ಮತ್ತು ಪ್ರತಿಯೊಂದನ್ನೂ ತನ್ನ ಮೂಗಿನ ನೇರಕ್ಕಷ್ಟೇ ನೋಡುತ್ತದೆ' ಎಂಬ ಆರೋಪಗಳಿಗೆ ಇನ್ನಷ್ಟು ಪುಷ್ಟಿ ನೀಡಿದೆ. ಮೈತ್ರಿಕೂಟವನ್ನು ಮುನ್ನಡೆಸಲು ತಾವು ಒಮ್ಮತದ ಅಭ್ಯರ್ಥಿ ಎಂದು ಸ್ವಯಂ ಪರಿಭಾವಿಸಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಈ ಬೆಳವಣಿಗೆಯಿಂದ ಹತಾಶರಾಗಿರುವ ಮತ್ತೊಬ್ಬ ವ್ಯಕ್ತಿ.

ತೃಣಮೂಲ ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಮತ್ತು ಸಮಾಜವಾದಿ ಪಕ್ಷದಂತಹ ಪ್ರಾದೇಶಿಕ ಪಕ್ಷಗಳು ತಂತಮ್ಮ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಕ್ಷವು ಹೆಚ್ಚು ಕ್ಷೇತ್ರಗಳಿಗೆ ಪಟ್ಟು ಹಿಡಿಯಬಾರದು ಎಂದು ಮುಂದಿಟ್ಟಿರುವ ಪ್ರಸ್ತಾವವು ಕಾಂಗ್ರೆಸ್‌ಗೆ ಎದುರಾಗಿರುವ ಎರಡನೇ ಸಮಸ್ಯೆ. ಆ ಪಕ್ಷಗಳ ಪ್ರಕಾರ, ಕಾಂಗ್ರೆಸ್ ಪಕ್ಷವು ಉತ್ತರಪ್ರದೇಶ, ಪಶ್ಚಿಮ ಬಂಗಾಳ, ದೆಹಲಿ ಮತ್ತು ಪಂಜಾಬಿನಲ್ಲಿ ಮತದಾರರನ್ನು ಸೆಳೆಯುವ ಸಾಮರ್ಥ್ಯ ಉಳಿಸಿಕೊಂಡಿಲ್ಲ. ಅದಕ್ಕೆ ಸೀಟುಗಳನ್ನು ಬಿಟ್ಟುಕೊಟ್ಟರೆ ಬಿಜೆಪಿ ವಿರುದ್ಧ ಹೋರಾಡುವುದಕ್ಕೆ ಬೇಕಾದ ಕಾರ್ಯಕರ್ತರ ಬಲವೂ ಇಲ್ಲ ಎಂಬುದು ಆ ಪಕ್ಷಗಳ ಪ್ರಬಲ ಅನಿಸಿಕೆ. ಆದ್ದರಿಂದ, 'ಇಂಡಿಯಾ' ಮೈತ್ರಿಕೂಟವು ಮುಂದುವರಿಯಬೇಕೆಂದರೆ, 200ಕ್ಕಿಂತ ಕಡಿಮೆ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಸೂತ್ರಕ್ಕೆ ಕಾಂಗ್ರೆಸ್ ಒಪ್ಪಿಕೊಳ್ಳಬೇಕಾಗುತ್ತದೆ. ಅಂದರೆ, ತನಗೆ ಗಟ್ಟಿ ನೆಲೆಯಿರುವ ಕೇರಳ, ಕರ್ನಾಟಕ, ತೆಲಂಗಾಣದಲ್ಲಿ ಮತ್ತು ಬಿಜೆಪಿಗೆ ಪ್ರಮುಖ ವಿರೋಧ ಪಕ್ಷವಾಗಿರುವ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಡ, ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಗೋವಾಕ್ಕೆ ಪ್ರಧಾನವಾಗಿ ಅದರ ಸ್ಪರ್ಧೆ ಸೀಮಿತಗೊಳ್ಳಬೇಕಾಗುತ್ತದೆ.

ಮೈತ್ರಿಕೂಟದ ಕೆಲವು ಪಕ್ಷಗಳು ಈ ಮೇಲೆ ತಿಳಿಸಿರುವ ಅಭಿಪ್ರಾಯದಲ್ಲಿ ಬಹಳಷ್ಟು ತಥ್ಯವಿದ್ದರೂ ಕಾಂಗ್ರೆಸ್ ಪಕ್ಷವು ಇದನ್ನು ತೀವ್ರ ಅವಮಾನಕರ ಎಂದು ಭಾವಿಸಿ ತಿರಸ್ಕರಿಸುವಸಾಧ್ಯತೆಯೇಹೆಚ್ಚು. ಉದಾಹರಣೆಗೆ, ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಸಂಪೂರ್ಣವಾಗಿ ಅಸ್ತಿತ್ವ ಕಳೆದುಕೊಂಡಿದೆ- ರಾಯ್‌ಬರೇಲಿ ಮತ್ತು ಅಮೇಠಿ ಹೊರತುಪಡಿಸಿ. ಆದರೆ, ಪಕ್ಷವು ಈ ವಾಸ್ತವವನ್ನು ಒಪ್ಪಿಕೊಳ್ಳುವುದಿಲ್ಲ. ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಬಿಹಾರದಲ್ಲಿ ಆ ಪಕ್ಷದ ಸ್ಥಿತಿ ಶೋಚನೀಯವಾಗಿದೆ. ಹೀಗಿದ್ದರೂ ಈ ರಾಜ್ಯಗಳಲ್ಲಿ ತನ್ನ ಚುನಾವಣಾ ಸ್ಪರ್ಧೆ ಅಪ್ರಸ್ತುತ ಎಂಬುದನ್ನು ಅದು ಒಪ್ಪಿಕೊಳ್ಳುವುದಿಲ್ಲ ಮತ್ತು ಕ್ಷೇತ್ರಗಳಿಗಾಗಿ ಬೇಡಿಕೆ ಮುಂದಿಡಲಿದೆ.

ಮತ್ತೊಂದೆಡೆ, ಕಾಂಗ್ರೆಸ್ ಮತ್ತು ಕಮ್ಯುನಿಸ್ಟರನ್ನು ಹಿಮ್ಮೆಟ್ಟಿಸಿರುವ ತೃಣಮೂಲ ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯವನ್ನೂ ಆ ರಾಜ್ಯದಲ್ಲಿ ಹಿಡಿತ ಹೊಂದಿರುವ ಪಕ್ಷಕ್ಕೆ ಬಿಟ್ಟುಕೊಡಬೇಕೆಂಬ ತನ್ನ ಪ್ರಸ್ತಾವವನ್ನು ಮೈತ್ರಿಕೂಟ ಪರಿಗಣಿಸಬೇಕೆಂದು ಆಗ್ರಹಿಸುತ್ತಿದೆ.

ಕಾಂಗ್ರೆಸ್ ಪಕ್ಷವು ಪಶ್ಚಿಮ ಬಂಗಾಳದಲ್ಲಿ ಲೋಕಸಭೆಗೆ ಎರಡು ಕ್ಷೇತ್ರಗಳಲ್ಲಷ್ಟೇ ಪ್ರಾತಿನಿಧ್ಯ ಹೊಂದಿದೆ. ವಿಧಾನಸಭೆಗೆ ಒಂದೇ ಒಂದು ಕ್ಷೇತ್ರದಿಂದಲೂ ಆಯ್ಕೆಯಾಗಿಲ್ಲ. ಆದ್ದರಿಂದ, ಕಾಂಗ್ರೆಸ್ ಪಕ್ಷಕ್ಕೆ ಸೀಟುಗಳನ್ನು ಬಿಟ್ಟುಕೊಡಲು ತೃಣಮೂಲ ಕಾಂಗ್ರೆಸ್‌ಗೆ ಸುತರಾಂ ಮನಸ್ಸಿಲ್ಲ. ಅಖಿಲೇಶ್ ಯಾದವ್ ಅವರು ಮಧ್ಯಪ್ರದೇಶಕ್ಕೆ ಈಚೆಗೆ ಜರುಗಿದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ತೋರಿದ ಅಹಂಕಾರದ ನಡೆಯನ್ನು ಮರೆಯಲಾರರು.

ಆಮ್ ಆದ್ಮಿ ಪಕ್ಷವು ವಿಧಾನಸಭೆ ಚುನಾವಣೆಗಳಲ್ಲಿ ಭರ್ಜರಿ ಗೆಲುವು ದಾಖಲಿಸಿ ಅಧಿಕಾರದಲ್ಲಿರುವ ದೆಹಲಿ ಮತ್ತು ಪಂಜಾಬ್‌ನಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ. ಈ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ತೀವ್ರ ಹಿನ್ನಡೆ ಅನುಭವಿಸಿದೆ ಎಂಬುದು ಯಾವ ಉತ್ಪ್ರೇಕ್ಷೆಯೂ ಇಲ್ಲದ ವಾಸ್ತವವಾಗಿದೆ. ಕಾಂಗ್ರೆಸ್ ಪಕ್ಷವು ನರೇಂದ್ರ ಮೋದಿ ಅವರ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂಬುದನ್ನು ಗಂಭೀರವಾಗಿ ತೆಗೆದುಕೊಂಡಿರುವುದು ಹೌದೇ ಆದರೆ ಅದು ವಾಸ್ತವವನ್ನು ಒಪ್ಪಿಕೊಳ್ಳಬೇಕು ಎಂಬುದು ವಿವಿಧ ರಾಜ್ಯಗಳಲ್ಲಿ ಹಿಡಿತ ಸಾಧಿಸಿರುವ ಪ್ರಾದೇಶಿಕ ಪಕ್ಷಗಳ ಇರಾದೆಯಾಗಿದೆ. ತಾವು ಪ್ರಬಲವಾಗಿರುವ ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಕ್ಷೇತ್ರಗಳನ್ನು ಬಿಟ್ಟುಕೊಟ್ಟರೆ, ಬಿಜೆಪಿಯು ಅವನ್ನು ಸಲೀಸಾಗಿ ತನ್ನ ಗೆಲುವಿನ ಪಟ್ಟಿಗೆ ಸೇರಿಸಿಕೊಳ್ಳುತ್ತದೆ ಎಂಬುದು ಆ ಪಕ್ಷಗಳ ಅಭಿಪ್ರಾಯ ವಾಗಿದೆ. ಬಿಜೆಪಿಯನ್ನು ಎದುರಿಸಲು ಕಾಂಗ್ರೆಸ್‌ಗೆ ತಾತ್ವಿಕ ಸನ್ನದ್ಧತೆಯಾಗಲೀ ಅಥವಾ ಕಾರ್ಯಕರ್ತರ ಪಡೆಯಾಗಲೀ ಇಲ್ಲದಿರುವುದೇ ಈ ಹಿನ್ನಡೆಗೆ ಕಾರಣವಾಗಲಿದೆ ಎಂಬುದು ಅವುಗಳ ತರ್ಕ. ಅದೇನೇ ಇದ್ದರೂ ಕಾಂಗ್ರೆಸ್ ಮಾತ್ರ ಇದೆಲ್ಲವನ್ನೂ ತೀರಾ ಅವಮಾನಕರ ಎಂದೇ ಭಾವಿಸುತ್ತದೆ.

ಇವೆಲ್ಲವೂ 'ಇಂಡಿಯಾ' ಮೈತ್ರಿಕೂಟವನ್ನು ಎಲ್ಲಿಗೆ ಕೊಂಡೊಯ್ಯುತ್ತವೆ? ಈ ಎಲ್ಲ ತೊಡಕುಗಳನ್ನು ಸರಿಪಡಿಸಿಕೊಂಡು ಮೋದಿ ಮತ್ತು ಬಿಜೆಪಿ ವಿರುದ್ಧ ಸಂಘಟಿತ ಹೋರಾಟ ರೂಪಿಸಲು ಈ ಮೈತ್ರಿಕೂಟದ ಪಕ್ಷಗಳಿಗೆ ಇನ್ನು ನಾಲ್ಕರಿಂದ ಆರು ವಾರಗಳಷ್ಟೇ ಸಮಯಾವಕಾಶ ಇದೆ. ಅವು ಇದರಲ್ಲಿ ಯಶಸ್ವಿಯಾಗುತ್ತವೆಯೇ?

ಚುರುಮುರಿ

ಸಾಲ ಬೇಕೆ ಸಾಲ?

• ಬಿ.ಎನ್. ಮಲ್ಲೇಶ್

'ಮಂಜಮ್ಮ ತಿಂಡಿ ಏನೈತೆ?' ಗುಡ್ಡೆ ಚಾ ಕುಡಿದು ಪೇಪರ್ ಮಡಿಚಿಡುತ್ತ ಕೇಳಿದ.

'ತಿಂಡಿನಾ? ಚಿತ್ರಾನ್ನ...' ಎಂದಳು ಮಂಜಮ್ಮ.

'ನಿನ್ ತಂಗಳು ಚಿತ್ರಾನ್ನ ತಿಂದು ತಿಂದು ಸಾಕಾಗೇತಿ, ಬಿಸಿ ಬಿಸಿ ಪೂರಿ, ಪಡ್ಡು ಅಂಥದೇನಾದ್ರು ಮಾಡ್ಬಾರ್ದಾ?'

'ಮಾಡಬೋದು, ಆದ್ರೆ ನಿನ್ನಂಥ ಉದ್ರಿ ಗಿರಾಕಿಗಳಿಗೆ ಸಾಲ ಕೊಟ್ಟು ಹೋಟ್ಲು ನಡೆಸೋದೆಂಗೆ?'

'ನಿನ್ ಜುಜುಬಿ ಸಾಲ ತೀರಿಸ್ತೀನಿ, ಸ್ವಲ್ಪ ತಡ್ಕಾ...'

'ಜುಜುಬಿನಾ? ಇನ್ಮೇಲೆ ಯಾರ್ಗೂ ಸಾಲ ಕೊಡಲ್ಲ...' ಮಂಜಮ್ಮಗೆ ಸಿಟ್ಟು ಬಂತು.

'ನೀನು ಸಾಲ ಕೊಡದಿದ್ರೆ ಏನು ಪ್ರಪಂಚ ಮುಳುಗೋಗ್ತತಾ? ಮೊನ್ನೆ ಯಾರೋ ಫೋನ್ ಮಾಡಿದ್ರು, ಐವತ್ತು ಸಾವಿರದತಂಕ ಅರ್ಜೆಂಟ್ ಸಾಲ ಬೇಕಾ? ಶೂರಿಟಿ ಏನು ಬ್ಯಾಡ ಅಂದ್ರು. ನಾನೇ ತಗಳ್ಳಿಲ್ಲ' ಎಂದ ಗುಡ್ಡೆ.

'ಯಾಕ್ ತಗಳ್ಳಿಲ್ಲ?' ದುಬ್ಬೀರ ಕೇಳಿದ.

'ಗುಡ್ಡೆ ಸಾಲ ಯಾಕ್ ಬ್ಯಾಡ ಅಂದ ಅಂತ ನಂಗೊತ್ತು' ಎಂದ ತೆಪರೇಸಿ.

'ಹೌದಾ? ಯಾಕೆ?'

'ಹೋದ ವಾರ ಗುಡ್ಡೆ ಮೊಬೈಲ್‌ಗೆ ತಕ್ಷಣ ಸಾಲ ಕೊಡ್ತೀವಿ, ಶೂರಿಟಿ ಬೇಕಿಲ್ಲ ಅಂತ ಒಂದು ಮೆಸೇಜ್ ಬಂದಿತ್ತಂತೆ. ನಿಮ್ ಬ್ಯಾಂಕ್ ಅಕೌಂಟ್‌ಗೆ ದುಡ್ಡು ಹಾಕ್ತೀವಿ, ಒಟಿಪಿ ಹೇಳಿ ಅಂದ್ರಂತೆ. ಇವ್ನು ಒಟಿಪಿ ಹೇಳ್ದ, ಐದೇ ನಿಮಿಷದಾಗೆ ಇವ್ನ ಅಕೌಂಟ್‌ನಾಗಿದ್ದ ಆರು ಸಾವಿರ ದುಡ್ಡೂ ಮಾಯ ಆಗಿತ್ತಂತೆ!' ತೆಪರೇಸಿ ನಕ್ಕ.

'ಹೌದಾ? ಥೂ ನಿನ್ನ, ಪೇಪರ್ ಓದ್ತೀಯ ಗೊತ್ತಾಗಲ್ವಾ? ಅಂಥ ಸಾಲದ ಜಾಹೀರಾತ್ನೆಲ್ಲ ಸರ್ಕಾರ ಬ್ಯಾನ್ ಮಾಡೇತಿ. ಅದಿರ್ಲಿ, ಬ್ಯಾಂಕಲ್ಲಿ ರೊಕ್ಕ ಇಟ್ಕಂಡು ಇಲ್ಲಿ ನನ್ನತ್ರ ಉದ್ರಿ ಕೇಳ್ತೀಯ?' ಮಂಜಮ್ಮ ರೇಗಿದಳು.

'ಅದೂ ನಿನ್ ಚಿತ್ರಾನ್ನದ ಬಾಕಿ ತೀರ್ಸೋಕೆ ಅಂತಾನೇ ಇಟ್ಕಂಡಿದ್ದೆ ಮಂಜಮ್ಮ...' ಎಂದ ಗುಡ್ಡೆ.

'ಆಹಾ ಮಳ್ಳ...' ಎಂದಳು ಮಂಜಮ್ಮ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಆಯಸ್ಸಿಗೆ ವರ್ಷವಲ್ಲ, ವರ್ಷಕ್ಕೆ ಆಯಸ್ಸು

ಪ್ರತಿ ಹೊಸ ವರ್ಷ ಬದುಕಿನ ಹೊಸ ಅಧ್ಯಾಯ. ನಾವು ಸಮರ್ಥರಾಗಿದ್ದರೆ, 'ಹೊಸ ವರ್ಷ ಏನೇನು ತರುವುದೋ' ಎನ್ನುವ ತಲ್ಲಣವೇ ಉದ್ಭವಿಸದು

• ಯೋಗಾನಂದ

'ಹೊಸ ವರ್ಷ, ಹೊಸ ನಾವು' ಉತ್ಸಾಹದ ಭರದಲ್ಲಿ ಹೊಸ ವರ್ಷಕ್ಕೆ ಹೊಸ ನಿರ್ಣಯಗಳ ಪಟ್ಟಿ ಸಿದ್ಧವಾಗಿರುತ್ತದೆ. ಹಿಂದಿನ ವರ್ಷಗಳಲ್ಲಿ ನಾವು ಸುಧಾರಣೆ ಬಯಸಿದಂತಹವು ಹೊಸ ಪಟ್ಟಿಯಲ್ಲಿ ಇರುವುದು ಸಹಜ. ನಮಗೆ ಬದುಕಿನ ಮೇಲೆ ನಿಯಂತ್ರಣ ಇರುವುದಕ್ಕೆ ನಮ್ಮ ಧ್ಯೇಯಗಳೇ ಸಾಕ್ಷಿ. ಪ್ರತಿ ಹೊಸ ವರ್ಷ ಬದುಕಿನ ಹೊಸ ಅಧ್ಯಾಯ.

ನಾವು ಸಮರ್ಥರಾಗಿದ್ದರೆ, 'ಹೊಸ ವರ್ಷ ಏನೇನು ತರುವುದೋ' ಎನ್ನುವ ತಲ್ಲಣವೇ ಉದ್ಭವಿಸದು. ನಾಳೆಯೆಂಬ ಮೊಹರು ಹಾಕಿದ ಲಕೋಟೆಯಲ್ಲಿ ಏನುಂಟು, ಏನಿಲ್ಲ ಎಂಬುದು ಭೇದಿಸಲಾಗದ ರಹಸ್ಯ. ಭವಿಷ್ಯದ ಸ್ವಾರಸ್ಯ ಇರುವುದು ಅದರ ನಿಗೂಢದಲ್ಲೇ. ಎಂದಮೇಲೆ, ಭವಿಷ್ಯವನ್ನು ಮುಂಗಾಣುವ ಸೂಕ್ತ ಉಪಾಯವೆಂದರೆ ಅದನ್ನು ಸೃಷ್ಟಿಸುವುದು. ನಮ್ಮನ್ನು ನಾವು ಆವಿಷ್ಕರಿಸಿಕೊಳ್ಳಲಾಗದಷ್ಟು ನಾವೆಂದಿಗೂ ವೃದ್ಧರಲ್ಲ. ಗತದಲ್ಲಿ ಸತತ ಪ್ರಯತ್ನಗಳಿಗೂ ಕೈಗೂಡದ ಗುರಿಗಳು ಅವೆಷ್ಟೋ? ಪುನಃ ಅವನ್ನು ಈಗ ಪ್ರಾರಂಭಿಸಬಹುದಲ್ಲ!

ಭವಿತವ್ಯ ಭೂತಕ್ಕಿಂತ ದೊಡ್ಡದು. ಸಾಧಕರು, ಮೇಧಾವಿಗಳು, ಪ್ರತಿಭಾವಂತರು, ಸಂತರಂತೆ ಆಗೋಣವೆಂದು ನವವರ್ಷ ಬಂದಾಗಲೆಲ್ಲಾ ನಿಶ್ಚಯಿಸಿಕೊಳ್ಳುತ್ತೇವೆ. ಈ ಬಾರಿ ಸಂಪನ್ನ, ಸದ್ಗುಣಗಳಿಂದ ನಮ್ಮಂತೆ ನಾವಾಗೋಣ ಎಂದು ನಿರ್ಣಯಿಸಿಕೊಂಡರೆ ಹೇಗೆ? ರೂಢಿಸಿಕೊಂಡ ಅಭ್ಯಾಸಗಳಿಂದ ಒಳಿತಾಗುತ್ತಿಲ್ಲ ಎಂದಾದರೆ ಅವನ್ನು ತ್ಯಜಿಸಿದರಾಯಿತು. ಬದಲಿಗೆ ಅವಕ್ಕೂ ಲೇಸಾದವನ್ನು ಬೆಳೆಸಿಕೊಳ್ಳಬಹುದು.

ಮಹಾನ್ ನಾಟಕಕಾರ ಷೇಕ್ಸ್‌ಪಿಯರ್‌ನ ನುಡಿಯಿದು: 'ನಮ್ಮ ತಲಪುದಾಣ ನಕ್ಷತ್ರಗಳಲ್ಲಿಲ್ಲ, ನಮ್ಮೊಳಗೇ ಇದೆ'. ಹೇಗೂ ಕೈಗೂಡವು ಎಂಬ ಹತಾಶೆಯಿಂದ ನವವರ್ಷಕ್ಕೆ ಸಂಕಲ್ಪಗಳಿಂದ ದೂರ ಸರಿಯುವುದೂ ಉಂಟು. ವಾಸ್ತವವೆಂದರೆ, ವಿಫಲರಾಗುವವರು ಪ್ರಯತ್ನಿಸದವರು. ಗೋಡೆಗಳು ಸುಣ್ಣ ಬಣ್ಣ ಬಳಿಸಿಕೊಳ್ಳಲು ಅಥವಾ ಗೂಡುಗಳಲ್ಲಿ ಇರುವ ಪುಸ್ತಕಗಳು ಓರಣವಾಗಲು ಹೊಸ ವರ್ಷವೇ ಬರಬೇಕಿಲ್ಲ. ಪೊರಕೆಯಂತೂ ಸರ್ವದಾ ಕಸ ಗುಡಿಸಲು ಸನ್ನದ್ಧವಾಗಿರುತ್ತದೆ. ವಾಹನವು ಸ್ವಚ್ಛತೆಗೆ ಒಲ್ಲೆಯೆನ್ನದು. ತೀರಕ್ಕೆ ಅಪ್ಪಳಿಸಲು ಕಡಲ ಅಲೆಗಳಿಗೆ ಮುಹೂರ್ತವೇ? ಬದ್ಧತೆಯಿದ್ದರೆ ಯಾವುದೇ ನಿರ್ಣಯ ಬೇಕಿಲ್ಲ. ತೀರ್ಮಾನ, ನಿಶ್ಚಯಗಳಿಂದಲೇ ಬದುಕು ಬದಲಾಗದು.

ನಮ್ಮನ್ನು ಹಿಗ್ಗು, ಹುಮ್ಮಸ್ಸಿನ ಮಂದಿ ಸುತ್ತುವರಿದರೂ ನಾವು ವಿಚಲಿತರಾಗಬೇಕಿಲ್ಲ. ನಮ್ಮ ಕ್ರಿಯಾಶೀಲ ಒಂಟಿತನದಲ್ಲಿ ಅಸ್ಮಿತೆಯಿದೆ, ಸ್ವಂತಿಕೆಯಿದೆ. ಐನ್‌ಸ್ಟೀನ್ ಸಿದ್ಧಾಂತದಂತೆ, ಕಾಲ ಹೇಗೂ ಸಾಪೇಕ್ಷವಾದುದು. ಹಾಗೆ ನೋಡಿದರೆ, ಜಾಗತಿಕವಾದ ಹೊಸ ವರ್ಷ ಎನ್ನುವುದೇ ಇಲ್ಲ. ನಮಗೆ ಹೋಲಿಸಿದರೆ ಆಸ್ಟ್ರೇಲಿಯಾ ಮೊದಲು, ನಂತರ ಸಿಂಗಪುರ ನಡುರಾತ್ರಿ 12 ಕಂಡು ನವವರ್ಷವನ್ನು ಸ್ವಾಗತಿಸಿಬಿಟ್ಟಿರುತ್ತವೆ. ತದನಂತರ ಭಾರತಕ್ಕೆ.

ಆತ್ಮವಿಶ್ವಾಸವೇ ನಾವು ನಮ್ಮ ಇತಿಮಿತಿಗಳಿಂದ ಹೊರಬರಲು ಕೀಲಿಕೈ. ನಮ್ಮ ಬದುಕಿನ ಸಂದರ್ಭಗಳು ಮಾಂತ್ರಿಕವಾಗಿ ಬದಲಾಗುವುದು ಅಸಾಧ್ಯ. ಹೊಸ ಗಾಳಿ ನಿರೀಕ್ಷಿಸದೆ, ಇದ್ದುದರಲ್ಲೇ ಜಾಣ್ಮೆಯಿಂದ ದೋಣಿ ಹಾಯಿಸುವುದೇ ಸರಿ. ಅಂದಹಾಗೆ ಯಾವ ದಿಕ್ಕು, ಎತ್ತ ಯಾನ ಎನ್ನುವ ಸ್ಪಷ್ಟತೆಯಿಲ್ಲದಿದ್ದರೆ ಎಂತಹ ಗಾಳಿ ಬೀಸಿದರೆ ತಾನೆ ಏನು ಪ್ರಯೋಜನ? ಹಾಗಾಗಿ, ಪ್ರಾರಂಭದತ್ತ ಪ್ರಯಾಣ ಅತಿ ಮುಖ್ಯ ಹಂತ. ನಿಜವಾಗಿ ಸುಧಾರಿಸುವುದೆಂದರೆ ಫಲವನ್ನು ಅಲಕ್ಷಿಸುವುದು. ನಮ್ಮ ಹೊಸ ಭವಿಷ್ಯ ನಮ್ಮಿಂದಲೇ. ನಮ್ಮ ಅಪೇಕ್ಷೆ, ನಿರೀಕ್ಷೆಗಳನ್ನು ಈಡೇರಿಸುವ ಯಾವುದೇ ಕ್ಯಾಲೆಂಡರ್ ಇಲ್ಲ! ಏಕೆಂದು ತಿಳಿಯದೆ ಇಂಥದ್ದು ಬೇಕೆನ್ನುವುದು ದೌರ್ಬಲ್ಯ. ಇಟಲಿ ದೇಶದಲ್ಲಿ ಈ ಗಾದೆ ಮನೆಮಾತು: 'ನಮ್ಮ ಕನಸನ್ನು ಅಸಾಧ್ಯವಾಗಿಸುವ ಒಂದೇ ಒಂದು ಅಂಶವೆಂದರೆ, ಸೋಲುತ್ತೇವೆಂಬ ಭಯ'. ಪೂರ್ವಸಿದ್ಧತೆ ಯಶಸ್ಸಿಗೆ ದಾರಿ. ನಿನ್ನೆಯಿಂದ ಕಲಿತು, ಇಂದು ಬಾಳಿ, ನಾಳಿನ ಬಗ್ಗೆ ಭರವಸೆ ಹೊಂದುವುದೇ ಮಾದರಿ. ಹೊಸ ವರ್ಷದಲ್ಲಿ ತಾರತಮ್ಯವಿಲ್ಲದೆ ನಮಗೆಲ್ಲರಿಗೂ ಸಿಗುವುದು ತಲಾ 365 ದಿನಗಳು. ವ್ಯತ್ಯಾಸವಿರುವುದು ಅವನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರಲ್ಲಿ.

ಗ್ರೀಕ್ ದಾರ್ಶನಿಕ ಸಾಕ್ರೆಟಿಸ್ 'ನಮ್ಮ ಬದುಕನ್ನು ಪರಿಷ್ಕರಿಸಿಕೊಳ್ಳುತ್ತಿರಬೇಕು, ಪರೀಕ್ಷಿಸಲ್ಪಡದ ಬದುಕು ಬದುಕಲ್ಲ' ಎಂದ. ನಮ್ಮ ಅಂತಃಪ್ರಜ್ಞೆಗಿಂತ ಶ್ರೇಷ್ಠ ಗುರುವಿಲ್ಲ. ಅಂತಃಪ್ರಜ್ಞೆಯನ್ನು ಅತಿಕ್ರಮಿಸಬಾರದು.

ಮಾನವ ಇತಿಹಾಸದಲ್ಲೇ ಮೊದಲಿಗೆ ಮೆಸಪಟೋಮಿಯಾ ದೇಶದ ಬ್ಯಾಬಿಲೋನಿಯಾ ಪ್ರಾಂತ್ಯದಲ್ಲಿ ಕ್ರಿ.ಪೂ. ಸುಮಾರು 2000ದಲ್ಲಿ ಹೊಸ ವರ್ಷದ ಆಗಮನವು ಸಡಗರವಾದದ್ದಕ್ಕೆ ದಾಖಲೆಯಿದೆ. ವಸಂತ ಋತುವಿನ ನಂತರದ ಅಮಾವಾಸ್ಯೆ ಅಂದು, ಮಾರ್ಚ್ ತಿಂಗಳ ಮಧ್ಯಭಾಗ. ಬ್ಯಾಬಿಲೋನಿಯನ್ನರು ಹನ್ನೊಂದು ದಿನಗಳವರೆಗೆ ಸಂಭ್ರಮದಲ್ಲಿ ಮುಳುಗಿದ್ದರು. ಆಗ ಅವರ ಗಣನೆಯಲ್ಲಿ 12 ಚಾಂದ್ರಮಾಸಗಳು ಒಂದು ವರ್ಷ. ಒಂದು ಚಾಂದ್ರಮಾಸವೆಂದರೆ ಎರಡು ಕ್ರಮಾಗತ ಅಮಾವಾಸ್ಯೆ ಅಥವಾ ಹುಣ್ಣಿಮೆಗಳ ನಡುವಿನ ಅವಧಿ.

ಹೊಸ ವರ್ಷದ ಸಂದರ್ಭದಲ್ಲಿ ಬರುವ ಹಾರೈಕೆಗಳಲ್ಲಿ ಬಹುತೇಕವು ಸಿದ್ಧಮಾದರಿಗಳೇ. 'ನವ ವರ್ಷದಲ್ಲಿ ನಿಮ್ಮ ಸಾಲಗಳು ತೀರಲಿ', 'ನಿಮ್ಮ ಅರ್ಜಿ, ಅಹವಾಲುಗಳೆಲ್ಲವೂ ಇತ್ಯರ್ಥಗೊಳ್ಳಲಿ'... ಎಂಬಂತಹ ಹಾರೈಕೆಗಳು ಉತ್ಪ್ರೇಕ್ಷಿತವೆಂಬುದು ನಮ್ಮಷ್ಟೇ ಹಿತೈಷಿಗಳಿಗೂ ತಿಳಿದಿರುತ್ತದೆ. ಹೊಸ ವರ್ಷದಲ್ಲಿ ಹಾಲು ಜೇನಿನ ಮಳೆಯಿರಲಿ, ಕಾಲೋಚಿತ ಮಳೆ ಸುರಿದರೆ ಅದೇ ವರ. ಆದರೆ ಮುಂಬರುವ ದಿನಗಳಲ್ಲಿ ವಿಶ್ವಾಸವಿರಲೆಂಬ ಅವರ ಶುಭಕಾಮನೆಯಿಂದ ಅಪ್ಪು ತಳಮಳೋಪಶಮನ ತಾನೆ?

ವಾಚಕರ ವಾಣಿ

ಚಾರಣಕ್ಕೆ ಬೇಕು ಸೂಕ್ತ ಸುರಕ್ಷತೆ

ಚಾರಣ ಎನ್ನುವಂತಹದ್ದು ಇಂದಿನ ಯುವಪೀಳಿಗೆಯ ಹವ್ಯಾಸದ ಒಂದು ಭಾಗವಾಗಿದೆ. ಆದರೆ ಚಾರಣಕ್ಕೆ ಹೋದವರಲ್ಲಿ ಕೆಲವರು ಜೀವಕ್ಕೆ ಕುತ್ತು ತಂದುಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ನಾಪತ್ತೆ ಆಗುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಇವು ಕಳವಳ ಮೂಡಿಸುವಂತಹ ಸಂಗತಿಗಳು.

ಚಾರಣಿಗರ ಸುರಕ್ಷತೆಯನ್ನು ಖಾತರಿಪಡಿಸುವ ಮಾರ್ಗೋಪಾಯಗಳನ್ನು ಅರಣ್ಯ ಇಲಾಖೆಯು ಶೋಧಿಸಬೇಕು. ಮಾರ್ಗ ನಕ್ಷೆ, ಚಾರಣಕ್ಕೆ ನಿರ್ದಿಷ್ಟ ಪ್ರದೇಶ ಸೂಕ್ತವೋ ಅಲ್ಲವೋ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ, ನಾಮಫಲಕಗಳ ವ್ಯವಸ್ಥೆ, ದಾರಿ ತಪ್ಪಿದಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಮಾಹಿತಿ ಒದಗಿಸಬೇಕು.

ಅಂಬಿಕಾ ಬಿ.ಟಿ., ಹಾಸನ

ವ್ಯಕ್ತಿಪೂಜೆ: ಹಲವು ಸಮಸ್ಯೆಗಳ ಮೂಲ

ರವೀಂದ್ರ ಭಟ್ಟ ಅವರ 'ಇಂದಿರಾ-ನರೇಂದ್ರ: ಬಿಂಬ, ಪ್ರತಿಬಿಂಬ' ಲೇಖನ (ಪ್ರ.ವಾ., ಡಿ.29) ನಮ್ಮ ದೇಶದ ರಾಜಕೀಯ ಸ್ಥಿತಿಗತಿಗೆ ಕನ್ನಡಿ ಹಿಡಿದಿದೆ. ವ್ಯಕ್ತಿಪೂಜೆಯು ನಮ್ಮ ಹಲವಾರು ಸಮಸ್ಯೆಗಳ ಮೂಲ. ಈ ವಿಚಾರದಲ್ಲಿ ಐದು ದಶಕಗಳ ಹಿಂದೆ ಇದ್ದಂತಹ ಸ್ಥಿತಿಯೇ ಈಗಲೂ ಇದೆ. ನಾವು ಚುನಾಯಿಸಿದವರು ಕೂಡ ನಮ್ಮ ಹಾಗೆ ಸಾಮಾನ್ಯ ಪ್ರಜೆಗಳು, ಅವರು ಕೂಡ ತಪ್ಪೆಸಗಬಹುದು, ತಪ್ಪೆಸಗಿದಾಗ ಅವರನ್ನು ಪ್ರಶ್ನಿಸಲೂಬಹುದು ಎಂಬ ಸಾಮಾನ್ಯ ಜ್ಞಾನ ಅನೇಕರಲ್ಲಿ ಇಲ್ಲವಾಗಿದೆ.

ಜನಪ್ರತಿನಿಧಿಗಳು ಲಗಾಮು ಇಲ್ಲದೆ ಮಾತನಾಡುವುದಕ್ಕೆ, ವರ್ತಿಸುವುದಕ್ಕೆ ಇದು ಕಾರಣವಾಗಿದೆ. ವ್ಯಕ್ತಿಯನ್ನು ಆರಾಧಿಸುವ ಈ ಮನಃಸ್ಥಿತಿಯಿಂದ ಜನ ಹೊರಬಂದಾಗ ನಾಯಕರಲ್ಲಿ ನಯ-ವಿನಯ ತಾನಾಗಿಯೇ ಮೂಡುತ್ತದೆ.

ಸಂಭ್ರಮ ಎಸ್.ಹಿರೇಮಠ, ಹರಿಹರ

ಕನ್ನಡ ಮಾಧ್ಯಮ: ಆತಂಕಕಾರಿ ಬೆಳವಣಿಗೆ

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ, ಸೌಲಭ್ಯಗಳ ಕೊರತೆ, ಗುಣಮಟ್ಟ ಇತ್ಯಾದಿ ಕುರಿತ ವಿಶೇಷ ವರದಿ ಹಾಗೂ ಸಂಪಾದಕೀಯ (ಪ್ರ.ವಾ., ಡಿ.24 ಮತ್ತು ಡಿ.28) ವಸ್ತುಸ್ಥಿತಿಯ ಮೇಲೆ ಬೆಳಕು ಚೆಲ್ಲಿವೆ. ಇನ್ನೂ ಆತಂಕದ ಸಂಗತಿ ಒಂದಿದೆ. ಶಿಕ್ಷಣ ಇಲಾಖೆಯ ಈ ವರ್ಷದ ಅಂಕಿ ಅಂಶಗಳ ಪ್ರಕಾರ 2023-24ನೇ ಸಾಲಿನಲ್ಲಿ ಕನ್ನಡ ಮಾಧ್ಯಮಕ್ಕೆ ಒಂದನೆಯ ತರಗತಿಗೆ ಪ್ರವೇಶ ಪಡೆದ ಮಕ್ಕಳ ಸಂಖ್ಯೆಯು ಇಂಗ್ಲಿಷ್ ಮಾಧ್ಯಮಕ್ಕೆ ಪ್ರವೇಶ ಪಡೆದ ಮಕ್ಕಳ ಸಂಖ್ಯೆಗಿಂತ ಕಡಿಮೆ ಇದೆ. ರಾಜ್ಯದಲ್ಲಿ ಮೊದಲ ಬಾರಿಗೆ ಈ ರೀತಿ ಆಗಿದೆ.

ಕನ್ನಡ ಮಾಧ್ಯಮಕ್ಕೆ 2023-24ನೇ ಸಾಲಿಗೆ ಪ್ರವೇಶ ಪಡೆದ ಒಂದನೆಯ ತರಗತಿ ಮಕ್ಕಳ ಸಂಖ್ಯೆ 4,61,674. ಇಂಗ್ಲಿಷ್ ಮಾಧ್ಯಮಕ್ಕೆ ಪ್ರವೇಶ ಪಡೆದ ಮಕ್ಕಳ ಸಂಖ್ಯೆ 5,12,640. ಉರ್ದು ಮತ್ತು ಮರಾಠಿ ಮಾಧ್ಯಮ ಈ ಎರಡಕ್ಕೂ ಸೇರಿ 43 ಸಾವಿರ ಮಕ್ಕಳು ಪ್ರವೇಶ ಪಡೆದಿದ್ದಾರೆ. ಒಟ್ಟು 17 ಶೈಕ್ಷಣಿಕ ಜಿಲ್ಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಪ್ರವೇಶ ಪಡೆದ ಮಕ್ಕಳ ಸಂಖ್ಯೆ ಹೆಚ್ಚಿದೆ. ಅದರಲ್ಲೂ ಬೆಂಗಳೂರು ಮತ್ತು ಮೈಸೂರು ಹಾಗೂ ಈ ನಗರಗಳ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಪ್ರವೇಶಾತಿ ಹೆಚ್ಚಿಗೆ ಆಗಿದೆ.

ರಾಜ್ಯದಲ್ಲಿ ಒಂದರಿಂದ 10ನೇ ತರಗತಿವರೆಗೆ ಒಟ್ಟಾರೆ ಈಗ ಓದುತ್ತಿರುವ 1.12 ಕೋಟಿ ಮಕ್ಕಳಲ್ಲಿ 54.97 ಲಕ್ಷ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದರೆ, 52.29 ಲಕ್ಷ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿದ್ದಾರೆ. 3.63 ಲಕ್ಷ ಮತ್ತು 1.20 ಲಕ್ಷ ಮಕ್ಕಳು ಕ್ರಮವಾಗಿ ಉರ್ದು ಮತ್ತು ಮರಾಠಿ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಇತರ ಭಾಷೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ 8,000. ಕಳೆದ ನಾಲ್ಕಾರು ವರ್ಷಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ತ್ವರಿತ ಗತಿಯಲ್ಲಿ ಕಡಿಮೆಯಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ತುರ್ತು ಕ್ರಮ ಕೈಗೊಳ್ಳದಿದ್ದರೆ ಮತ್ತು ಅವುಗಳಿಗೆ ಆದ್ಯತೆ ನೀಡದೇ ಹೋದರೆ ಸರ್ಕಾರಿ ಶಾಲೆಗಳಿಗೆ ಉಳಿವಿಲ್ಲ.

ವೆಂಕಟೇಶ ಮಾಚಕನೂರ, ಧಾರವಾಡ

ಹೊಸ ಬೆಳಕು...

ರಾಜಕೀಯ, ಶಿಕ್ಷಣ
ಸಾರ್ವಜನಿಕ ಕ್ಷೇತ್ರಗಳಲ್ಲಿ
ತುಂಬಿ ತುಳುಕಿದೆ ಭ್ರಷ್ಟತೆಯ ಕಗ್ಗತ್ತಲು!
ಎಷ್ಟೇ ಬೆಳಕಿದ್ದರೂ
ಸಾಲದಾಗಿದೆ ಈ ಕಗ್ಗತ್ತಲನ್ನು ಕರಗಿಸಲು
ಹೊಸ ವರ್ಷದ ಹೊಸ ಬೆಳಕು
ಈ ಕಗ್ಗತ್ತಲನ್ನು ಕರಗಿಸಲಿ,
ಚೈತನ್ಯ ನೀಡಿ ಹೊಸಹುರುಪು
ಮೂಡಿಸಲಿ, ತಲೆ ಎತ್ತಲು!

ಎಚ್.ಕೆ. ಕೊಟ್ರಪ್ಪ, ಹರಿಹರ

ನಾಯಿ ಹಾವಳಿಗೆ ಬೇಕು ಲಗಾಮು

ಬೆಂಗಳೂರಿನಲ್ಲಿ ಸಾಕು ನಾಯಿಗಳ ಹಾವಳಿ ಹೆಚ್ಚಾಗಿದೆ. ನಗರದ ಅನೇಕ ನಾಗರಿಕರಿಗೆ ಇದರ ಅನುಭವ ಆಗಿದೆ. ಕೆಲವು ಸಾಕು ನಾಯಿಗಳ ಮಾಲೀಕರ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯ ಧೋರಣೆಯೇ ಇದಕ್ಕೆ ಮುಖ್ಯ ಕಾರಣ. ಇದರಿಂದ ಆಗುವ ಅನಾಹುತಗಳಿಗೆ ಇವರನ್ನೇ ನೇರ ಹೊಣೆಗಾರರನ್ನಾಗಿ ಮಾಡಬೇಕು.

ಈ ಸಾಕು ನಾಯಿಗಳು ರಸ್ತೆಯಲ್ಲಿ ಹಾಗೂ ಯಾರದೋ ಮನೆಯ ಮುಂದೆ ಅಥವಾ ಎಲ್ಲಿ ಬೇಕೆಂದರೆ ಅಲ್ಲಿ ಮಲ-ಮೂತ್ರ ವಿಸರ್ಜಿಸಿ, ಗಲೀಜು ಮಾಡುತ್ತವೆ. ರಸ್ತೆಯಲ್ಲಿ ಬೆಳಿಗ್ಗೆ ವಾಯುವಿಹಾರಕ್ಕೆ ಹೋಗುವವರ ಮೇಲೆ ದಿಢೀರನೆ ಎರಗುತ್ತವೆ. ಕೆಲವೊಮ್ಮೆ ಅಟ್ಟಿಸಿಕೊಂಡು ಹೋಗುವುದೂ ಉಂಟು. ನಾಯಿಯನ್ನು ಮುಂದೆ ಬಿಟ್ಟುಕೊಂಡು ಇವರು ಅದರ ಹಿಂದೆ ಹೋಗುತ್ತಾರೆ. ಸುರಕ್ಷಾ ಉಪಕ್ರಮಗಳ ಬಗ್ಗೆ ಲಕ್ಷ್ಯವೇ ಇರುವುದಿಲ್ಲ.

ಪಿ. ಶಿವಪ್ಪ, ಬೆಂಗಳೂರು

ಸ್ವಾಗತಾರ್ಹ ನಡೆ: ಪ್ರಕರಣ ಕೈಬಿಡಿ

ಅಂಗಡಿ, ಮಳಿಗೆ ಹಾಗೂ ಇತರ ವ್ಯಾಪಾರಿ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಇರುವುದನ್ನು ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ನಡೆ ಸ್ವಾಗತಾರ್ಹ. ಅಂತೆಯೇ ಕನ್ನಡಪರ ಹೋರಾಟಗಾರರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೈಬಿಡುವಂತಹ ಔದಾರ್ಯವನ್ನೂ ಸರ್ಕಾರ ಪ್ರದರ್ಶಿಸಬೇಕು.

ಹಣಮಂತ ಎಂ.ಕೆ., ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2023 ಮರೆಯುವ ಮುನ್ನ...

ಜಗದಗಲದ ಹಾಡುಪಾಡು

• ಜಯಸಿಂಹ ಆರ್.



20,000+ ಇಸ್ರೇಲ್‌ನ ದಾಳಿಯಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯನ್ನರ ಸಂಖ್ಯೆ

1,500 ಹಮಾಸ್‌ನ ದಾಳಿಯಲ್ಲಿ ಮೃತಪಟ್ಟ ಇಸ್ರೇಲಿಗರ ಸಂಖ್ಯೆ

‘ನೀವು ಎಂದಾದರೂ ಗಾಜಾಗೆ
ಬರುವಿರಾದರೆ,
ನಿಮ್ಮ ಬೂಟುಗಳನ್ನು ಆಚೆಯೇ ಕಳಚಿಟ್ಟು
ಕಾಲುಗಳನ್ನು ತೊಳೆದು ಒಳಗೆ ಬನ್ನಿ.
ಈ ನೆಲಕ್ಕೆ ನಮ್ಮ ರಕ್ತದ ನೀರೆರೆಯಲಾಗಿದೆ
ಇಲ್ಲಿ ಗುಲಾಬಿ ಅರಳುತ್ತಿದೆ.
ನೀವು ಹೆಜ್ಜೆಯಿಟ್ಟ ನೆಲವೆಲ್ಲಾ
ಮಕ್ಕಳ ರಕ್ತದಿಂದ ತೋಯ್ದುಹೋಗಿದೆ
ಅಲ್ಲೂ ಗುಲಾಬಿ ಅರಳುತ್ತಿದೆ.
ಅದರ ಘಾಟು-ಘಮಲು ನಮಗಷ್ಟೇ ಬಡಿಯುತ್ತಿದೆ...’

ಗಾಜಾ ಪಟ್ಟಿಯ ಖಾನ್ ಯೂನಿಸ್‌ನ ವಸತಿ ಪ್ರದೇಶದ ಮೇಲೆ ಇದೇ ನವೆಂಬರ್‌ನಲ್ಲಿ ಇಸ್ರೇಲ್ ಪಡೆಗಳು ನಡೆಸಿದ ಬಾಂಬ್ ದಾಳಿಯಲ್ಲಿ ಹಲವು ಮಕ್ಕಳು ಮೃತಪಟ್ಟಿದ್ದವು. ಆ ದಾಳಿಯ ಮರುದಿನ ಗಾಜಾದ ಯುವಕವಿ ಮೊಸಬ್ ಅಬು ತೋಹಾ ಬರೆದ ಕವಿತೆಯಿದು. ಮೊಸಬ್ ತನ್ನ ಇನ್‌ಸ್ಟಾಗ್ರಾಂನಲ್ಲಿ, ನೆಲಕಚ್ಚಿ ನುಚ್ಚುನೂರಾದ ಮನೆಗಳ ಅವಶೇಷಗಳ ಬಳಿ ರಕ್ತಸಿಕ್ತವಾಗಿದ್ದ ಗೊಂಬೆಯೊಂದು ಬಿದ್ದಿತ್ತು. ಅದನ್ನು ನೋಡಿದ ನನ್ನ ಎಂಟು ವರ್ಷದ ಮಗ ‘ಅಪ್ಪಾ, ನನ್ನ ಗೊಂಬೆಗಳು ಇನ್ನೂ ಜೀವಂತವಾಗಿವೆಯಾ’ ಎಂದು ಪ್ರಶ್ನಿಸಿದ ಎಂದು ಬರೆದುಕೊಂಡಿದ್ದಾರೆ.

2023ರ ಕ್ಯಾಲೆಂಡರ್ ಅನ್ನು ಯಾವ ಕಡೆಯಿಂದ ತಿರುವಿ ಹಾಕಿದರೂ ಪ್ರತಿ ಪುಟವೂ ರಕ್ತಸಿಕ್ತವಾಗಿಯೇ ಕಾಣುತ್ತದೆ. ಜಗತ್ತಿನ ಯಾವುದೇ ನೆಲದಲ್ಲಿ ನಿಂತರೂ ಆ ರಕ್ತಸಿಕ್ತ ಅಧ್ಯಾಯಗಳೇನೂ ಬದಲಾಗುವುದಿಲ್ಲ. ಅದು ಮಾನವ ಎಸಗಿದ ಕೃತ್ಯಗಳಾಗಿರಬಹುದು ಅಥವಾ ಭೂಮಿ ತಾಯಿ ಮುನಿಸಿಕೊಂಡಿದ್ದರಿಂದ ಎರಗಿದ ವಿಕೋಪಗಳಾಗಿರಬಹುದು, 2023 ಜನರ ಪಾಲಿಗೆ ಸಂಕಷ್ಟ ಕಾಲವೇ ಆಗಿತ್ತು.

ವರ್ಷದಿಂದ ನಡೆಯುತ್ತಿದ್ದ ರಷ್ಯಾ-ಉಕ್ರೇನ್ ಕದನ 2023ರಲ್ಲೂ ಮುಂದುವರಿಯಿತು. ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ-ಅಮೆರಿಕದ ಸೇನಾಶಕ್ತಿ ಪ್ರದರ್ಶನ, ದಕ್ಷಿಣ ಕೊರಿಯಾದ ಅಣ್ವಸ್ತ್ರ ಪೈಪೋಟಿಗೆ ಆಗ್ನೇಯ ಏಷ್ಯಾ ಸಾಕ್ಷಿಯಾಗಿತ್ತು. ಪಶ್ಚಿಮ ಆಫ್ರಿಕಾದ ದೇಶಗಳು ಕ್ರೈಸ್ತ ಮತ್ತು ಇಸ್ಲಾಂ ಮೂಲಭೂತವಾದಿಗಳ ಸಶಸ್ತ್ರ ಸಂಘರ್ಷಕ್ಕೆ ಗುರಿಯಾಗಿದ್ದವು.

ಇನ್ನೇನು ವರ್ಷ ಮುಗಿಯಿತು ಎನ್ನುವ ಹೊತ್ತಿಗೆ ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರು ಇಸ್ರೇಲ್‌ನ ಮೇಲೆ ದಾಳಿ ನಡೆಸಿದ್ದರು. ಪ್ರತೀಕಾರವಾಗಿ ಇಸ್ರೇಲ್ ನಡೆಸಿದ ದಾಳಿಯು 2023 ಅನ್ನು ಇನ್ನಷ್ಟು ರಕ್ತಸಿಕ್ತವಾಗಿಸಿತು. ಭಾರತ, ಐರೋಪ್ಯ ದೇಶಗಳು ಮತ್ತು ಅಮೆರಿಕವು ಇಸ್ರೇಲ್‌ನ ಪ್ರತೀಕಾರವನ್ನು ಬೆಂಬಲಿಸಿದವು. ಆದರೆ ಇಸ್ರೇಲ್‌ನ ಯುದ್ಧದಾಹ ದಿನೇದಿನೇ ತೀವ್ರಗೊಂಡಿದ್ದನ್ನು ವಿಶ್ವ ಸಂಸ್ಥೆ ಖಂಡಿಸಿತು. ಇಸ್ರೇಲ್ ಅನ್ನು ಬೆಂಬಲಿಸಿದ ದೇಶಗಳೂ, ಅದರ ನಡೆಯನ್ನು ಖಂಡಿಸಿದವು. ಭಾರತವೂ ಇಸ್ರೇಲ್ ಅನ್ನು ಬೆಂಬಲಿಸುವ ನಿಲುವಿನಿಂದ ಹಿಂದೆ ಸರಿದು, ಪ್ಯಾಲೆಸ್ಟೀನ್-ಇಸ್ರೇಲ್ ಎಂಬ ಎರಡು ದೇಶಗಳ ಸೂತ್ರವನ್ನು ಮತ್ತೆ ಬೆಂಬಲಿಸಿತು. ಆದರೆ ಯುದ್ಧ ಮುಗಿದಿಲ್ಲ. ಗಾಜಾ ಪಟ್ಟಿಯಲ್ಲಿ ಪ್ರತಿದಿನ ನೆಲಕಚ್ಚುತ್ತಿರುವ ಕಟ್ಟಡಗಳ ಸಂಖ್ಯೆಯೇನೂ ಇಳಿದಿಲ್ಲ; ಅವುಗಳೊಂದಿಗೆ ಮಣ್ಣಾಗುತ್ತಿರುವ ಜೀವಗಳ ಸಂಖ್ಯೆಯೂ ಏರುಗತಿಯಲ್ಲಿಯೇ ಇದೆ.

ಯುದ್ಧಗಳು ಜಗತ್ತಿನ ಪ್ರಮುಖ ದೇಶಗಳನ್ನು ಎರಡು ಬಣಗಳಾಗಿಸಿದವು. ಉಕ್ರೇನ್-ರಷ್ಯಾ ಕದನದಲ್ಲಿ ಐರೋಪ್ಯ ದೇಶಗಳು ಮತ್ತು ಅಮೆರಿಕವು ಉಕ್ರೇನ್ ಪರವಾಗಿ ನಿಂತಿವೆ. ರಷ್ಯಾ ಜೊತೆಗೆ ನಿಕಟ ಬಂಧ ಹೊಂದಿರುವ ದೇಶಗಳು ರಷ್ಯಾವನ್ನು ಬೆಂಬಲಿಸುತ್ತಿವೆ. ಪ್ಯಾಲೆಸ್ಟೀನ್-ಇಸ್ರೇಲ್ ಯುದ್ಧದಲ್ಲೂ ಹೀಗೇ ಆಗಿದೆ. ಯಹೂದ್ಯರ ಬಗ್ಗೆ ಒಲವು ಇರಿಸಿಕೊಂಡಿರುವ ಅಮೆರಿಕ ಮತ್ತು ಐರೋಪ್ಯ ದೇಶಗಳು ಇಸ್ರೇಲ್ ಪರ ಸಹಾನುಭೂತಿ ಹೊಂದಿದ್ದರೆ, ಮುಸ್ಲಿಂ ರಾಷ್ಟ್ರಗಳು ಪ್ಯಾಲೆಸ್ಟೀನ್ ಪರವಾಗಿ ನಿಂತಿವೆ. ಗಾಜಾದಲ್ಲಿ ಇಸ್ರೇಲ್ ಎಸಗಿದ ಯುದ್ಧಾಪರಾಧಗಳ ವಿರುದ್ಧ ಮಾತನಾಡದೇ ಇದ್ದುದಕ್ಕೆ ಬ್ರಿಟನ್ ಮತ್ತು ಅಮೆರಿಕದ ಪ್ರಜೆಗಳು ಅಲ್ಲಿನ ಸರ್ಕಾರಗಳನ್ನು ಖಂಡಿಸಿದ್ದರು. ಇನ್ನೂ ಕೆಲವು ದೇಶಗಳು ಮುಸ್ಲಿಮರ ದೇಶ ಎನ್ನುವ ಕಾರಣಕ್ಕೆ ಪ್ಯಾಲೆಸ್ಟೀನ್‌ನ ವಿರುದ್ಧವಾಗಿ ನಿಂತಿವೆ.

ಯುದ್ಧಗಳದ್ದು ಒಂದು ಕತೆಯಾದರೆ ಜನಾಂಗೀಯ ಸಂಘರ್ಷಗಳದ್ದು ಇನ್ನೊಂದು ಕತೆ. ಮ್ಯಾನ್ಮಾರ್‌ನಲ್ಲಿ ಜನಾಂಗೀಯ ಅಲ್ಪಸಂಖ್ಯಾತ ರೊಹಿಂಗ್ಯಾ ಮುಸ್ಲಿಮರು ಮತ್ತು ಚಿನ್ ಜನರ ಮೇಲೆ ಅಲ್ಲಿನ ಸೇನೆಯು ಇದೇ ಏಪ್ರಿಲ್‌ನಲ್ಲಿ ದಾಳಿ ನಡೆಸಿತ್ತು. ಮಧ್ಯಪ್ರಾಚ್ಯದ ಸಿರಿಯಾ ಮತ್ತು ಸುಡಾನ್‌ನಲ್ಲಿ ಇಸ್ಲಾಮಿಕ್ ಸ್ಟೇಟ್ ಉಗ್ರರು ಮತ್ತು ಸರ್ಕಾರಗಳ ಮಧ್ಯೆ ಸಶಸ್ತ್ರ ಸಂಘರ್ಷ ನಡೆಯುತ್ತಲೇ ಇದೆ. ವರ್ಷದ ಕೊನೆಯಲ್ಲಿ ಅಮೆರಿಕದಲ್ಲಿ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿಯೂ ರಕ್ತ ಹರಿಯಿತು.

ಪ್ರಕೃತಿ ವಿಕೋಪಗಳ ಬಿಸಿ

ಪ್ರಕೃತಿಯೂ ಈ ವರ್ಷ ಸ್ವಲ್ಪ ಹೆಚ್ಚೇ ಮುನಿಸಿಕೊಂಡಿತ್ತು. ಮಳೆ-ಪ್ರವಾಹ, ತೀವ್ರ ಬರ, ಕಾಳ್ಗಿಚ್ಚು, ಭೂಕಂಪಗಳಿಗೆ ಜಗತ್ತಿನ ಬೇರೆ-ಬೇರೆ ಭಾಗಗಳು ಗುರಿಯಾಗಿವೆ. ಈ ಎಲ್ಲವೂ ಜನರ ಊಟ, ಮನೆ ಮತ್ತು ನೆಮ್ಮದಿಯನ್ನು ಕಸಿದುಕೊಂಡಿದೆ. ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನವನ್ನು ನಿಯಂತ್ರಿಸುವ ಸಂಬಂಧ ಗುರಿ ನಿಗದಿಪಡಿಸಬೇಕಿದ್ದ ಹವಾಮಾನ ಶೃಂಗಸಭೆಯೂ ನಿರೀಕ್ಷಿತ ಫಲ ನೀಡಿಲ್ಲ. ದುಬೈನಲ್ಲಿ ಇದೇ ಡಿ. 1-2ರಂದು ನಡೆದ ಶೃಂಗಸಭೆಯಲ್ಲಿ ತಾಪಮಾನವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಸಂಬಂಧ ಎಲ್ಲಾ ದೇಶಗಳು ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ.



ಉಕ್ರೇನ್‌ನಿಂದ ರಷ್ಯಾ ಹಿಮ್ಮೆಟ್ಟುತ್ತಿದೆಯಾದರೂ ಎಲ್ಲೆಡೆ ನೆಲಬಾಂಬ್‌ಗಳನ್ನು ಹುದುಗಿಸಿಟ್ಟಿದೆ. ರಷ್ಯಾ ದಾಳಿಯಿಂದ ಧ್ವಂಸವಾಗಿರುವ ಊರು/ಮನೆಗಳನ್ನು ಕಟ್ಟುವ ಕೆಲಸಕ್ಕೆ ಉಕ್ರೇನ್ ಮುಂದಾಗಿದೆ. ಹೀಗೆ ಧ್ವಂಸವಾದ ಪೂರ್ವ ಉಕ್ರೇನ್‌ನಲ್ಲಿನ ಶಾಲೆಯೊಂದರಲ್ಲಿ ಉಕ್ರೇನ್ ಸೈನಿಕ ಪಿಯಾನೊ ನುಡಿಸಿದ ಬಗೆ

ದಕ್ಷಿಣ ಅಮೆರಿಕದ ಖಂಡದ ಅಮೆಜಾನ್ ಜಲಾನಯನ ಪ್ರದೇಶದಲ್ಲಿ ತಲೆದೋರಿದ ಭೀಕರ ಬರದ ಕಾರಣದಿಂದ, ಅಮೆಜಾನ್ ನದಿಯ ಪ್ರಮುಖ ಉಪನದಿಗಳು ಬತ್ತಿಹೋಗಿವೆ. ಅಲ್ಲಿನ ಮೀನುಗಾರಿಕೆ, ಜಲಸಾರಿಗೆ ಸಂಪೂರ್ಣ ನೆಲಕಚ್ಚಿದೆ. ಲಕ್ಷಾಂತರ ಜನರು ಆಹಾರ ಅರಸಿ ಕಾಡುಪಾಲಾಗಿದ್ದಾರೆ. ಪೆರು, ಚಿಲಿ, ಬ್ರೆಜಿಲ್, ಕೊಲಂಬಿಯಾಗಳಲ್ಲಿ ಆಹಾರದ ಕೊರತೆ ಎದುರಾಗಿದೆ



ಹೆನ್ರಿ ಕಿಸಿಂಜರ್
ನಿಧನ: 29ನೇ ನವೆಂಬರ್
ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ

ಪರ್ವೇಜ್ ಮುಷರಫ್
ನಿಧನ: 5ನೇ ಫೆಬ್ರುವರಿ
ಪಾಕಿಸ್ತಾನದ ಮಾಜಿ ಅಧ್ಯಕ್ಷ

ಆಧಾರ ರಾಯಿಟರ್ಸ್, ಎಎಫ್‌ಪಿ, ಪಿಟಿಐ, ಬಿಬಿಸಿ

ಚಿತ್ರಗಳು: ಎಎಫ್‌ಪಿ

ಅಮೆರಿಕದ ಹವಾಯಿ ದ್ವೀಪದಲ್ಲಿ ಪ್ರಕೃತಿ ಬೇರೊಂದು ರೀತಿಯ ಕೋಪ-ತಾಪ ತೋರಿತ್ತು. ಹವಾಯಿ ದ್ವೀಪದಲ್ಲಿ ಇದೇ ಆಗಸ್ಟ್‌ನಲ್ಲಿ ತಲೆದೋರಿದ ಕಾಳ್ಗಿಚ್ಚಿಗೆ, ಹಲವು ನಗರಗಳು ಸಂಪೂರ್ಣ ಸುಟ್ಟುಹೋಗಿದ್ದವು. ಹವಾಯಿಯ ಸುಂದರ ಕಡಲ ತೀರಗಳು ಸುಟ್ಟು ಕರಕಲಾದರೆ, 2,700ಕ್ಕೂ ಹೆಚ್ಚು ಮನೆಗಳು ಬೂದಿಯಾಗಿದ್ದವು. ಈ ದುರಂತಗಳಲ್ಲಿ 103 ಜನರು ಪ್ರಾಣ ಕಳೆದುಕೊಂಡಿದ್ದರು

ಪಾಕಿಸ್ತಾನದ ಸಿಂಧ್ ಪ್ರಾಂತದಲ್ಲಿ ತಲೆದೋರಿದ ಭೀಕರ ಬರವು 3 ಕೋಟಿಗೂ ಹೆಚ್ಚು ಜನರನ್ನು ಬಾಧಿಸಿದೆ. ಮಳೆಯ ಕೊರತೆಯಿಂದ ಕೃಷಿ ಚಟುವಟಿಕೆಗಳು ನೆಲಕಚ್ಚಿವೆ. ಅಫ್ಗಾನಿಸ್ತಾನದ 40 ಲಕ್ಷಕ್ಕೂ ಹೆಚ್ಚು ನಿರಾಶ್ರಿತರನ್ನು ಪಾಕಿಸ್ತಾನವು ಇದೇ ನವೆಂಬರ್‌ನಲ್ಲಿ ಹೊರಗಟ್ಟಿತ್ತು. ನಾಲ್ಕೈದು ದಶಕಗಳಿಂದ ಪಾಕಿಸ್ತಾನದಲ್ಲೇ ನೆಲೆಸಿದ್ದ ಈ ಜನರು ಈಗ ನಿರಾಶ್ರಿತರಾಗಿದ್ದಾರೆ. ಗಡಿ ದಾಟಿ ಬಂದ ಅವರನ್ನು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರವು ಗಡಿಯಲ್ಲೇ ಶಿಬಿರ ತೆರೆದು ನಿಲ್ಲಿಸಿದೆ

ಚೀನಾ: ಈ ಹಿಂದಿನ 140 ವರ್ಷಗಳಲ್ಲೇ ಕಂಡಿರದಷ್ಟು ಮಳೆಗೆ ಬೀಜಿಂಗ್ 2023ರಲ್ಲಿ ಸಾಕ್ಷಿಯಾಗಿತ್ತು. ಬೀಜಿಂಗ್ ಮಾತ್ರವಲ್ಲ ಚೀನಾದ 16 ಪ್ರಮುಖ ಪ್ರಾಂತಗಳು ಈ ವರ್ಷ ಅತಿವೃಷ್ಟಿಗೆ ಗುರಿಯಾಗಿದ್ದವು.

ಇದೇ ಫೆಬ್ರುವರಿ 6ರ ಬೆಳಿಗ್ಗೆ ಸುಖನಿದ್ರೆಯಲ್ಲಿದ್ದ ಟರ್ಕಿಯ ಸಾವಿರಾರು ಮಂದಿ ಮತ್ತೆ ಬೆಳಗನ್ನು ನೋಡಲೇ ಇಲ್ಲ. ಟರ್ಕಿ ಮತ್ತು ಸುಡಾನ್‌ನಲ್ಲಿ ಸಂಭವಿಸಿದ್ದ ತೀವ್ರ ಭೂಕಂಪದಲ್ಲಿ ಹಲವು ನಗರಗಳು, ಗುಡ್ಡಗಾಡಿನ ಹಳ್ಳಿಗಳು ಸಂಪೂರ್ಣ ನೆಲಸಮವಾಗಿದ್ದವು

50,783 ಈ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ

1.02 ಲಕ್ಷ ಗಾಯಾಳುಗಳ ಸಂಖ್ಯೆ

1.57 ಕೋಟಿ ನಿರಾಶ್ರಿತರಾದವರ ಸಂಖ್ಯೆ

3.45 ಲಕ್ಷ ನೆಲಸಮವಾದ ಕಟ್ಟಡಗಳ ಸಂಖ್ಯೆ

2022ರಲ್ಲಿ ತೀವ್ರ ಕಾಳ್ಗಿಚ್ಚಿಗೆ ಗುರಿಯಾಗಿದ್ದ ಆಸ್ಟ್ರೇಲಿಯಾವು ಈ ವರ್ಷ ತೀವ್ರ ಮಳೆಯಲ್ಲಿ ತೋಯುತ್ತಿದೆ. ಪೂರ್ವ ಆಸ್ಟ್ರೇಲಿಯಾದಲ್ಲಿ ಡಿಸೆಂಬರ್ ಮೂರನೇ ವಾರದಲ್ಲಿ ಆರಂಭವಾದ ಮಳೆಯು, ಹಲವು ರಾಜ್ಯಗಳಲ್ಲಿ ಪ್ರವಾಹವನ್ನು ತಂದೊಡ್ಡಿದೆ. ಈಶಾನ್ಯ ಮತ್ತು ಪೂರ್ವ ಭಾಗದ ನದಿಗಳು ಉಕ್ಕಿ ಹರಿಯುತ್ತಿವೆ. ಕೃಷಿ ಚಟುವಟಿಕೆಗಳಿಗೆ ಅಡಚಣೆಯಾಗಿದೆ. ಮಳೆ ಸಂಬಂಧಿ ಅವಘಡಗಳಲ್ಲಿ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ

ನೊಬೆಲ್ ಶಾಂತಿ ಪುರಸ್ಕಾರ

ಈ ಬಾರಿಯ ನೊಬೆಲ್ ಶಾಂತಿ ಪುರಸ್ಕಾರ ದೊರೆತಿದ್ದು ಇರಾನಿನ ಮಾನವ ಹಕ್ಕುಗಳ ಹೋರಾಟಗಾರ್ತಿ ನರ್ಗೀಸ್ ಮೊಹಮ್ಮದಿ (51) ಅವರಿಗೆ. ಹಿಜಾಬ್ ಹೇರಿಕೆ ಮತ್ತು ಮಹಿಳೆಯರು ಕೂದಲು ಬಿಡುವುದಕ್ಕೆ ವಿಧಿಸಿದ್ದ ನಿಷೇಧದ ವಿರುದ್ಧ ನಡೆದ ಹೋರಾಟದಲ್ಲಿ ಹಲವು ಯುವತಿಯರನ್ನು ಸರ್ಕಾರ ಪರವಾದ ಸಂಪ್ರದಾಯವಾದಿಗಳು ಹತ್ಯೆ ಮಾಡಿದ್ದರು. ಪೊಲೀಸರ ದೌರ್ಜನ್ಯಕ್ಕೂ ಕೆಲವು ಯುವತಿಯರು ಬಲಿಯಾಗಿದ್ದರು. ಈ ಎಲ್ಲಾ ದೌರ್ಜನ್ಯಗಳ ವಿರುದ್ಧ ದನಿ ಎತ್ತಿದ್ದ ನರ್ಗೀಸ್ ಅವರನ್ನು ಇರಾನ್ ಸರ್ಕಾರ ಜೈಲಿಗಟ್ಟಿದೆ. ಕಾಲೇಜು ದಿನಗಳಿಂದ ಇಂತಹ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರು 31 ವರ್ಷಗಳಲ್ಲಿ ಒಟ್ಟು 13 ಬಾರಿ ಜೈಲಿಗೆ ಹೋಗಿದ್ದಾರೆ.

ಇದೇ ಡಿಸೆಂಬರ್ 10ರಂದು ನಾರ್ವೆಯ ಓಸ್ಲೊ ನಗರದಲ್ಲಿ ನಡೆದ ಸಮಾರಂಭದಲ್ಲಿ ನೊಬೆಲ್ ಪುರಸ್ಕಾರಗಳನ್ನು ಪ್ರದಾನ ಮಾಡಲಾಗಿತ್ತು. ಸೆರೆಯಲ್ಲಿದ್ದ ಕಾರಣಕ್ಕೆ ನರ್ಗೀಸ್ ಅವರು ಪುರಸ್ಕಾರವನ್ನು ಸ್ವೀಕರಿಸಲಾಗಲಿಲ್ಲ. ಬದಲಿಗೆ ಅವರ ಮಕ್ಕಳು ಪುರಸ್ಕಾರವನ್ನು ಸ್ವೀಕರಿಸಿದರು. ನೊಬೆಲ್ ಪುರಸ್ಕೃತರ ಸಾಲಿನಲ್ಲಿದ್ದ ಕುರ್ಚಿಯಲ್ಲೇ ನೊಬೆಲ್ ಪದಕ, ಪ್ರಶಂಸನಾ ಪತ್ರವನ್ನು ಇರಿಸಿ, ನರ್ಗೀಸ್ ಅವರ ಹೋರಾಟವನ್ನು ಬೆಂಬಲಿಸಲಾಯಿತು.

ತಡಬಡಾಯಿಸಿದ ಆರ್ಥಿಕತೆ

ವಿಶ್ವದ ಆರ್ಥಿಕತೆಯೂ ವರ್ಷಾರಂಭದಿಂದ ನಿಧಾನಗತಿಯಲ್ಲೇ ಇತ್ತು. ಕೋವಿಡ್‌ನಿಂದ ಚೇತರಿಸಿಕೊಂಡಂತೆ ಕಂಡರೂ, ಬದಲಾದ ಜಾಗತಿಕ ಸನ್ನಿವೇಶದಲ್ಲಿ ಬಹುದೊಡ್ಡ ಆರ್ಥಿಕತೆಗಳೂ ಹಿಂಜರಿತಕ್ಕೆ ಗುರಿಯಾದವು. ಬ್ರಿಟನ್‌ನಲ್ಲಿ ತಲೆದೋರಿದ ಆರ್ಥಿಕ ಬಿಕ್ಕಟ್ಟು ನಂತರ ಇಡೀ ಯೂರೋಪ್‌ಗೆ ವ್ಯಾಪಿಸಿತು. ಇಂಧನದ ಬಿಕ್ಕಟ್ಟು ಮತ್ತು ದುಬಾರಿ ಇಂಧನದ ಕಾರಣಕ್ಕೆ ಅಲ್ಲಿನ ಕೈಗಾರಿಕೆಗಳ ಲಾಭಾಂಶ ಕುಸಿಯಿತು. ಇದರೊಂದಿಗೆ ವಿಶ್ವದ ಬೇರೆಡೆ ತಲೆದೋರಿದ್ದ ಹಣಕಾಸು ಬಿಕ್ಕಟ್ಟು, ಜಾಗತಿಕ ಮಟ್ಟದಲ್ಲಿ ಎಲ್ಲಾ ಸ್ವರೂಪದ ಬೇಡಿಕೆ ಕುಸಿಯಲು ಕಾರಣವಾಯಿತು. ಚೀನಾ ಮತ್ತು ಭಾರತವೂ ಸೇರಿ ಬಹುತೇಕ ದೇಶಗಳ ರಫ್ತು ಮತ್ತು ಆಮದು ಭಾರಿ ಪ್ರಮಾಣದಲ್ಲಿ ಕುಸಿಯಿತು. 2022ರ ಹೋಲಿಕೆಯಲ್ಲಿ 2023ರ ಒಟ್ಟು ಜಾಗತಿಕ ರಫ್ತು ಗಾತ್ರ ಶೇ 20ಕ್ಕಿಂತಲೂ ಹೆಚ್ಚು ಕುಸಿಯಿತು. ಕುಂಠಿತ ಆರ್ಥಿಕತೆಯ ಕಾರಣದಿಂದ ಜಾಗತಿಕ ಟೆಕ್ ದೈತ್ಯ ಕಂಪನಿಗಳು ಸಾವಿರಾರು ನೌಕರರನ್ನು ಈ ವರ್ಷವೂ ಕೆಲಸದಿಂದ ತೆಗೆದುಹಾಕಿದವು. ಒಂದೆಡೆ ಆರ್ಥಿಕ ಹಿಂಜರಿತ, ಮತ್ತೊಂದೆಡೆ ಹಣದುಬ್ಬರ ಅಮೆರಿಕದ ಆರ್ಥಿಕತೆಯ ಕತ್ತುಹಿಸುಕಿತು. ಅದರ ತೀವ್ರತೆ ಗೊತ್ತಾಗಿದ್ದೇ ಮಾರ್ಚ್ ಎರಡನೇ ವಾರದಲ್ಲಿ ‘ಸಿಲಿಕಾನ್ ವ್ಯಾಲಿ ಬ್ಯಾಂಕ್-ಎಸ್‌ವಿಬಿ’ ದಿವಾಳಿ ಎಂದು ಘೋಷಿಸಿಕೊಂಡಾಗ.

ಹಳಸಿದ ಸಂಬಂಧ

ಭಾರತ ಮತ್ತು ಕೆನಡಾ ನಡುವಣ ಬಿಕ್ಕಟ್ಟು ಈ ವರ್ಷದ ಜಾಗತಿಕ ರಾಜಕೀಯ ಬೆಳವಣಿಗೆಗಳಲ್ಲಿ ಪ್ರಮುಖವಾದುದು. ಖಾಲಿಸ್ತಾನ ಪ್ರತ್ಯೇಕತಾವಾದಿ ಉಗ್ರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಇದೇ ಸೆಪ್ಟೆಂಬರ್‌ನಲ್ಲಿ ಕೆನಡಾ ಆರೋಪಿಸಿತ್ತು. ಇದನ್ನು ನಿರಾಕರಿಸಿದ್ದ ಭಾರತವು ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

ಭಾರತದಲ್ಲಿ ಇದೇ ಸೆಪ್ಟೆಂಬರ್‌ನಲ್ಲಿ ನಡೆದ ಜಿ20 ಶೃಂಗಸಭೆಯಲ್ಲೂ ಇದು ಪ್ರತಿಬಿಂಬಿತವಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಬೇರೆಲ್ಲಾ ಜಿ20 ನಾಯಕರ ಜತೆ ಮಾತುಕತೆ ನಡೆಸಿದ್ದರೂ, ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಜತೆಗೆ ಸಭೆ ನಡೆಸಲಿಲ್ಲ. ಶೃಂಗಸಭೆಯ ನಂತರ ಟ್ರುಡೊ ಅವರ ವಿಮಾನ ಕೆಟ್ಟುನಿಂತಿತ್ತು. ಬೇರೆ ವಿಮಾನ ಒದಗಿಸುತ್ತೇವೆ ಎಂದು ಭಾರತ ನೀಡಿದ್ದ ಆಹ್ವಾನವನ್ನು ಅವರು ತಿರಸ್ಕರಿಸಿದ್ದರು. ಅನಂತರ ಎರಡೂ ದೇಶಗಳ ಸಂಬಂಧ ತೀವ್ರ ಬಿಗಡಾಯಿಸಿತ್ತು. ಎರಡೂ ದೇಶಗಳು ರಾಜತಾಂತ್ರಿಕ ಅಧಿಕಾರಿಗಳನ್ನು ಕರೆದು ಛೀಮಾರಿ ಹಾಕುವ ಮತ್ತು ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳುವಷ್ಟು ಸಂಬಂಧ ಹದಗೆಟ್ಟಿತು.

ಈ ಬಿಕ್ಕಟ್ಟಿನಲ್ಲಿ ಅಮೆರಿಕ ಮತ್ತು ಬ್ರಿಟನ್, ಕೆನಡಾ ಪರವಾಗಿ ನಿಂತವು. ಈಗ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ಭಾರತ ಸಂಚು ನಡೆಸಿತ್ತು ಎಂದೂ ಕೆನಡಾ ಆರೋಪಿಸಿದೆ. ಎರಡೂ ದೇಶಗಳ ರಾಜತಾಂತ್ರಿಕ ಸಂಬಂಧ ಮತ್ತಷ್ಟು ಹಳಸಿದೆ.

ಗಟ್ಟಿ ಕಥೆಗೆ ಹೊಡೆದಾಟದ ಅತಿ ಒಗ್ಗರಣೆ

ದರ್ಶನ್

ನಾವು ನೋಡಿದ ಸಿನಿಮಾ

ಕಾಟೇರ (ಕನ್ನಡ)

- **ನಿರ್ದೇಶನ:** ತರುಣ್ ಕಿಶೋರ್ ಸುಧೀರ್
- **ನಿರ್ಮಾಣ:** ರಾಕ್‌ಲೈನ್ ವೆಂಕಟೇಶ್
- **ತಾರಾಗಣ:** ದರ್ಶನ್, ಆರಾಧನಾ, ಜಗಪತಿ ಬಾಬು, ಅವಿನಾಶ್, ಶ್ರುತಿ, ಕುಮಾರ್ ಗೋವಿಂದ್, ವೈಜನಾಥ ಬಿರಾದಾರ್, ಮಾಸ್ಟರ್ ರೋಹಿತ್ ಮತ್ತಿತರರು

‘ಕಾಟೇರ’ ಸಿನಿಮಾದ ಒಟ್ಟು ಸಂದೇಶ, ರಾಷ್ಟ್ರಕವಿ ಕುವೆಂಪು ಅವರ ಆಶಯಗಳಿಗೆ ಹತ್ತಿರವಾಗಿದೆ. ಭೂ ಸುಧಾರಣಾ ಕಾಯ್ದೆಯನ್ನು ಎಳೆಯಾಗಿಟ್ಟುಕೊಂಡು ದಬ್ಬಾಳಿಕೆ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ವಿರುದ್ಧ ಹೆಣೆದ ‘ಕಾಟೇರ’ ಚಿತ್ರದ ಕಥೆ ಮನಸ್ಸಿಗೆ ಹತ್ತಿರವಾಗುತ್ತದೆ, ಇಷ್ಟವಾಗುತ್ತದೆ. ಆದರೆ ಚಿತ್ರಕಥೆಯು ‘ಮಾಸ್’ ಎಂಬ ಮಾನದಂಡಕ್ಕೆ ಕಟ್ಟುಬಿದ್ದಾಗ, ಒಂದು ಹಂತದಲ್ಲಿ ಹೊಡೆದಾಟ ಸಾಕೆನಿಸಿಬಿಡುತ್ತದೆ.

ತರುಣ್-ದರ್ಶನ್ ಕಾಂಬಿನೇಷನ್‌ನಲ್ಲಿ ಈ ಹಿಂದೆ ‘ರಾಬರ್ಟ್’ ಸಿನಿಮಾ ತೆರೆಕಂಡಿತ್ತು. ಇದಕ್ಕೆ ಹೋಲಿಸಿದರೆ ‘ಕಾಟೇರ’ ಭಿನ್ನ ಪ್ರಯೋಗ. ಹಲವು ವಿಷಯಗಳ ಸಾರ ಇಲ್ಲಿದೆ. ನೆಲದ ಕಥೆಯಾಗಿರುವ ಕಾರಣ ದರ್ಶನ್ ಪಾತ್ರದ ಅಭಿನಯಾವಕಾಶ ಗಮನಾರ್ಹವಾಗಿದೆ. 1970-80ರಲ್ಲಿ ನಡೆಯುವ ಕಥೆ ಹೊತ್ತಿರುವ ‘ಕಾಟೇರ’ ರಿವರ್ಸ್ ಸ್ಕ್ರೀನ್‌ಪ್ಲೇಯಲ್ಲಿ ಸಾಗುತ್ತದೆ. ಹೊಸ ಲುಕ್‌ನಲ್ಲಿ ದರ್ಶನ್ ತೆರೆ ಪ್ರವೇಶಿಸುತ್ತಾರೆ. ಇದು ಸಿನಿಮಾಗೆ ಭದ್ರ ಅಡಿಪಾಯ ಹಾಕುತ್ತದೆ. ಭೀಮನಹಳ್ಳಿ ಹಾಗೂ ಮಲ್ಲನಕೆರೆ ಎಂಬ ಎರಡು ಊರುಗಳು. ಭೀಮನಹಳ್ಳಿಯಲ್ಲಿ ಕುಲುಮೆ ಇಟ್ಟಿರುವ ‘ಕಾಟೇರ’(ದರ್ಶನ್) ಕಟ್ಟುಮಸ್ತಾದ ಯುವಕ. ಅಕ್ಕನ ಮೆಚ್ಚಿನ ತಮ್ಮ. ಶಾನುಭೋಗರ ಮಗಳು ‘ಪ್ರಭಾವತಿ’ಗೆ(ಆರಾಧನಾ) ಅವನೆಂದರೆ ಇಷ್ಟ. ಆ ಎರಡೂ ಊರಿನಲ್ಲಿ ಜಮೀನ್ದಾರರ ದಬ್ಬಾಳಿಕೆ. ಇಂತಹ ಸಂದರ್ಭದಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಗೆ ಬರುತ್ತದೆ. ಜಮೀನ್ದಾರರಿಗೇ ಮಚ್ಚು ತಟ್ಟಿದ ಕೈ ಏಕೆ ಅವರ ವಿರುದ್ಧವೇ ತಿರುಗಿ ಬೀಳುತ್ತದೆ ಎನ್ನುವುದು ಚಿತ್ರದ ಮುಂದಿನ ಕಥೆ.

ಕಥೆಯೇ ಇಡೀ ಸಿನಿಮಾದ ಜೀವಾಳ. ಈ ಹಿಂದೆ ದರ್ಶನ್ ‘ಯಜಮಾನ’ದಲ್ಲಿ ಇಂತಹ ಒಂದು ಸದೃಢವಾದ ಕಥೆಗೆ ಅಭಿನಯಿಸಿದ್ದರು. ‘ಕಾಟೇರ’ವೂ ಇಂತಹ ಒಂದು ಗಟ್ಟಿಯಾದ ಕಥೆ ಹೊಂದಿದೆ. ಅಂದಿಗೂ ಇಂದಿಗೂ ಪ್ರಸ್ತುತ ಎನಿಸುವ ಕಥೆ ಅದು. ಹೀಗಾಗಿ ಮೊದಲಾರ್ಧ ಧುಮ್ಮಿಕ್ಕಿದಂತೆ ಸಾಗುತ್ತದೆ. ಇದರಲ್ಲಿ ಇರುವುದು ಕೇವಲ ಒಂದು ಪ್ರಮುಖ ಆ್ಯಕ್ಷನ್ ದೃಶ್ಯ ಎನ್ನುವುದನ್ನು ಗಮನಿಸಬೇಕು. ಅಬ್ಬರದ ಹೀರೋ ಎಂಟ್ರಿಯಾಗಲಿ, ಆತನಿಗೊಂದು ಹಾಡಾಗಲಿ, ಹಾರುವ ರೌಡಿಗಳಾಗಲಿ ಇಲ್ಲಿಲ್ಲ. ಕಥೆ ಕಟ್ಟುವುದಕ್ಕೇ ಇಲ್ಲಿ ಆದ್ಯತೆ. ಕಥೆಗೆ ತಕ್ಕಂತೆ ದರ್ಶನ್ ಇಲ್ಲಿ ಮಾಗಿದ್ದಾರೆ. ಸಿನಿಮಾ ಹೀಗೆ ಮೊದಲಾರ್ಧದಲ್ಲಿ ಚಿತ್ರಕಥೆಯಲ್ಲೇ ಹಿಡಿದು ಕೂರಿಸುತ್ತದೆ. ದ್ವಿತೀಯಾರ್ಧದಲ್ಲಿ ಬರುವ ಎರಡು ಆ್ಯಕ್ಷನ್ ದೃಶ್ಯಗಳು ‘ಮಾಸ್’ ವರ್ಗದ ಮೆಚ್ಚುಗೆಗಾಗಿ ತುರುಕಿದಂತಿದೆ. ಇದು ಸಿನಿಮಾದ ಅವಧಿ ಹೆಚ್ಚಿಸುವುದರ ಜೊತೆಗೆ ಚಿತ್ರಕಥೆಯ ವೇಗಕ್ಕೂ ಅಡ್ಡಿ ಮಾಡಿದೆ. ಹೆಚ್ಚಿನ ಹೊಡೆದಾಟವಿಲ್ಲದ ಕ್ಲೈಮ್ಯಾಕ್ಸ್ ಭಿನ್ನವಾಗಿದೆ. ಕೊನೆಯಲ್ಲಿ ನೀಡಿರುವ ಸಾಮಾಜಿಕ ಸಂದೇಶ ಇಂದಿಗೂ ಪ್ರಸ್ತುತ.

ಸಿನಿಮಾ ಪೂರ್ತಿ ದರ್ಶನ್ ತುಂಬಿಕೊಂಡಿದ್ದಾರೆ ಎನ್ನಬಹುದು. ಅವರು ಭಾವನಾತ್ಮಕ ದೃಶ್ಯಗಳನ್ನು ನಿಭಾಯಿಸಿದ ರೀತಿ ಉಲ್ಲೇಖಾರ್ಹ. ಆ್ಯಕ್ಷನ್ ದೃಶ್ಯಗಳಲ್ಲಿ ಎಂದಿನಂತಹ ಗತ್ತು ಇದೆ. ಎರಡು ಶೇಡ್ಸ್‌ನಲ್ಲಿ ನಟನೆಯ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ‘ಕಾಟೇರ’ನ ಸಂಗಡಿಗರಾಗಿ ಬಿರಾದಾರ್ ಮತ್ತು ರೋಹಿತ್ ನಟನೆಗೆ ಹೆಚ್ಚು ಅಂಕ. ಆರಾಧನಾ ಮೊದಲ ಸಿನಿಮಾದಲ್ಲೇ ನಟನೆಯ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಉಳಿದಂತೆ ಎಲ್ಲ ಕಲಾವಿದರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಜಡೇಶ್ ಕೆ.ಹಂಪಿ ಹಾಗೂ ತರುಣ್ ಅವರ ಕಥೆ ಮತ್ತು ಮಾಸ್ತಿ ಅವರ ಸಂಭಾಷಣೆ ಸಿನಿಮಾದ ಆಸ್ತಿ. ಛಾಯಾಚಿತ್ರಗ್ರಹಣದಲ್ಲಿ ಸುಧಾಕರ್ ಕೆಲಸವೂ ಗಮನಾರ್ಹ. 1970 ರ ಕಾಲಘಟ್ಟದ ಮರುಸೃಷ್ಟಿಯಲ್ಲಿನ ಶ್ರಮ ಕಾಣುತ್ತದೆ.

ಸಿನಿಮಾದ ಅವಧಿ 182 ನಿಮಿಷವಿದ್ದು, ಮೊದಲಾರ್ಧದಲ್ಲಿ ಒಂದು ಹಾಡು ಹಾಗೂ ದ್ವಿತೀಯಾರ್ಧದ ಎರಡು ಸಾಹಸ ದೃಶ್ಯಗಳಿಗೆ ಯಾವುದೇ ಹಿಂಜರಿಕೆ ಇಲ್ಲದೆ ನಿರ್ದೇಶಕರು ಕತ್ತರಿ ಹಾಕಿದ್ದರೆ ಸಿನಿಮಾ ತೂಕ, ವೇಗ ಇನ್ನಷ್ಟು ಹೆಚ್ಚುತ್ತಿತ್ತು. ಕೆಲವೆಡೆ ದೃಶ್ಯಗಳು ತರ್ಕಕ್ಕೆ ಸಿಗುವುದಿಲ್ಲ. ಇವುಗಳನ್ನು ಹೊರತುಪಡಿಸಿ ಒಟ್ಟು ಸಿನಿಮಾ ಸದೃಢವಾಗಿದೆ.

ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5545

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಫಲದ ಬಳಿಯಿರುವ ಢಾಲು (3)
3. ಆಗಸ ನೋಡುತ್ತಿರುವ ಮಡಿವಾಳ (3)
5. ಪಾತಿ ಹತ್ತಿರ ಹಾರಾಡುತ್ತಿರುವ ದುಂಬಿ (5)
6. ವಶಪಡಿಸಿಕೊಂಡಿರುವ ಮೃತದೇಹ! (2)
8. ಜವರಾಯನ ಹತ್ತಿರ ನೆರೆದಿರುವ ಮಂದಿ (2)
9. ಮಧುರ ಫಲ ನೀಡುತ್ತಿರುವ ವೃಕ್ಷ (2)
10. ಕನಸಲ್ಲಿ ಕಾಣಿಸಿರುವ ಕೊಳೆ (2)
14. ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
15. ಕುದುರೆಯನ್ನೇರುವ ಬಳೆ (3)
16. ವೇದಿಕೆ ಅಥವಾ ಜಗಲಿ (3)

ಮೇಲಿಂದ ಕೆಳಕ್ಕೆ

1. ಇದು ಕನ್ನಡಿಗನ ರಿಸಲ್ಟ್! (4)
2. ಪಾಲಕನಿಗೆ ಕಾಣಿಸಿದ ತಲೆಬುರುಡೆ (3)
3. ಅಣ್ಣನ ಹೆಂಡತಿ (3)
4. ನಡುವೆ ನಾತವಿದ್ದಾಗ ಪುರಾತನ ವ್ಯಕ್ತಿ ಕಾಣಿಸಿಯಾನು (4)
7. ಅನೇಕ ಚಿಕ್ಕಚಿಕ್ಕ ಮನೆಗಳುಳ್ಳ ಆವಾರ (3)
8. ಜನರ ಹತ್ತಿರವಿರುವ ತಂದೆ (3)
9. ಹೆಣ್ಣು ದುಂಬಿಯಿದು (4)
11. ಈಕೆ ವಿದ್ಯಾಧಿದೇವತೆ (4)
12. ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
13. ಕೇಸರಿನಲ್ಲಿ ಹುಟ್ಟಿದ ತಾವರೆ (3)



5544ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಪರದೇಶಿ 5.ಶಬರಿ
6.ಕಡವರ 8.ರತ್ನಾಕರ
12.ಹಸುಗೂಸು
14.ಹವಾಗುಣ
15.ಬಾನಾಡಿ 16.ಮರಕತ

ಮೇಲಿಂದ ಕೆಳಕ್ಕೆ:
1.ಪಾಶವೀವೃತ್ತಿ
2.ಪರಿಹಾರ 3.ಪರಿಕರ
4.ಶಿಖರ 7.ವರ್ಜ್ಯ
9.ಕಡಸು 10.ಬಾಲಬಡಿಕ
11.ದವಾ12.ಹಣವಂತ
13.ಸುಮಬಾಣ
14.ಹರಾಮ

ಸುಡೊಕು 5930

2			1				8	
	1					5		9
8		3			9		1	
3		9	5		1			
	6						4	
5		1	6		8			2
	7			3	5	2		4
4		5					6	
	8		4	6		3		1

5929 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 30, 2023

ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ತೃತೀಯ ಗಂ. 09-44 ನಕ್ಷತ್ರ: ಆಶ್ಲೇಷ ಗಂ. 29-42 ಯೋಗ: ವಿಷ್ಕಂಭ ಗಂ 26-56 ಕರಣ: ವಿಷ್ಟಿ ಗಂ. 09-44, ಧನು ಮಾಸದ 14 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-56 ಸೂರ್ಯಾಸ್ತ : 06-10
ಮುಸ್ಲಿಂ ದಿನಾಂಕ : 16 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 10, 6

ಮೇಷ: ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾನೂನು ವಿಷಯದಲ್ಲಿ ಹೆಚ್ಚಿನ ಸಲಹೆ ಪಡೆದುಕೊಳ್ಳುವುದು ಅನಿವಾರ್ಯ. ಸಿದ್ಧ ಉಡುಪು ತಯಾರಕರಿಗೆ ಹಾಗೂ ಮಾರಾಟಗಾರರಿಗೆ ವಿಶೇಷ ಲಾಭ.

ವೃಷಭ: ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಸೌಜನ್ಯತೆಯಿಂದ ಹುದ್ದೆಗೆ ಬಹಳಷ್ಟು ಮೆರುಗು ಬರಲಿದೆ.

ಮಿಥುನ: ನಡೆದು ಹೋದ ಸಂಗತಿಗಳ ಅಥವಾ ದುರ್ಘಟನೆಗಳ ಬಗ್ಗೆ ಯೋಚಿಸದೆ ಕಾರ್ಯಪ್ರವೃತ್ತರಾದಲ್ಲಿ ಜಯ ಸಾಧ್ಯ. ಮಗನ ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬಂದು ಉತ್ತಮ ಕಡೆ ಸಂಬಂಧ ಕೂಡಿ ಬರಲಿದೆ.

ಕರ್ಕಾಟಕ: ಸಹಾಯಕ ದರ್ಜೆಯವರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮ. ದಿನದ ಮಧ್ಯದಲ್ಲಿ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ. ಹಿರಿಯರನ್ನು ಗೌರವಿಸುವಿರಿ.

ಸಿಂಹ: ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಪಡೆಯುವವರು ಆಮೂಲಾಗ್ರ ಚಿಂತನೆ ನಡೆಸಿ ಒಪ್ಪಿಕೊಳ್ಳುವುದು ಸೂಕ್ತ. ಮಹಾಲಕ್ಷ್ಮಿ ಅಷ್ಟೋತ್ತರವನ್ನು ಪಠಿಸಿದಲ್ಲಿ ಹೆಚ್ಚಿನ ಯಶಸ್ಸು ನಿಮ್ಮದಾಗುವುದು.

ಕನ್ಯಾ: ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸುವುದು ಒಳ್ಳೆಯದು. ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸಿದರೆ, ಮತ್ತೊಂದೆಡೆ ಖರ್ಚು ಹೆಚ್ಚಲಿದೆ. ಗೃಹಿಣಿಯರಿಗೆ ವಿಶೇಷ ದಿನ.

ತುಲಾ: ನಿಮ್ಮ ಕುಟುಂಬದ ಅಭಿವೃದ್ಧಿಗೋಸ್ಕರವಾಗಿ ತೆಗೆದುಕೊಂಡಿರುವ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ವೈಯಕ್ತಿಕವಾದ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವುದು.

ವೃಶ್ಚಿಕ: ಸಂಸ್ಥೆಯ ಜವಾಬ್ದಾರಿ ನೋಡುವಂಥ ಸಿಬ್ಬಂದಿಗಳಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು. ಮನೆಯ ಅಲಂಕಾರಿಕ ವಸ್ತುಗಳಿಗಾಗಿ ಖರ್ಚು ಮಾಡುವಿರಿ. ಒತ್ತಡ ತರುವಂಥ ಕೆಲಸಗಳಿಂದ ದೂರವಿರುವುದು ಉತ್ತಮ.

ಧನು: ಹೊಸದಾಗಿ ಕೈಗೊಂಡ ಕೆಲಸವೊಂದು ಸುಗಮವಾಗಿ ಸಾಗಲೆಂದು ದೇವತಾ ಕಾರ್ಯ ಕೈಗೊಳ್ಳುವುದು ಉತ್ತಮ. ದಾಖಲೆಗಳು ಕಳೆದುಹೋಗಬಹುದು, ಆದ್ದರಿಂದ ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ.

ಮಕರ: ಸಂಬಂಧ ಮತ್ತು ಒಪ್ಪಂದಗಳತ್ತ ಗಮನವು ಈ ದಿನ ನಿಶ್ಚಿತವಾಗಿ ತೆಗೆದುಕೊಳ್ಳಬೇಕಾಗಲಿದೆ. ಮನೆಗೆ ಹಿರಿಯರ ಆಗಮನ ಉಲ್ಲಾಸವನ್ನು ತರಲಿದೆ. ನಿಮ್ಮ ಅಭಿವೃದ್ಧಿಗೆ ಸ್ನೇಹಿತರ ಬಳಗವು ಕಾರಣವಾಗುತ್ತದೆ.

ಕುಂಭ: ಕಾಲು ನೋವು ಅಥವಾ ಬೆನ್ನು ನೋವು ಕಾಣಿಸಿಕೊಳ್ಳಬಹುದು, ಯೋಗಾಭ್ಯಾಸದಿಂದ ಸರಿಪಡಿಸಿಕೊಳ್ಳಿರಿ. ಈ ದಿನ ಕೃಷಿ ಕಾರ್ಯಗಳಿಂದಾಗಿ ಆದಾಯವಿರುವುದು. ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ.

ಮೀನ: ಕಟ್ಟಡ ಕಾರ್ಮಿಕರಿಗೆ, ದಿನಗೂಲಿಯವರಿಗೆ ಸಾಕಷ್ಟು ಅವಕಾಶಗಳು ಸಿಗುವುದು. ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗವಾಗುವುದು. ವಿದ್ಯಾ ಕ್ಷೇತ್ರದವರಿಗೆ ಹೆಚ್ಚಿನ ಮನ್ನಣೆ ದೊರಕಲಿದೆ.

ಭಾರತದ ನೆರವು ವಿಶ್ವಸಂಸ್ಥೆ ಮೆಚ್ಚುಗೆ

ಜೆರುಸಲೇಂ (ಪಿಟಿಐ): ಭಾರತವು ಬಿಡುಗಡೆ ಮಾಡಿರುವ ಎರಡನೇ ಕಂತಿನ ಸುಮಾರು ₹ 20.80 ಕೋಟಿ ದೇಣಿಗೆ ಮೊತ್ತವು ಪ್ಯಾಲೆಸ್ಟೀನ್ ನಿರಾಶ್ರಿತರ ಜೀವ ರಕ್ಷಣೆ ಕೆಲಸಗಳನ್ನು ಮುಂದುವರಿಸಲು ನೆರವಾಗಲಿದೆ ಎಂದು ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ಇರುವ ವಿಶ್ವಸಂಸ್ಥೆಯ ಪರಿಹಾರ ಕಾರ್ಯದ ಏಜೆನ್ಸಿ (ಯುಎನ್ ಆರ್‌ಡಬ್ಲ್ಯುಎ) ಶುಕ್ರವಾರ ಹೇಳಿದೆ.

ಭಾರತವು ನೆರವಿನ ಮೊತ್ತ ಬಿಡುಗಡೆ ಮಾಡಿದ ಮರು ದಿನವೇ ವಿಶ್ವಸಂಸ್ಥೆಯ ಈ ಏಜೆನ್ಸಿಯು ಭಾರತದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದೆ. 1950ರಿಂದ ಯುಎನ್‌ಆರ್‌ಡಬ್ಲ್ಯು, ನೋಂದಾಯಿತ ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ನೆರವಾಗಿ ಪರಿಹಾರ ಒದಗಿಸುವ ಕಾರ್ಯ ನಿರ್ವಹಿಸುತ್ತಿದೆ.

'ನಾವು ಈ ಪ್ರದೇಶದಲ್ಲಿ ಅತ್ಯಂತ ಕಷ್ಟಕರವಾದ ಪರಿಸ್ಥಿತಿ ಎದುರಿಸುತ್ತಿದ್ದು, ಪ್ಯಾಲೆಸ್ಟೀನ್ ನಿರಾಶ್ರಿತರ ಪರ ಬೆಂಬಲ ನೀಡುವ ಪಾಲುದಾರ ರಾಷ್ಟ್ರಗಳಿಗೆ ಏಜೆನ್ಸಿಯು ಕೃತಜ್ಞವಾಗಿರಲಿದೆ. ಭಾರತದ ನೆರವು ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ತನ್ನ ಜೀವರಕ್ಷಕ ಸೇವೆ ಮುಂದುವರಿಸಲು ಏಜೆನ್ಸಿಗೆ ಅನುಕೂಲ ಮಾಡಿಕೊಡಲಿದೆ' ಎಂದು ವಕ್ತಾರ ತಮಾರಾ ಅಲ್ರಿಫೈ ಹೇಳಿದ್ದಾರೆ.

ಭಾರತವು ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ಪರಿಹಾರ ಕಲ್ಪಿಸಲು ವಾರ್ಷಿಕ ಬದ್ಧತೆ ನೆರವಿನ ಮೊತ್ತದ ಮೊದಲ ಕಂತನ್ನು ನವೆಂಬರ್‌ನಲ್ಲಿ ಬಿಡುಗಡೆ ಮಾಡಬೇಕಿತ್ತು. ಆದರೆ, ಅದಕ್ಕೂ ಒಂದು ತಿಂಗಳು ಮುಂಚಿತವಾಗಿಯೇ ಬಿಡುಗಡೆ ಮಾಡಿತ್ತು.

ನವೀಕರಣಗೊಂಡ ರೈಲು ನಿಲ್ದಾಣ, ಹೊಸ ವಿಮಾನ ನಿಲ್ದಾಣ ಉದ್ಘಾಟನೆ ಇಂದು

ಪ್ರಧಾನಿ ಭೇಟಿಗೆ ಅಯೋಧ್ಯೆ ಸಜ್ಜು

ಅಯೋಧ್ಯೆ (ಪಿಟಿಐ): ಶನಿವಾರ ಇಲ್ಲಿಗೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಅಯೋಧ್ಯೆ ಸಜ್ಜಾಗಿದೆ.

ನಗರವು ಹೂವಿನಿಂದ ಅಲಂಕೃತಗೊಂಡಿದೆ, ಗೋಡೆಗಳ ಮೇಲೆ ವರ್ಣಚಿತ್ರಗಳು ಮೈದಳೆದಿವೆ.

ನಗರದಲ್ಲಿ ಎರಡು ದಿನಗಳಿಂದ ದಟ್ಟ ಮಂಜು ಕವಿದ ವಾತಾವರಣ ಇದ್ದರೂ ಪ್ರಧಾನಿ ಭೇಟಿಗಾಗಿ ಸಿದ್ಧತೆಗಳು ಭರದಿಂದ ಸಾಗಿವೆ. ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದು ಅಯೋಧ್ಯೆಯ ವಿಭಾಗಾಧಿಕಾರಿ ಗೌರವ್ ದಯಾಳ್ ತಿಳಿಸಿದರು.

ಅಯೋಧ್ಯೆಯಲ್ಲಿ ಮರುಅಭಿವೃದ್ಧಿ ಆಗಿರುವ ರೈಲು ನಿಲ್ದಾಣ ಮತ್ತು ಹೊಸ ವಿಮಾನ ನಿಲ್ದಾಣದ ಉದ್ಘಾಟನೆಗಾಗಿ ಮೋದಿ ಅವರು ಶನಿವಾರ ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ವಿಮಾನ ನಿಲ್ದಾಣದ ಬಳಿ ಅವರು ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ.

'ಪ್ರಧಾನಿ ಅವರು ಬೆಳಿಗ್ಗೆ 10.45ರ ವೇಳೆಗೆ ವಿಮಾನ ನಿಲ್ದಾಣ ತಲುಪುವ ನಿರೀಕ್ಷೆ ಇದೆ. ನಂತರ ಅವರು ರೈಲು ನಿಲ್ದಾಣ ಉದ್ಘಾಟಿಸುವರು. ಮತ್ತೆ ವಿಮಾನ ನಿಲ್ದಾಣಕ್ಕೆ ಬಂದು ಹೊಸದಾಗಿ ನಿರ್ಮಿಸಿರುವ ವಿಮಾನ ನಿಲ್ದಾಣವನ್ನು ಉದ್ಘಾಟಿಸುವರು. ಬಳಿಕ 'ಜನ ಸಭಾ' (ರ‍್ಯಾಲಿ)ಯಲ್ಲಿ ಮಾತನಾಡುವರು' ಎಂದು ದಯಾಳ್ ತಿಳಿಸಿದರು.

ಅಯೋಧ್ಯೆಯಲ್ಲಿ ಶನಿವಾರ ಉದ್ಘಾಟನೆಗೊಳ್ಳಲಿರುವ ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನನಿಲ್ದಾಣ —ಪಿಟಿಐ ಚಿತ್ರ

ಮುಖ್ಯಾಂಶಗಳು
- 2 ಹೊಸ ಅಮೃತ್ ಭಾರತ್, 6 ಹೊಸ ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ
- ₹ 11,100 ಕೋಟಿಗೂ ಹೆಚ್ಚಿನ ಮೊತ್ತದ ಯೋಜನೆಗಳ ಉದ್ಘಾಟನೆ
- ವಿಮಾನನಿಲ್ದಾಣದ ಬಳಿ ಸಾರ್ವಜನಿಕ ರ‍್ಯಾಲಿ

ಎರಡು ಹೊಸ ಅಮೃತ್ ಭಾರತ್ ಮತ್ತು ಆರು ಹೊಸ ವಂದೇ ಭಾರತ್ ರೈಲುಗಳಿಗೆ ಮೋದಿ ಅವರು ಇದೇ ವೇಳೆ ಹಸಿರು ನಿಶಾನೆ ತೋರಿಸುವರು. ರ‍್ಯಾಲಿಯಲ್ಲಿ 1.5 ಲಕ್ಷ ಜನ ಸೇರುವ ಸಾಧ್ಯತೆ ಇದೆ. ಒಂದು ತಾಸು ಅವಧಿಯ ರ‍್ಯಾಲಿ ಬಳಿಕ ಅವರು ಅಯೋಧ್ಯೆಯಿಂದ ತೆರಳುವರು ಎಂದೂ ಹೇಳಲಾಗಿದೆ.

ವಿಮಾನನಿಲ್ದಾಣದಿಂದ ರೈಲು ನಿಲ್ದಾಣಕ್ಕೆ ಪ್ರಧಾನಿ ಸಾಗುವ ರಾಮ ಪಥ ಮತ್ತು ಇತರ ರಸ್ತೆಗಳಿಗೆ ತಾತ್ಕಾಲಿಕ ಬ್ಯಾರಿಕೇಡ್ ಹಾಕುವ ಕಾರ್ಯ ಗುರುವಾರದಿಂದ ನಡೆಯುತ್ತಿದೆ. ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣದ ನಡುವೆ ಸ್ವಲ್ಪ ದೂರದವರೆಗೆ ಮೋದಿ ಅವರು ರೋಡ್ ಶೋ ಕೈಗೊಳ್ಳುವರು ಎಂದು ಮೂಲಗಳು ಹೇಳಿವೆ.

ಅಯೋಧ್ಯೆಯಲ್ಲಿ ₹11,100 ಕೋಟಿಗೂ ಹೆಚ್ಚಿನ ಮೊತ್ತದ ನಾಗರಿಕ ಸೌಲಭ್ಯಗಳ ನವೀಕರಣ ಮತ್ತು ಅಂತರರಾಷ್ಟ್ರೀಯ ಗುಣಮಟ್ಟದ ಮೂಲಸೌಕರ್ಯ ಯೋಜನೆಗಳಿಗೆ ಹಾಗೂ ಉತ್ತರ ಪ್ರದೇಶದ ಇತರ ಭಾಗಗಳಿಗೆ ₹4,600 ಕೋಟಿ ಮೊತ್ತದ ಯೋಜನೆಗಳಿಗೆ ಕೂಡ ಚಾಲನೆ ನೀಡುವರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಶುಕ್ರವಾರ ಅಯೋಧ್ಯೆಗೆ ಭೇಟಿ ನೀಡಿ ಅಯೋಧ್ಯಾ ಧಾಮ್ ರೈಲು ನಿಲ್ದಾಣ ಮತ್ತು ಹೊಸ ವಿಮಾನ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದರು.

ಅಯೋಧ್ಯೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶದ ವಿವಿಧೆಡೆಯ 1,400 ಕಲಾವಿದರು ಜಾನಪದ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಸ್ವಾಗತಿಸಲಿದ್ದಾರೆ. ಇದಕ್ಕಾಗಿ ವಿಮಾನ ನಿಲ್ದಾಣದಿಂದ ರೈಲು ನಿಲ್ದಾಣದವರೆಗೆ 40 ವೇದಿಕೆಗಳನ್ನು ನಿರ್ಮಿಸಲಾಗಿದೆ.

ಅಯೋಧ್ಯೆ– ಬೆಂಗಳೂರು ನಡುವೆ ನೇರ ವಿಮಾನ ಸಂಚಾರ ಜ.17ರಿಂದ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯು ಅಯೋಧ್ಯೆಯಿಂದ ಬೆಂಗಳೂರು ಮತ್ತು ಕೋಲ್ಕತ್ತ ನಗರಗಳಿಗೆ ಜ.17ರಿಂದ ನೇರ ವಿಮಾನ ಸೇವೆ ಆರಂಭಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಯೋಧ್ಯೆ– ನವದೆಹಲಿ ಮಾರ್ಗದಲ್ಲಿ ವಿಮಾನ ಸೇವೆ ಆರಂಭವಾಗಲಿದೆ ಎಂದು ಏರ್ ಇಂಡಿಯಾ ಈ ಹಿಂದೆಯೇ ಪ್ರಕಟಿಸಿದ್ದು, ಈ ಮಾರ್ಗದಲ್ಲಿ ವಿಮಾನ ಸಂಚಾರಕ್ಕೆ ಶನಿವಾರ ಚಾಲನೆ ಲಭಿಸಲಿದೆ.

ಮುಂಬೈ ವರದಿ: ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಜಾಲ್ನಾ– ಮುಂಬೈ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಸಂಚಾರಕ್ಕೆ ವರ್ಚುವಲ್ ಆಗಿ ಹಸಿರು ನಿಶಾನೆ ತೋರುವರು ಎಂದು ಕೇಂದ್ರೀಯ ರೈಲ್ವೆ ಅಧಿಕಾರಿ ಹೇಳಿದ್ದಾರೆ.

ಜಾಲ್ನಾ– ಮುಂಬೈ ವಂದೇ ಭಾರತ್ ಎಕ್ಸ್‌ಪ್ರೆಸ್ ಮಹಾರಾಷ್ಟ್ರದ 7ನೇ ವಂದೇ ಭಾರತ್ ರೈಲು ಆಗಿದೆ.

ಸುದ್ದಿ 2 ನಿಮಿಷ

ಶಿವಸಂಕಲ್ಪ ಅಭಿಯಾನ 6ರಿಂದ

ಮುಂಬೈ (ಪಿಟಿಐ): ಶಿವಸಂಕಲ್ಪ ಅಭಿಯಾನದ ಅಂಗವಾಗಿ ಜನವರಿ 6ರಿಂದ ರಾಜ್ಯದ ಎಲ್ಲಾ 48 ಕ್ಷೇತ್ರಗಳಲ್ಲಿ ಪ್ರವಾಸ ಕೈಗೊಳ್ಳುವುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಘೋಷಿಸಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 2024ರ ಮೊದಲ ಭಾಗದಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗೆ ಸಜ್ಜಾಗುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಜೆಪಿ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಬಣವನ್ನು ಒಳಗೊಂಡಿರುವ ಆಡಳಿತಾರೂಢ ಮೈತ್ರಿಕೂಟ ಅಥವಾ 'ಮಹಾಯುತಿ' ಅಭ್ಯರ್ಥಿಗಳ ಪರ ಪ್ರಚಾರ ಕೈಗೊಳ್ಳುವಂತೆ ಸೂಚಿಸಿದರು.

ಶಿವಸಂಕಲ್ಪ ಯಾತ್ರೆಯು ಜ. 6ರಿಂದ ಯವತ್‌ಮಾಲ್–ವಾಶಿಂ ಕ್ಷೇತ್ರದಿಂದ ಆರಂಭವಾಗಲಿದೆ. ಶಿಂಧೆ ಅವರು ಒಂದು ತಿಂಗಳವರೆಗೆ ರಾಜ್ಯ ವಿವಿಧ ಭಾಗಗಳಲ್ಲಿ 15ಕ್ಕೂ ಹೆಚ್ಚು ಕ್ಷೇತ್ರಗಳಿಗೆ ಭೇಟಿ ನೀಡಲಿದ್ದಾರೆ ಎಂದು ಪಕ್ಷ ಹೇಳಿದೆ.

2019ರ ಚುನಾವಣೆಯಲ್ಲಿ ಮಹಾರಾಷ್ಟ್ರದ 48 ಸ್ಥಾನಗಳ ಪೈಕಿ ಬಿಜೆಪಿ 23 ಸ್ಥಾನಗಳಲ್ಲಿ ಗೆಲವು ಸಾಧಿಸಿತ್ತು. ಅವಿಭಜಿತ ಶಿವಸೇನಾ 18 ಮತ್ತು ಎನ್‌ಸಿಪಿ 4 ಸ್ಥಾನಗಳನ್ನು ಪಡೆದಿತ್ತು. ಕಾಂಗ್ರೆಸ್ ಮತ್ತು ಎಐಎಂಐಎಂ ತಲಾ ಒಂದು ಸ್ಥಾನ ಪಡೆದಿದ್ದರೆ, ಮತ್ತೊಂದು ಸ್ಥಾನ ಪಕ್ಷೇತರ ಅಭ್ಯರ್ಥಿಯ ಪಾಲಾಗಿತ್ತು.

ಗೋಧ್ರಾ ನಂತರದ ಗಲಭೆ: 131 ಸಾಕ್ಷಿಗಳ ಭದ್ರತೆ ವಾಪಸ್

ಅಹಮದಾಬಾದ್: 2002ರ ಗೋಧ್ರಾ ಘಟನೆಯ ನಂತರದ ಗಲಭೆಗಳಿಗೆ ಸಂಬಂಧಿಸಿದ ಪ್ರಕರಣಗಳ ಎಲ್ಲ 131 ಸಾಕ್ಷಿಗಳಿಗೆ ನೀಡಿದ್ದ ಭದ್ರತೆಯನ್ನು ಸುಪ್ರೀಂ ಕೋರ್ಟ್ ನೇಮಿಸಿದ ವಿಶೇಷ ತನಿಖಾ ಸಂಸ್ಥೆ (ಎಸ್‌ಐಟಿ) ಹಿಂಪಡೆದಿದೆ.

ಗುಜರಾತ್ ಸರ್ಕಾರದ ಜತೆ ಸಮಾಲೋಚನೆ ನಡೆಸಿ ಡಿ. 13ರಂದು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಎಸ್‌ಐಟಿ ಅಧಿಕಾರಿ ಗಳು ಹೇಳಿದ್ದಾರೆ. ಗೋಧ್ರಾ ಗಲಭೆಯ ನಂತರ ನಡೆದಿದ್ದ ಹತ್ಯಾಕಾಂಡ ಪ್ರಕರಣಗಳ ಕುರಿತು ತನಿಖೆಗೆ ಸುಪ್ರೀಂ ಕೋರ್ಟ್, ಎಸ್‌ಐಟಿ ನೇಮಕ ಮಾಡಿತ್ತು.

ಸಾಕ್ಷಿಗಳು ಮಾತ್ರವಲ್ಲದೆ ಇಬ್ಬರು ವಕೀಲರು ಮತ್ತು ನರೋದಾ ಪಾಟಿಯಾ ಪ್ರಕರಣದ ತೀರ್ಪು ನೀಡಿದ್ದ ವಿಶ್ರಾಂತ ನ್ಯಾಯಾಧೀಶರಾದ ಜ್ಯೋತ್ಸ್ನಾ ಯಾಗ್ನಿಕ್ ಅವರಿಗೆ ಭದ್ರತೆ ನೀಡಲಾಗುತ್ತಿತ್ತು.

'ಸಾಕ್ಷಿಗಳಿಗೆ ಯಾವುದೇ ಬೆದರಿಕೆಯಿಲ್ಲ ಎಂಬುದು ಖಚಿತವಾಗಿರುವ ಕಾರಣ ನಾವು ಭದ್ರತೆಯನ್ನು ಹಿಂಪಡೆದಿದ್ದೇವೆ. ಅವರಲ್ಲಿ ಯಾರೂ ಇದುವರೆಗೆ ಬೆದರಿಕೆ ಎದುರಿಸಿಲ್ಲ' ಎಂದು ಎಸ್‌ಐಟಿ ಅಧಿಕಾರಿ ಎ.ಕೆ ಮಲ್ಹೋತ್ರ ತಿಳಿಸಿದರು.

ಸೂಕ್ತ ಸಮಯದಲ್ಲಿ ನಿರ್ಧಾರ: ಕಾಂಗ್ರೆಸ್

ಜ.22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆಯಲ್ಲಿ ಸೋನಿಯಾ, ಖರ್ಗೆ ಹಾಜರಿ?

ಪ್ರಜಾವಾಣಿ ವಾರ್ತೆ

ನವದೆಹಲಿ: ಜನವರಿ 22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕಿ ಸೋನಿಯಾಗಾಂಧಿ ಅವರು ಭಾಗವಹಿಸುವ ಬಗ್ಗೆ ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

ವರದಿಗಾರರ ಜತೆ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ಸೋನಿಯಾ ಗಾಂಧಿ, ಖರ್ಗೆ ಮತ್ತು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರಿಗೂ ಆಹ್ವಾನ ನೀಡಲಾಗಿದೆ. ಈ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನಿಸಿ ತಿಳಿಸಲಾಗುವುದು ಎಂದು ಹೇಳಿದರು.

'ಈ ವಿಷಯದಲ್ಲಿ ಆತುರಾತುರವಾಗಿ ನಿರ್ಧಾರ ಕೈಗೊಳ್ಳುವ ಅಗತ್ಯ ಇಲ್ಲ. ಇಂದೇ ಅದನ್ನು ನಿರ್ಧರಿಸಬೇಕು ಎಂದೇನೂ ಇಲ್ಲ. ಇದು ಸೂಕ್ಷ್ಮ ವಿಚಾರ. ಆಹ್ವಾನಿತರಾಗದವರು ಈಗ ಟೀಕೆಗಳನ್ನು ಮಾಡುತ್ತಿದ್ದಾರೆ' ಎಂದರು.

ಕಾರ್ಯಕ್ರಮಕ್ಕೆ ಹಾಜರಾಗುವ ಕುರಿತು ನಾಯಕರು ಪರ ಮತ್ತು ವಿರೋಧ ಹೇಳಿಕೆಗಳನ್ನು ನೀಡುತ್ತಿರುವುದು ಪಕ್ಷಕ್ಕೆ ಮುಜುಗರ ಉಂಟು ಮಾಡಿದೆ ಎಂದು ಮೂಲಗಳು ಹೇಳಿವೆ.

ಸ್ಯಾಮ್ ಪಿತ್ರೋಡಾ ಅವರು ರಾಮಮಂದಿರ ಪ್ರಮುಖ ವಿಷಯವಲ್ಲ ಎಂದು ಹೇಳಿದ್ದನ್ನು ಕಾಂಗ್ರೆಸ್ ಗುರಿಯಾಗಿಸಲು ಬಿಜೆಪಿ ಬಳಸಿಕೊಂಡಿತು ಎಂದು ಹೇಳಿದ ಹಿರಿಯ ನಾಯಕರೊಬ್ಬರು, ಪಿತ್ರೋಡಾ ಅಂಥವರು ಪಕ್ಷದ ಪರವಾಗಿ ಮಾತನಾಡುವುದಿಲ್ಲ ಎಂದರು.

> ಪ್ರಧಾನಿ ಮೋದಿ ರಾಮ ಮಂದಿರ ಉದ್ಘಾಟಿಸುವುದು ಬಿಜೆಪಿಯ ರಾಜಕೀಯ ಲಾಭಕ್ಕಾಗಿ ಧಾರ್ಮಿಕ ಭಾವನೆಗಳ ದುರುಪಯೋಗ ಮಾಡಿದಂತೆ
>
> **ಸೀತಾರಾಂ ಯೆಚೂರಿ** ಸಿಪಿಎಂ ಪ್ರಧಾನ ಕಾರ್ಯದರ್ಶಿ

'ಅವರು ಅವರ ಅಭಿಪ್ರಾಯ ಹೇಳಿದ್ದಾರೆ. ಅದು ಕಾಂಗ್ರೆಸ್ ಅಭಿಪ್ರಾಯ ಅಲ್ಲ. ಕಾಂಗ್ರೆಸ್ ಅಭಿಪ್ರಾಯವನ್ನು ಚರ್ಚಿಸಿ ನಿರ್ಧರಿಸಲಾಗುವುದು' ಎಂದರು.

ಕಾರ್ಯಕ್ರಮವನ್ನು ಬಿಜೆಪಿ ರಾಜಕೀಯಕರಣಗೊಳಿಸುತ್ತಿದೆ ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಶಶಿ ತರೂರ್ ಅವರು ಹೇಳಿರುವ ಬಗ್ಗೆ, ಸದಸ್ಯರು ವಿವಿಧ ವಿಷಯಗಳ ಬಗ್ಗೆ ಮಾತನಾಡುತ್ತಾರೆ. ಅವರೆಲ್ಲ ಪಕ್ಷದ ಅಭಿಪ್ರಾಯ ಬಿಂಬಿಸುತ್ತಾರೆ ಎಂದು ಅರ್ಥವಲ್ಲ ಎಂದು ಹೇಳಿದರು.

ಇದೇ ವೇಳೆ ಅವರು, ರಾಜಕೀಯ ಮತ್ತು ಧರ್ಮವನ್ನು ಬೆರೆಸಬಾರದು ಎಂಬ ತರೂರ್ ಅವರ ಅಭಿಪ್ರಾಯವನ್ನು ಒಪ್ಪದಿರಲು ಯಾರಿಗೂ ಸಾಧ್ಯವಿಲ್ಲ. ಧರ್ಮದ ದುರುಪಯೋಗವನ್ನು ಪಕ್ಷವು ಯಾವಾಗಲೂ ವಿರೋಧಿಸುತ್ತದೆ ಎಂದರು.

'ಇದು ನಂಬಿಕೆಯ ವಿಷಯವೇ ಹೊರತು ಜನರ ವಿಷಯವಲ್ಲ ಅಥವಾ ರಾಜಕೀಯಕ್ಕೆ ಸಂಬಂಧಿಸಿದ್ದಲ್ಲ. ಆದರೆ ಕೆಲವರು (ಬಿಜೆಪಿ) ಇದನ್ನು ರಾಜಕೀಯಗೊಳಿಸುತ್ತಿದ್ದಾರೆ' ಎಂದು ಹೇಳಿದರು.

ಇಂಡಿಯಾ ಮೈತ್ರಿಕೂಟದ ಪಕ್ಷಗಳಲ್ಲೇ ವಿಭಿನ್ನ ನಿಲುವುಗಳು ಇವೆ. ಕಾರ್ಯಕ್ರಮದಲ್ಲಿ ತಮ್ಮ ನಾಯಕರು ಭಾಗವಹಿಸುವುದಿಲ್ಲ ಎಂದು ಟಿಎಂಸಿ ಮತ್ತು ಸಿಪಿಎಂ ಸ್ಪಷ್ಟಪಡಿಸಿದ್ದರೆ, ಸಮಾಜವಾದಿ ಪಕ್ಷ, ಜೆಎಂಎಂ ಮತ್ತು ಇತರರು ಆಹ್ವಾನ ಬಂದರೆ ಭಾಗವಹಿಸುವುದಾಗಿ ಹೇಳಿವೆ.

ಮೋದಿ 'ಹಿಂದೂ ಹೃದಯ ಸಾಮ್ರಾಟ'?– ತರೂರ್ ಟೀಕೆ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರನ್ನು 'ಹಿಂದೂ ಹೃದಯ ಸಾಮ್ರಾಟ' ಎಂದು ಬಿಂಬಿಸುವ ಮೂಲಕ ಬಿಜೆಪಿಯು ಲೋಕಸಭೆ ಚುನಾವಣೆಯನ್ನು ಹಿಂದುತ್ವ ವಿಷಯದ ಆಧಾರದ ಮೇಲೆ ಎದುರಿಸಲು ಸಜ್ಜಾಗಿದೆ ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಟೀಕಿಸಿದರು.

ಅಯೋಧ್ಯೆಯಲ್ಲಿ ಜ. 22ರಂದು ರಾಮಮಂದಿರ ಮತ್ತು ಅಬುಧಾಬಿಯಲ್ಲಿ ಫೆ. 14ರಂದು ಬಿಎಪಿಎಸ್ ಹಿಂದೂ ದೇವಾಲಯ ಉದ್ಘಾಟಿಸಲಿದ್ದಾರೆ. ನಂತರದಲ್ಲಿ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಲಿದೆ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಸಂದೇಶ ಸ್ಪಷ್ಟವಾಗಿದೆ. 2009ರಲ್ಲಿ ಆರ್ಥಿಕ ಬೆಳವಣಿಗೆಯ ಅಪರಾವತಾರವಾಗಿ ಮತ್ತು ಎಲ್ಲ ಭಾರತೀಯರಿಗೆ ಏಳಿಗೆ ತರುವ ಗುಜರಾತ್ ಕಂಪನಿಯ ಸಿಇಒ ಆಗಿ ಮೋದಿ ಅವರು ಮತದಾರರಿಗೆ ಮಾರಾಟವಾಗಿದ್ದರು. 2019ರಲ್ಲಿ ಸಾರ್ವಜನಿಕ ಚುನಾವಣೆಯನ್ನು ರಾಷ್ಟ್ರೀಯ ಭದ್ರತೆಯ ಚುನಾವಣೆಯಾಗಿ ಪರಿವರ್ತಿಸುವ ಅವಕಾಶವನ್ನು ಪುಲ್ವಾಮ ಉಗ್ರರ ದಾಳಿ ಒದಗಿಸಿತು. 2024ರಲ್ಲಿ ಮೋದಿ ಅವರನ್ನು ಬಿಜೆಪಿ ಹಿಂದೂ ಹೃದಯ ಸಾಮ್ರಾಟ ಆಗಿ ಬಿಂಬಿಸಲಾಗುತ್ತಿದೆ ' ಎಂದು ತರೂರ್ ಹೇಳಿದ್ದಾರೆ.

'ಅಚ್ಛೆ ದಿನ್ ಏನಾಯಿತು, ವರ್ಷಕ್ಕೆ 2 ಕೋಟಿ ಉದ್ಯೋಗ ಭರವಸೆ ಏನಾಯಿತು, ಆರ್ಥಿಕ ಬೆಳವಣಿಗೆ ಏನಾಯಿತು ಎಂದು ಪ್ರಶ್ನಿಸಬೇಕಾಗಿದೆ. ಚುನಾವಣೆಯಲ್ಲಿ ಈ ಪ್ರಶ್ನೆಗಳು ಚರ್ಚೆಯಾಗಬೇಕು' ಎಂದಿದ್ದಾರೆ.

- ಅಯೋಧ್ಯೆಯಲ್ಲಿ ಪಂಚಕೊಸಿ ಪರಿಕ್ರಮ ಮಾರ್ಗದಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಈ ಪ್ರದೇಶದಲ್ಲಿ ನಿಷೇಧಾಜ್ಞೆ ಹೇರಲಾಗಿದೆ. ಎಲ್ಲಾ ಮದ್ಯದ ಅಂಗಡಿಗಳನ್ನು ತೆರವುಗೊಳಿಸಿದ್ದು ಇಲ್ಲಿ ಮದ್ಯದ ಅಂಗಡಿ ತೆರೆಯಲು ಯಾರಿಗೂ ಅನುಮತಿ ನೀಡುವುದಿಲ್ಲ ಎಂದು ಉತ್ತರಪ್ರದೇಶದ ಅಬಕಾರಿ ಸಚಿವ ನಿತಿನ್ ಅಗರ್‌ವಾಲ್ ಹೇಳಿದ್ದಾರೆ.
- ರಾಮಮಂದಿರ ಉದ್ಘಾಟನೆಯನ್ನು ಬಿಜೆಪಿಯು ಮುಂಬರುವ ಲೋಕಸಭಾ ಚುನಾವಣೆಯ ರಾಜಕೀಯ ಉದ್ಘಾಟನೆಯಾಗಿ ಪರಿಗಣಿಸುತ್ತಿದೆ. ಪ್ರಧಾನಿ ಮತ್ತು ಇತರರು ರಾಜಕೀಯ ಪ್ರಚಾರವನ್ನು ಆರಂಭಿಸಿದ್ದಾರೆ ಎಂದು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಿ.ಕೆ. ಕುಂಞಾಲಿಕುಟ್ಟಿ ಆರೋಪಿಸಿದ್ದಾರೆ. ಐಯುಎಂಎಲ್ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಎಲ್‌ಡಿಎಫ್‌ನ ಪ್ರಮುಖ ಮಿತ್ರಪಕ್ಷವಾಗಿದೆ.

ಚೀನಾ: ಡಾಂಗ್ ರಕ್ಷಣಾ ಸಚಿವ

ಬೀಜಿಂಗ್ (ಎಎಫ್‌ಪಿ): ಚೀನಾದ ನೂತನ ರಕ್ಷಣಾ ಸಚಿವರಾಗಿ ನೌಕಾಪಡೆಯ ಮಾಜಿ ಕಮಾಂಡರ್ ಡಾಂಗ್ ಜನ್ ಅವರನ್ನು ನೇಮಿಸಲಾಗಿದೆ.

ಚೀನಾದ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್‌ನ ಸಭೆಯಲ್ಲಿ ಡಾಂಗ್ ಜನ್ ನೇಮಕ ಕುರಿತು ನಿರ್ಧರಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಹಿಂದಿನ ಸಚಿವ ಲೀ ಶಂಗ್ಫು ಅವರನ್ನು ಅಕ್ಟೋಬರ್‌ನಲ್ಲಿ ವಜಾ ಮಾಡಲಾಗಿತ್ತು.

ಉಕ್ರೇನ್: ಕ್ಷಿಪಣಿ ದಾಳಿಗೆ 24 ಸಾವು

ಕೀವ್ (ಉಕ್ರೇನ್) (ಎಎಫ್‌ಪಿ): ರಷ್ಯಾ ಸೇನೆಯು ಉಕ್ರೇನ್‌ನ ಪ್ರಮುಖ ನಗರಗಳನ್ನು ಗುರಿಯಾಗಿಸಿ ಗುರುವಾರ ರಾತ್ರಿಯಿಂದ ನಡೆಸಿದ ನೂರಾರು ಕ್ಷಿಪಣಿ ಮತ್ತು ಡ್ರೋನ್‌ಗಳ ಭಾರಿ ದಾಳಿಗೆ 24 ಜನರು ಮೃತಪಟ್ಟಿದ್ದಾರೆ. ನೂರಾರು ನಾಗರಿಕರು ಗಾಯಗೊಂಡಿದ್ದಾರೆ.

22 ತಿಂಗಳಿನಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ಒಂದೇ ದಿನದಲ್ಲಿ 122 ಕ್ಷಿಪಣಿಗಳು ಮತ್ತು 36 ಡ್ರೋನ್‌ಗಳನ್ನು ರಷ್ಯಾ ಉಡಾಯಿಸಿದೆ. ಇದರಲ್ಲಿ 87 ಕ್ಷಿಪಣಿಗಳು ಮತ್ತು 27 ಡ್ರೋನ್‌ಗಳನ್ನು ವಾಯುಪಡೆಯು ರಾತ್ರಿ ಹೊಡೆದುರುಳಿಸಿದೆ ಎಂದು ಉಕ್ರೇನ್ ಸೇನಾ ಮುಖ್ಯಸ್ಥ ವೆಲೇರಿ ಝಲುಝ್ನಿ ಶುಕ್ರವಾರ ಹೇಳಿದ್ದಾರೆ.

ದೇಶದ ರಾಜಧಾನಿ ಕೀವ್ ಸೇರಿ, ಪೂರ್ವದಿಂದ ಪಶ್ಚಿಮ, ಉತ್ತರ ದಿಂದ ದಕ್ಷಿಣದವರೆಗೂ ಹಲವು ಪ್ರದೇಶಗಳಿಗೂ ವ್ಯಾಪಿಸುವಂತೆ 6 ನಗರಗಳ ಮೇಲೆ ರಷ್ಯಾದ ದಾಳಿ ನಡೆದಿದೆ.

ಉಕ್ರೇನ್‌ನ ನಿಪ್ರೊ ನಗರದ ಮೇಲೆ ರಷ್ಯಾ ಶುಕ್ರವಾರ ನಸುಕಿನಲ್ಲಿ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಕಟ್ಟಡವೊಂದು ಧ್ವಂಸವಾಗಿದೆ —ಎಎಫ್‌ಪಿ ಚಿತ್ರ

ಜಲಾಂತರ್ಗಾಮಿ ನೌಕೆಯಿಂದ ಉಡಾಯಿಸುವ ಕಲಿಬ್ ಕ್ಷಿಪಣಿ ಹೊರತುಪಡಿಸಿ, ತನ್ನ ಬಳಿ ಇರುವ ಎಲ್ಲ ಅಸ್ತ್ರಗಳನ್ನು ರಷ್ಯಾ ಸೇನೆ ಉಡಾಯಿಸಿದೆ. ಗುರುವಾರ ರಾತ್ರಿ ಆರಂಭವಾದ ದಾಳಿ ಶುಕ್ರವಾರವೂ ಮುಂದುವರಿಯಿತು ಎಂದು ಉಕ್ರೇನ್ ವಾಯುಪಡೆ ವಕ್ತಾರ ಯುರಿ ಇನ್ನಾಟ್ ಮಾಹಿತಿ ನೀಡಿದ್ದಾರೆ.

> ರಷ್ಯಾ ತನ್ನ ಶಸ್ತ್ರಾಗಾರದಲ್ಲಿರುವ ಹಲವು ಬಗೆಯ ಶಸ್ತ್ರಾಸ್ತ್ರಗಳನ್ನು ಬಳಸಿದೆ. 18 ತಾಸು ನಡೆದ ದಾಳಿಯಲ್ಲಿ ಬಹುತೇಕ ಕ್ಷಿಪಣಿ, ಡ್ರೋನ್ ಹೊಡೆದುರುಳಿಸಲಾಗಿದೆ
>
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಶ್ರೀಮತಿ ವಂದನಾ ಶ್ರೀನಿವಾಸ್ ಹಾಗೂ ಶ್ರೀ ಎಸ್.ಕೆ. ಶ್ರೀನಿವಾಸ್ ಇವರುಗಳು ಇಲ್ಲಿ ವಾಸವಾಗಿರುವ:– ನಂ. 1631/4, 'ಶೃತಿ', 1ನೇ ರಸ್ತೆ, ರಾಮಮೋಹನಪುರ, ವಾಗ್ದೇವಿ ಶೇಷಪ್ಪ ಹಾಲ್ ಎದುರುಗಡೆ, ದೇವಯ್ಯ ಪಾರ್ಕ್, ಬೆಂಗಳೂರು –560021, ಈ ಮುಂದೆ ನಮೂದಿಸಿರುವ ಕೃಷಿ ಜಮೀನು ಖರೀದಿಸಲು ಇಚ್ಛಿಸಿದ್ದು, ಇದರ ವಿವರಗಳು ಇಂತಿವೆ:– ಪ್ರಸ್ತುತ ಮಾಲೀಕರು ಶ್ರೀ ಬಿ.ಎಂ. ಸುನೀಲ್ ಕುಮಾರ್ ತಂದೆ ಮೋಹನ್ ರಾಮ್, ಡಿಮಂಡಲದಲ್ಲಿರುವ ಸರ್ವೇ ನಂ. 86/1 (ಹಳೆಯ ಸರ್ವೇ ನಂ. ಸಂಖ್ಯೆ: 86), 1 ಎಕರೆ ವಿಸ್ತೀರ್ಣವುಳ್ಳ (30 ಅಡಿ ರಸ್ತೆ ಸೇರಿ) ಸೋಮಸಾಗರ ಹಳ್ಳಿಗೆ ಸೇರಿದ, ತ್ಯಾಮಗುಂಡಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ– 562132. ಇಲ್ಲಿ ನಮೂದಿಸಿರುವ ಚಕ್ಕುಬಂದಿ/ಶೆಡ್ಯೂಲ್: ಪೂರ್ವಕ್ಕೆ ಸರ್ವೇ ನಂ. 86/2 – ಫಿಲೋಮಿನಾ ಡಿ ಗೆರ್ರಿ, ಪಶ್ಚಿಮಕ್ಕೆ ವೆಂಕಟಾಪುರ ಹಳ್ಳಿಯ ಗಡಿಭಾಗ (BORDER) ಉತ್ತರಕ್ಕೆ ಸರ್ವೇ ನಂ. 18/ಪಿ2 ಆರ್. ಮಹದೇವ ಗೌಡ – ಆರ್. ರಾಮಚಂದ್ರಪ್ಪ, ದಕ್ಷಿಣಕ್ಕೆ ಸರ್ವೇ ನಂ. 18/ಪಿ1 ಕೆ.ಎಲ್. ವೇಣುಗೋಪಾಲ್ ಬಿನ್ ಹೆಚ್. ಲಕ್ಷ್ಮಣಗೌಡ, ಈ ಮೇಲೆ ನಮೂದಿಸಿದ ಕೃಷಿ ಜಮೀನು ಕ್ರಯ ಪತ್ರದ ಸಂಖ್ಯೆ: NMG-1- 09553/2015–16 in CD No. NMGD349 ಆಗಿದ್ದು, ದಿನಾಂಕ: 17–12–2015ರಂದು ನೆಲಮಂಗಲ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ.
ಯಾವುದೇ ವ್ಯಕ್ತಿ ಅಥವಾ ಹಕ್ಕುದಾರರು ಶ್ರೀ ಬಿ.ಎಂ.ಸುನೀಲ್ ಕುಮಾರ್‌ರವರ ಸಂಬಂಧಿಕರು ಈ ಮೇಲ್ಕಂಡ ಜಮೀನಿಗೆ ಸಂಬಂಧಿಸಿದ ಯಾವುದೇ ತಂಟೆ ತಕರಾರು ಇದ್ದಲ್ಲಿ ದಯವಿಟ್ಟು ಈ ಮೇಲೆ ತಿಳಿಸಿರುವ ಖರೀದಿಸಲು ಇಚ್ಛಿಸಿರುವ ವ್ಯಕ್ತಿಗಳಿಗೆ ಈ ಕೆಳಕಂಡ ಫೋನ್ ನಂಬರ್ ಮೂಲಕ 15–01–2024ರ ಒಳಗೆ ಗಮನಕ್ಕೆ ತರಬೇಕಾಗಿ ಕೋರಿದ್ದೇವೆ. Ph:8618044358.
ಶ್ರೀಮತಿ ನಂದನಾ ಶ್ರೀನಿವಾಸ್ / ಎಸ್ ಕೆ. ಶ್ರೀನಿವಾಸ್
ದಿ: 29–12–2023 ಸ್ಥಳ : ಬೆಂಗಳೂರು

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Commerical
Rajajinagar
COMMERCIAL SPACE For sale 1472 Sqft in 2nd floor and 2267 sqft in basement. Prime 100 ft road in Rajaji Nagar, Bangalore. Suitable for CA/ Advocate/ Retail. Company owned property. Contact:- 9940125875/ 8956176149 / 9448067625.

ವ್ಯಾಪಾರ
Business to Business
Business
ಮಹಿಳಾ ಸಂಘ ಸಂಸ್ಥೆಗಳಿಗೆ ರೇಷ್ಮೆ, ಸಿಲ್ಕ್, ಕಾಟನ್, ಎಲ್ಲಾ ತರಹದ ಸೀರೆಗಳು, ದೊರೆಯುತ್ತದೆ. ಆಕರ್ಷಕ ಆದಾಯ ಸಿಗುತ್ತದೆ: 8892501007/ 9606701007

ಉದ್ಯೋಗಾವಕಾಶ
General
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ನೀವು ನಿಮ್ಮ ಮನೆ/ ಸೈಟ್ ಮಾರಾಟ/ ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ!
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9845114560
080- 45557163/164

ಜೆಡಿಯುಗೆ ಮತ್ತೆ ನಿತೀಶ್ ಸಾರಥ್ಯ

'ಇಂಡಿಯಾ' ಮೈತ್ರಿಕೂಟದ ಪ್ರಮುಖ ನಾಯಕನಾಗಿ ಬಿಂಬಿಸುವ ಪ್ರಯತ್ನ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಬಿಹಾರದ ಆಡಳಿತಾರೂಢ ಜೆಡಿಯು ಪಕ್ಷದ ಅಧ್ಯಕ್ಷರಾಗಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಆಯ್ಕೆಯಾಗಿದ್ದಾರೆ. ಈ ಮೂಲಕ ಅವರನ್ನು ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಪ್ರಮುಖ ನಾಯಕನಾಗಿ ಬಿಂಬಿಸುವ ಪ್ರಬಲ ಪ್ರಯತ್ನವನ್ನು ಪಕ್ಷವು ಮಾಡಿದೆ.

'ನಿತೀಶ್ ಕುಮಾರ್ ಅವರು ಇಂಡಿಯಾ ಮೈತ್ರಿಕೂಟದ ಸಂಚಾಲಕರು ಹಾಗೂ ಪ್ರಧಾನಿ ಹುದ್ದೆಯ ಅಭ್ಯರ್ಥಿ' ಎಂದು ಪಕ್ಷದ ವಕ್ತಾರ ಕೆ.ಸಿ. ತ್ಯಾಗಿ ಅವರು ದೆಹಲಿಯಲ್ಲಿ ಶುಕ್ರವಾರ ನಡೆದ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯ ಬಳಿಕ ತಿಳಿಸಿದರು.

'ಜನರಿಗೆ ಅವರ (ನಿತೀಶ್) ಮೇಲೆ ನಂಬಿಕೆಯಿದೆ. ಮೈತ್ರಿಕೂಟವನ್ನು ಮುನ್ನಡೆಸುವಲ್ಲಿ ಅವರು ಉತ್ತಮ ಅನುಭವ ಹೊಂದಿದ್ದು, ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಮನ್ವಯ ಕಾಪಾಡಿಕೊಂಡು ಯಶಸ್ವಿನತ್ತ ಕೊಂಡೊಯ್ಯುವ ಸಾಮರ್ಥ್ಯ ಇದೆ' ಎಂದು ಸಭೆಯ ನಿರ್ಣಯ ತಿಳಿಸಿದೆ.

ಮುಖ್ಯಾಂಶಗಳು
- ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ನಿರ್ಧಾರ
- ಲಲನ್ ಸಿಂಗ್ ರಾಜೀನಾಮೆ

ಲಲನ್ ರಾಜೀನಾಮೆ: ನಿತೀಶ್ ಅವರ ಆಪ್ತ ಲಲನ್ ಸಿಂಗ್, ಶುಕ್ರವಾರ ಬೆಳಿಗ್ಗೆ ನಡೆದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಜೆಡಿಯು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದರ ಬೆನ್ನಲ್ಲೇ ನಿತೀಶ್ ಆಯ್ಕೆ ನಡೆದಿದೆ.

> ನಾಯಕತ್ವ ಬದಲಾವಣೆ ಜೆಡಿಯುನ ಆಂತರಿಕ ವಿಚಾರ. ಆದರೆ ಈ ಬೆಳವಣಿಗೆಯು ಪಕ್ಷದಲ್ಲಿರುವ ಆಂತರಿಕ ಕಲಹವನ್ನು ಬಯಲು ಮಾಡಿದೆ
>
> **ವಿಜಯಕುಮಾರ್ ಸಿನ್ಹಾ,** ಬಿಹಾರ ವಿಧಾನಸಭೆ ವಿರೋಧ ಪಕ್ಷದ ನಾಯಕ

'ಸಭೆಯಲ್ಲಿ ರಾಜೀನಾಮೆ ನಿರ್ಧಾರ ಪ್ರಕಟಿಸಿದ ಲಲನ್ ಅವರು, ಅಧ್ಯಕ್ಷ ಸ್ಥಾನಕ್ಕೆ ನಿತೀಶ್ ಹೆಸರು ಸೂಚಿಸಿದರು. ಅಧ್ಯಕ್ಷ ಸ್ಥಾನದ ಜವಾಬ್ದಾರಿ ಸ್ವೀಕರಿಸಲು ನಿತೀಶ್ ಒಪ್ಪಿಕೊಂಡರು' ಎಂದು ಕೆ.ಸಿ. ತ್ಯಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

'ಪಕ್ಷದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಳ್ಳಲು ಉತ್ಸುಕನಾಗಿಲ್ಲ. ಆದರೆ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ತೆಗೆದುಕೊಂಡ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ' ಎಂದು ನಿತೀಶ್ ಅವರು ಸಭೆಯಲ್ಲಿ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಲೋಕಸಭೆ ಚುನಾವಣೆಗೆ ಕೆಲವೇ ತಿಂಗಳುಗಳಿದ್ದು, ಇಂತಹ ಮಹತ್ವದ ಘಟ್ಟದಲ್ಲಿ ಜನಪ್ರಿಯ ನಾಯಕರಾಗಿರುವ ನಿತೀಶ್ ಅವರು ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಪಕ್ಷದ ಬಹುತೇಕ ನಾಯಕರು ಅಭಿಪ್ರಾಯಪಟ್ಟಿದ್ದಾಗಿ ಮೂಲಗಳು ಹೇಳಿವೆ.

ಲಲನ್ ಸಿಂಗ್ ಅವರ ನಾಯಕತ್ವ ಶೈಲಿಯನ್ನು ಕೆಲವು ನಾಯಕರು ಟೀಕಿಸಿದ್ದರಲ್ಲದೆ, ನಿತೀಶ್ ಬಳಿಯಲ್ಲೂ ತಮ್ಮ ಅಸಮಾಧಾನ ತೋಡಿಕೊಂಡಿದ್ದರು ಎನ್ನಲಾಗಿದೆ.

ಪಕ್ಷದಲ್ಲಿ ಒಡಕು ಮೂಡಿದೆ ಎಂಬ ವರದಿಗಳ ನಡುವೆಯೇ, ಮುಖ್ಯಮಂತ್ರಿ ಅವರು ಲಲನ್ ಜತೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂಬಂತೆ ಬಿಂಬಿಸಿ ಒಗ್ಗಟ್ಟಿನ ಚಿತ್ರಣ ಮೂಡಿಸುವ ಕೆಲಸ ಮಾಡಿದ್ದರು.

ಯುದ್ಧ ಟೀಕಿಸಿದ ಕವಿಗೆ ಜೈಲು

ಮಾಸ್ಕೊ (ಎಪಿ): ಉಕ್ರೇನ್ ಮೇಲಿನ ಯುದ್ಧ ವಿರೋಧಿಸಿ ಕವಿತೆ ವಾಚನ ಮಾಡಿದ ಕವಿಗೆ 7 ವರ್ಷಗಳ ಜೈಲು ಶಿಕ್ಷೆಯನ್ನು ರಷ್ಯಾ ನ್ಯಾಯಾಲಯ ಗುರುವಾರ ವಿಧಿಸಿದೆ.

ಮಾಸ್ಕೊದ ಟ್ವೆರ್ಸ್ಕೊಯಿ ಜಿಲ್ಲಾ ನ್ಯಾಯಾಲಯವು, 2022ರ ಸೆಪ್ಟೆಂಬರ್‌ನಲ್ಲಿ ಮಾಸ್ಕೊದ ಬೀದಿಯಲ್ಲಿ ಯುದ್ಧ ವಿರೋಧಿ ಕವಿತೆ ವಾಚಿಸಿ, ರಾಷ್ಟ್ರೀಯ ಭದ್ರತೆ ದುರ್ಬಲಗೊಳಿಸುವ ಮತ್ತು ದ್ವೇಷ ಪ್ರಚೋದನೆಯ ಕರೆ ನೀಡಿದ ಆಪಾದನೆಯಲ್ಲಿ ಕವಿ ಆರ್ಟಿಯೊಮ್ ಕಮರ್ದಿನ್ ತಪ್ಪಿತಸ್ಥನೆಂದು ತೀರ್ಮಾನಿಸಿ, ಶಿಕ್ಷೆ ವಿಧಿಸಿತು.

ಯೆಗೊರ್ ಶ್ಟೋವ್‌ಬಾ ಅವರಿಗೂ ಇದೇ ಅಪರಾಧಕ್ಕೆ ಐದೂವರೆ ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಗಿದೆ.

ಗಾಜಾ ಮೇಲೆ ದಾಳಿ ತೀವ್ರ

ಗಾಜಾ ಪಟ್ಟಿ (ಎಎಫ್‌ಪಿ): ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಮಧ್ಯೆ 12 ವಾರಗಳಿಂದ ನಡೆಯುತ್ತಿರುವ ಯುದ್ಧವನ್ನು ತಡೆಯುವ ನಿಟ್ಟಿನಲ್ಲಿ ಹಮಾಸ್‌ನ ಉನ್ನತ ಹಂತದ ನಿಯೋಗದೊಂದಿಗೆ ಮಾತುಕತೆಗಾಗಿ ಈಜಿಪ್ಟ್ ಶುಕ್ರವಾರ ವೇದಿಕೆ ಸಿದ್ಧಪಡಿಸುತ್ತಿರುವ ನಡುವೆಯೇ, ಇಸ್ರೇಲ್ ಪಡೆಗಳು ಕೇಂದ್ರ ಗಾಜಾ ಮತ್ತು ದಕ್ಷಿಣ ಗಾಜಾದಲ್ಲಿ ದೊಡ್ಡ ಪ್ರಮಾಣದಲ್ಲಿ ದಾಳಿ ನಡೆಸಿವೆ.

'ದಾಳಿಯನ್ನು ಖಾನ್ ಯೂನಿಸ್ ನಗರಕ್ಕೆ ವಿಸ್ತರಿಸುವ ಮೂಲಕ ದಕ್ಷಿಣ ಕರಾವಳಿ ಭಾಗ ಮತ್ತು ಗಾಜಾದಲ್ಲಿದ್ದ ಹಲವು ಭಯೋತ್ಪಾದಕರನ್ನು 24 ಗಂಟೆಗಳಲ್ಲಿ ಸಂಹಾರ ಮಾಡಿದ್ದೇವೆ' ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಇರಾನ್: ನಾಲ್ವರಿಗೆ ಮರಣದಂಡನೆ ಜಾರಿ

ಟೆಹರಾನ್ (ಎಪಿ): ಇಸ್ರೇಲ್‌ನ ಗುಪ್ತಚರ ಸಂಸ್ಥೆ 'ಮೊಸಾದ್' ಜೊತೆ ನಂಟು ಹೊಂದಿದ್ದ ಆರೋಪದಲ್ಲಿ ಇರಾನ್‌ನಲ್ಲಿ ನಾಲ್ವರಿಗೆ ಮರಣದಂಡನೆ ಜಾರಿಗೊಳಿಸಲಾಗಿದೆ.

ಮೂವರು ಪುರುಷರಿಗೆ ಹಾಗೂ ಒಬ್ಬ ಮಹಿಳೆಗೆ ಶುಕ್ರವಾರ ಬೆಳಿಗ್ಗೆ ಮರಣದಂಡನೆ ಜಾರಿ ಮಾಡಲಾಗಿದೆ. ಇದೇ ಪ್ರಕರಣದಲ್ಲಿ ಹಲವರಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ವಫಾ ಹನಾರೆ, ಅರಮ್ ಒಮರಿ, ರೆಹಮಾನ್ ಪರ್ಹಾಜೊ ಮತ್ತು ನಸೀಮ್ ನಮಾಜಿ ಮರಣದಂಡನೆಗೆ ಒಳಗಾದವರು. ಇರಾನ್‌ನಲ್ಲಿ ಸಾಮಾನ್ಯವಾಗಿ ಗಲ್ಲಿಗೇರಿಸುವ ಮೂಲಕ ಮರಣದಂಡನೆ ಜಾರಿಗೊಳಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಗುಪ್ತಚರ ಮಾಹಿತಿಗಾಗಿ ಇರಾನ್‌ನ ಭದ್ರತಾ ಪಡೆಯ ಸಿಬ್ಬಂದಿಯನ್ನು ಅಪಹರಿಸಿದ್ದ ಆರೋಪ ಈ ನಾಲ್ವರ ಮೇಲಿತ್ತು. ಇರಾನ್‌ನ ಉನ್ನತ ಶ್ರೇಣಿಯ ಸೇನಾಧಿಕಾರಿ ಈಚೆಗೆ ಸಿರಿಯಾದಲ್ಲಿ ಇಸ್ರೇಲ್‌ನ ವಾಯುದಾಳಿಯಿಂದ ಮೃತಪಟ್ಟಿದ್ದರು. ಬಳಿಕ ಇರಾನ್ ಈ ಕ್ರಮ ಕೈಗೊಂಡಿದೆ.

ಇರಾನ್‌ನಲ್ಲಿ ಮರಣ ದಂಡನೆ ಜಾರಿಗೊಳಿಸುತ್ತಿರುವುದರ ಕುರಿತು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಈಚೆಗೆ ಕಳವಳ ವ್ಯಕ್ತಪಡಿಸಿದ್ದರು. ಈ ವರ್ಷದ ಆರಂಭದ ಏಳು ತಿಂಗಳಲ್ಲಿ ಕನಿಷ್ಠ 419 ಮಂದಿಗೆ ಮರಣ ದಂಡನೆ ಜಾರಿಗೊಳಿಸಲಾಗಿತ್ತು.

'ಮೊಸಾದ್'ಗಾಗಿ ಬೇಹುಗಾರಿಕೆ ನಡೆಸಿದ್ದ ವ್ಯಕ್ತಿಗೆ ಮರಣದಂಡನೆ ಜಾರಿಗೊಳಿಸಿರುವುದಾಗಿ ಇರಾನ್ ಈ ತಿಂಗಳ ಆರಂಭದಲ್ಲಿ ಹೇಳಿತ್ತು. ಬ್ರಿಟನ್‌ನ ಗುಪ್ತಚರ ಇಲಾಖೆಗೆ ಸಹಕರಿಸಿದ್ದ ಆರೋಪದಲ್ಲಿ ಇರಾನ್‌ನ ರಾಜಕಾರಣಿ ಅಲಿ ರೆಜಾ ಅಕ್ಬಾರಿ ಅವರನ್ನು ಜನವರಿಯಲ್ಲಿ ಗಲ್ಲಿಗೇರಿಸಲಾಗಿತ್ತು.

ಷೇರುಪೇಟೆ ವಹಿವಾಟು ▼170



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	21,778
ಇಂದಿನ ಅಂತ್ಯ	21,731
▲	47
ದಿನದ ಗರಿಷ್ಠ	21,726

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹610
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹610

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹875 (875)
ಸೂರ್ಯಕಾಂತಿ (ರಿಫೈನ್ಡ್)	₹885 (890)
ಪಾಮೋಲಿನ್	₹815 (818)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹277-480
ದ್ವಿತಳಿ (ಬಿ.ವಿ)	₹302-572

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹151.00
ಆರ್ಎಸ್ಎಸ್-5	₹147.00
ಗುಡ್ ಲಾಟ್	₹130.50

ವಿನಿಮಯ ದರ

$ ಡಾಲರ್	83.16
£ ಪೌಂಡ್	105.74
€ ಯುರೊ	91.95
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8200-9020
ಪುತ್ತೂರು	₹5500-9200
ತಿಪಟೂರು	₹7000-8500
ತುರುವೇಕೆರೆ	₹8300-8300

ಎಂಎಸ್ಐಎಲ್ ಚಿಟ್ ಫಂಡ್ ಏ.1ರಿಂದ ಹಳ್ಳಿಗಳಿಗೂ ವಿಸ್ತರಣೆ

ಬೆಂಗಳೂರು: ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್ಐಎಲ್) ನಡೆಸುತ್ತಿರುವ ಚಿಟ್‌ಫಂಡ್ ವ್ಯವಹಾರವನ್ನು ಏ.1ರಿಂದ ಹಳ್ಳಿಗಳಿಗೂ ವಿಸ್ತರಣೆಯಾಗಲಿದೆ.

ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಕುಟುಂಬಕ್ಕೆ ತಿಂಗಳಿಗೆ ₹4,000 ದಿಂದ ₹5,000 ದವರೆಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ಮಹಿಳೆಯರ ಕೈಸೇರುತ್ತಿರುವ ಈ ಹಣವನ್ನು ಚಿಟ್‌ಫಂಡ್ ವಹಿವಾಟಿನತ್ತ ಸೆಳೆಯಲು ಎಂಎಸ್ಐಎಲ್ ದೃಢಹೆಜ್ಜೆ ಇಟ್ಟಿದೆ.

ರಾಜ್ಯ ಸರ್ಕಾರದ ಸ್ವಾಮ್ಯದ ಎಂಎಸ್ಐಎಲ್‌ನ ಚಿಟ್ ಫಂಡ್‌ನಲ್ಲಿ 22,000 ಗ್ರಾಹಕರಿದ್ದು, ವಹಿವಾಟು ₹305 ಕೋಟಿ ಮಾತ್ರ ಇದೆ. ನೆರೆಯ ಕೇರಳ ರಾಜ್ಯ ಸರ್ಕಾರದ ಚಿಟ್ ಫಂಡ್ ವಹಿವಾಟು ₹27,000 ಕೋಟಿಯಷ್ಟಿದೆ. ಹಳ್ಳಿಗಳಿಗೂ ಚಿಟ್‌ಫಂಡ್ ಪರಿಚಯಿಸುವುದರಿಂದ ₹10 ಸಾವಿರ ಕೋಟಿಗೆ ವಿಸ್ತರಿಸುವ ಗುರಿಯನ್ನು ಎಂಎಸ್ಐಎಲ್ ಹೊಂದಿದೆ.

‘ಚಿಟ್‌ಫಂಡ್‌ನಲ್ಲಿ ತೊಡಗಿಸಿಕೊಳ್ಳುವ ಮಹಿಳಾ ಸ್ವಸಹಾಯ ಗುಂಪುಗಳಿಗೆ ಶೇ 13ರಿಂದ 15ರವರೆಗೂ ಲಾಭ ದೊರಕುತ್ತದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ಹೂಡಿಕೆಯ ಮೊತ್ತಕ್ಕೂ ಖಾತರಿ ಇರುತ್ತದೆ. ಹಾಗಾಗಿ, ಮೊದಲ ಹಂತದಲ್ಲಿ ತಾಲ್ಲೂಕಿಗೆ ಒಂದರಂತೆ ಶಾಖೆ ತೆರೆಯಲಾಗುವುದು. ಎರಡು ಸಾವಿರ ಜನರಿಗೆ ಒಬ್ಬರು ಪ್ರತಿನಿಧಿಯನ್ನು ನೇಮಿಸಲಾಗುವುದು. ಆರಂಭದಲ್ಲಿ ₹2 ಕೋಟಿ ವಹಿವಾಟಿನ ಗುರಿ ನಿಗದಿ ಮಾಡಲಾಗುವುದು’ ಎಂದು ಎಂಎಸ್ಐಎಲ್ ಅಧ್ಯಕ್ಷರೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದರು.

ಮುಂಬೈ ಧಾರಣೆ

ಶೇಂಗಾ

29-12-2023

ಜಾವಾ 70/80(ಹೊಸ)	12400-12300
ಜಾವಾ 80/90(ಹೊಸ)	11100-11000
ದಪ್ಪ ಮಧ್ಯಪ್ರದೇಶ(ಹೊಸ)	10000-9900
ದಪ್ಪ ಗುಜರಾತ್(ಹೊಸ)	11000-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1620 (1625)
ಸೋಯಾ ಕಚ್ಚಾ	830 (835)
ಪಾಮ್ ವಾರದ ಡೆಲಿವರಿ	817 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	815 (835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,900 (63,500)
ಬೆಳ್ಳಿ ಕೆ.ಜಿ 73,350 (74,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹರಳು, ಚಿನ್ನಾಭರಣ ರಫ್ತು ಇಳಿಕೆ

ಮುಂಬೈ (ಪಿಟಿಐ): ದೇಶದಲ್ಲಿ ಹರಳು ಮತ್ತು ಚಿನ್ನಾಭರಣ ರಫ್ತು ನವೆಂಬರ್‌ನಲ್ಲಿ ಶೇ 4.52ರಷ್ಟು ಕುಸಿತ ಕಂಡಿದ್ದು, ₹19,018 ಕೋಟಿಗೆ ತಲುಪಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ₹19,917 ಕೋಟಿ ಮೌಲ್ಯದ ಹರಳು ಮತ್ತು ಚಿನ್ನಾಭರಣ ರಫ್ತು ಆಗಿತ್ತು. ಪೂರೈಕೆ ಸರಪಳಿಯಲ್ಲಿ ಎದುರಾಗಿರುವ ತೊಂದರೆಯೇ ಇಳಿಕೆಗೆ ಕಾರಣವಾಗಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

‘ವಿಶ್ವದ ಕೆಲವು ದೇಶಗಳಲ್ಲಿ ತಲೆದೋರಿರುವ ಬಿಕ್ಕಟ್ಟು ಹಾಗೂ ಬೇಡಿಕೆಯ ಕೊರತೆಯಿಂದಾಗಿ ಚಿನ್ನಾಭರಣ ವಲಯವು ಅಕ್ಟೋಬರ್ 15ರಿಂದ ಡಿಸೆಂಬರ್ 15ರವರೆಗೆ ಒರಟು ವಜ್ರಗಳ ಆಮದನ್ನು ಸ್ಥಗಿತಗೊಳಿಸಿತ್ತು. ಮುಂಬರುವ ಹಬ್ಬದ ಋತುವಿನಲ್ಲಿ ಬೇಡಿಕೆ ಹೆಚ್ಚಾಗಲಿದ್ದು, ರಫ್ತು ಸುಧಾರಣೆಗೆ ಉತ್ತೇಜನ ಸಿಗಲಿದೆ’ ಎಂದು ಮಂಡಳಿಯ ಮುಖ್ಯಸ್ಥ ವಿಪುಲ್ ಶಾ ತಿಳಿಸಿದ್ದಾರೆ.

‘ಮುಂದಿನ ದಿನಗಳಲ್ಲಿ ವಲಯದ ಪ್ರಗತಿಯು ಸುಧಾರಿಸುವ ನಿರೀಕ್ಷೆಯಿದೆ. ಇದು 2024ರಲ್ಲಿ ರಫ್ತು ಹೆಚ್ಚಳಕ್ಕೆ ನೆರವಾಗಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವರ್ಷದ ಕೊನೆಯ ವಹಿವಾಟಿನಲ್ಲಿ ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕ ಕುಸಿತ

ಷೇರುಪೇಟೆ: ಈ ವರ್ಷ ಶೇ 20 ಲಾಭ

ಮುಂಬೈ (ಪಿಟಿಐ): ಪ್ರಸಕ್ತ ವರ್ಷದ ಕೊನೆಯ ದಿನವಾದ ಶುಕ್ರವಾರ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಕುಸಿತ ದಾಖಲಿಸಿವೆ. ಆದರೂ, ಈ ವರ್ಷದಲ್ಲಿ ಷೇರು ಮಾರುಕಟ್ಟೆಯು ಶೇ 20ರಷ್ಟು ವರಮಾನ ಕಂಡಿದೆ.

ಸತತ ಐದು ದಿನಗಳಿಂದ ಷೇರು ಪೇಟೆಯು ಏರಿಕೆಯ ಹಾದಿ ಹಿಡಿದಿತ್ತು. ಎನರ್ಜಿ, ಬ್ಯಾಂಕಿಂಗ್ ಮತ್ತು ಐ.ಟಿ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಕುಸಿತದ ಹಾದಿ ಹಿಡಿಯಿತು.

ಸೆನ್ಸೆಕ್ಸ್ 170 ಅಂಶ ಕುಸಿಯುವ ಮೂಲಕ 72,240ಕ್ಕೆ ವಹಿವಾಟನ್ನು ಮುಕ್ತಾಯಗೊಳಿಸಿತು. ದಿನದ ಆರಂಭಿಕ ವಹಿವಾಟಿನಲ್ಲಿ 327 ಅಂಶ ಕುಸಿದು, 72,082ಕ್ಕೆ ತಲುಪಿತ್ತು. ನಿಫ್ಟಿಯು 47 ಅಂಕ ಕುಸಿದು, 21,731 ಅಂಶಗಳಲ್ಲಿ ವಹಿವಾಟನ್ನು ಮುಗಿಸಿತು.

ಪ್ರಸಕ್ತ ವರ್ಷದಲ್ಲಿ ಸೆನ್ಸೆಕ್ಸ್ 11,399 ಅಂಶ (ಶೇ 18.73) ಏರಿಕೆಯಾಗಿದ್ದರೆ, ನಿಫ್ಟಿ 3,626 ಅಂಶ ಏರಿಕೆ (ಶೇ 20) ಕಂಡಿದೆ. ಹೂಡಿಕೆದಾರರ ಪಾಲಿಗೆ ಈ ವರ್ಷ ಉತ್ತಮ ಫಲ ನೀಡಿದ್ದು, ಒಟ್ಟು 81.90 ಲಕ್ಷ ಕೋಟಿ ಆದಾಯ ಗಳಿಸಿದ್ದಾರೆ.

‘ಸ್ಥೂಲ ಆರ್ಥಿಕತೆ ಅಂಶಗಳು, ಮೂರು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರಿದ್ದು, ಕಾರ್ಪೊರೇಟ್ ವಲಯದಲ್ಲಿನ ಆದಾಯ ಗಳಿಕೆ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಬದಲಾವಣೆ ಮಾಡದೆ ಯಥಾಸ್ಥಿತಿ ಕಾಯ್ದುಕೊಂಡಿದ್ದು ಮಾರುಕಟ್ಟೆ ಏರಿಕೆಗೆ ಕಾರಣವಾಗಿದೆ’ ಎಂದು ಷೇರುಪೇಟೆ ತಜ್ಞರು ಹೇಳಿದ್ದಾರೆ.

ಮುಖ್ಯಾಂಶಗಳು

- 2017ರ ಬಳಿಕ ಈ ವರ್ಷ ಉತ್ತಮ ಗಳಿಕೆ ಕಂಡ ಷೇರು ಮಾರುಕಟ್ಟೆ
- ಪ್ರಸಕ್ತ ವರ್ಷದಲ್ಲಿ ಸೆನ್ಸೆಕ್ಸ್ 11,399 ಅಂಶ ಏರಿಕೆ
- 3,626 ಅಂಶ ಏರಿಕೆ ದಾಖಲಿಸಿದ ನಿಫ್ಟಿ

ತೈಲ ಬೆಲೆ ಶೇ 10ರಷ್ಟು ಇಳಿಕೆ ಸಂಭವ?

ಲಂಡನ್ (ರಾಯಿಟರ್ಸ್): ಪ್ರಸಕ್ತ ವರ್ಷದ ಕೊನೆಯಲ್ಲಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರವು ಶೇ 10ರಷ್ಟು ಇಳಿಕೆಯಾಗುವ ಸಂಭವವಿದೆ ಎಂದು ಹೇಳಲಾಗಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು, ಉತ್ಪಾದನಾ ಮಟ್ಟ ಕಡಿತ, ಹಣದುಬ್ಬರ ಏರಿಕೆಗೆ ಕೇಂದ್ರ ಬ್ಯಾಂಕ್‌ಗಳು ಕೈಗೊಂಡಿರುವ ಕ್ರಮಗಳಿಂದಾಗಿ ಎರಡು ವರ್ಷದ ಬಳಿಕ ದರ ಕಡಿಮೆಯಾಬಹುದು ಎಂದು ಮೂಲಗಳು ತಿಳಿಸಿವೆ.

ಕೆಂಪು ಸಮುದ್ರ ಮಾರ್ಗದಲ್ಲಿ ಕಚ್ಚಾ ತೈಲ ಹೊತ್ತ ಹಡಗುಗಳ ಮೇಲೆ ಯೆಮನ್‌ನ ಹೌತಿ ಉಗ್ರರು ದಾಳಿ ನಡೆಸಿದ್ದರು. ಇದರಿಂದ ಈ ಮಾರ್ಗದಲ್ಲಿ ತೈಲ ಸಾಗಾಟಕ್ಕೆ ತೊಡಕು ಎದುರಾಗಿತ್ತು. ಹಾಗಾಗಿ, ತೈಲದ ಬೆಲೆ ಏರಿಕೆಯಾಗಿತ್ತು. ಈಗ ಉಗ್ರರ ದಾಳಿ ನಿಯಂತ್ರಣಕ್ಕೆ ಬಂದಿದೆ. ಇದರಿಂದ ಮತ್ತೆ ಈ ಮಾರ್ಗದಲ್ಲಿ ಸಾಗಾಟ ಪುನರಾರಂಭಗೊಂಡಿದ್ದು, ಶುಕ್ರವಾರ ತೈಲ ಬೆಲೆ ಶೇ 3ರಷ್ಟು ಇಳಿಕೆಯಾಗಿದೆ.

ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ ಶೇ 0.8ರಷ್ಟು ಏರಿಕೆ ಕಂಡು, 77.73 ಡಾಲರ್‌ಗೆ ತಲುಪಿದೆ. ಡಬ್ಲ್ಯುಟಿಐ ದರ್ಜೆಯ ಕಚ್ಚಾ ತೈಲ ದರವು ಶೇ 0.6ರಷ್ಟು ಏರಿಕೆಯಾಗಿ, ಬ್ಯಾರಲ್‌ಗೆ 72.19 ಡಾಲರ್‌ಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	600
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-35500
ಹಳತು	41000-43000
ಚಿತ್ರದುರ್ಗ	
ಅಪಿ	47909-48319
ಬೆಟ್ಟೆ	37139-37579
ಕೆಂಪುಗೋಟು	30610-31059
ರಾಶಿ	47429-47869
ಹೊನ್ನಾವರ	
ಹಳೆಚಾಲಿ	36000-38000
ಕುಮಟ	
ಚಿಪ್ಪು	25899-32999
ಕೋಕ	19019-32099
ಹಳೆಚಾಲಿ	35699-38099
ಹೊಸಚಾಲಿ	32599-34109
ಪುತ್ತೂರು	
ಕೋಕ	11000-25000
ಹೊಸತು	27000-36500
ಶಿವಮೊಗ್ಗ	
ಬೆಟ್ಟೆ	24169-53952
ಗೊರಬಲು	16009-38011
ರಾಶಿ	44609-48599
ಸರಕು	53109-74400
ಸಿದ್ದಾಪುರ	
ಬಿಳಿಗೋಟು	31299-33899
ಚಾಲಿ	36389-38100
ಕೋಕ	31019-32899
ಕೆಂಪುಗೋಟು	30000-32000
ರಾಶಿ	44509-48069
ತಟ್ಟಿಬೆಟ್ಟೆ	42049-47349
ಶಿರಸಿ	
ಬೆಟ್ಟೆ	37519-43618
ಬಿಳಿಗೋಟು	31099-35269
ಚಾಲಿ	37009-38902
ಕೆಂಪುಗೋಟು	30521-30521
ರಾಶಿ	45698-47889
ಯಲ್ಲಾಪುರ	
ಅಪಿ	58888-63069
ಬಿಳಿಗೋಟು	24899-33770
ಚಾಲಿ	34099-38849
ಕೋಕ	17299-28399
ಕೆಂಪುಗೋಟು	25019-34609
ರಾಶಿ	45011-55555
ತಟ್ಟಿಬೆಟ್ಟೆ	37699-44899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14250	14300	-	198
ಎಸಿ	7840	7700	-	
ಆರ್‌ಪಿ	11200	11500	-	ಲಂಡನ್
ಆರ್‌ಸಿ	6970	7000	-	2936 ಡಾಲರ್ಸ್

ನಿಶ್ಚಿತ ಠೇವಣಿ ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಹೆಚ್ಚಿಸಿದ ಬೆನ್ನಲ್ಲೇ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ ಕೂಡ ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಹೆಚ್ಚಿಸಿದೆ.

ಶುಕ್ರವಾರದಿಂದ ಈ ಬಡ್ಡಿದರ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

7ರಿಂದ 14 ದಿನಗಳವರೆಗಿನ ಬಡ್ಡಿದರವನ್ನು ಶೇ 3ರಿಂದ ಶೇ 4.25ಕ್ಕೆ ಹೆಚ್ಚಿಸಲಾಗಿದೆ. 15ರಿಂದ 45 ದಿನಗಳವರೆಗಿನ ಬಡ್ಡಿದರವನ್ನು ಶೇ 4.50ಕ್ಕೆ ಹೆಚ್ಚಿಸಲಾಗಿದೆ.

ಒಂದು ಲೀಟರ್ ಎಥೆನಾಲ್‌ಗೆ ₹6.87 ಪ್ರೋತ್ಸಾಹಧನ

ನವದೆಹಲಿ (ಪಿಟಿಐ): ಮೊಲಾಸಿಸ್–ಸಿ (ಕಾಕಂಬಿ) ಬಳಸಿ ಉತ್ಪಾದಿಸುವ ಒಂದು ಲೀಟರ್ ಎಥೆನಾಲ್‌ಗೆ ₹6.87 ಪ್ರೋತ್ಸಾಹಧನ ನೀಡುವುದಾಗಿ ಕೇಂದ್ರ ಸರ್ಕಾರಿ ಸ್ವಾಮ್ಯದ ಪೆಟ್ರೋಲಿಯಂ ಕಂಪನಿಗಳು ಶುಕ್ರವಾರ ತಿಳಿಸಿವೆ.

ಕಂಪನಿಗಳ ಈ ನಿರ್ಧಾರವನ್ನು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ಸ್ವಾಗತಿಸಿದ್ದು, ಮುಂದಿನ ದಿನಗಳಲ್ಲಿ ಬೆಲೆಯನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಹೇಳಿದೆ.

‘ಈ ಪ್ರೋತ್ಸಾಹಧನ ಲಭಿಸಿದರೆ ಒಂದು ಲೀಟರ್ ಎಥೆನಾಲ್ ಬೆಲೆ ₹56.28 ಆಗಲಿದೆ. ಕಂಪನಿಗಳ ನಿರ್ಧಾರವು ಪ್ರಶಂಸನೀಯವಾಗಿದೆ’ ಎಂದು ಸಂಘದ ಅಧ್ಯಕ್ಷ ಎಂ. ಪ್ರಭಾಕರ್ ರಾವ್ ಹೇಳಿದ್ದಾರೆ.

ಸುಕನ್ಯಾ ಸಮೃದ್ಧಿ ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ಸುಕನ್ಯಾ ಸಮೃದ್ಧಿ ಯೋಜನೆ ಹಾಗೂ ಮೂರು ವರ್ಷದ ಅವಧಿಯ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಜನವರಿ–ಮಾರ್ಚ್ ತ್ರೈಮಾಸಿಕ ಅವಧಿಗೆ ಹೆಚ್ಚಿಸಲಾಗಿದೆ.

ಆದರೆ, ಉಳಿದ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರವನ್ನು ಹೆಚ್ಚಿಸದೆ ಕೇಂದ್ರ ಸರ್ಕಾರ ಯಥಾಸ್ಥಿತಿ ಕಾಯ್ದುಕೊಂಡಿದೆ.

ಸುಕನ್ಯಾ ಸಮೃದ್ಧಿ ಬಡ್ಡಿದರವನ್ನು ಶೇ 8ರಿಂದ ಶೇ 8.2ಕ್ಕೆ ಹೆಚ್ಚಿಸಲಾಗಿದೆ. ನಿಶ್ಚಿತ ಠೇವಣಿ ಮೇಲಿನ ಬಡ್ಡಿದರವನ್ನು ಶೇ 7ರಿಂದ ಶೇ 7.1ರಷ್ಟು ಹೆಚ್ಚಿಸಲಾಗಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದಕ್ಕೆ ಹೊಂದುವಂತೆ ಈ ಪರಿಷ್ಕರಣೆ ಮಾಡಲಾಗಿದೆ.

ಯಥಾಸ್ಥಿತಿಗೆ ಒತ್ತು: ಪಿಪಿಎಫ್ ಮತ್ತು ಉಳಿತಾಯ ಠೇವಣಿಗಳ ಮೇಲಿನ ಬಡ್ಡಿದರ ಪರಿಷ್ಕರಣೆಯಾಗಿಲ್ಲ. ಕ್ರಮವಾಗಿ ಶೇ 7.1 ಹಾಗೂ ಶೇ 4ರಷ್ಟಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ನಿಗದಿಪಡಿಸಿದ್ದ ದರವನ್ನೇ ಕಾಯ್ದುಕೊಳ್ಳಲಾಗಿದೆ. 115 ತಿಂಗಳಿಗಳಲ್ಲಿ ದ್ವಿಗುಣಗೊಳ್ಳುವ ಕಿಸಾನ್ ವಿಕಾಸ ಪತ್ರ (ಶೇ 7.5) ಹಾಗೂ ರಾಷ್ಟ್ರೀಯ ಉಳಿತಾಯ ಪತ್ರದ (ಶೇ 7.7) ಬಡ್ಡಿದರದಲ್ಲೂ ಬದಲಾವಣೆ ಮಾಡಿಲ್ಲ.

ಅಲ್ಲದೇ, ಮಾಸಿಕ ಆದಾಯ ಯೋಜನೆಯ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. ಸದ್ಯಕ್ಕೆ ಈ ಯೋಜನೆಯಡಿ ಶೇ 7.4ರಷ್ಟು ಬಡ್ಡಿದರವಿದೆ.

2022ರ ಮೇ ತಿಂಗಳಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಹೆಚ್ಚಿಸಿತ್ತು. ಸದ್ಯ ರೆಪೊ ದರ ಶೇ 6.5ರಷ್ಟಿದೆ. ಪ್ರಸಕ್ತ ವರ್ಷದಲ್ಲಿ ಐದು ಬಾರಿ ನಡೆದಿರುವ ಹಣಕಾಸು ನೀತಿ ಸಭೆಯಲ್ಲೂ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

8 ಕೋಟಿಗೂ ಅಧಿಕ ಐಟಿಆರ್ ಸಲ್ಲಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೂ 8 ಕೋಟಿಗೂ ಹೆಚ್ಚು ಜನರು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯು ಶುಕ್ರವಾರ ತಿಳಿಸಿದೆ.

2022–23ನೇ ಹಣಕಾಸು ವರ್ಷದಲ್ಲಿ 7.51 ಕೋಟಿ ಜನರು ರಿಟರ್ನ್ಸ್ ಸಲ್ಲಿಸಿದ್ದರು. ಈ ಬಾರಿ ಅತಿಹೆಚ್ಚಿನ ಸಂಖ್ಯೆಯಲ್ಲಿ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದಾರೆ ಎಂದು ತಿಳಿಸಿದೆ.

ಗುಜರಾತ್:ಟೆಸ್ಲಾ ಕಾರು ಘಟಕ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಭಾರತದಲ್ಲಿ ತನ್ನ ಪ್ರಥಮ ಕಾರು ಉತ್ಪಾದನಾ ಘಟಕವನ್ನು ಗುಜರಾತ್‌ನಲ್ಲಿ ಆರಂಭಿಸಲಿದೆ ಎಂದು ಗುಜರಾತ್ ಸರ್ಕಾರ ತಿಳಿಸಿದೆ.

ಜ. 10 ಮತ್ತು 12ರಂದು ಗಾಂಧಿನಗರದಲ್ಲಿ ‘ವೈಬ್ರೆಂಟ್ ಗುಜರಾತ್’ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಲ್ಲಿ ಮಸ್ಕ್ ಕೂಡ ಭಾಗವಹಿಸಲಿದ್ದು, ಅಂದೇ ಅಧಿಕೃತವಾಗಿ ಘೋಷಿಸಲಿದ್ದಾರೆ ಎಂದು ಹೇಳಲಾಗಿದೆ.

ಕಂಪನಿಯು ಕಳೆದ ಜನವರಿಯಲ್ಲಿ ಟೆಸ್ಲಾ ಇಂಡಿಯಾ ಮೋಟಾರ್ ಆ್ಯಂಡ್ ಎನರ್ಜಿ ಹೆಸರಿನಡಿ ಬೆಂಗಳೂರಿನಲ್ಲಿ ನೋಂದಾಯಿಸಿತ್ತು. ಅಲ್ಲದೇ, ಘಟಕ ಸ್ಥಾಪನೆ ಸಂಬಂಧ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಮೀಕ್ಷೆಯನ್ನೂ ನಡೆಸಿತ್ತು. ‘ಮಸ್ಕ್ ಅವರು ಕಾರು ತಯಾರಿಕಾ ಘಟಕ ಸ್ಥಾಪನೆ ಸಂಬಂಧ ದೇಶದ ಹಲವೆಡೆ ಸಮೀಕ್ಷೆ ನಡೆಸಿದ್ದಾರೆ. ಗುಜರಾತ್‌ನಲ್ಲಿ ಭಾರತದ ಮೊದಲ ಘಟಕ ಸ್ಥಾಪಿಸುವ ಇರಾದೆ ಅವರ ಮನಸ್ಸಿನಲ್ಲಿದೆ. ಶೀಘ್ರವೇ, ಈ ಬಗ್ಗೆ ಅಧಿಕೃತವಾಗಿ ಘೋಷಿಸಲಾಗುವುದು’ ಎಂದು ಆರೋಗ್ಯ ಸಚಿವ ಹಾಗೂ ಸರ್ಕಾರದ ವಕ್ತಾರ ಋಷಿಕೇಶ ಪಟೇಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾರು ಘಟಕ ಸ್ಥಾಪನೆ ಸಂಬಂಧ ಗುಜರಾತ್ ಸರ್ಕಾರವು ಟೆಸ್ಲಾ ಕಂಪನಿಯ ಸಿಇಒ ಜತೆಗೆ ಹಲವು ತಿಂಗಳಿನಿಂದ ಮಾತುಕತೆ ನಡೆಸಿತ್ತು. ಘಟಕ ಸ್ಥಾಪನೆಗೆ ಪೂರಕವಾದ ವಾತಾವರಣ ಕಲ್ಪಿಸುವ ಬಗ್ಗೆ ಭರವಸೆ ನೀಡಿತ್ತು. ಈಗಾಗಲೇ, ಗುಜರಾತ್‌ನಲ್ಲಿ ಮಾರುತಿ ಸುಜುಕಿ, ಟಾಟಾ ಮೋಟಾರ್ಸ್ ವಾಹನಗಳ ತಯಾರಿಕಾ ಘಟಕಗಳಿವೆ.

ಮಹಿಳಾ ವಿಭಾಗ: ಹಂಪಿ ರನ್ನರ್ ಅಪ್

ಕಾರ್ಲ್‌ಸನ್‌ಗೆ ವಿಶ್ವ ಚೆಸ್ ಕಿರೀಟ

ಮ್ಯಾಗ್ನಸ್ ಕಾರ್ಲ್‌ಸನ್

ಸಮರ್‌ಖಂಡ್ (ಉಜ್ಬೇಕಿಸ್ತಾನ): ಕೊನೆಯ ಸುತ್ತಿನಲ್ಲಿ ಭಾರತದ ಪ್ರಜ್ಞಾನಂದ ಆರ್. ಜೊತೆ ‘ಡ್ರಾ’ ಮಾಡಿಕೊಂಡ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಬಾರಿ ಚಾಂಪಿಯನ್ ಕಿರೀಟ ಧರಿಸಿದರು. ಮಹಿಳೆಯರ ವಿಭಾಗದಲ್ಲಿ ಭಾರತದ ಕೋನೇರು ಹಂಪಿ ರನ್ನರ್ ಅಪ್ ಆದರು.

ಅವರು 13 ಸುತ್ತುಗಳಿಂದ 10 ಪಾಯಿಂಟ್ಸ್ ಸಂಗ್ರಹಿಸಿ ಸ್ಪಷ್ಟವಾಗಿ ಅಗ್ರಸ್ಥಾನ ಪಡೆದರು. ಸ್ಲೊವೇನಿಯಾದ ಗ್ರ್ಯಾಂಡ್‌ಮಾಸ್ಟರ್ ವ್ಲಾದಿಮಿರ್ ಫೆಡೊಸೀವ್ 9.5 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಪಡೆದರು. 33 ವರ್ಷದ ಕಾರ್ಲ್‌ಸನ್ 2014, 2015, 2019, 2022ರಲ್ಲೂ ಈ ಟೂರ್ನಿಯಲ್ಲಿ ವಿಜೇತರಾಗಿದ್ದರು.

ಭಾರತದ ವಿದಿತ್ ಗುಜರಾತಿ ಅವರು 9 ಪಾಯಿಂಟ್ ಗಳಿಸಿ ಒಟ್ಟು 12 ಆಟಗಾರರೊದಿಗೆ ಮೂರನೇ ಸ್ಥಾನದಲ್ಲಿದ್ದರೂ, ಟೈಬ್ರೇಕ್ ಆಧಾರದಲ್ಲಿ ನಾಲ್ಕನೇ ಸ್ಥಾನಕ್ಕೆ ಸರಿಯಬೇಕಾಯಿತು. ಪ್ರಜ್ಞಾನಂದ (9) ಎಂಟನೇ ಸ್ಥಾನ ಪಡೆದರು.

ನಾರ್ವೆ ಆಟಗಾರ ಪ್ರಶಸ್ತಿ ಜತೆ ₹ 49.50 ಲಕ್ಷ ಬಹುಮಾನ ಪಡೆದರು.

ಅನಸ್ತೇಸಿಯಾ ಚಾಂಪಿಯನ್: ರಷ್ಯಾದ ಅನಸ್ತೇಸಿಯಾ ಬಡ್ನಾರುಕ್ ಅವರು ಮಹಿಳೆಯರ ವಿಭಾಗದ ವಿಶ್ವ ರ‍್ಯಾಪಿಡ್ ಚಾಂಪಿಯನ್ ಪಟ್ಟಕ್ಕೇರಿದರು. ಅವರು ಭಾರತದ ಕೋನೇರು ಹಂಪಿ ಜೊತೆ ಟೈಬ್ರೇಕ್ ಪಂದ್ಯವನ್ನು 2.5–1.5 ರಿಂದ ಗೆದ್ದರು. 2019ರಲ್ಲಿ ಚಾಂಪಿಯನ್ ಆಗಿದ್ದ ಹಂಪಿ ಈ ಬಾರಿ ರನ್ನರ್ ಅಪ್ ಆದರು.

11 ಸುತ್ತುಗಳ ನಂತರ ಬಡ್ನಾರುಕ್, ಹಂಪಿ ಮತ್ತು ಲೀ ಟಿಂಗ್ಜಿ ತಲಾ ಎಂಟೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದರು. ಟೈಬ್ರೇಕರ್‌ನಲ್ಲಿ ಟಿಂಗ್ಜಿ 3ನೇ ಸ್ಥಾನಕ್ಕೆ ಸರಿದರು. ಆದರೆ ಟೈಬ್ರೇಕ್ ಸ್ಕೋರ್ ಸಮ ಆಗಿದ್ದರಿಂದ ಬಡ್ನಾರುಕ್ ಮತ್ತು ಹಂಪಿ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳಲ್ಲಿ ಆಡಬೇಕಾಯಿತು.

ಎರಡನೇ ಏಕದಿನ ಪಂದ್ಯ ಇಂದು ಭಾರತ ಮಹಿಳಾ ತಂಡಕ್ಕೆ ಸವಾಲು

ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ನೇತೃತ್ವದ ಭಾರತ ಮಹಿಳಾ ಕ್ರಿಕೆಟ್ ತಂಡ, ಆಸ್ಟ್ರೇಲಿಯಾ ವಿರುದ್ಧದ ಮೂರು ಏಕದಿನ ಪಂದ್ಯಗಳ ಸರಣಿಯ ಎರಡನೇ ಪಂದ್ಯವನ್ನು ಶನಿವಾರ ಆಡಲಿದೆ. ಸರಣಿ ಉಳಿಸಿಕೊಳ್ಳಬೇಕಾದರೆ ಭಾರತಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯ.

ವಾಂಖೆಡೆ ಕ್ರೀಡಾಂಗಣದಲ್ಲೇ ನಡೆದ ಮೊದಲ ಪಂದ್ಯದಲ್ಲಿ ಭಾರತ ತಂಡ ಮೂರು ಓವರುಗಳಿಗೂ ಹೆಚ್ಚು ಎಸೆತಗಳಿರುವಂತೆ ಆರು ವಿಕೆಟ್‌ಗಳಿಂದ ಸೋಲನುಭವಿಸಿತ್ತು. ಭಾರತ 282 (8 ವಿಕೆಟ್‌ಗೆ) ರನ್ ಗಳಿಸಿದ್ದರೂ, ಆಸ್ಟ್ರೇಲಿಯಾ ಅದನ್ನು ಬೆನ್ನಟ್ಟಿತ್ತು. ಇದು ಭಾರತಕ್ಕೆ, ತವರಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸತತ ಎಂಟನೇ ಸೋಲು ಆಗಿತ್ತು.

ಇನ್ನೊಂದೆಡೆ ಆಲಿಸಾ ಹೀಲಿ ನಾಯಕತ್ವದ ಆಸ್ಟ್ರೇಲಿಯಾ ತಂಡ ಮೊದಲ ಪಂದ್ಯದ ಸುಲಭ ಗೆಲುವಿನಿಂದ ಉತ್ತಮ ಆತ್ಮವಿಶ್ವಾಸದಿಂದ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 1.30.

ಆಸ್ಟ್ರೇಲಿಯನ್ ಓಪನ್ ಟೆನಿಸ್ ಬಹುಮಾನದ ಮೊತ್ತ ಶೇ 13 ಹೆಚ್ಚಳ

ಮೆಲ್ಬರ್ನ್ (ಎಪಿ); ಜನವರಿ 14ರಿಂದ ಮೆಲ್ಬರ್ನ್ ಪಾರ್ಕ್‌ನಲ್ಲಿ ಆರಂಭವಾಗಲಿರುವ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಗೆ ಬಹುಮಾನದ ಮೊತ್ತವನ್ನು ಶೇ 13ರಷ್ಟು ಹೆಚ್ಚಿಸಲಾಗಿದ್ದು, ಒಟ್ಟು ಬಹುಮಾನ ಮೊತ್ತ ಸುಮಾರು ₹56.6 ಕೋಟಿ ಇರಲಿದೆ ಎಂದು ಪಂದ್ಯಾವಳಿಯ ನಿರ್ದೇಶಕ ಕ್ರೇಗ್ ಟೈಲಿ ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪುರುಷರ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆಲ್ಲುವ ಆಟಗಾರ ಹಾಗೂ ಆಟಗಾರ್ತಿ ತಲಾ ₹17.82 ಕೋಟಿ ಬಹುಮಾನ ಮೊತ್ತ ಪಡೆಯಲಿದ್ದಾರೆ.

ದಕ್ಷಿಣ ವಲಯ ಈಜು: ಕೊನೆಯ ದಿನ ಎರಡು ಕೂಟ ದಾಖಲೆ

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರೂ ದಿನಗಳ ಕಾಲ ಸಂಪೂರ್ಣ ಪ್ರಾಬಲ್ಯ ಮೆರೆದ ಕರ್ನಾಟಕ ತಂಡ ನಿರೀಕ್ಷೆಯಂತೆ, ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ 1158 ಪಾಯಿಂಟ್‌ಗಳೊಂದಿಗೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಬಸವನಗುಡಿ ಈಜುಕೊಳದಲ್ಲಿ ಶುಕ್ರವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಕೊನೆಯ ದಿನ ಎರಡು ಕೂಟ ದಾಖಲೆಗಳು ಮೂಡಿಬಂದವು.

ತಮಿಳುನಾಡು ತಂಡ (450 ಪಾಯಿಂಟ್ಸ್) ರನ್ನರ್ ಅಪ್ ಸ್ಥಾನ ಪಡೆಯಿತು. ಒಂದನೇ ಗುಂಪಿನ ಬಾಲಕರ ವಿಭಾಗದಲ್ಲಿ ಚಿಂತನ್ ಎಸ್. ಶೆಟ್ಟಿ ಮತ್ತು ಸೂರ್ಯ ಜೋಯಪ್ಪ ಒ.ಆರ್. (ತಲಾ 33 ಪಾಯಿಂಟ್), ಬಾಲಕಿಯರ ವಿಭಾಗದಲ್ಲಿ ಜನ್ಯಾ ಬಿ.ಎಸ್. ಮತ್ತು ನೈಶಾ ಶೆಟ್ಟಿ (ತಲಾ 33 ಪಾಯಿಂಟ್ಸ್) ವೈಯಕ್ತಿಕ ಚಾಂಪಿಯನ್ ಆದರು. ಎರಡನೇ ಗುಂಪಿನ ಬಾಲಕರ ವಿಭಾಗದಲ್ಲಿ ಕರ್ನಾಟಕದ ಶರಣ್ ಎಸ್. (35 ಪಾಯಿಂಟ್ಸ್) ಮತ್ತು ಬಾಲಕಿಯರ ವಿಭಾಗದಲ್ಲಿ ತೆಲಂಗಾಣದ ಶ್ರೀನಿತ್ಯಾ ಸಾಗಿ (33 ಪಾಯಿಂಟ್ಸ್) ವೈಯಕ್ತಿಕ ಪ್ರಶಸ್ತಿ ಗೆದ್ದುಕೊಂಡರು.

ಮೂರನೇ ಗುಂಪಿನ ಬಾಲಕರ ವಿಭಾಗದಲ್ಲಿ ತಮಿಳುನಾಡಿನ ಎ.ಮಿಥುನ್ (28) ಬಾಲಕರ ವಿಭಾಗದಲ್ಲಿ, ಶಿವಾನಿ ಕರ್ರ (33) ಬಾಲಕಿಯರ ವಿಭಾಗದಲ್ಲಿ ವೈಯಕ್ತಿಕ ಪ್ರಶಸ್ತಿ ಗಳಿಸಿದರು. ಮೂರು ದಿನಗಳ ಕೂಟದಲ್ಲಿ 9 ದಾಖಲೆಗಳು ಮೂಡಿಬಂದವು.

ವೈಯಕ್ತಿಕ ಪ್ರಶಸ್ತಿ ಗೆದ್ದವರು: (ಎಡದಿಂದ) ತೆಲಂಗಾಣದ ಶ್ರೀನಿತ್ಯಾ ಸಾಗಿ (ಬಾಲಕಿಯರ ಎರಡನೇ ಗುಂಪು), ಕರ್ನಾಟಕದ ಸೂರ್ಯ ಜೋಯಪ್ಪ ಮತ್ತು ಚಿಂತನ್ ಎಸ್.ಶೆಟ್ಟಿ (ಬಾಲಕರ ಒಂದನೇ ಗುಂಪು), ಶರಣ್ ಎಸ್. (ಬಾಲಕರ ಎರಡನೇ ಗುಂಪು), ಜನ್ಯಾ ಬಿ.ಎಸ್. ಮತ್ತು ನೈಶಾ ಶೆಟ್ಟಿ (ಬಾಲಕಿಯರ ಒಂದನೇ ಗುಂಪು). —ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಕೊನೆಯ ದಿನ ಎರಡು ದಾಖಲೆ: ಕರ್ನಾಟಕದ ಹಿತೈಷಿ ವಿ. ಬಾಲಕಿಯರ ಒಂದನೇ ಗುಂಪಿನ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯನ್ನು 1ನಿ.20.59 ಸೆ.ಗಳಲ್ಲಿ ಪೂರೈಸಿ, ರಾಜ್ಯದವರೇ ಆದ ದಿವ್ಯಾ ಗುರುಸ್ವಾಮಿ ಹೆಸರಿನಲ್ಲಿದ್ದ ದಾಖಲೆ (2012ರಲ್ಲಿ 1:22.07) ಮುರಿದರು. ಬಾಲಕರ ಒಂದನೇ ಗುಂಪಿನ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಎನ್.ದೇವಗಣೇಶ್ (ಆಂಧ್ರ ಪ್ರದೇಶ) ಅವರು 2ನಿ.11.87ಸೆ.ಗಳಲ್ಲಿ ದೂರ ಕ್ರಮಿಸಿ ಕೇರಳದ ಆದಿತ್ಯನ್ ನಾಯರ್ ಹೆಸರಿನಲ್ಲಿದ್ದ 2ನಿ.12.39 ಸೆ.ಗಳ ದಾಖಲೆ ಅಳಿಸಿಹಾಕಿದರು.

ಪದಕಗಳಲ್ಲಿ ಸಿಂಹಪಾಲು ಕರ್ನಾಟಕದ ಪಾಲಾದವು. ರಾಜ್ಯದ ಈಜುಪಟುಗಳು ಒಟ್ಟು 80 ಚಿನ್ನ, 62 ಬೆಳ್ಳಿ, 30 ಕಂಚಿನ ಪದಕಗಳನ್ನು ಕೊರಳಿಗೆ ಹಾಕಿಕೊಂಡರು.

ಮೂರನೇ ದಿನ ಫಲಿತಾಂಶಗಳು (ಕರ್ನಾಟಕದ ಸ್ಪರ್ಧಿಗಳು):

ಬಾಲಕರು: ಒಂದನೇ ಗುಂಪು: 100 ಮೀ. ಫ್ರೀಸ್ಟೈಲ್: ಅಲೈಸ್ಟರ್ ಸಾಮ್ಯುಯೆಲ್ ರೇಗೊ–1, ಚಿಂತನ್ ಎಸ್.ಶೆಟ್ಟಿ –2, ಕಾಲ: 55.18 ಸೆ.; 400 ಮೀ. ಫ್ರೀಸ್ಟೈಲ್: ಚಿಂತನ್ ಎಸ್.ಶೆಟ್ಟಿ –1, ಅಲೈಸ್ಟರ್ ಸಾಮ್ಯುಯೆಲ್ ರೇಗೊ –2, ಕಾಲ: 4ನಿ.16.41 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಸೂರ್ಯ ಜೆ.ಟಿ.–1, ಸ್ವರೂಪ್ ಧನುಚೆ –2, ಕಾಲ: 29.10 ಸೆ.; 100 ಮೀ. ಬ್ರೆಸ್ಟ್ ಸ್ಟ್ರೋಕ್: ಸೂರ್ಯ ಜೋಯಪ್ಪ –1, ಶ್ರೇಯಸ್ ಮಂಜುನಾಥ್ –3, ಕಾಲ: 1ನಿ.09.75 ಸೆ.; 200 ಮೀ. ಬಟರ್‌ಫ್ಲೈ:ಎನ್.ದೇವ ಗಣೇಶ್ (ಆಂಧ್ರ ಪ್ರದೇಶ)–1, ಸ್ವರೂಪ್ ಧನುಚೆ –2, ನಿರಂಜನ್ ಕಾರ್ತಿಕ್ –3, ಕಾಲ: 2ನಿ.11.87 ಸೆ., ನೂತನ ದಾಖಲೆ, ಹಳೆಯದು: 2ನಿ.12.39ಸೆ.; 400 ಮೀ. ವೈಯಕ್ತಿಕ ಮೆಡ್ಲೆ: ರಾಘವ್ ಸ್ವಚ್ಛಂದಮ್ –1, ಸೂರ್ಯ ಜೋಯಪ್ಪ –2, ಕಾಲ: 4ನಿ.59.68 ಸೆ.

ಬಾಲಕಿಯರು: ಒಂದನೇ ಗುಂಪು: 100 ಮೀ. ಫ್ರೀಸ್ಟೈಲ್: ನೈಶಾ ಶೆಟ್ಟಿ –1, ಜೇಗಶ್ರೀ ಪೂಜಾ –2, ಕಾಲ: 1ನಿ.03.52 ಸೆ.; 1,500 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್. –1, ಆಸ್ರಾ ಸುಧೀರ್ –2, ಕಾಲ: 19ನಿ.07.86 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜೆ.ಶಾ –1, ಇಂಚರಾ ಫಣೀಂದ್ರನಾಥ್ –2, ಕಾಲ: 32.74 ಸೆ.; 100 ಮೀ. ಬ್ರೆಸ್ಟ್ ಸ್ಟ್ರೋಕ್: ಹಿತೈಷಿ ವಿ. –1, ಸಮನ್ವಿ ಇ.ಎಸ್. (ಕರ್ನಾಟಕ)–2, ಕಾಲ: 1ನಿ.20.59 ಸೆ., ನೂತನ ದಾಖಲೆ, ಹಳೆಯದು: 1ನಿ.22.07 ಸೆ.; 200 ಮೀ. ಬಟರ್‌ಫ್ಲೈ: ಜನ್ಯಾ ಬಿ.ಎಸ್. –1, ಕಾಲ: 2ನಿ.41.95 ಸೆ.; 400 ಮೀ. ವೈಯಕ್ತಿಕ ಮೆಡ್ಲೆ: ಆಸ್ರಾ ಸುಧೀರ್ –3, ಕಾಲ: 5ನಿ.33.32 ಸೆ.

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಆವರಣದಲ್ಲಿ ಶುಕ್ರವಾರ ಆರಂಭವಾದ ಎರಡು ದಿನಗಳ ವಿಶ್ವ ಕೊಡವ ಸಮ್ಮೇಳನದ ಭಾಗವಾಗಿ ನಡೆದ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು

ವಿಶ್ವ ಕೊಡವ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಇಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಆವರಣದಲ್ಲಿ ಶುಕ್ರವಾರ ಆರಂಭವಾದ ಎರಡು ದಿನಗಳ ವಿಶ್ವ ಕೊಡವ ಸಮ್ಮೇಳನದಲ್ಲಿ ಸಾವಿರಾರು ಮಂದಿ ಭಾಗಿಯಾದರು.

‘ಕನೆಕ್ಟಿಂಗ್ ಕೊಡವಾಸ್ ಟ್ರಸ್ಟ್’ ಆಯೋಜಿಸಿರುವ ಸಮ್ಮೇಳನದಲ್ಲಿ ಕೊಡಗು ಜಿಲ್ಲೆ ಜೊತೆಗೆ ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ನೆಲೆಸಿರುವ ಸಾವಿರಕ್ಕೂ ಹೆಚ್ಚಿನ ಕೊಡವ ಕುಟುಂಬಗಳ ಸದಸ್ಯರು ಪಾಲ್ಗೊಂಡರು. ಖಾಸಗಿ ಬಸ್ ನಿಲ್ದಾಣದಿಂದ ನಡೆದ ಮೆರವಣಿಗೆಯಲ್ಲಿ ಕೊಡವರು ತಮ್ಮ ಕುಟುಂಬದ ಹೆಸರಿರುವ ಶ್ವೇತವರ್ಣದ ಧ್ವಜಗಳನ್ನಿಡಿದು ಹೆಜ್ಜೆ ಹಾಕಿದರು.

ವಿಧಾನಪರಿಷತ್ ಸದಸ್ಯ ಶಾಂತ ರಾಮ್ ಸಿದ್ದಿ ಮಾತನಾಡಿ, ‘ಕೊಡವ ಕುಲಶಾಸ್ತ್ರೀಯ ಅಧ್ಯಯನವಾಗಬೇಕು. ಸಂಸ್ಕೃತಿಯನ್ನು ಪೆಟ್ಟಿಗೆಯಲ್ಲಿಟ್ಟು ರಕ್ಷಣೆ ಮಾಡುವ ಬದಲು, ಆಚರಿಸಿ ರಕ್ಷಣೆ ಮಾಡಬೇಕು’ ಎಂದು ಪ್ರತಿಪಾದಿಸಿದರು.

ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಮಾತನಾಡಿ, ‘ಎಲ್ಲರೂ ಒಗ್ಗಟ್ಟು ಪ್ರದರ್ಶಿಸಿ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು’ ಎಂದರು.

ಕೇಂದ್ರ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಪಠ್ಯಕ್ರಮದ ಮುಖ್ಯ ಸಲಹೆಗಾರರಾದ ಡಾ.ಚೇತನ್ ಸಿಂಘೈ, ರಶ್ಮಿ ಸಮಂತ್ ಭಾಗವಹಿಸಿದ್ದರು.

ಟರ್ಮಿನಲ್ 2ರಿಂದ ಬಸ್ ಸೇವೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ನಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಿಗೆ ಶುಕ್ರವಾರ ಚಾಲನೆ ನೀಡಲಾಯಿತು.

‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಿತ್ಯ ಬಂದು ಹೋಗುವ ಪ್ರಯಾಣಿಕರ ಸಂಖ್ಯೆ ಸುಮಾರು 1 ಲಕ್ಷದಷ್ಟಿದೆ. ಅದರಲ್ಲಿ 14,000 ಮಂದಿ ಬಿಎಂಟಿಸಿ ಬಸ್‌ಗಳಲ್ಲೇ ಸಂಚರಿಸುವವರಾಗಿದ್ದಾರೆ. ಟರ್ಮಿನಲ್-1ಕ್ಕೆ ಈಗಾಗಲೇ ಬಿಎಂಟಿಸಿ ವಾಯು ವಜ್ರ ಬಸ್‌ಗಳ ಸಂಪರ್ಕ ಇತ್ತು. ಇನ್ನು ಮುಂದೆ ಆ ಎಲ್ಲ ಬಸ್‌ಗಳು ಟರ್ಮಿನಲ್-2ಕ್ಕೂ ಬಂದು ತೆರಳಲಿವೆ. 137 ವಾಯು ವಜ್ರ ಬಸ್‌ಗಳು 944 ಟ್ರಿಪ್ ಮಾಡುತ್ತಿವೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

‘ಮೈಸೂರು, ಮಡಿಕೇರಿ ಹಾಗೂ ಕುಂದಾಪುರ ಮಾರ್ಗದಲ್ಲಿ 13 ಫ್ಲೈಬಸ್‌ಗಳು 42 ಟ್ರಿಪ್ ಮಾಡುತ್ತಿವೆ. ಟರ್ಮಿನಲ್-2 ಪ್ರಯಾಣಿಕರಿಗೂ ಇನ್ನು ಮುಂದೆ ಉಪಯೋಗವಾಗಲಿದೆ. ದಿನದ 24 ಗಂಟೆಯೂ ಬಸ್ ಸೇವೆ ಇರಲಿದೆ’ ಎಂದು ವಿವರಿಸಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮಾತನಾಡಿ, ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಎಲ್ಲ ಸೌಲಭ್ಯಗಳನ್ನು ಹೊಂದಿದ್ದು, ಉಳಿದ ವಿಮಾನ ನಿಲ್ದಾಣಗಳಿಗಿಂತ ವಿಭಿನ್ನವಾಗಿದೆ. ನಿರಂತರ ಬಸ್ ಸೇವೆ ಇರುವುದರಿಂದ ಇದರ ಉಪಯೋಗವನ್ನು ಪ್ರಯಾಣಿಕರು ಪಡೆಯಬೇಕು’ ಎಂದರು.

ತೂಬಗೆರೆ ಪಂಚಾಯಿತಿಗೆ ಬಸ್ ಸಂಪರ್ಕ, ಘಾಟಿ ಸುಬ್ರಮಣ್ಯ ದೇಗುಲಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್ ಕಲ್ಪಿಸಿಕೊಡಬೇಕು ಎಂದು ಸ್ಥಳೀಯರು ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಮಾಡಿದರು.

ಬಿಬಿಎಂಪಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ಮುಖ್ಯ ಕಾರ್ಯನಿರ್ವಾಹಕ ಸತ್ಯಕಿ ರಘುನಾಥ್, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಶಿವಶಂಕರ್ ಎನ್., ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಶಾಲಿನಿ ರಾವ್, ಮುಖ್ಯ ಮಾರುಕಟ್ಟೆ ಅಧಿಕಾರಿ ಡೊಮಿನಿಕ್ ದೇವಸಿಯಾ, ವಿಶಾಲ್ ಕೆ., ಸಂಜಯ್ ಚಂದ್ರ, ಶಿವಶಂಕರ್ ಇದ್ದರು.

ವಿಮಾನ ನಿಲ್ದಾಣದ ಲಾಂಜ್‌ನಲ್ಲಿ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ, ವಾಹನಗಳ ಕಾರ್ಯಾಚರಣೆಯ ಸಮಯ, ಡಿಜಿಟಲ್ ಫಲಕಗಳು, ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇಲ್ಲಿ 40 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಸಾರ್ವಜನಿಕರಿಗೆ ಮಾಹಿತಿಯನ್ನು ಒದಗಿಸಲಾಗುತ್ತಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ ಎರಡರಲ್ಲಿ ವಾಯುವಜ್ರ ಹಾಗೂ ಫ್ಲೈ ಬಸ್‌ಗಳಿಗೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಶಿವಶಂಕರ ಎನ್. ಅವರು ಹಸಿರು ನಿಶಾನೆ ತೋರಿಸಿದರು

ಜನವರಿಯಲ್ಲಿ ಉದ್ಯೋಗ ಮೇಳ

ಬೆಂಗಳೂರು: ಯುವ ಸಮುದಾಯಕ್ಕೆ ಉದ್ಯೋಗ ಕಲ್ಪಿಸುವ ಆಶಯದಿಂದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಬೆಂಗಳೂರಿನಲ್ಲಿ ನಡೆಸಲು ಸರ್ಕಾರ ಸಿದ್ಧತೆ ಆರಂಭಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಈ ಕುರಿತು ಮಹತ್ವದ ಸಭೆ ನಡೆಯಿತು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜನವರಿಯಲ್ಲಿ ರಾಜ್ಯಮಟ್ಟದ ಮೇಳ ನಡೆಯಲಿದೆ. ಅದಾದ ಬಳಿಕ, ಪ್ರತಿ ಜಿಲ್ಲಾ ಮತ್ತು ವಲಯವಾರು ಉದ್ಯೋಗ ಮೇಳಗಳನ್ನು ನಡೆಸಲಾಗುವುದು ಎಂದು ಹೇಳಿದರು.

ಕನ್ನಡಿಗರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಉದ್ದೇಶದಿಂದ ಸರ್ಕಾರಿ, ಖಾಸಗಿ ಕ್ಷೇತ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಮತ್ತು ಉದ್ಯೋಗ ಸೃಷ್ಟಿಯ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು. ಐಟಿ-ಬಿಟಿ, ಹೊಟೇಲ್, ಉತ್ಪಾದನಾ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಮೀಣ ಯುವಕ-ಯುವತಿಯರಿಗೆ ಅವಕಾಶ ಸಿಗುವಂತಾಗಬೇಕು. ಆದ ಕಾರಣ ಕೌಶಲ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಬೇಕು ಎಂಬ ಸಲಹೆಯೂ ಸಭೆಯಲ್ಲಿ ವ್ಯಕ್ತವಾಯಿತು ಎಂದು ತಿಳಿಸಿದರು.



ನವದೆಹಲಿಯ ಪ್ರಧಾನಿ ನಿವಾಸದಲ್ಲಿ ಆಯೋಜಿಸಿದ್ದ ಕ್ರಿಸ್‌ಮಸ್ ಕೂಟದಲ್ಲಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್‌ಅಲುಕ್ಕಾಸ್ ಅವರು, ತಮ್ಮ ಆತ್ಮಚರಿತ್ರೆ ‘ಸ್ಪ್ರೆಡ್ಡಿಂಗ್ ಜೋಯ್’ ಕೃತಿಯನ್ನು ಪ್ರಧಾನಿ ಮೋದಿ ಅವರಿಗೆ ನೀಡಿದರು. ಈ ಕೃತಿಯು ಜೋಯ್ ಅಲುಕ್ಕಾಸ್ ಅವರ ಉದ್ಯಮಶೀಲತೆಯ ಪಯಣ, ಬ್ರ್ಯಾಂಡ್‌ನ ವಿಕಾಸ, ಅವರ ಜೀವನಾನುಭವ, ಸಾಧನೆ ಮತ್ತು ವೈಫಲ್ಯದ ಒಳನೋಟಗಳ ಮೇಲೆ ಬೆಳಕು ಚೆಲ್ಲಲಿದೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Intl Airport Road

30x40 Converted Plots @ 1,80,000/-
150/- per sq.ft, 90 minutes Journey from Yelahanka
Ready for Registration
9343510635

Anjanapura

SALE BDA SITE Anjanapura 3rd A Block near Mangalya Appartment, 30x40 South, 10,250/-Sqft. Negotiable. 9740148870.

Arkavathi Layout

ARKAVATHI LAYOUT 20x30 BDA East Facing 2nd Block Sampegehalli, Genuine Buyers USR- 7019770736/ 8951614989.

Banashankari

BDA AUCTION SITE SALE BSK 6th Stage 4th Block 40x60 North, and East Facing Both side 40 feet Road, 100% cheque payment Close to RV Architect Engineer College. Genuine buyer Call: 9900561723/ 9880131050

BANASHANKARI 6TH STAGE BDA APPROVED SITE FOR SALE 40x60, NEAR KANAKAPURA ROAD METRO-STATION CALL:9606226222 9916086525.

Gnanabharathi

20X30 BDA SITE SALE GNANABHARATHI LAYOUT 1st Block, close to Nagadevanahalli Ring-Road, Rs.51 lakhs. 9742681666

HSR Layout

SALE 50X80 South Excellent Residential Plot HSR 3rd Sector Serious Buyers Contact Ramesh HK 9844104958

Indiranagar

INDIRANAGAR DEFENCE colony properties 8000, 7000 sq ft for sale Contact 9845003341/ 9008274600

Koramangala

SALE 50X82 North Residential Plot Koramangala 1st Block, Serious Buyers Please Contact Ramesh HK: 9844104958

KORAMANGALA 40X60 North 4th Block 30x40 East 6th Block, Genuine Buyers Call USR: 7019770736/ 8951614989.

Multiple Locations

3 PARTY Convention Hall for SALE, near Banashankari 15 Cr. Rent 45 Lakhs. and Banashankari 2nd Stage, Residential Site 77x100 Rs. 22000 /sft. East Facing and Bannerghatta Road 40x60 Building for Sale, 6.5 Cr. Rent 5.5 Lakhs. and Commercial Site for Sale, N/W Corner 60x60 JC Road Rs. 30000 /sft. Call: 9900399006, Agents Excuse

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

MUDA SITE 240 Sqft NE Corner Vijayanagar 19.75L. Suitable for Building Clinics Shops/ Office/ Studio Rooms. Raghavendra 9606866368

Nagarabhavi

"NAGARABHAVI BDA Site Sale 40x60 North facing 60ft Road, 30x40 East facing Good Location. 9845862388"

Rajarajeshwari Nagar

RAJARAJESHWARI NAGAR, BEML Layout, 5th Stage, 30x45 South Facing, Site for Sale. Contact: 9448810828

SITE FOR SALE @ 9000/- GATTIGERE SUDARSHAN LAYOUT RAJA RAJESHWARI NAGAR CALL: 9900036544/ 9740252729

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

RMV

SALE RMV 2nd stage 50x80, 22,000/- Psft, R.T.Nagar 40x60 both (East facing) 20,000/- Psft. 9844092859.

Vishweshwariah Layout

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

BDA SITES VISHWESHWARAIAH LAYOUT 30x40 1ST BLOCK SF, 2ND BLOCK 40X60 EF 60ft ROAD: 8217392686/ 9980433004

DIRECT OWNER 40x60 E/F BDA #2194 Site Sale VISHVESWARAIAH LAYOUT 1st Block, 60ft-Road, Rs.10800/-. 9886634578

AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

"VISHWESWARAIAH 1ST-BLOCK BDA Site Near 100 Feet Road 40x60 West Facing for Sale. Call: 9845268611"

30X40 VISHVESHWARAIAH Layout North 2nd Block 100ft Road Parall 8000/- And 40X60 Site Sale 6th Block Direct Owner Near KLE Law College: 8550003509

SITE FOR sale 30x40 East facing at 1st Block Vishwesharaya Layout, Genuine Buyers, No Brokers. Contact: 9448368476/ 9448046937

Vidyaranyapura

SITE SALE BBMP A KATHA 20x30 SEMI COMMERCIAL SOUTH FACING THINDLU LAKE SHOW GARDEN: 8296895858

Flat

Banashankari

3BHK FLAT 1325 sqft, North facing, A khatha, 90 Lakhs, behind DG petrol bunk 7259296030

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Agricultural Land

Mysore

"MYSORE AGRICULTURAL-LAND 9acres suitable-for Agriculture, Home stay, Resorts, expecting 8.Crore close-to Ring Road only genuine buyers. "Sri.Ganesh Estate" 9845286505"

Commercial Building

HSR Layout

HSR LAYOUT 7th-Sector 40x60 Brand New-Building PG 50 Rooms Rental-income 6 Lakhs, 10.50Cr Contact.9945079777

Commerical

Nagarabhavi

SALE 100X85 COMMERCIAL
CORNER SITE
DETAILS : LOCATION IN NAGARBHAVI,
B KHATHA (BDA DELETED)
REAL ESTATE BROKERS NOT ALLOWED
CONTACT: 7892828337

Peenya

3848 SQFT Office Space Available For Sale @ Jalahalli Cross Peenya Bangalore Contact No.9845305214

Commercial Land

Banashankari

"HOSAKEREHALLI 40X60-COMMERCIAL Property for Sale 100 feet Ring Road Banashankari 3rd Stage, 2nd Phase. 9845500019/ 7019314962"

House

Tumkur Road

RAVI_KIRLOSKAR Layout_Tumkur Road 40x40 West`Facing, 3_BHK independent House`for`sale adjecent`to Prestige Jindal`and Metro-station 2,50,00,000/- 9986075122/ 8618922501.

Residential/ Commercial

Jayanagar

AVAILABLE 2400 sqft prime property for sale near Madhavan park. South Facing. Immediate possession. Brokers Excuse. Contact 7760110114

REAL ESTATE BUYING

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

Vishweshwariah Layout

I AM looking to buy 30x40 E or N Facing BDA Site in SRMV Layout 1st Block to 8th Block Direct Owners only Call: 9880569429

RENTAL PROPERTIES

Accommodation Available

Commercial

RENT 120X90 COMMERCIAL
SITE FOR RENT
SUITABLE FOR GODOWN, SHOWROOM LOCATION: NAGARBHAVI (OUTER RING ROAD)REAL ESTATE BROKERS NOT ALLOWED
CONTACT : 7892828337

COMMERCIAL SPACE for rent, 1st floor 2000 sqft, opposite BDA complex Nagarbhavi. Contact. 6362884952.

Flats

AVAILABLE 3 BHK Furnished Spacious Apartment Flat Mysore Road For Lease Rupees 25 Lakhs: 9738223432

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

ಕ್ಲಾಸಿಫೈಡ್ಸ್

WEEKEND CORNER

WANTED
AGRICULTURAL LAND (50 - 100 ACRES)
NEAR KORATAGERE VILLAGE
with adequate water source
Genuine Owners or Agents can contact Secretary / President between 3 p.m. to 5.00 p.m. with relevant documents at:
THE IDEAL HOMES CO-OPERATIVE BUILDING SOCIETY LIMITED
(Reg. No. DYR 352 dt. 29.4.1964)
Ideal Homes Township, Mysore Road, Bangalore - 98.
E-mail: ihcbs.idealhomes@gmail.com Ph: 080-28600892

GEMINI CIRCUS
Daily 3 Shows: 1pm, 4pm & 7pm.
With International Artists

at : Police Station Road, YELHANKA,Bangalore
Ticket rates: Rs.500/-, Rs.350/-, Rs.250/- & Rs. 150/-
bookmyseats.in Ph: 7907442664 / 7222956490

JOB OPPORTUNITIES

General

WANTED
1) Senior Liaison officers required
2) Experience 8 years plus
3) Salery 60k to 80k
4) Experience in the field of Government office
5) Education Qualification prefer LLB or Any Degree or Masters
6) Language preferred Kanada English Hindi Reading writing and spoken
H R G Mane,
House No. 94, F 9th, Cross, 10th Main, RMV Ext Sadashiva Nagar, Near Ramanarao Hospital, Bangalore-80
Kindly send your resume to gurudatthg@gmail.com
Contact- 9663366946

FOR SALE
Our client intends to sell their East Facing Industrial Plot measuring about 46440 Sq.Feets (4316 Sq. Mtrs), situated in a layout formed by K.I.A.D.B at Hirehalli Industrial Area, Hirehalli Village, Urbigere Hobli, Tumkur Taluk & District very close to National Highway, with clear title, nil encumbrance, surrounded by reputed industries. Genuine buyers contact us at :
M/s. PRO LEGAL, #524, 33rd Cross, IV Block, Jayanagar, Bengaluru-11.
Call : 93430 35076
email: mail@prolegal.co.in

EDUCATIONAL

Training

NURSERY TEACHERS TRAINING Course at JNANABHARATHI,with in Class Training 6_Months/1_year (offline/online),100% Job_Assurance. Call:6363032729

OTHERS

Furniture & Furnishings

HOUSEHOLD ITEMS sale carved teak wood sofa set sofa bed japan crystal glassware noritake dinner set

Go, change the world
RV Institute of Management
Approved by AICTE, New Delhi Accredited by NAAC with 'A+' grade | Autonomus Institution, Affiliated to Bengaluru City University
in collaboration with
Boston IT Solutions India Pvt. Ltd
is launching an
Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University
from January - February 2024
COURSE DETAILS
- Venue: Centre for Business Analytics, RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,50,000/-
- Timings: Mon to Fri: 6.30pm to 9.00pm Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

PUBLIC NOTICE

PUBLIC NOTICE

1. My client **Smt. Leela Bai**, wife of **Dr. S. Bikkamchand**, residing at No.5, Rukmini Colony, Bangalore – 560 042, is an absolute owner of converted land bearing Survey No.160 of Nagavara Village, Kasaba Hobli, Bangalore North Taluk, Bangalore, admeasuring 2 Acres 10 Guntas, bearing old PID No./ Khatha / Survey No., 160/13.

2. **M/s. Glen Ventures**, a Partnership Firm, having its office at No.8, FF1, Fourth Floor (Terrace Floor), Friends Nest, Narayanappa Garden, Whitefield Main Road, Bangalore – 560 066, represented by its partners (1) Sri. Srinivasa Rao Gorantla, (2) Sri. Chennam Rangaswamy and (3) Sri. Prabhakar S, agreed to purchase the same for valuable consideration and the purchaser have also paid an advance, specified in the agreement, at the time of signing the said Agreement of Sale dated 05-11-2020 / 09-11-2020. Further, it was agreed that the purchaser shall pay the balance sale consideration in 4 instalments within 12 months from the date of the Agreement of Sale, with a grace period of 1 month, on or before 05-12-2021.

3. As the purchaser M/s. Glen Ventures failed to pay the balance sale consideration for 34 months and 10 days, a letter dated 15-09-2023 was issued to the purchaser M/s. Glen Ventures, who has failed to pay the balance sale consideration for 34 months 10 days, calling upon the purchaser to complete the sale transaction within 15 days of receipt of said letter, failing which to forfeit the whole of the advance amount paid to the vendor and that the so-called agreement executed, shall stand revoked and the Vendor shall be at liberty to sell the land to the willing purchaser and right for specific performance of contract of the purchaser shall stand extinguished. The said letter was duly served. Despite the service of said letter, the purchaser M/s. Glen Ventures represented by its partners (1) Sri. Srinivasa Rao Gorantla, (2) Sri. Chennam Rangaswamy and (3) Sri. Prabhakar S failed to pay the balance sale consideration and complete the sale within 15 days from the date of receipt of said letter. Further, the purchaser has not even bothered to reply to said letter.

4. In this state of affairs, this public notice is issued that the Agreement of Sale dated 05-11-2020 / 09-11-2020, executed between my client Smt. Leela Bai and M/s. Glen Ventures, a Partnership Firm, stands canceled and the advance amount paid by the purchaser M/s. Glen Ventures to my client is forfeited. My client Smt. Leela Bai is at liberty to deal with the said land in the manner she deems fit and to sell the said land to whomsoever she deems fit, for valuable consideration.

Paras Jain, Advocate
38, 5th Cross, Gandhinagar, Bangalore – 560 009.
Mob: 9742555000, Mail Id: arhamtulsi@gmail.com.
Bengaluru Dated: 30-12-2023

PERSONAL

Lost

ಕಳೆದಿದೆ
ಬೆಂಗಳೂರು ಬಸವೇಶ್ವರನಗರ, 2ನೇ ಹಂತ, ಹೊಸ ಎಂಐಜಿ, ನಂ.13 ಬಿ, ನಿವಾಸಿಯಾದ ಶ್ರೀನಿವಾಸ ಗಾಂವ್ಕರ್ ಬಿನ್ ಶಾಂತಾರಾಂ ಗಾಂವ್ಕರ್ ಆದ ನಾನು ದಿ:22/12/2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಕಣೇಗೌಡನಹಳ್ಳಿ ಪಂಚಾಯತಿ, ನರಸೀಪಾಳ್ಯ ಗ್ರಾಮ, ರಾಮ್‌ಕೀ ಬಡಾವಣೆ ಯಲ್ಲಿರುವ ಸರ್ವೆ ನಂ.11/2, ಖಾತಾ ನಂ.1/2/719, ಸೈಟ್ ನಂ.719 ರ ಕ್ರಿಸ್ಟೋಫರ್ ಜೇಮ್ಸ್ ಹೆಸರಿನಲ್ಲಿರುವ ಮೂಲ ದಾಖಲಾತಿ ಪತ್ರವನ್ನು ಕಳೆದುಕೊಂಡಿದ್ದೇನೆ ನೊಂದಾಯಿತ ಕ್ರಯ ಪತ್ರ ಸಂಖ್ಯೆ No.NMG–1–01508–2005–06, CD No - NMGD 38 ದಿ:28/07/2005 ರ 2460 ಚದರ ಅಡಿ ಖಾಲಿ ನಿವೇಶನದ ಕ್ರಯಪತ್ರವನ್ನು ಕಳೆದುಕೊಂಡಿರುತ್ತೇನೆ. ಯಾರಿಗಾದರು ಸಿಕ್ಕಲ್ಲಿ ಮೊ: 9611103122 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಲು ಕೋರುತ್ತಿದ್ದೇನೆ..

I, KISHAN.R. R/a #.D112, Ground floor, Wilson Wintage Apartment, Opp Audugodi post office, Wilson Garden, Bangalore Have Lost My Original ICSC CARD Document ID. 6206386 and ICSE Pass Certificate Document ID. 6206386. IF FOUND Contact: 9620020313.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Change of Name

CHANGE OF NAME
I, **GANGARAJA. R** S/o Late Ramakrishnappa, R/at # 6/1, 6th A Main Road, Sreekanteshwaranagar, Mahalakshmi Layout, Nandini Layout Post, Bengaluru- 560096 have changed my name to **R. GANGARAJU** vide affidavit dt:26-12-2023, before Notary D.G.Shanthappa, Bengaluru. Henceforth I shall be called **R. GANGARAJU** only.

I, NITUKUMARI ARJUNPRASADSINGH resident of Flat no.214, DS Max Smartnest, Ganigarahalli Bengaluru-560090 have changed my name to NITUKUMARI SINGH vide affidavit dated 29/12/2023 sworn before notary Ambika.S, Bangalore

I, K. RENUKA DEVI, Residing at Bengaluru-10 have changed my name as K. RENUKA SRINATH, vide affidavit dated 29/12/2023 before Notary P.C.Ramaiah, Bengaluru

I, KAVITHA. N.R., Residing at Bangalore--10 have changed my name as KAVITHA R KRISHNA, vide affidavit dated 29/12/2023 before Notary P.C.Ramaiah, Bengaluru

I, KAILA RAM, Residing at Bengaluru-19 have changed my name as KAILASH MALI vide affidavit dated 29/12/2023 before Notary P.C.Ramaiah, Bengaluru

I, KIRAN CHANDRA GOVINDARAJU Residing at #8, 21st Cross, Suryavamshi Layout, Ideal Homes, Rajarajeshwarinagar, Bengaluru- 560098, have changed my name to KIRAN CHANDRA vide affidavit dated 22-12-2023, before Notary H.R.Karunakara, Bengaluru.

MORE Classifieds Ads on Subsequent Pages

DH Classifieds More value, more impact
ಪ್ರಜಾವಾಣಿ
JOB HUNT
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

DS-MAX PROPERTIES

EXPERIENCE THE JOY OF LIVING www.dsmaxproperties.com

DS MAX® ISO 9001:2015 COMPANY

ಡಿಎಸ್ ಮ್ಯಾಕ್ಸ್

EMBRACE EXCELLENCE IN EVERY DETAIL

& discover opportunity in every space. Join us in ushering a new era of togetherness.

Dr K V SATISH
CHAIRMAN, DS-MAX GROUP

FACILITY MANAGEMENT SERVICES

For Apartments & Commercial Complexes

- MEP & Security Services
- Gardening & Landscaping
- STP / WTP / RO Maintenance
- Swimming Pool Maintenance
- Housekeeping

CALL : 9164 022 000

ELEGANT INTERIORS



Directly From Our Factory

- Modular Kitchens
- TV Units
- Wardrobes
- Painting & Wallpapers
- Storage Units
- False Ceilings
- Furniture

CALL : 9164 056 000

REFER & EARN

Refer Us To Your Friends & Relatives And Get Handsomely Rewarded

- 2, 3 & 4-BHK Homes
- Full / Partial Interiors
- Facility Management Services for Apartment & Commercial Complexes

CALL : 9164 043 000

REFER A LAND

Refer Us To A Landowner For JV / Outright Purchase In Any Part Of Bangalore And Get A 2-BHK ABSOLUTELY FREE*

- Residential Land
- Commercial Land

CALL : 8880 463 463

2, 3 & 4-BHK APARTMENTS FOR SALE IN VARIOUS LOCATIONS

*T & C Apply

PRM/KA/RERA/1251/310/PR/150223/005721 MYSORE ROAD NR. R R DENTAL COLLEGE ₹ 49.63 - 79.66 Lakhs* 8088 445 445	PRM/KA/RERA/1251/308/PR/201201/003733 ELECTRONIC CITY HOSA ROAD JUNCTION ₹ 50.00 L - 1.15 Cr* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/446/PR/190301/002464 WHITEFIELD NEAR HOPE FARM METRO STN. ₹ 44.00 - 73.50 Lakhs* 8088 773 773	PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 45.81 - 72.67 Lakhs* 8880 465 465	PRM/KA/RERA/1251/310/PR/190823/002824 UTTARAHALLI OPP. NPS SCHOOL ₹ 74.97 L - 1.74 CR.* 8050 161 222
PRM/KA/RERA/1251/446/PR/110722/005059 BEGUR 10 MINS. TO SILK BOARD ₹ 53.00 L - 1.20 Cr* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs* 9164 122 000	DODDAGUBBI NEAR HENNUR DECATHLON ₹ 53.30 - 86.90 Lakhs* 8880 003 003	PRM/KA/RERA/1251/446/PR/210312/004002 K R PURAM NEAR GARDEN CITY UNIV. ₹ 51.80 - 86.24 Lakhs* 8880 438 000	PRM/KA/RERA/1251/309/PR/181122/002151 YELAHANKA NEAR KOGILU CROSS ₹ 61.74 - 89.64 Lakhs* 8880 758 758	PRM/KA/RERA/1251/309/PR/220223/005748 THANISANDRA 5 MINS. FROM KNSIT ₹ 58.17 L - 1.02 Cr.* 8880 461 461

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ದಕ್ಷಿಣ ಆಫ್ರಿಕಾ –ಭಾರತ ಎರಡನೇ ಟೆಸ್ಟ್: ವೇಗಿ ಆವೇಶ್ ಖಾನ್‌ಗೆ ಬುಲಾವ್

ಬೌಲಿಂಗ್: ಬದಲಾವಣೆಯತ್ತ ಚಿತ್ತ

• ರೋಶನ್ ತ್ಯಾಗರಾಜನ್

ಸೆಂಚುರಿಯನ್: ಕೇಪ್‌ಟೌನ್‌ನಲ್ಲಿ ಜನವರಿ 3ರಿಂದ ಆರಂಭವಾಗುವ ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಏನು ಮಾಡಲಿದೆ? ಗುರುವಾರ ಸಂಜೆ ಮುಗಿದ ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಮತ್ತು 32 ರನ್‌ಗಳಿಂದ ತಂಡವು ಸೋತ ನಂತರ ಪತ್ರಿಕಾಗೋಷ್ಠಿಗೆ ಬಂದಿದ್ದ ನಾಯಕ ರೋಹಿತ್ ಶರ್ಮಾ, 'ಈ ಸೋಲಿನ ಕಹಿಯನ್ನು ಮರೆತು ಮುಂದಿನ ಸಿದ್ಧತೆ ನೋಡಿಕೊಳ್ಳುವತ್ತ ಗಮನ ಹರಿಸುತ್ತೇವೆ' ಎಂದಿದ್ದರು.

ಆದರೆ ಅವರು ಹೇಳಿದಷ್ಟು ಸುಲಭವಾಗಿ ಸೋಲು ಮರೆಯುವುದು ಸಾಧ್ಯವಿಲ್ಲ. ವಾಸ್ತವದಲ್ಲಿ ಈಗ ಅವರ ಮುಂದಿರುವ ಏಕೈಕ ದಾರಿಯೆಂದರೆ ತಂಡದ ಸಂಯೋಜನೆಯನ್ನು ಮರುರಚನೆ ಮಾಡಿ ಮುಂದಿನ ಹೋರಾಟಕ್ಕೆ ಅಣಿಯಾಗುವುದೊಂದೇ.

ಗಾಯಗೊಂಡಿರುವ ಮೊಹಮ್ಮದ್ ಶಮಿ ಅವರ ಗೈರುಹಾಜರಿ ತಂಡವನ್ನು ಕಾಡುತ್ತಿದೆ. ಇದೀಗ ಅವರ ಸ್ಥಾನಕ್ಕೆ ಬಲಗೈ ವೇಗಿ ಆವೇಶ್ ಖಾನ್ ಅವರನ್ನು ಕರೆಸಿಕೊಳ್ಳಲಾಗುತ್ತಿದೆ. ಇಂದೋರ್‌ನ 27 ವರ್ಷದ ಖಾನ್ ಅವರಿಗೆ ಎಂಟು ಏಕದಿನ ಮತ್ತು 19 ಟ್ವೆಂಟಿ-20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುವ ಅನುಭವ ಇದೆ.

ಸದ್ಯ ಬೆನೋನಿಯಲ್ಲಿ ದಕ್ಷಿಣ ಆಫ್ರಿಕಾ ಎ ತಂಡದ ಎದುರು ಆಡುತ್ತಿರುವ ಭಾರತ ಎ ತಂಡದಲ್ಲಿ ಖಾನ್ ಇದ್ದಾರೆ. ಅವರನ್ನು ರಾಷ್ಟ್ರೀಯ ತಂಡಕ್ಕೆ ಕರೆಸಿಕೊಳ್ಳಲಾಗಿದೆ.

ಆದರೆ ಅವರಿಗಾಗಿ ಸ್ಥಾನ ಬಿಟ್ಟು ಕೊಡುವವರು ಯಾರು? ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಂತೂ ಸ್ಥಾನ ಬಿಡುವುದಿಲ್ಲ ಎಂಬುದು ನಿಸ್ಸಂಶಯ. ಆದರೆ, ಶಾರ್ದೂಲ್ ಠಾಕೂರ್ ಅಥವಾ ಪ್ರಸಿದ್ಧ ಕೃಷ್ಣ ಅವರಲ್ಲಿ ಒಬ್ಬರು ಆವೇಶ್ ಅವರಿಗೆ ಸ್ಥಾನ ಬಿಟ್ಟುಕೊಡಬೇಕಾಗಬಹುದು. ಮೊದಲ ಟೆಸ್ಟ್‌ನಲ್ಲಿ ಶಾರ್ದೂಲ್ 19 ಓವರ್ ಬೌಲಿಂಗ್ ಮಾಡಿ 101 ರನ್ ಬಿಟ್ಟುಕೊಟ್ಟಿದ್ದಾರೆ. ಪದಾರ್ಪಣೆ ಮಾಡಿದ್ದ ಕನ್ನಡಿಗ ಪ್ರಸಿದ್ಧ 20 ಓವರ್‌ಗಳನ್ನು ಬೌಲಿಂಗ್ ಮಾಡಿ 93 ರನ್ ಕೊಟ್ಟಿದ್ದರು. ಒಂದು ವಿಕೆಟ್ ಗಳಿಸಿದ್ದರು. ಆದರೆ ಒಟ್ಟಾರೆ ಬೌಲಿಂಗ್ ಅಷ್ಟೇನೂ ಪರಿಣಾಮಕಾರಿ ಆಗಿರಲಿಲ್ಲ.

ರವೀಂದ್ರ ಜಡೇಜ ಫಿಟ್ ಆಗಿ ಆಯ್ಕೆಗೆ ಲಭ್ಯರಾದರೆ, ಆರ್. ಅಶ್ವಿನ್ ವಿಶ್ರಾಂತಿ ಪಡೆಯಬೇಕಾಗಬಹುದು. ಬೆನ್ನುನೋವಿನಿಂದಾಗಿ ಜಡೇಜ ಮೊದಲ ಟೆಸ್ಟ್‌ನಲ್ಲಿ ಆಡಿರಲಿಲ್ಲ.

ಅಶ್ವಿನ್ 19 ಓವರ್‌ಗಳಲ್ಲಿ 41 ರನ್ ಕೊಟ್ಟು ಒಂದು ವಿಕೆಟ್ ಗಳಿಸಿದ್ದು. ಆದರೆ ಅವರೂ ಬ್ಯಾಟರ್‌ಗಳನ್ನು ವಿಚಲಿತ ಗೊಳಿಸುವಲ್ಲಿ ಯಶಸ್ವಿಯಾಗಿರಲಿಲ್ಲ. ಅಷ್ಟಕ್ಕೂ ಪಿಚ್‌ನಲ್ಲಿ ಚೆಂಡು ಹೆಚ್ಚು ತಿರುವು ಪಡೆಯುತ್ತಿರಲಿಲ್ಲ ಹಾಗೂ ಸ್ಪಿನ್ನರ್‌ಗಳಿಗೆ ನೆರವು ಇರಲಿಲ್ಲ. ಎರಡೂ ಇನಿಂಗ್ಸ್‌ನಲ್ಲಿ ಅಶ್ವಿನ್ ಬ್ಯಾಟಿಂಗ್ ನಲ್ಲಿಯೂ ವಿಫಲರಾದರು. ಅದರಿಂದಾಗಿ ಜಡೇಜ ಅವರ ಆಲ್‌ರೌಂಡ್ ಸಾಮರ್ಥ್ಯವನ್ನು ಪಡೆದುಕೊಳ್ಳುವ ಸಾಧ್ಯತೆ ಹೆಚ್ಚು.

ಎರಡನೇ ಪಂದ್ಯ ಆರಂಭವಾಗಲು ಇನ್ನೂ ನಾಲ್ಕು ದಿನಗಳಿವೆ. ಸೋಲಿನ ಆಘಾತದಿಂದ ಚೇತರಿಸಿಕೊಂಡು ಮತ್ತು ಲಯಕ್ಕೆ ಮರಳಲು ಸಾಕಷ್ಟು ಸಮಯ ಇದೆ.

ಬೌಲಿಂಗ್‌ನಲ್ಲಿ ಎರಡು ಪ್ರಮುಖ ಬದಲಾವಣೆಗಳು ಒಂದಿಷ್ಟು ಬಲ ತುಂಬಬಹುದು. ಆದರೆ ರೋಹಿತ್ ಬಳಗವು ಬ್ಯಾಟಿಂಗ್ ವಿಭಾಗದತ್ತಲೂ ಗಮನ ಹರಿಸುವ ಅಗತ್ಯವಿದೆ. ಇದೀಗ ಸರಣಿ ಗೆಲುವಿನ ಅವಕಾಶವಂತೂ ಕೈಜಾರಿದೆ.

ಆದರೆ ಸಮಬಲ ಸಾಧಿಸುವ ದಾರಿ ಇನ್ನೂ ಇದೆ. ಅದಕ್ಕಾಗಿ ಭಾರತ ತಂಡ ಹೊಸ ಕಸುವು ತುಂಬಿಕೊಂಡು ಹುಮ್ಮಸ್ಸಿನಿಂದ ಆಡಬೇಕಿದೆ.

ಎಲ್ಲಕ್ಕಿಂತ ಮುಖ್ಯವಾಗಿ ವಿಶ್ವ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಶ್ರೇಯಾಂಕದ ತಂಡ ಎಂಬುದನ್ನು ನೆನಪಿಟ್ಟುಕೊಂಡು ಅದಕ್ಕೆ ತಕ್ಕಂತೆ ಆಡಬೇಕಿದೆ.



ಆವೇಶ್ ಖಾನ್

ಜಡೇಜ ತಾಲೀಮು

ಸೆಂಚುರಿಯನ್ (ಪಿಟಿಐ): ಮೊದಲ ಟೆಸ್ಟ್ ಪಂದ್ಯದ ಸೋಲಿನ ನಡುವೆಯೇ ಭಾರತಕ್ಕೆ ಸಮಾಧಾನದ ಸುದ್ದಿಯೊಂದು ಇದೆ. ತಂಡದ ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರು ಜ. 3ರಿಂದ ನಡೆಯುವ ಎರಡನೇ ಟೆಸ್ಟ್‌ಗೆ ಲಭ್ಯರಾಗುವ ಸಾಧ್ಯತೆಯಿದೆ.

ಬೆನ್ನು ನೋವಿನಿಂದಾಗಿ ಕೊನೆಯ ಗಳಿಗೆಯಲ್ಲಿ ಜಡೇಜಾ ಮೊದಲ ಟೆಸ್ಟ್ ತಂಡದಿಂದ ಹೊರಬಿದ್ದಿದ್ದರು. ಆದರೆ ಪಂದ್ಯದ ಮೂರನೇ ದಿನ ತಂಡದ ಜೊತೆ ವಾರ್ಮ್‌ಅಪ್‌ನಲ್ಲಿ ಜಡೇಜ ಕಾಣಿಸಿಕೊಂಡಿದ್ದಾರೆ.

ಅಂತಿಮ ಟೆಸ್ಟ್: ಎಲ್ಗರ್ ನಾಯಕ

ಸೆಂಚುರಿಯನ್ (ಪಿಟಿಐ):ಕೊನೆಯ ಟೆಸ್ಟ್ ಸರಣಿ ಆಡುತ್ತಿರುವ ಡೀನ್ ಎಲ್ಗರ್ ಅವರು ಗಾಯಗೊಂಡಿರುವ ತೆಂಬಾ ಬವುಮಾ ಸ್ಥಾನದಲ್ಲಿ ಭಾರತ ವಿರುದ್ಧ ಎರಡನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದ ನಾಯಕತ್ವ ವಹಿಸಲಿದ್ದಾರೆ. ಮೊದಲ ಟೆಸ್ಟ್ ಪಂದ್ಯದ ಮೊದಲ ದಿನ ಫೀಲ್ಡಿಂಗ್ ವೇಳೆ ಬವುಮಾ ಕಾಲಿನ ಸ್ನಾಯುರಜ್ಜು ಸೆಳೆತಕ್ಕೆ ಒಳಗಾಗಿರುವುದು ಸ್ಕ್ಯಾನಿಂಗ್ ವೇಳೆ ಪತ್ತೆಯಾಗಿತ್ತು. ಬವುಮಾ ಸ್ಥಾನದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಜುಬೇರ್ ಹಮ್ಜಾ ತಂಡ ಸೇರಿಕೊಳ್ಳುವರು. ಈ ಹಿಂದೆ ಭಾರತ 2021–22ರಲ್ಲಿ ಪ್ರವಾಸ ಕೈಗೊಂಡಿದ್ದಾಗ ಎಲ್ಗರ್ ನಾಯಕರಾಗಿದ್ದರು.

ಭಾರತಕ್ಕೆ ದಂಡ

ದುಬೈ (ಪಿಟಿಐ): ಸೆಂಚುರಿಯನ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರಿ ಸೋಲನುಭವಿಸಿದ ಭಾರತ ತಂಡಕ್ಕೆ ಗಾಯದ ಮೇಲೆ ಬರೆ ಎನ್ನುವಂತೆ ನಿಧಾನಗತಿಯಲ್ಲಿ ಓವರು ಮಾಡಿದ್ದಕ್ಕೆ ಪಂದ್ಯ ಶುಲ್ಕದ ಶೇ 10ರಷ್ಟನ್ನು ದಂಡವಾಗಿ ವಿಧಿಸಲಾಗಿದೆ. ಜೊತೆಗೆ ರೋಹಿತ್ ಶರ್ಮಾ ಬಳಗ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಎರಡು ಅಮೂಲ್ಯ ಪಾಯಿಂಟ್‌ಗಳನ್ನು ಕಳೆದುಕೊಂಡಿತು.

ಎರಡು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯದ ಮೂರನೇ ದಿನವಾದ ಗುರುವಾರವೇ ಭಾರತ ಇನಿಂಗ್ಸ್ ಮತ್ತು 32 ರನ್‌ಗಳಿಂದ ಸೋಲನುಭವಿಸಿತು. ಭಾರತ ನಿಗದಿ ಅವಧಿಯಲ್ಲಿ ಎರಡು ಓವರ್ ಕಡಿಮೆ ಮಾಡಿದೆ ಎಂದು ಪಂದ್ಯದ ರೆಫ್ರಿ ಕ್ರಿಸ್ ಬ್ರಾಡ್ ಈ ಕ್ರಮ ಕೈಗೊಂಡಿದ್ದಾರೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

'ರೋಹಿತ್ ಶರ್ಮಾ ತಪ್ಪನ್ನು ಒಪ್ಪಿಕೊಂಡಿದ್ದು, ಪ್ರಸ್ತಾವಿತ ಕ್ರಮಕ್ಕೆ ಸಮ್ಮತಿಸಿದ್ದಾರೆ. ಹೀಗಾಗಿ ವಿಚಾರಣೆ ಅಗತ್ಯವಿಲ್ಲ' ಎಂದು ಐಸಿಸಿ ತಿಳಿಸಿದೆ.

ಪಾಯಿಂಟ್ ಕಡಿತಕ್ಕೆ ಮೊದಲು ಭಾರತ ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ 16 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನದಲ್ಲಿತ್ತು. ಈಗ ಆರನೇ ಸ್ಥಾನಕ್ಕೆ ಇಳಿದಿದೆ.

ಡಬ್ಲ್ಯುಎಫ್‌ಐ ಕಚೇರಿ ಸ್ಥಳಾಂತರ

ನವದೆಹಲಿ (ಪಿಟಿಐ); ನಿಕಟಪೂರ್ವ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ನಿವಾಸದಿಂದ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಕಚೇರಿಯನ್ನು ಶುಕ್ರವಾರ ಸ್ಥಳಾಂತರಿಸಲಾಗಿದೆ. ಕ್ರೀಡಾ ಸಚಿವಾಲಯ ಇತ್ತೀಚೆಗೆ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ನವದೆಹಲಿಯ ಹರಿನಗರ ಪ್ರದೇಶದಲ್ಲಿ ಡಬ್ಲ್ಯುಎಫ್‌ಐನ ಹೊಸ ಕಚೇರಿ ಕಾರ್ಯನಿರ್ವಹಿಸಲಿದೆ ಎಂದು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ಆಸ್ಟ್ರೇಲಿಯಾಕ್ಕೆ ಜಯ

ಮೆಲ್ಬರ್ನ್ (ಎಪಿ): ಅಮೋಘ ಬೌಲಿಂಗ್ ಪ್ರದರ್ಶನ ನೀಡಿದ ನಾಯಕ ಪ್ಯಾಟ್ ಕಮಿನ್ಸ್ ಅವರು ಎರಡನೇ ಬಾರಿ ಟೆಸ್ಟ್‌ಗಳಲ್ಲಿ 10 ವಿಕೆಟ್‌ಗಳ ಗೊಂಚಲು ಪಡೆದು, ಆಸ್ಟ್ರೇಲಿಯಾ ಎರಡನೇ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ಪಾಕಿಸ್ತಾನ ತಂಡದ ಮೇಲೆ 79 ರನ್‌ಗಳಿಂದ ಗೆಲ್ಲಲು ನೆರವಾದರು.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ನಾಲ್ಕನೇ ದಿನದ ಚಹಾ ನಂತರ ಕಮಿನ್ಸ್ (49ಕ್ಕೆ5) ನಿರ್ಣಾಯಕ ವಿಕೆಟ್‌ಗಳನ್ನು ಪಡೆದರು. ಕಮಿನ್ಸ್ ಮೊದಲ ಇನಿಂಗ್ಸ್‌ನಲ್ಲಿ 48 ರನ್ನಿಗೆ 5 ವಿಕೆಟ್ ಪಡೆದಿದ್ದರು. ಗೆಲುವಿಗೆ 317 ರನ್ ಗಳಿಸಬೇಕಾಗಿದ್ದ ಪಾಕಿಸ್ತಾನ 237 ರನ್‌ಗಳಿಗೆ ಆಲೌಟ್ ಆಯಿತು. ಅಂತಿಮ ಐದು ವಿಕೆಟ್‌ಗಳು 18 ರನ್ನಿಗೆ ಉರುಳಿದವು.

ಕಮಿನ್ಸ್ ಅವರಿಗೆ ಪಂದ್ಯದ ಆಟಗಾರ ಗೌರವವೂ ಒಲಿಯಿತು. ಅವರು ಅದೇ ಹಾದಿಯಲ್ಲಿ ಟೆಸ್ಟ್‌ಗಳಲ್ಲಿ 250 ವಿಕೆಟ್‌ಗಳನ್ನು ದಾಟಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 318, ಪಾಕಿಸ್ತಾನ: 264, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 84.1 ಓವರುಗಳಲ್ಲಿ 262 (ಅಲೆಕ್ಸ್ ಕ್ಯಾರಿ 53, ಶಹೀದ್ ಅಫ್ರಿದಿ 76ಕ್ಕೆ4, ಮೀರ್ ಹಮ್ಜಾ 32ಕ್ಕೆ4), ಪಾಕಿಸ್ತಾನ: 67.2 ಓವರುಗಳಲ್ಲಿ 237 (ಶಾನ್ ಮಸೂದ್ 60, ಬಾಬರ್ ಆಜಂ 41, ಮೊಹಮ್ಮದ್ ರಿಜ್ವಾನ್ 35, ಅಘಾ ಸಲ್ಮಾನ್ 50; ಮಿಚೆಲ್ ಸ್ಟಾರ್ಕ್ 55ಕ್ಕೆ4, ಕಮಿನ್ಸ್ 49ಕ್ಕೆ5).

ಬುಲ್ಸ್ ಪರಾಭವ

ನೊಯ್ಡಾ: ಕೊನೆಗಳಿಗೆಯಲ್ಲಿ ಬೆಂಗಳೂರು ಬುಲ್ಸ್ ತಂಡ ಹೋರಾಟ ನೀಡಿದರೂ, ಪ್ರೊ ಕಬಡ್ಡಿ ಲೀಗ್‌ನಲ್ಲಿ ಶುಕ್ರವಾರ ಯು.ಪಿ.ಯೋಧಾಸ್ ತಂಡಕ್ಕೆ ಒಂದು ಪಾಯಿಂಟ್ ಅಂತರದಿಂದ (33–34) ಸೋಲನುಭವಿಸಿತು.

ಬುಲ್ಸ್ ಪರ ಭರತ್ ಮತ್ತು ಸುಶೀಲ್ ತಲಾ ಎಂಟು ಪಾಯಿಂಟ್ಸ್ ಗಳಿಸಿದರು. ಯೋಧಾಸ್ ಕಡೆ ಪ್ರದೀಪ್ ನರ್ವಾಲ್ 10 ಪಾಯಿಂಟ್ಸ್ ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 46–33 ರಿಂದ ಹರಿಯಾಣ ಸ್ಟೀಲರ್ಸ್ ಮೇಲೆ ಜಯಗಳಿಸಿತು.

ನಂದಿನಿ ತುಪ್ಪದ ಕೇಸರಿಭಾತು, ಜೈಪುರದಲ್ಲಿರುವ ಅನ್ನಪೂರ್ಣಂ ಹೋಟೆಲ್‌ನ ಮುಖ್ಯ ಆಕರ್ಷಣೆ

ಬೆಂಗಳೂರಿನಲ್ಲಿ ಶೆಖಾವತಿ ಊಟ

ಕರ್ನಾಟಕದಲ್ಲಿ ಶೆಖಾವತಿ ಔತಣ

ಬೆಳ್ಳಿತಟ್ಟೆಯಲ್ಲಿ, ಒಂದೆರಡಲ್ಲ 25 ಖಾದ್ಯಗಳ ರಸದೌತಣ ಸವಿಯಬೇಕಿದ್ದಲ್ಲಿ 'ಕೇಸರಿಯಾ'ಗೆ ಭೇಟಿ ನೀಡಬೇಕು. ಮೂರು ಬಗೆಯ ಕುರುಕಲು, ಮೂರು ಬಗೆಯ ಸಿಹಿ ತಿಂಡಿ, ಎರಡು ಬಗೆಯ ರೋಟಿಗಳು, ಸಜ್ಜೆಯ ಕಿಚಡಿ, ಪುಲಾವ್ ಮತ್ತು ಬಿಳಿಯನ್ನ, ಒಟ್ಟು ಏಳು ಹಂತದ ಊಟಗಳನ್ನು ಉಂಡು, ಇನ್ನು ಹೊಟ್ಟೆಯಲ್ಲಿ ಜಾಗವಿಲ್ಲ ಎಂದಾಗಲೂ, ಪುಟ್ಟದೊಂದು ಕುಲ್ಫಿ ತುಂಡು ಬರುತ್ತದೆ. ಕುಲ್ಫಿ ಸವಿದಾಗಲೇ ಊಟ ಪೂರ್ಣ ಆಗುವುದು. ಇಂದಿರಾನಗರ ಪೋಸ್ಟ್ ಆಫೀಸ್ ಬಳಿ ಆರಂಭವಾಗಿರುವ ನೂತನ ಕೇಸರಿಯಾಗೆ ಹೋದರೆ, ರಾಜಸ್ಥಾನಿ ಹವೇಲಿಯ ವಾತಾವರಣದಲ್ಲಿಯೇ ಕುಳಿತು ಶೆಖಾವತಿ ಆತಿಥ್ಯ ಸವಿಯುವ ಅನುಭವ ನಿಮ್ಮದಾಗುತ್ತದೆ.

ಜೈಪುರದಲ್ಲಿ ಕನ್ನಡತನದ ರಸದೌತಣ

ಜೈಪುರದಲ್ಲಿರುವ ಹೋಟೆಲ್‌ನ ಬೇಲೂರು ಹಳೆಬೀಡಿನ ಕೆತ್ತನೆಗಳನ್ನು ಪರಿಚಯಿಸುವ ಒಳಾಂಗಣ

ಆರ್ನಿ

ಆಹಾರ ವೈವಿಧ್ಯ

'ಮದರಾಸಿಯ ಇಡ್ಲಿ ಗೊತ್ತು, ಇದ್ಯಾವುದಿದು ತಟ್ಟೆ ಇಡ್ಲಿ?' ಇಂಥ ಪ್ರಶ್ನೆಯಿಂದಲೇ ಶುರುವಾಗಿತ್ತು ಗ್ರಾಹಕರ ಕುತೂಹಲ. ಚೆನ್ನೈ ಮೂಲದ ಹೋಟೆಲ್‌ಗಳಲ್ಲಿ ಟೊಮೆಟೊ ಸಾರುಂಡವರು, ಉಡುಪಿ ರುಚಿಯ ಹುಳಿಯನ್ನು ಸಾಂಬಾರ್ ಎಂದು ಒಪ್ಪಿಕೊಳ್ಳುತ್ತಲೇ ಇರಲಿಲ್ಲ.

ಆದರೆ ಇದೀಗ ಬೆಳಗಿನ ತಿಂಡಿ ಎಂದರೆ ತುಮಕೂರಿನ ತಟ್ಟೆ ಇಡ್ಲಿ, ಮೈಸೂರು ಮಸಾಲೆ ದೋಸೆ, ಖಾರಾಭಾತು, ಚೌಚೌಭಾತುಗಳೇ ಉತ್ತಮ ಎಂದು ಒಪ್ಪಿಕೊಂಡಿದ್ದಾರೆ.

ಇದು ರಾಜಸ್ಥಾನದಲ್ಲಿ ಕನ್ನಡಿಗರ ತಿಂಡಿಯನ್ನು ಉಣಬಡಿಸುತ್ತಿರುವ 'ಅನ್ನಪೂರ್ಣಂ'ಹೋಟೆಲ್‌ನ ಮಾಲೀಕರಾದ ಸಿದ್ಧಾರ್ಥ್ ಗೊಯೆಂಕಾ ಅವರ ಮಾತುಗಳು. ಬೆಂಗಳೂರಿನಲ್ಲಿಯೇ ಹುಟ್ಟಿ, ಬೆಂಗಳೂರಿನಲ್ಲಿಯೇ ಬೆಳೆದು, ಬೆಂಗಳೂರಿಗರಿಗೆ ಶೇಖಾವತಿ ಖಾದ್ಯಗಳನ್ನು ಉಣಬಡಿಸುತ್ತಿರುವ ಸಿದ್ಧಾರ್ಥ್ ಆಹಾರಪ್ರೀತಿ ಅಗಾಧವಾದುದು.

ಭಾರತೀಯ ಆಹಾರ ಶೈಲಿಯ ಕುರಿತು ಗಂಟೆಗಟ್ಟಲೆ ಮಾತನಾಡುವ ಅವರು ಕನ್ನಡಿಗರ ತಿಂಡಿ ತಿನಿಸುಗಳನ್ನು ರಾಜಸ್ಥಾನದ ಜೈಪುರಕ್ಕೆ ತಲುಪಿಸಿದ್ದಾರೆ. ಬೇಲೂರು ಹಳೆಬೀಡಿನ ದೇಗುಲಗಳ ದೊಡ್ಡ ದೊಡ್ಡ ಚಿತ್ರಗಳಿಂದ ಸಿಂಗರಿಸಿರುವ ತಮ್ಮ ಹೋಟೆಲ್‌ನಲ್ಲಿ ಎಲ್ಲಕ್ಕೂ ಮೀರಿದ ಕನ್ನಡತನವನ್ನು ಉಣಬಡಿಸುತ್ತಿದ್ದಾರೆ.

ಈ 'ಅನ್ನಪೂರ್ಣಂ' ಹಿಂದಿನ ಸ್ಫೂರ್ತಿ, ಮತ್ತು ಸಾಹಸದ ಕುರಿತು ಸಿದ್ಧಾರ್ಥ್ ಗೋಯೆಂಕಾ ಅವರೇ ವಿವರಿಸಿದ್ದಾರೆ.

ಸ್ಥಳೀಯ ರುಚಿಗಳನ್ನು ಶುಚಿಯಾಗಿ ಮಾಡಿ, ಜನರಿಗೆ ಉಣಬಡಿಸಬೇಕು. ಇದೀಗ ಉತ್ತರ ಭಾರತದಲ್ಲಿ ದಕ್ಷಿಣವೆಂದರೆ ಮದರಾಸಿ ಎಂಬ ಭಾವವೇ ದಟ್ಟವಾಗಿದೆ. ಅಲ್ಲಿ ಕರ್ನಾಟಕದ ಖಾದ್ಯಗಳನ್ನು ಪರಿಚಯಿಸಿದಾಗ ತಿಳಿವು ಮೂಡಿಸುವುದೇ ದೊಡ್ಡ ಸವಾಲಾಗಿತ್ತು. ರುಚಿ ಮತ್ತು ಖಾದ್ಯವೈವಿಧ್ಯ ಜನರನ್ನು ಸೆಳೆಯಿತು.

ಹಿಂದೆ ಒಂದು ಕಾಲದಲ್ಲಿ ಹುಷಾರಿಲ್ಲದಿದ್ದರೆ ಮಾತ್ರ ಅನ್ನ ಎನ್ನುವ ಮಾತಿತ್ತು. ಇದೀಗ ಅದು ಇಡ್ಲಿ ಎಂದು ಬದಲಾಗಿದೆ. ನಮ್ಮ ಊಟದ ಸಂಸ್ಕೃತಿಯನ್ನೇ ಮರೆಯುತ್ತಿದ್ದೇವೆ. ಎಲ್ಲೆಡೆಯೂ ಮೈದಾದಿಂದ ಮಾಡಿದ ತಂದೂರಿ ರೋಟಿಗಳು, ಪನ್ನೀರ್ ಮತ್ತು ಆಲು ಮಟರ್, ಗೋಬಿಗಳು ರಾರಾಜಿಸುವಾಗ, ನಮ್ಮ ನೆಲದ ಸಂಸ್ಕೃತಿಯ ಆಹಾರ ವಿಧಾನವನ್ನು ಕಾಪಾಡಬೇಕಿದೆ.

ಶೆಖಾವತಿ ಊಟದಲ್ಲಿ ಸಿಹಿಯದ್ದೇ ಮೇಲುಗೈ. ಅಲ್ಲಿಯ ಚಾಟ್, ಸಬ್ಜಿ, ಭಾಜಿಗಳ ಜೊತೆಗೆ ಪೂರಿ ಶ್ರೀಖಂಡ, ಪೂರಿ ಹಲ್ವಾ, ಪೂರಿ ಖೀರ್, ಫೇವರ್ ದಾಲ್ ಭಾಟಿ ಚೂರ್ಮ, ಇವುಗಳನ್ನೆಲ್ಲ ನಮ್ಮ 'ಕೇಸರಿಯಾ' ರೆಸ್ಟಾರಾಂಟ್‌ನಲ್ಲಿ ಉಣಬಡಿಸಲಾಗುತ್ತದೆ.

ಇದಕ್ಕೆ ಕನ್ನಡಿಗರಿಂದ ಅಮೋಘವಾದ ಪ್ರತಿಸ್ಪಂದನೆ ದೊರೆಯಿತು. ನಮ್ಮದಲ್ಲದ ನೆಲದಲ್ಲಿ ಹೀಗೆ ಉಣಬಡಿಸುವ ಸಂತೃಪ್ತಿಯೇ ಜೈಪುರದಲ್ಲಿ ಕನ್ನಡಿಗರ ಊಟವನ್ನು ಉಣಬಡಿಸಲು ಸ್ಫೂರ್ತಿ ಆಯಿತು.

ಕರ್ನಾಟಕ ನಮ್ಮ ಕರ್ಮಭೂಮಿ. ಆದರೆ ನನ್ನ ತಲೆಮಾರಿನವರಿಗೆ ಮಾತೃಭೂಮಿಯೂ ಹೌದು. ಕನ್ನಡನಾಡಿನ, ಕನ್ನಡ ನೆಲದ ಋಣ ತೀರಿಸಲೆಂದೇ ಈ ಪ್ರಯತ್ನವನ್ನು ಕೈಗೊಂಡಿರುವೆ. ಅಲ್ಲಿ ನಮ್ಮೂರಿನಲ್ಲಿ ಈ ಊರಿನ ರುಚಿಯುಣಿಸುವುದು, ಈ ಊರಿನಲ್ಲಿ ನಮ್ಮೂರಿನ ರುಚಿಯುಣಿಸುವುದು, ಗಡಿ ಮೀರಿದ ಪ್ರೀತಿಯನ್ನು ತಿಂದುಣಿಸುವುದು ನನಗಿಷ್ಟದ ಕೆಲಸ. ಇನ್ನು ಕರ್ನಾಟಕದ ಬಯಲು ಸೀಮೆ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ, ಘಟ್ಟದ ಊಟ ಹೀಗೆ ಹಲವಾರು ಬಗೆಯ ಊಟಗಳನ್ನು ಪರಿಚಯಿಸಬೇಕು ಎಂಬ ಮಹತ್ವಾಕಾಂಕ್ಷೆ ಇದೆ. ಕನ್ನಡಿಗರು ಕೈ ಹಿಡಿದರೆ ಈ ಕೆಲಸ ಸರಾಗವಾಗುತ್ತದೆ ಎನ್ನುತ್ತ ತಮ್ಮ ಮಾತನ್ನು ಮುಗಿಸಿದರು. ಮೈಸೂರಿನ ಶೆಫ್ ಇವರೊಟ್ಟಿಗೆ ಕೈ ಜೋಡಿಸಿದ್ದಾರೆ. ಕನ್ನಡದ ಖಾದ್ಯಗಳ:ನ್ನು ಕರ್ನಾಟಕದ ಸಂಸ್ಕೃತಿಯಂತೆ ಹಿತ್ತಾಳೆಯ ಪಾತ್ರೆಗಳಲ್ಲಿಯೇ ಉಣಬಡಿಸುತ್ತಿದ್ದಾರೆ. ❖

ಕಂಚಿನ ತಟ್ಟೆ ಬಟ್ಟಲಲ್ಲಿ ತಟ್ಟೆ ಇಡ್ಲಿ ಚಟ್ನಿ

ಸಿದ್ಧಾರ್ಥ್ ಗೊಯೆಂಕಾ

ಖಾದ್ಯಕ್ಕೆ ಖಾಸು ಮಸಾಲೆ

ಪ್ರತಿ ಪ್ರದೇಶಕ್ಕೂ ಒಂದು ರುಚಿಯಿದೆ. ಅದಕ್ಕೆ ಅಲ್ಲಿಯದೇ ಘಮ ಬರಬೇಕೆಂದರೆ ಸ್ಥಳೀಯ ಸಾಮಗ್ರಿಗಳೇ ಇರಬೇಕು ಎನ್ನುತ್ತಾರೆ ಸಿದ್ಧಾರ್ಥ. ಇಲ್ಲಿಯ ಕೇಸರಿಯಾ ರೆಸ್ಟುರಾಂಟ್‌ನಲ್ಲಿ ರಾಜಸ್ಥಾನದಿಂದಲೇ ಮಸಾಲೆಗಳನ್ನು ತರಿಸುತ್ತಾರೆ. ಪ್ರತಿದಿನವೂ ಹೊಸ ಬಗೆಯ ಶರಬತ್ತುಗಳನ್ನು ಪೂರೈಸುವ ಅವರು, ಕಾಶ್ಮೀರದಿಂದ ಕೇಸರಿಯನ್ನು, ಕರ್ನಾಟಕದಿಂದ ಚಂದನವನ್ನು ಹೀಗೆ ಆಯಾ ಪ್ರದೇಶಗಳಿಂದ ಅಲ್ಲಿಯ ಖ್ಯಾತ ಮಸಾಲೆಗಳನ್ನು ಖರೀದಿಸಿ ತರುತ್ತಾರೆ.

ರಾಮನಗರ, ಕನಕಪುರದಿಂದ ಅವರ 'ಕೇಸರಿಯಾ' ಹೋಟೆಲ್‌ಗೆ ತರಕಾರಿಗಳು ಸರಬರಾಜು ಆಗುತ್ತವೆ. ಉಣಬಡಿಸಲು ಬಳಸುವ ಬೆಳ್ಳಿಯ ತಟ್ಟೆ ಲೋಟಗಳನ್ನು ಪುಣೆಯಿಂದ ಸಿದ್ಧಪಡಿಸಲಾಗಿದೆ. ಜೈಪುರದಲ್ಲಿರುವ ಅನ್ನಪೂರ್ಣಂ ಗೆ ಕರ್ನಾಟಕದಿಂದಲೇ ದೋಸೆ ಅಕ್ಕಿ, ಕೇಸರಿಭಾತ್‌ಗೆ ನಂದಿನಿ ತುಪ್ಪ, ಮಡಿಕೇರಿಯಿಂದ ಕಾಫಿ, ವಲ್ಲೆಪುರಂನಿಂದ ಚಹಾಪುಡಿ ಸರಬರಾಜು ಆಗುತ್ತದೆ ಎಂದೂ ತಿಳಿಸಿದರು.

ಕಿವಿನೋವಿಗೆ ಮನೆಮದ್ದು ಬೇಡ



ಆರೋಗ್ಯ

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಫ್ಲೂ ರೀತಿಯ ಆರೋಗ್ಯ ಸಮಸ್ಯೆಗಳು ಕಂಡುಬರುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿದೆ. ಅನೇಕ ರೋಗಿಗಳಲ್ಲಿ ಕಂಡುಬರುವ ವಿವಿಧ ರೋಗಲಕ್ಷಣಗಳು ಜನರ ನಿದ್ದೆಗೆಡಿಸಿದೆ. ಶೀತ, ನೆಗಡಿ ಸಂಬಂಧಿತ ಅನಾರೋಗ್ಯ ಸಮಸ್ಯೆಗಳು ಜನರನ್ನು ಹೆಚ್ಚಾಗಿ ಬಾಧಿಸುತ್ತಿದ್ದು, ಅದರಲ್ಲೂ ಕಿವಿ ನೋವಿಗೆ ಸಂಬಂಧಿಸಿದಂತಹ ಪ್ರಕರಣಗಳು ನಗರದಲ್ಲಿ ಹೆಚ್ಚು ಕಂಡುಬರುತ್ತಿದೆ ಎಂದು ವೈದ್ಯರು ಹೇಳುತ್ತಾರೆ.

ಅದಲ್ಲದೆ ಈ ಸಮಸ್ಯೆಗಳಿಗೆ ಬಹುತೇಕ ಮಂದಿ ಮನೆಮದ್ದುಗಳ ಮೊರೆ ಹೋಗುತ್ತಾರೆ. ಅದರ ಪರಿಣಾಮವಾಗಿ ಸೋಂಕು ಉಲ್ಬಣಗೊಳ್ಳುತ್ತದೆ. ಗಂಟಲಿಗೆ ಸಂಬಂಧಿತ ಸಮಸ್ಯೆಗಳು ಮತ್ತು ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತಿವೆ. ಚಳಿಗಾಲದಲ್ಲಿ ಎದುರಾಗುವ ಈ ಸಮಸ್ಯೆಗಳ ಕುರಿತಾಗಿ ಕಿಂಡರ್ ಆಸ್ಪತ್ರೆಯ ಹಿರಿಯ ಇಎನ್‌ಟಿ ತಜ್ಞ ವೈದ್ಯೆ ಡಾ. ಸುನಿತಾ ಮಾಧವನ್ ಅವರು ಮಹತ್ವದ ಮಾಹಿತಿ ನೀಡಿದ್ದಾರೆ.

'ಯಾವ ಮುನ್ನೆಚ್ಚರಿಕೆಯೂ ಇಲ್ಲದೆ ಈ ರೀತಿಯ ಕಿವಿ ನೋವಿನ ಸಮಸ್ಯೆಗಳಿಗೆ ಮನೆ ಮದ್ದಿನ ಮೊರೆ ಹೋಗುವುದು ತುಂಬಾ ಅಪಾಯಕಾರಿ. ಅದರಲ್ಲೂ ಅನೇಕರು ಪರಿಹಾರವಾಗಿ ಮನೆಮದ್ದುಗಳಾದ ಬಾಮ್, ಮೊಸರು, ಉಪ್ಪು ನೀರು, ಸಾಬೂನು ನೀರು ಮತ್ತು ಬೆಳ್ಳುಳ್ಳಿಯನ್ನು ಬಳಸುತ್ತಾರೆ. ಆದರೆ ಇದರಿಂದಾಗಿ ಕಿವಿಯಲ್ಲಿ ರಕ್ತಸ್ರಾವ ಉಂಟಾಗುತ್ತದೆ. ಉದಾಹರಣೆಗೆ ಸೈನಟಿಸ್ ಮತ್ತು ಕಿವಿ ನೋವಿನಿಂದ ಬಳಲುತ್ತಿದ್ದ 10 ವರ್ಷದ ಮಗುವಿನ ಕಿವಿಗೆ ಲವಣಯುಕ್ತ ನೀರನ್ನು ಹಾಕಲಾಗಿತ್ತು. ಆದರೆ ಇದರಿಂದ ತೀವ್ರವಾದ ಸೈನಸೈಟಿಸ್ ಸಮಸ್ಯೆ ಕಾಣಿಸಿಕೊಂಡಿತ್ತು. ಅಲ್ಲದೆ ಇಂತಹ ಸ್ವಯಂ ಚಿಕಿತ್ಸಾ ವಿಧಾನದಿಂದ ಕಿವಿಯ ಒಳ ಪದರಗಳಿಗೆ ಹಾನಿಯಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಮನೆಮದ್ದುಗಳ ಬಳಕೆ ನಿಜಕ್ಕೂ ಸೂಕ್ತವಲ್ಲ. ಕಿವಿ ನೋವಿನ ಸಮಸ್ಯೆಯಿಂದ ಬಳಲುತ್ತಿದ್ದರೆ ಕೂಡಲೇ ಇಎನ್‌ಟಿ ತಜ್ಞರನ್ನು ಭೇಟಿಯಾಗುವುದು ಅತ್ಯುತ್ತಮ ಪರಿಹಾರ' ಎನ್ನುತ್ತಾರೆ ಡಾ ಸುನಿತಾ.

ಒಣ ತಂಪಾದ ಗಾಳಿ, ಒಳಾಂಗಣ ಚಟುವಟಿಕೆಗಳು ಮತ್ತು ಜನಸಂದಣಿಯಿಂದಾಗಿ ಸೋಂಕುಗಳ ಹರಡುವಿಕೆಯಿಂದಲೂ ಕಿವಿ ನೋವಿನ ಸಮಸ್ಯೆಯು ಕಾಣಿಸಿಕೊಳ್ಳಬಹುದು. ಇದರಿಂದಾಗಿ ಅಡೆನೊಟಾನ್ಸಿಲಿಟಿಸ್, ಡಯಾಬಿಟಿಸ್, ಅಲರ್ಜಿ, ಅಸ್ತಮಾ, ಬ್ರಾಂಕೈಟಿಸ್, ಥೈರಾಯ್ಡ್ ಮತ್ತು ಇತರೆ ದೀರ್ಘಕಾಲದ ಕಾಯಿಲೆಗಳನ್ನು ಹೊಂದಿರುವವರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎನ್ನುತ್ತಾರೆ ವೈದ್ಯರು.

ಈ ಸಮಸ್ಯೆಯ ರೋಗಲಕ್ಷಣಗಳು ಸಾಮಾನ್ಯವಾಗಿ ಮೂಗು ಸೋರುವಿಕೆ, ಮೂಗು ಕಟ್ಟುವಿಕೆ, ಸೀನು, ಕೆಮ್ಮು, ಗಂಟಲು ನೋವು, ತಲೆನೋವು, ಆ ಯಾ ಸ , ಧ್ವನಿಯಲ್ಲಿ ಬದಲಾವಣೆ, ಕಿವಿ ನೋವು ಮತ್ತು ಕೆಲವೊಮ್ಮೆ ಮೂಗಿನಿಂದ ರಕ್ತಸ್ರಾವವಾಗುತ್ತದೆ. ಕೆಲವರಲ್ಲಿ ಈ ರೀತಿಯ ಸಮಸ್ಯೆಗಳು ಬಹುಬೇಗ ಮಾಯವಾಗುತ್ತವೆ.

ನವೆಂಬರ್ 1ರಿಂದ ಡಿಸೆಂಬರ್ 15-2023ರ ವರೆಗಿನ ಈ 45 ದಿನಗಳ ಅವಧಿಯಲ್ಲಿ ಆಸ್ಪತ್ರೆಗೆ ದಾಖಲಾದವರಲ್ಲಿ ಶೇ 60ರಷ್ಟು ರೋಗಿಗಳು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು ಎಂದು ತಿಳಿಸಿದ್ದಾರೆ. ಈ ಪೈಕಿ 60 ರೋಗಿಗಳಲ್ಲಿ ಕಿವಿ ನೋವಿನ ಲಕ್ಷಣ, 60 ಶೀತ ರೋಗಲಕ್ಷಣ, 30 ಗಂಟಲಿಗೆ ಸಂಬಂಧಿಸಿದ ಸೋಂಕಿನ ಸಮಸ್ಯೆ, 8 ಬ್ರಾಂಕೈಟಿಸ್, 19 ತೀವ್ರವಾದ ಸೈನಟಿಸ್, 5 ಅಡೆನೊಡಿಟಿಸ್, 4 ಮೂಗು ಸೋರುವಿಕೆ ಮತ್ತು 5 ರೋಗಿಗಳು ಅತಿಯಾದ ಅಸ್ತಮಾ ಸಮಸ್ಯೆಗೆ ಒಳಗಾಗಿದ್ದರು ಎಂದು ವಿವರಿಸಿದ್ದಾರೆ.

ತೀವ್ರವಾದ ತಲೆ ನೋವು, ಮುಖದ ನೋವು, ಮುಖದ ಊತ, ತೀವ್ರವಾದ ಗಂಟಲು ನೋವು ಮತ್ತು ಜ್ವರದಿಂದ ಬಳಲುತ್ತಿರುವವರು ಕೂಡಲೇ ವೈದ್ಯರನ್ನು ಸಂಪರ್ಕಿಸುವುದು ಒಳಿತು. ಅಲ್ಲದೆ ಈ ರೀತಿಯ ಸಮಸ್ಯೆಯನ್ನು ಹೊಂದಿರುವವರು ಧೂಮಪಾನ ಬಿಡುವುದು ಉತ್ತಮ. ಅಲ್ಲದೆ ರೋಗಿಗಳಲ್ಲಿ ಕಂಡುಬರುವ ರೋಗಲಕ್ಷಣಗಳ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುವುದು ಎನ್ನುತ್ತಾರೆ ವೈದ್ಯರು.

ಶೀತ, ಕೆಮ್ಮು ಕಾಣಿಸಿಕೊಂಡ ಕೂಡಲೇ ಮಾಸ್ಕ್ ಧರಿಸಿ, ಮಧುಮೇಹಿಗಳು ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಕಾಪಾಡಿಕೊಳ್ಳಿ, ಆಸ್ತಮಾ ಮತ್ತು ಅಲರ್ಜಿಯಿಂದ ಬಳಲುತ್ತಿರುವವರು ಗಾಳಿಗೆ ಒಡ್ಡಿಕೊಳ್ಳುವುದನ್ನು ತಪ್ಪಿಸಿ ಮತ್ತು ಶೀತ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರನ್ನು ಸಂಪರ್ಕಿಸಿ ಎಂದು ಅವರು ಸಲಹೆ ನೀಡಿದ್ದಾರೆ.

ರೋಗವನ್ನು ತಡೆಗಟ್ಟಲು ತಾಜಾ ಹಣ್ಣು ಮತ್ತು ತರಕಾರಿ ಸೇವನೆ, ಶ್ವಾಸಕ್ಕೆ ಸಂಬಂಧಿಸಿದ ಸೋಂಕು ಹೊಂದಿರುವ ಸಮಯದಲ್ಲಿ ಭಾರೀ ವ್ಯಾಯಾಮದಿಂದ ದೂರವಿರುವುದು ಮತ್ತು ವಿಮಾನ ಪ್ರಯಾಣ ಮಾಡದಿರುವುದು ಒಳಿತು. ಕಿವಿ, ಮುಖ ನೋವು ಮತ್ತು ಊತ ಕಾಣಿಸಿಕೊಂಡಲ್ಲಿ ಕೂಡಲೇ ಇಎನ್‌ಟಿ ತಜ್ಞರನ್ನು ಭೇಟಿ ಮಾಡಿ ಎಂಬ ಎಚ್ಚರಿಕೆ ನೀಡುತ್ತಾರೆ ಎನ್ನುತ್ತಾರೆ ಸುನಿತ ❖

MedPlus

50-80%* ರಿಯಾಯತಿ ದರದಲ್ಲಿ
ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳು
ಸುಮಾರು 9.5 ಲಕ್ಷಕ್ಕೂ ಅಧಿಕ ಗ್ರಾಹಕರು,
ಔಷಧಿಗಳ ಖರೀದಿಯಲ್ಲಿ ಸುಮಾರು 74.5 ಕೋಟಿಗೂ ಅಧಿಕ ಉಳಿತಾಯ ಮಾಡಿದ್ದಾರೆ!
ಇನ್ನು ನೀವು ಯಾವಾಗ ಉಳಿತಾಯ ಆರಂಭಿಸುವಿರಿ?

ನಮ್ಮ ವೈದ್ಯರು ಬರೆದು ಕೊಡುವ ಔಷಧಿಗಳೂ ದೊರೆಯುತ್ತವೆಯೆ?	ಹೌದು, ಮೆಡ್‌ಪ್ಲಸ್‌ನಲ್ಲಿ, ನಿಮಗೆ ಬರೆದುಕೊಡಲಾಗಿರುವ ಔಷಧಿಗಳ 80% ರಷ್ಟು ಔಷಧಿಗಳು ದೊರೆಯುತ್ತವೆ. ಈ ಔಷಧಿಗಳ ಶ್ರೇಣಿಯಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ, ಥೈರಾಯ್ಡ್, ಕೊಲೆಸ್ಟರಾಲ್, ಹೃದಯ ಕಾಯಿಲೆ ಮುಂತಾದ ಔಷಧಿಗಳ ಜೊತೆಗೆ ನೋವು, ಶೀತ, ಜ್ವರ, ಅಲರ್ಜಿ ಮತ್ತು ಸೋಂಕುಗಳ ಔಷಧಿ ಕೂಡ ಲಭ್ಯವಿರುತ್ತವೆ.
ಈ ಔಷಧಿಗಳ ಗುಣಮಟ್ಟ ಹೇಗಿರುತ್ತದೆ? ನಮ್ಮ ವೈದ್ಯರು ಶಿಫಾರಸ್ಸು ಮಾಡಿರುವ ಔಷಧಿಯಷ್ಟೆ ಗುಣಮಟ್ಟದ್ದಾಗಿರುತ್ತದೆಯೆ?	ದೇಶದ ಅತ್ಯುತ್ತಮ ಬ್ರಾಂಡ್‌ಗಳ ಔಷಧಿಗಳನ್ನು ಉತ್ಪಾದಿಸುವ ಸೌಲಭ್ಯಗಳಲ್ಲಿಯೇ# ಮೆಡ್‌ಪ್ಲಸ್ ಬ್ರಾಂಡ್‌ನ ಔಷಧಿಗಳನ್ನು ಉತ್ಪಾದಿಸಲಾಗುತ್ತದೆ. ಈ ಔಷಧಿಗಳನ್ನು ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಔಷಧಿಗಳ ಮಾನದಂಡಗಳಿಗೆ ಅನುಗುಣವಾಗಿಯೇ ಮತ್ತು ಅವುಗಳಷ್ಟೆ ಉತ್ತಮವಾಗಿ ತಯಾರಿಸಲಾಗುತ್ತದೆ. #ಇದನ್ನು ನೀವು ಔಷಧಿಗಳ ಸ್ಟ್ರಿಪ್‌ನ ಮೇಲೆ ಉಲ್ಲೇಖಿಸಲಾಗಿರುವ ಉತ್ಪಾದಕರ ಹೆಸರನ್ನು ಪರಿಶೀಲಿಸುವ ಮೂಲಕ ತಿಳಿಯಬಹುದು.
ಗುಣಮಟ್ಟ ಒಂದೇ ಆಗಿದ್ದರೆ, 50-80% ರಿಯಾಯತಿ ದರದಲ್ಲಿ ನೀಡುವುದು ಹೇಗೆ ಸಾಧ್ಯ?	ಮಾರುಕಟ್ಟೆ ಖರ್ಚು ಹಾಗೂ ವಿತರಣಾ ವೆಚ್ಚದ ಕಾರಣಗಳಿಂದಾಗಿ ನೀವು ನಿಯಮಿತವಾಗಿ ಖರೀದಿಸುವ ಔಷಧಿಗಳು ದುಬಾರಿ ಎನಿಸುತ್ತವೆ. ಆದರೆ, ಮೆಡ್‌ಪ್ಲಸ್‌ನಲ್ಲಿ ಆ ರೀತಿಯ ಯಾವುದೇ ಹೆಚ್ಚುವರಿ ಮಾರುಕಟ್ಟೆ ಮತ್ತು ವಿತರಣಾ ವೆಚ್ಚಗಳಿರುವುದಿಲ್ಲ. ಹೀಗಾಗಿ 50-80% ರಿಯಾಯತಿ ದರದಲ್ಲಿ ಔಷಧಿಗಳನ್ನು ನೀಡಲು ಸಾಧ್ಯವಾಗುತ್ತದೆ.
ಇದು, ತಮ್ಮ ಸ್ವಂತ ಬ್ರಾಂಡ್‌ನ ಔಷಧಗಳನ್ನು ಮಾರಾಟ ಮಾಡುವುದಕ್ಕೆ ಫಾರ್ಮಸಿ ಕಂಪನಿಗಳು ಕಂಡುಕೊಂಡ ಸಹಜ ಪದ್ಧತಿಯೆ?	ಹೌದು, ವಿಶ್ವದಾದ್ಯಂತ ವಿಶೇಷವಾಗಿ ಯುಎಸ್ ರಾಷ್ಟ್ರಗಳಲ್ಲಿ ವಾಲ್‌ಗ್ರೀನ್ಸ್ ಮತ್ತು ಸಿವಿಎಸ್ ಎಂಬ ಫಾರ್ಮಸಿ ಸರಣಿಗಳು ತಮ್ಮದೇ ಸ್ವಂತ ಬ್ರಾಂಡ್‌ನ ಔಷಧಿಗಳನ್ನು ಮಾರಾಟ ಮಾಡುತ್ತವೆ. ಔಷಧಿಯೊಂದರ ಪೇಟೆಂಟ್ ಪೂರ್ಣಗೊಂಡ ಬಳಿಕ, ಇಂತಹ ಕಂಪನಿಗಳು ತಮ್ಮದೇ ಬ್ರಾಂಡ್‌ನಲ್ಲಿ ಅವುಗಳನ್ನು ಮಾರಾಟ ಮಾಡುತ್ತವೆ. ಹಿಂದಿನ ದಿನಗಳಲ್ಲಿ, ಭಾರತದಲ್ಲಿ, ಯಾವುದೇ ಕಂಪನಿಯು ತನ್ನ ಸ್ವಂತದ ಬ್ರಾಂಡ್‌ಗಳನ್ನು ತಯಾರಿಸುವಷ್ಟು, ಸಂಯುಕ್ತ ರಾಷ್ಟ್ರ ಮಾದರಿಯ ಗಾತ್ರ ಮತ್ತು ಪರಿಮಾಣ ಹೊಂದಿರಲಿಲ್ಲ. ಇದೀಗ, 4000 ಮಳಿಗೆಗಳನ್ನು ಮತ್ತು 4500 ಕೋಟಿಗೂ ಅಧಿಕ ವಹಿವಾಟು ಗಾತ್ರ ಮತ್ತು ಪರಿಮಾಣ ಹೊಂದಿರುವ ಮೆಡ್‌ಪ್ಲಸ್‌ಗೆ, ತನ್ನ ಸ್ವಂತ ಬ್ರಾಂಡ್ ತಯಾರಿಸುವ ಅವಕಾಶ ಲಭಿಸಿದೆ.

ನೀವು ಮೆಡ್‌ಪ್ಲಸ್‌ಗೆ ಭೇಟಿ ನೀಡಿದಾಗ, ಪರ್ಯಾಯ ಔಷಧಿಗಳನ್ನು ಕೇಳಿ ಪಡೆಯಿರಿ ಮತ್ತು ಸಾಕಷ್ಟು ಉಳಿತಾಯ ಮಾಡಿರಿ!
ಇಂದೇ ನಿಮ್ಮ ಸಮೀಪದ ಸ್ಟೋರ್‌ಗೆ ಭೇಟಿ ಕೊಡಿ ಅಥವಾ ಕರೆ ಮಾಡಿ 040-6700 6732
ವಾರ್ಷಿಕ ರೂ. 50/- ಚಂದಾದಾರಿಕೆ ಕೊಡುಗೆ ಸೀಮಿತ ಅವಧಿಗೆ ಮಾತ್ರ (ಸಾಮಾನ್ಯ ದರ ವಾರ್ಷಿಕ ರೂ.499/-)
*ಷ&ನಿ ಅನ್ವಯ ಡಿಪಿಸಿಒ ಉತ್ಪನ್ನಗಳ ಮೇಲಿನ ರಿಯಾಯತಿ ಭಿನ್ನವಾಗಿರುತ್ತದೆ.

ALSTYLE

WINTERWEAR SALE
Upto 70% OFF
Sweaters & Sweatshirts for Women
All Major Brands Available for Thermals, Jackets, Sweaters, Sweatshirts etc. for Men, Women & Kids
Also Available:
Formalwear | Casualwear | Sportswear
Kurtis | Pallazos | Undergarments
Home Furnishings etc.
Org. by: Surya Agency Pvt. Ltd. *T&C Apply.
Venue in Bangalore :
SAFINA PLAZA
No.84/85, Infantry Road - 01

Bye Bye 2023
ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
Welcome 2024
LG OLED TV 55 OLED TV EMI ₹3,990/- GET INSTANT CASH BACK UPTO ₹10,000/- ON CC & DC
SONY BRAVIA XR LED 65 X90L SERIES EMI ₹6,500/- GET INSTANT CASH BACK UPTO ₹7,500/- ON CC & DC
Haier QLED TV 55 QLED TV EMI ₹2,994/- GET INSTANT CASH BACK UPTO ₹7,000/- ON CC & DC
SAMSUNG QLED TV 55 QLED TV EMI ₹3,990/- GET INSTANT CASH BACK UPTO ₹6,000/- ON CC & DC
Panasonic OLED TV 55 OLED TV EMI ₹4,095/- GET INSTANT CASH BACK UPTO ₹15,000/- ON CC & DC
NEW YEAR HOTTEST OFFER
43 UHD/4K SPECIAL PRICE ₹ 27,490/-
43 Smart TV SPECIAL PRICE ₹ 19,990/-
40 android SPECIAL PRICE ₹ 15,990/-
32 Smart TV SPECIAL PRICE ₹ 10,490/-
32 HD LED TV SPECIAL PRICE ₹ 8,990/-
LG SIDE BY SIDE REFRIGERATORS Wi-Fi Convertible 655 Ltr. FREE LG DOUBLE DOOR REFRIGERATOR WORTH ₹29,499/- GET INSTANT CASH BACK UPTO ₹10,000/- ON CC & DC EMI ₹4,990/- ONWARDS
Haier SIDE BY SIDE REFRIGERATORS INVERTER FRENCH 4 DOOR 531 Ltr. SPECIAL PRICE ₹ 62,990/- INSTANT CASHBACK CC EMI ₹ 5,000/- EFFECTIVE PRICE ₹ 57,990/-
SAMSUNG SIDE BY SIDE REFRIGERATORS 655 Ltr. FREE SAMSUNG 10 Kg TOP LOAD WASHING MACHINE WORTH ₹ 29,990/- GET INSTANT CASH BACK UPTO ₹4,000/- ON CC & DC EMI ₹ 3,990/- ONWARDS
BMR & FROST FREE REFRIGERATORS
Haier 300 Ltr. FREE COOKER & NON-STICK WORTH ₹3990/- GET INSTANT CASH BACK UPTO ₹2,000/- ON CC & DC SPECIAL PRICE ₹ 31,490/-
SAMSUNG 231 Ltr. GET INSTANT CASH BACK UPTO ₹1,500/- ON CC & DC EMI ₹1,990/- ONWARDS
LOWEST EMI | DEBIT & CREDIT CARD EMI | LOWEST DOWNPAYMENT | LONG TENURE EMI
FRONT LOAD WASHING MACHINES
LG 10 Kg. GET INSTANT CASH BACK UPTO ₹9,000/- ON CC & DC EMI ₹2,890/-
Haier 9 Kg. FREE IRON BOX GET INSTANT CASH BACK UPTO ₹6,000/- ON CC & DC NEW YEAR PRICE ₹36,990/-
IFB 8 Kg. GET INSTANT CASH BACK UPTO ₹3,000/- ON CC & DC EMI ₹2,990/-
SAMSUNG 8 Kg. GET INSTANT CASH BACK UPTO ₹5,000/- ON CC & DC EMI ₹1,490/-
LG TOP LOAD WASHING MACHINE 7.5 Kg. GET INSTANT CASH BACK UPTO ₹1,500/- ON CC & DC EMI ₹1,799/-
THE GREAT 2024 SALE BIGGEST SAVINGS COMBO MELA
RO - WATER PURIFIER FESTIVAL PRICE ₹ 13,990/- ONWARDS
WATER HEATER FREE PIPE & INSTALLATION 3 Liters ₹3,490/- 15 Liters ₹7,490/- 25 Liters ₹8,490/-
Pigeon Mixer Grinder 3 Jar + Pigeon Hot Kettle 1.5 Ltr COMBO PRICE ₹4,490/- OFFER PRICE ₹ 2024
Ayush 2 BR Black LPG Glass Cooktop + DUO Pack (Fry Pan 240 + Tawa 250) COMBO PRICE ₹5,894/- OFFER PRICE ₹ 2024
Egnite Induction Cooktop + 2.5 L Titan Hard Anodised Cooker COMBO PRICE ₹4,840/- OFFER PRICE ₹ 2024
Deluxe Aluminium Pressure Cooker 3L + Deluxe Aluminium Pressure Cooker 5L + Flat Tawa 280 COMBO PRICE ₹4,735/- OFFER PRICE ₹ 2024
Electric Rice Cooker Single Pot 1.8L + Kettle 1.5 L COMBO PRICE ₹4,290/- OFFER PRICE ₹ 2024
Kettle 1.5 L + Electric Chopper 350 ml + Inox Hydra Plus Water Bottle 700 ml + Sandwich Toaster COMBO PRICE ₹4,780/- OFFER PRICE ₹ 2024
ಬೆಂಗಳೂರು
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್®

gadget for every budget!

AVAIL UPTO 36 MONTHS LONG TENURE EMI

LOWEST DOWNPAYMENT

JUST PAY ₹24/-

& TAKE HOME LED TV, REFRIGERATOR, WASHING MACHINE, MICRO-OVEN, AIR-CONDITIONER & PAY BALANCE IN EASY EMI

HAPPY New Year 2024

Get 1 EMI* FREE

LG | SONY

EMI CARD EASY FINANCE

BAJAJ FINSERV | IDFC FIRST Bank

- Pre-approved Loan up to 4 Lakhs
- Repay easily • No documentation
- Pre-approved offers • Nil foreclosure charges

3 DAYS NON-STOP HUNGAMA

SALE

LOW DOWNPAYMENT

LOW EMI

LONG TENURE

JUST SHOW AADHAAR CARD

For easy finance offers & take home your favourite products

UPTO 50% DISCOUNT + UPTO 20% INSTANT CASHBACK

ON CREDIT & DEBIT CARD EMI TRANSACTIONS

0% INTEREST FREE FINANCE

CREDIT CARD & DEBIT CARD EASY EMI

ON LED TV, REFRIGERATOR, WASHING MACHINE, AIR-CONDITIONER & KITCHEN APPLIANCES

THIS NEW YEAR IT'S SMART PHONE WITH SMART ACCESSORIES @ AWESOME PRICE

Buy iPhone 13/14/15 Get Adapter FREE

Buy vivo V29E Get 10000 MAH POWER BANK @ ₹299/-

Buy oppo F23-5G Get PAPA NECKBAND @ ₹199/-

Buy SAMSUNG A34 Get NINJA CALLING SMART WATCH @ ₹499/-

Buy mi Redmi 13c Get URBAN NECKBANKD @ ₹499/-

Buy ONEPLUS 11R Get EARPHONE @ ₹99/-

Buy TECNO Mobile SMART PHONE @ ₹7,490/- Get Smart Watch FREE

ಚನ್ನಪಟ್ಟಣ ಅರ್ಪಣ ಜ್ಯುವೆಲರ್ಸ್ ಬಿಲ್ಡಿಂಗ್, ಕೆನರಾ ಬ್ಯಾಂಕ್ ಪಕ್ಕ, ಬಿ.ಎಂ. ರಸ್ತೆ PH: 9036593446 / 9036593447

ಶಿರಸಿ ಸಿ.ಪಿ. ಬಜಾರ್ ಮುಖ್ಯ ರಸ್ತೆ, ದೇವಿಕೆರೆ PH: 9591997260, 9731306569

ಕೋಲಾರ ಶಾರದಾ ಟಾಕೀಸ್ ರಸ್ತೆ ದೊಡ್ಡಪೇಟೆ, ಕಠಾರಿಪಾಳ್ಯ 9731306635/9731306574 08152-467397

ಬೆಳಗಾವಿ ಕೊಲ್ಹಾಪುರ ವೃತ್ತದ ಹತ್ತಿರ, ನೆಹರು ನಗರ, ಪಿ.ಬಿ ರಸ್ತೆ, 0831 4215241 / 42, 9731306717 9731306713

ಬಳ್ಳಾರಿ ವಾಸವಿ ಶಾಲೆ ಎದುರು, Ph: 08392-242330 / 337, 9731306742 / 9731331684

ಚಿತ್ರದುರ್ಗ ಶ್ರೀನಿವಾಸ ಮ್ಯಾನ್ಷನ್, ಹೊಳಲ್ಕೆರೆ ರಸ್ತೆ, 08194-224224, 9686446883

ದಾವಣಗೆರೆ ಅಶೋಕ ರಸ್ತೆ, 08192-233626/27, 9731306633 / 6712

ಶಿವಮೊಗ್ಗ ಶಿವಮೂರ್ತಿ ವೃತ್ತ, ಸಾವಲಂಗ ರಸ್ತೆ, PH: 08182-402100 / 9731306698

ತಿಪಟೂರು ರೈಲ್ವೇ ಸ್ಟೇಷನ್ ರಸ್ತೆ, Ph: 08134-250104/304, 9686680758 / 9731306552

ತುಮಕೂರು ವಿಶ್ವವಿದ್ಯಾಲಯ ಎದುರು, Ph: 0816-4021031, 9731306549 / 9591997270

ಕುಣಿಗಲ್ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಪ್ ಎದುರು 08132-221901 / 221902 97313 06663

ಯಾದಗಿರಿ ಮುದ್ ನಾಳ್ ಲೇಔಟ್ ಮುಖ್ಯ ರಸ್ತೆ, ಸಿಂಡಿಕೇಟ್ ಬ್ಯಾಂಕ್ ಎದುರು Ph: 08173/251779/759 8861002260

ಮಂಡ್ಯ 100 ಅಡಿ ರಸ್ತೆ, ವಿಜಯ ಬ್ಯಾಂಕ್ ಎದುರು 08232406100/08232406200 9513599861 / 7349609274

ಗೋಣಿಕೊಪ್ಪ ನಾರ್ಥ್ ಪಾಯಿಂಟ್, ಮಹಾಲಕ್ಷ್ಮಿ ದೇವಸ್ಥಾನದ ಎದುರು 7702770314/7702770353

ಕೊಪ್ಪಳ ಕೆಹೆಚ್ ಬಿ ಕಾಲೋನಿ ಐಡಿಬಿಐ ಬ್ಯಾಂಕ್ ಎದುರು, ಹೊಸಪೇಟೆ ರಸ್ತೆ 08539 221931/32, 9731306645

ಬೀದರ್ ಅಕ್ಷಯ ಕಾಂಪ್ಲೆಕ್ಸ್ ಹೊಸ ಬಸ್ ನಿಲ್ದಾಣ ಹತ್ತಿರ 08482-226800/01, 9513499863

ಕಲಬುರ್ಗಿ ತಿಮ್ಮಾಪುರಿ ಸರ್ಕಲ್ ಹತ್ತಿರ ಕನ್ನಡ ಭವನ ಎದುರು, ಎಸ್.ವಿ.ಪಿ.ಸರ್ಕಲ್ Ph 08472-227556, 9108023816,

ಕೆ.ಆರ್. ನಗರ ಶ್ರೀ ವೆಂಕಟೇಶ್ವರ ಚಿತ್ರಮಂದಿರದ ಎದುರು ಹುಣಸೂರು ಸರ್ಕಲ್, ಮೈಸೂರು ರಸ್ತೆ 08223295855/66 9731306715

ಚನ್ನರಾಯಪಟ್ಟಣ ಬಿ.ಎಂ. ರಸ್ತೆ, ಪುರಸಭೆ ಎದುರು ಹಳೇ ಬಸ್ ನಿಲ್ದಾಣ 08176253312 / 295256, 9513499855

ವಿಜಯಪುರ ಲಿಂಗದ್ ಗುಡಿ ರಸ್ತೆ, ಪಾರೇಖ್ ಸಿಗ್ನೇಚರ್ ಮಾಲ್ ಪಕ್ಕ 9353907691 / 9606865996

ಸಿಂಧನೂರ್ ನಟರಾಜ ಕಾಲೋನಿ, ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ 08535-222254, 9731306673 / 9731306672

ಕುಶಾಲನಗರ ಬಿಎಂ ರಸ್ತೆ, ಸಿಟಿ ಸೆಂಟರ್ ಎದುರು 9591997262/9591997263

ಚಿಕ್ಕಮಗಳೂರು ಐ.ಜಿ. ರಸ್ತೆ, Ph: 08262 - 239944 / 45, 9963998358, 9963998365

ಶಹಾಪೂರ ಬೀದರ್-ಬೆಂಗಳೂರು ರಸ್ತೆ ಬುದ್ಧನಗರ್ ಪಾರ್ಕ್ ಮುಂಭಾಗ, 9513499858 08479-240565,244565

ತೊಕ್ಕೊಟ್ಟು 0824-2956565 9731306621

ಮೈಸೂರು 5 ಸ್ಟೋರ್ಸ್

ಕುವೆಂಪುನಗರ ಅಕ್ಷಯ ಭಂಡಾರ Ph: 0821-2343705/6, 9731306587

ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297

ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph: 0821-2457860/50, 8861007304/9731306653

ಜೆ.ಪಿ ನಗರ ನಾಚನಹಳ್ಳಿ, ಕಿಲ್ಲೆ ಮೊಹಲ್ಲಾ ಮೋರ್ ಸೂಪರ್ ಮಾರ್ಕೆಟ್ ಹತ್ತಿರ, 8861007309 / 886107306

ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263

Free Gifts depends on Brands & Selective Models • Products shown here are only indicative • Exchange Rates Conditions apply • Fina nce at the sole discretion of the financiers • Offers not applicable on Sony & Samsung.

HELPLINE 080 - 408 33 999

Shop Online @ www.adishwarestore.com

STREAMLINE

ಬಿಗ್‌ಬಾಸ್ ಮನೆಯಲ್ಲಿ ಭಾವುಕಪ್ರವಾಹ!

ಬಿಗ್ ಬಾಸ್

ಈ ಸೀಸನ್‌ನ ಬಿಗ್‌ಬಾಸ್ ಕನ್ನಡ ಸಾಕಷ್ಟು ಸುದ್ದಿಯಾಗುತ್ತಿದೆ. ಆದರೆ ಈ ಸುದ್ದಿಗೆ ಮೂಲವಾಗಿರುವುದು ಬಹುತೇಕ ಬಾರಿ ಮನೆಯೊಳಗಿನ ಗಲಾಟೆ, ಜಗಳ, ಗುದ್ದಾಟಗಳೇ. 'ಮಕ್ಕಳಿಗೆ ಈ ಬಿಗ್‌ಬಾಸ್ ರಿಯಾಲಿಟಿ ಷೋ ತೋರಿಸಬೇಡಿ' ಎಂದು ಸೆಲೆಬ್ರಿಟಿಗಳೇ ಹೇಳುವ ಮಟ್ಟಿಗೆ ಅಗ್ರೆಶನ್ ಅನ್ನುವುದು ಸ್ಪರ್ಧಿಗಳಲ್ಲಿ ಎದ್ದು ಕಾಣುತ್ತಿತ್ತು. ಆದರೆ ಕಳೆದ ವಾರ ಬಿಗ್‌ಬಾಸ್ ಕಡೆಯಿಂದ 'ಅತಿರೇಕದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂಬ ಎಚ್ಚರಿಕೆ ಮನೆಮಂದಿಗೆ ತಲುಪಿದ ನಂತರ ಮನೆ ತಣ್ಣಗಾಗಿದೆ.

ಕ್ಷಣಕ್ಷಣಕ್ಕೂ ಕಿತ್ತಾಡುತ್ತಿದ್ದ ಸಂಗೀತಾ-ವಿನಯ್ ಕೂಡ ಕೈಕುಲುಕಿ ರಾಜಿಯಾಗಿದ್ದಾರೆ. ನೋಡನೋಡುತ್ತಿದ್ದ ಹಾಗೆಯೇ ಬಿಗ್‌ಬಾಸ್ ಫ್ಯಾಮಿಲಿ ಷೋ ಆಗಿ, ಮೆಲೊಡ್ರಾಮಾ ಷೋ ಆಗಿ ಬದಲಾಗಿದೆ. ಪ್ರತಿಸಲ ಮನೆಯೊಳಗೆ ಗಲಾಟೆ ಹೆಚ್ಚಾಗಿ ನಡೆಯುತ್ತಿದ್ದದ್ದು ಟಾಸ್ಕ್‌ಗಳ ಸಂದರ್ಭದಲ್ಲಿ. ಅಲ್ಲಿ ಹುಟ್ಟಿಕೊಂಡ ವೈಷಮ್ಯ ಉಳಿದ ಸಮಯದಲ್ಲಿಯೂ ಮುಂದುವರಿಯುತ್ತಿತ್ತು. ಆದರೆ ಕಳೆದ ವಾರದ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿತ್ತು. ಸದಸ್ಯರಿಗೆ ಮಾಮೂಲಿ ಟಾಸ್ಕ್‌ಗಳೇ ಇರಲಿಲ್ಲ. ಬಿಗ್‌ಬಾಸ್ ಫಾಸ್ ಅಂದಾಗ ನಿಶ್ಚಲವಾಗಿ ನಿಂತುಕೊಳ್ಳಬೇಕು, ಪ್ಲೇ ಅಂದಾಗ ಚಲಿಸಬಹುದು ಎಂಬುದೊಂದು ಸರಳವಾದ ಸೂಚನೆ ನೀಡಲಾಗಿತ್ತು. ಆದರೆ ಈ ಸರಳ ಸೂಚನೆ ಎಂಥ ಕಷ್ಟಕರವಾಗಿದ್ದು ಎಂಬುದು ಮನೆಮಂದಿಗೆ ಅರಿವಾಗಿದ್ದು, ಒಬ್ಬೊಬ್ಬ ಸದಸ್ಯನ ಮನೆಯವರೂ ಬಿಗ್‌ಬಾಸ್ ಹೌಸ್ ಒಳಗೆ ಅಡಿಯಿಡಲು ಪ್ರಾರಂಭಿಸಿದಾಗ.

ಮೊದಲಿಗೆ ಮನೆಯೊಳಗೆ ಪ್ರವೇಶಿಸಿದ್ದು ನಮ್ರತಾ ಅವರ ಕುಟುಂಬದವರು. 'ಕ್ಯಾಪ್ಟನ್ ಆಗುವುದಕ್ಕಿಂತ, ಬಿಗ್‌ಬಾಸ್ ಕಳಿಸಿಕೊಡುವ ಫೋಟೊ ಪಡೆದುಕೊಳ್ಳಬೇಕು ಎಂಬ ಆಸೆ ಇದೆ' ಎಂದು ಯಾವಾಗಲೂ ಹೇಳಿಕೊಳ್ಳುತ್ತಿದ್ದ ನಮ್ರತಾಗೆ ಫೋಟೊ ಮತ್ತು ರಿಯಲ್ ಆಗಿ ಅಮ್ಮನನ್ನು ಮನೆಯೊಳಗೆ ಭೇಟಿಯಾಗುವ ಅವಕಾಶ ಎರಡೂ ಈ ವಾರ ಸಿಕ್ಕಿತು. ಆದರೆ ಅಮ್ಮ ನಂತರ ಬಂದ ವರ್ತೂರ್ ಸಂತೋಷ್ ಅಮ್ಮ, ಎಲ್ಲರಿಗೂ ಕಿವಿಮಾತು ಹೇಳಿ ಹೋದರು. ಆದರೆ ಮನೆಯೊಳಗೆ ಹೊಸ ತರಂಗವೇಳುವಂತೆ ಮಾಡಿದ್ದು ತುಕಾಲಿ ಸಂತೋಷ್ ಅವರ ಪತ್ನಿ. ಈ ನಗು ದಂಪತಿ ಹಿಂದಿನ ನೋವಿನ ಕಥೆಯನ್ನು ಕೇಳಿದಾಗ ಮನಯವರೆಲ್ಲರ ಕಣ್ಣಲ್ಲೂ ನೀರು. ತುಕಾಲಿ ಅವರ ಪತ್ನಿ ಮನೆಯೊಳಗಿರುವಾಗಲೇ ಮೈಕಲ್ ತಾಯಿಯೂ ಪ್ರವೇಶಿಸಿದರು. ಪನ್ನೀರಿಗಾಗಿ ಕಣ್ಣೀರಿಟ್ಟ ಸಂಗೀತಾಗೆ ಅವರು ಪನ್ನೀರನ್ನೇ ನೀಡಿದ್ದು ವಿಶೇಷ.

ಈ ಎಲ್ಲರ ಭೇಟಿಯ ಹೊತ್ತಲ್ಲೂ ಬಿಗ್‌ಬಾಸ್ ಫಾಸ್ ಮತ್ತು ಪ್ಲೇ ಆಟ ಆಡುತ್ತಲೇ ಇದ್ದರು. ಆದರೆ ಇದರ ಕಠೋರತೆ ಅರಿವಾಗಿದ್ದು ಕಾರ್ತಿಕ್ ಅಮ್ಮ ಮನೆಯೊಳಗೆ ಎಂಟ್ರಿ ಕೊಟ್ಟಾಗ. ಆಗ ಕಾರ್ತಿಕ್ ಪಾಸ್‌ನಲ್ಲಿದ್ದರು. ಮನೆಯವರೆಲ್ಲರನ್ನೂ ಮಾತಾಡಿಸಿದ ನಂತರವೂ ಬಿಗ್‌ಬಾಸ್ ಪ್ಲೇ ಎಂದು ಹೇಳಲಿಲ್ಲ. ಕಣ್ಣೀರು ಸುರಿಸುತ್ತ ನಿಂತೇ ಇದ್ದ ಕಾರ್ತಿಕ್‌ಗೆ ಅಮ್ಮನನ್ನು ತಬ್ಬಿಕೊಳ್ಳಲೂ ಸಾಧ್ಯವಾಗಲಿಲ್ಲ. ನೋಡನೋಡುತ್ತಿದ್ದಂತೆಯೇ ಕಾರ್ತಿಕ್ ಅಮ್ಮ ಮನೆಯಿಂದ ಹೊರನಡೆದುಬಿಟ್ಟರು. ಕಾರ್ತಿಕ್ 'ಅಮ್ಮಾ... ವಾಪಸ್ ಬಾರಮ್ಮಾ' ಎಂಬ ಆಕ್ರಂದನಕ್ಕೆ ಪ್ರತಿಕ್ರಿಯೆಯೇ ಇರಲಿಲ್ಲ. ತುಸು ಹೊತ್ತು ಬಿಟ್ಟು ಕಾರ್ತಿಕ್ ಅಮ್ಮ ವಾಪಸ್ ಬಂದಾಗ ಕಾರ್ತಿಕ್ ಸಂತೋಷಕ್ಕೆ ಪಾರವೇ ಇರಲಿಲ್ಲ.

ಇಡೀ ವಾರದಲ್ಲಿ ಎಲ್ಲರ ಮನಕಲುಕುವಂತೆ ಮಾಡಿದ್ದು ಡ್ರೋಣ್ ಪ್ರತಾಪ್ ಅಮ್ಮ-ಅಮ್ಮನ ಎಂಟ್ರಿ. ಮೂರು ವರ್ಷಗಳ ನಂತರ ಮಗನನ್ನು ಭೇಟಿಯಾಗಲು ಬಂದ ಅವರನ್ನು ಪ್ರತಾಪ್ ಕಣ್ಣೀರಿಡುತ್ತಲೇ ಎದುರಾಗಿದ್ದು. ಬೆಳಿಗ್ಗಿನಿಂದ ನೀರೂ ಕುಡಿಯದೇ ಉಪವಾಸವಿದ್ದ ಪ್ರತಾಪ್, ಅಮ್ಮನ ಕೈಯಲ್ಲಿಯೇ ಊಟ ಮಾಡಿದರು. ವಾರವಿಡೀ ಕಣ್ಣೀರಲ್ಲಿ ಬಿಗ್‌ಬಾಸ್ ತೊಯ್ದಿದ್ದರೂ, ಕ್ಯಾಪ್ಟನ್ಸಿ ಟಾಸ್ಕ್ ಬಿಸಿ ಮಾತ್ರ ನಿಧಾನಕ್ಕೆ ಏರುತ್ತಲೇ ಇತ್ತು. ಈ ಬಾರಿ ಸ್ಪರ್ಧಿಗಳ ಮನೆಯವರನ್ನೂ ಬಿಗ್‌ಬಾಸ್ ಇದರಲ್ಲಿ ಒಳಗೊಂಡಿದ್ದಾರೆ. ಮನೆಯೊಳಗೆ ಬಂದ ಕುಟುಂಬದವರನ್ನು, ಅವರ ಕುಟುಂಬದ ಸ್ಪರ್ಧಿಯನ್ನು ಹೊರತುಪಡಿಸಿ ಯಾರು ಕ್ಯಾಪ್ಟನ್ ಆಗಬೇಕು ಎಂದು ಬಯಸುತ್ತೀರಿ? ಎಂಬ ಪ್ರಶ್ನೆ ಕೇಳಿದ್ದರು. ಅದರ ಆಧಾರದ ಮೇಲೆ ತನಿಷಾ, ಸಂಗೀತಾ ಮತ್ತು ಪ್ರತಾಪ್ ಮೂವರು ಕ್ಯಾಪ್ಟನ್ಸಿ ರೇಸ್‌ನಲ್ಲಿ ಉಳಿದಿದ್ದಾರೆ. ಮನೆಯ ಸದಸ್ಯರೆಲ್ಲ ಸೇರಿ ಪ್ರತಾಪ್ ಅವರನ್ನು ರೇಸ್‌ನಿಂದ ಹೊರಗೆ ಹಾಕಿರುವ ಸೂಚನೆ ಜಿಯೊ ಸಿನಿಮಾ ಬಿಡುಗಡೆ ಮಾಡಿರುವ ಪ್ರೊಮೊದಲ್ಲಿ ಇದೆ. ಹಾಗಾದಲ್ಲಿ ಕ್ಯಾಪ್ಟನ್ಸಿ ಟಾಸ್ಕ್‌ನ ಕಾದಾಟ ಇರುವುದು ಸಂಗೀತಾ ಮತ್ತು ತನಿಷಾ ನಡುವೆ. ಈ ಇಬ್ಬರಲ್ಲಿ ಒಬ್ಬರು ಗೆದ್ದು ಕ್ಯಾಪ್ಟನ್ಸಿ ಪಟ್ಟ ಗಿಟ್ಟಿಸಿಕೊಳ್ಳುತ್ತಾರೆ. ಇಬ್ಬರಲ್ಲಿ ಯಾರೇ ಕ್ಯಾಪ್ಟನ್ ಆದರೂ ಈ ಸೀಸನ್‌ನಲ್ಲಿ ಮೊದಲ ಬಾರಿಗೆ ಕ್ಯಾಪ್ಟನ್ ಆಗುತ್ತಿರುವುದು ಎನ್ನುವುದು ವಿಶೇಷ.

ವರ್ತೂರ್ ಸಂತೋಷ್ ಗೆಲ್ಲಲಿ: ಅವಿನಾಶ್ ಶೆಟ್ಟಿ

ಬೆಂಗಳೂರು: ವೈಲ್ಡ್‌ಕಾರ್ಡ್ ಎಂಟ್ರಿ ಮೂಲಕ ಬಿಗ್‌ಬಾಸ್ ಮನೆಗೆ ಪ್ರವೇಶ ಪಡೆದಿದ್ದ ಅವಿನಾಶ್ ಶೆಟ್ಟಿ ಅವರು ಈ ವಾರ ಮನೆಯಿಂದ ಎಲಿಮಿನೇಟ್ ಆಗುವ ಮೂಲಕ ನಾಲ್ಕು ವಾರಗಳ ತಮ್ಮ ಬಿಗ್‌ಬಾಸ್ ಪ್ರಯಾಣವನ್ನು ಮುಗಿಸಿದ್ದಾರೆ. ಮನೆಯಿಂದ ಹೊರಬಂದಿರುವ ಅವಿನಾಶ್ ಜಿಯೊ ಸಿನಿಮಾಗೆ ಸಂದರ್ಶನ ನೀಡಿದ್ದು ತಮ್ಮ ಬಿಗ್‌ಬಾಸ್ ಪಯಣದ ಅನುಭವವನ್ನು ಹಂಚಿಕೊಂಡಿದ್ದಾರೆ.

ಉಳಿದುಕೊಳ್ಳುತ್ತೇನೆ ಅಂದುಕೊಂಡಿದ್ದೆ..

ಬಿಗ್‌ಬಾಸ್ ಮನೆಯಿಂದ ಹೊರಗೆ ಬಂದಿದ್ದೀನಿ, ತುಂಬಾನೇ ಫೀಲಿಂಗ್ಸ್ ಇವೆ. ವೈಲ್ಡ್‌ಕಾರ್ಡ್ ಸ್ಪರ್ಧಿಯಾಗಿ ನಾಲ್ಕು ವಾರ ಬಿಗ್‌ಬಾಸ್ ಮನೆಯಲ್ಲಿ ಇದ್ದೆ. ಎಲ್ಲಾ ಟಾಸ್ಕ್‌ಗಳಲ್ಲೂ ನನ್ನ ಉತ್ತಮ ಪ್ರದರ್ಶನ ನೀಡಲು ಪ್ರಯತ್ನಿಸಿದ್ದೇನೆ. ಬಿಗ್‌ಬಾಸ್ ಫಿನಾಲೆ ಹತ್ತಿರವಿರುವಾಗ ಮನೆಯಿಂದ ಹೊರಗೆ ಬಂದಿರುವುದಕ್ಕೆ ಸ್ವಲ್ಪ ದುಃಖವಾಗುತ್ತಿದೆ. ನಾನು ಎಲಿಮಿನೇಟ್ ಆಗುತ್ತೇನೆ ಎಂದು ನಿರೀಕ್ಷಿಸಿರಲಿಲ್ಲ. ಮನೆಯಲ್ಲಿ ಉಳಿದುಕೊಳ್ಳುತ್ತೇನೆ ಅಂದುಕೊಂಡಿದ್ದೆ ಎಂದು ಅವಿನಾಶ್ ತಮ್ಮ ಅಭಿಪ್ರಾಯವನ್ನು ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.

ಸದುಪಯೋಗಪಡಿಸಿಕೊಳ್ಳುವಲ್ಲಿ ಎಡವಿದೆ!

ವೈಲ್ಡ್ ಕಾರ್ಡ್ ಸ್ಪರ್ಧಿ ಅಂದ ಕೂಡಲೇ ನಿರೀಕ್ಷೆ ಹೆಚ್ಚಿಗೆಯೇ ಇರುತ್ತದೆ. ಆ ನಿರೀಕ್ಷೆಯನ್ನು ಪೂರೈಸುವ ಹಾದಿಯಲ್ಲಿಯೇ ನಾನಿದ್ದೆ ಕೂಡ. ಒಂದು ವಾರ ಗ್ರೇಸ್ ಟೈಮ್ ಕೂಡ ಇತ್ತು. ನಾನು ಮನೆಗೆ ಹೋದ ಮೊದಲ ವಾರ ಎಲಿಮಿನೇಷನ್ ಇರಲಿಲ್ಲ. ಆದರೆ ಅದನ್ನು ನಾನು ಸದುಪಯೋಗಪಡಿಸಿಕೊಳ್ಳುವಲ್ಲಿ ಎಡವಿದೆ ಅನಿಸುತ್ತದೆ. ಆದರೆ ಗೇಮ್‌ನಲ್ಲಿ ನನ್ನತನವನ್ನು ಬಿಟ್ಟುಕೊಡಲಿಲ್ಲ ಎಂದು ಅವಿನಾಶ್ ಹೇಳಿದ್ದಾರೆ.

ಸ್ನೇಹದಿಂದ ನೋಡಿಕೊಂಡರು!

ನಾನು ಮನೆಯ ಒಳಗೆ ಹೋದಾಗ ವಿನಯ್, ತನಿಷಾ, ಕಾರ್ತಿಕ್ ಎಲ್ಲರ ಬಗ್ಗೆಯೂ ಕೆಲವು ಪೂರ್ವನಿರ್ಧರಿತ ಅಭಿಪ್ರಾಯಗಳಿದ್ದವು. ಎಲ್ಲರಿಗಿಂತ ಮನೆಯಲ್ಲಿ ಕಡಿಮೆ ಪರಿಚಯ ಇದ್ದಿದ್ದು ವರ್ತೂರ್ ಸಂತೋಷ್ ಮತ್ತು ತುಕಾಲಿ ಅವರ ವ್ಯಕ್ತಿತ್ವ. ಐವತ್ತು ದಿನಗಳ ನಂತರ ಮನೆಗೆ ಹೋದಾಗ ಸದಸ್ಯರಿಂದ ಬೇರೆ ರೀತಿಯ ಸ್ಪಂದನೆ ಸಿಕ್ಕಿತ್ತು. ಆದರೆ, ವರ್ತೂರು ಸಂತೋಷ್ ಮತ್ತು ತುಕಾಲಿ ಅವರು ತುಂಬಾನೇ ಸ್ನೇಹದಿಂದ ನೋಡಿಕೊಂಡರು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಕಲಿ–ಪ್ರಾಮಾಣಿಕ–ಅಂತಿಮ ಸ್ಪರ್ಧಿ?

ನನಗೆ ವರ್ತೂರ್ ಸಂತೋಷ್ ಅವರು ತುಂಬಾ ಪ್ರಾಮಾಣಿಕ ಮನುಷ್ಯ ಅನಿಸಿದರು. ವಿನಯ್ ಹಾಗೂ ತನಿಷಾ ಸ್ವಲ್ಪ ನಕಲಿ ಮಾಡುತ್ತಿದ್ದಾರೆ. ವರ್ತೂರ್ ಸಂತೋಷ್ ಅವರು ಖಂಡಿತ ಅಂತಿಮ ಹಂತಕ್ಕೆ ಹೋಗುತ್ತಾರೆ. ಅವರ ಜೊತೆಗೆ ಪ್ರತಾಪ್ ಕೂಡ ಬರಬಹುದು. ಸಂಗೀತಾ ಕೂಡ ಟಾಪ್ 5 ಸ್ಪರ್ಧಿಗಳ ಪಟ್ಟಿಯಲ್ಲಿ ಇರುತ್ತಾರೆ. ಕಾರ್ತಿಕ್ ಕೂಡ ತುಂಬ ಪ್ರಬಲ ಸ್ಪರ್ಧಿ, ತುಕಾಲಿ ಅವರು ಬುದ್ಧಿವಂತ ಹಾಗೂ ಸ್ವಯಂ ಕೇಂದ್ರಿತ ಮನುಷ್ಯ ಎಂದು ಹೇಳಿದ ಅವಿನಾಶ್ ನನಗೆ ವೈಯಕ್ತಿಕವಾಗಿ ವರ್ತೂರ್ ಸಂತೋಷ್ ಗೆಲ್ಲಬೇಕು ಎಂಬ ಆಸೆ ಇದೆ ಎಂದು ಹೇಳಿದ್ದಾರೆ.

ಮುಂದಿನ ವಾರ ಬಿಗ್‌ಬಾಸ್ ಮನೆಯಿಂದ ಸಿರಿ ಅವರು ಹೊರಗೆ ಬರುತ್ತಾರೆ ಎಂದಿದ್ದಾರೆ.

ಫನ್ ಫ್ರೈಡೆಯಲ್ಲಿ ತುಂಬಾ ಎಂಜಾಯ್ ಮಾಡಿದೆ

ಫನ್ ಫ್ರೈಡೆ ಟಾಸ್ಕ್‌ಗಳನ್ನು ನಾನು ತುಂಬಾ ಎಂಜಾಯ್ ಮಾಡಿದ್ದೇನೆ. ಅದರಲ್ಲಿ ಕಣ್ಣಿಗೆ ಪಟ್ಟಿ ಹಾಕಿಕೊಂಡು ಬಾಲ್ ಸಂಗ್ರಹಿಸುವ ಟಾಸ್ಕ್ ನನಗೆ ಇಷ್ಟವಾಯಿತು.

ಶಿಸ್ತು ಕಲಿಸಿಕೊಟ್ಟ ಮನೆ ಅದು!

ಬಿಗ್‌ಬಾಸ್ ಮನೆ ಎಂಬುದೇ ಒಂದು ಜಾದು. ಅಲ್ಲಿ ಇರುವ ಸ್ಪರ್ಧಿಗಳಿಗಷ್ಟೇ ಅದರ ಮ್ಯಾಜಿಕ್ ಗೊತ್ತಾಗಲು ಸಾಧ್ಯ. ಅಲ್ಲಿನ ಶಿಸ್ತನ್ನು ಮಿಸ್ ಮಾಡ್ಕೋತೀನಿ. ಏಕೆಂದರೆ, ಲೈಫ್‌ನಲ್ಲಿ ಶಿಸ್ತು ಯಾಕೆ ಮುಖ್ಯ ಎಂಬುದನ್ನು ಕಲಿಸಿಕೊಟ್ಟ ಮನೆ ಅದು ಎಂದು ಹೇಳಿದ್ದಾರೆ. ಬಿಗ್‌ಬಾಸ್ ನನ್ನ ಗಾಡ್‌ಫಾದರ್ ಬಿಗ್‌ಬಾಸ್ ನನ್ನ ಜೀವನದಲ್ಲಿಯೇ ಒಂದು ಗಾಡ್‌ಫಾದರ್. ಏಕೆಂದರೆ ಮನೆಯಲ್ಲಿ ನಾಲ್ಕು ವಾರಗಳಷ್ಟೇ ಇದ್ದರೂ ಬದುಕಿನಲ್ಲಿ ನಲವತ್ತು ವರ್ಷಗಳ ಪಾಠ ಕಲಿಸಿದೆ. ಎಷ್ಟೇ ಚಿಕ್ಕ ವಿಚಾರವಾಗಲಿ, ಕೊರತೆಯಾಗಲಿ, ಸಮಸ್ಯೆಯಾಗಲಿ ತಕ್ಷಣವೇ ಅದನ್ನು ಗಮನಿಸಿ ಬಿಗ್‌ಬಾಸ್ ಕೊಡುವ ಪರಿಹಾರ, ಪ್ರೀತಿಗೆ ನಾನು ಆಭಾರಿಯಾಗಿದ್ದೀನಿ. ಹಾಗಾಗಿಯೇ ಬಿಗ್‌ಬಾಸ್‌ಗೆ ನಾನು ಋಣಿಯಾಗಿರುತ್ತೇನೆ ಎಂದಿದ್ದಾರೆ.

'Chef ಚಿದಂಬರ'ದಲ್ಲಿ 'ಅನು'ವಾಗಿ ರೇಚಲ್

'ಲವ್ ಮಾಕ್ಟೇಲ್' ಚಿತ್ರದ ಮೂಲಕ ಗಮನಸೆಳೆದ ನಟಿ ರೇಚಲ್ ಡೇವಿಡ್ ಹೊಸ ಲುಕ್‌ನಲ್ಲಿ ತೆರೆಗೆ ಬರಲಿದ್ದಾರೆ. ಎಂ.ಆನಂದರಾಜ್ ನಿರ್ದೇಶನದ 'Chef ಚಿದಂಬರ' ಚಿತ್ರದಲ್ಲಿ 'ಅನು' ಎಂಬ ಪಾತ್ರದಲ್ಲಿ ರೇಚಲ್ ಕಾಣಿಸಿಕೊಳ್ಳಲಿದ್ದಾರೆ.

ಅನಿರುದ್ಧ ನಟನೆಯ ಈ ಚಿತ್ರದಲ್ಲಿ ನಟಿ ನಿಧಿ ಸುಬ್ಬಯ್ಯ ಅವರೂ ಬಣ್ಣಹಚ್ಚಿದ್ದು, ಪ್ರಸ್ತುತ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಚಿತ್ರತಂಡ ತೊಡಗಿಸಿಕೊಂಡಿದೆ. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ. ಎನ್. ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ ಬರೆದಿದ್ದು, ಚಿತ್ರಕಥೆ ಹಾಗೂ ಸಂಭಾಷಣೆ ಗಣೇಶ್ ಪರಶುರಾಮ್ ಬರೆದಿದ್ದಾರೆ. ಉದಯಲೀಲ ಛಾಯಾಚಿತ್ರಗ್ರಹಣ, ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನ, ವಿಜೇತ್ ಚಂದ್ರ ಸಂಕಲನ, 'ವಿಕ್ರಾಂತ್ ರೋಣ' ಖ್ಯಾತಿಯ ಆಶಿಕ್ ಕುಸುಗೊಳ್ಳಿ ಡಿ.ಐ., ನರಸಿಂಹಮೂರ್ತಿ ಸಾಹಸ ನಿರ್ದೇಶನ ಹಾಗೂ ಮಾಧುರಿ ಪರಶುರಾಮ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಶರತ್ ಲೋಹಿತಾಶ್ವ, ಕೆ.ಎಸ್ ಶ್ರೀಧರ್, ಶಿವಮಣಿ ಮುಂತಾದವರು 'chef ಚಿದಂಬರ' ಚಿತ್ರದ ತಾರಾಬಳಗದಲ್ಲಿದ್ದಾರೆ.



'ಬ್ಯಾಚುಲರ್ ಪಾರ್ಟಿ' ತೆರೆಗೆ

ರಕ್ಷಿತ್ ಶೆಟ್ಟಿ ನಿರ್ಮಾಣದ, ಅಭಿಜಿತ್ ಮಹೇಶ್ ನಿರ್ದೇಶನದ 'ಬ್ಯಾಚುಲರ್ ಪಾರ್ಟಿ' ಸಿನಿಮಾ 2024ರ ಜ.26ರಂದು ಬಿಡುಗಡೆಗೊಳ್ಳಲಿದೆ.

ಚಿತ್ರದ ಟೀಸರ್ ಬಿಡುಗಡೆ ಮಾಡಿರುವ ಪರಂವಃ ಸ್ಟುಡಿಯೋಸ್ ರಿಲೀಸ್ ದಿನಾಂಕವನ್ನು ಪ್ರಕಟಿಸಿದೆ. 'ಈ ಸಲ ಪಾರ್ಟಿ ಜೋರು!' ಎನ್ನುವ ಮೂಲಕ ಮನರಂಜನೆಯ ರಸದೌತಣದ ಮುನ್ಸೂಚನೆಯನ್ನು ಚಿತ್ರತಂಡ ನೀಡಿದೆ. ರಕ್ಷಿತ್ ಶೆಟ್ಟಿ ನಟನೆಯ ಹಿಟ್ ಸಿನಿಮಾ 'ಕಿರಿಕ್ ಪಾರ್ಟಿ'ಯ ಬರಹಗಾರರಲ್ಲಿ ಅಭಿಜಿತ್ ಮಹೇಶ್ ಒಬ್ಬರಾಗಿದ್ದರು. ಇದೀಗ ಸ್ವತಂತ್ರ ನಿರ್ದೇಶಕನಾಗಿ ಅಭಿಜಿತ್ ಬೆಳ್ಳಿಪರದೆಗೆ ಹೆಜ್ಜೆ ಇಡುತ್ತಿದ್ದಾರೆ. ನಟರಾದ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ ಸೇರಿದಂತೆ ಅನೇಕರ ಸಿನಿಮಾಗಳಲ್ಲಿ ಬರಹಗಾರರಾಗಿ ಅಭಿಜಿತ್ ಕಾರ್ಯನಿರ್ವಹಿಸಿದ್ದಾರೆ.

ಕಾಮಿಡಿ ಜಾನರ್‌ನ ಈ ಸಿನಿಮಾದಲ್ಲಿ ಅಚ್ಯುತ್ ಕುಮಾರ್, ದಿಗಂತ್ ಹಾಗೂ ಲೂಸ್ ಮಾದ ಯೋಗಿ ಹಾಗೂ ಸಿರಿ ರವಿಕುಮಾರ್ ನಟಿಸಿದ್ದಾರೆ. ಈ ಸಿನಿಮಾದಲ್ಲಿ ರಿಷಬ್ ಶೆಟ್ಟಿ ನಟಿಸಬೇಕಿತ್ತು. ಆದರೆ 'ಕಾಂತಾರ'ದ ಯಶಸ್ಸಿನ ಬೆನ್ನಲ್ಲೇ ಅದರ ಎರಡನೇ ಭಾಗದ ಸಿದ್ಧತೆಗೆ ರಿಷಬ್ ಇಳಿದ ಕಾರಣ, ಅವರು 'ಬ್ಯಾಚುಲರ್ ಪಾರ್ಟಿ' ಸಿನಿಮಾದಿಂದ ಹೊರಗುಳಿದಿದ್ದರು. ಅವರ ಸ್ಥಾನಕ್ಕೆ ಲೂಸ್ ಮಾದ ಯೋಗಿ ಬಂದಿದ್ದಾರೆ. ಸಿನಿಮಾ ಬ್ಯಾಂಕಾಕ್‌ನಲ್ಲಿ ಚಿತ್ರೀಕರಣಗೊಂಡಿದೆ. ಪರಂವಃ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ರಕ್ಷಿತ್ ಶೆಟ್ಟಿ ಹಾಗೂ ಅಮಿತ್ ಗುಪ್ತ ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅರವಿಂದ್ ಛಾಯಾಚಿತ್ರಗ್ರಹಣ, ಅರ್ಜುನ್ ರಾಮು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ವಿನೂತನ ರೀತಿಯಲ್ಲಿ ಶೀರ್ಷಿಕೆ ಅನಾವರಣ

ಪಝಲ್ ಆಟದಂತೆ ಕಲಾವಿದರು ಎಲ್ಲವನ್ನು ಜೋಡಿಸಿದಾಗ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಭಾವಚಿತ್ರ ಮೂಡಿಬಂತು. ನಂತರ ಅದನ್ನು ತಿರುಗಿಸಿದಾಗ 'ದಂಡತೀರ್ಥ' ಚಿತ್ರದ ಶೀರ್ಷಿಕೆ ಅನಾವರಣಗೊಂಡಿತು.

ಸುಮಾರು 78 ಚಿತ್ರಗಳಿಗೆ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿರುವ ಹರಿಪ್ರಾಣ ಮೊದಲ ಅನುಭವ ಎನ್ನುವಂತೆ 'ಪ್ರಾಣ ಪ್ರೊಡಕ್ಷನ್' ಸಂಸ್ಥೆ ಹುಟ್ಟುಹಾಕಿ ಹೊಸ ಪ್ರತಿಭೆಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಇದರ ಸಲುವಾಗಿ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಇವರ ಶ್ರಮಕ್ಕೆ ಉಮೇಶ್ ಬಂಡವಾಳ ಹೂಡುತ್ತಿದ್ದಾರೆ.

ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿದ ನಿರ್ದೇಶಕರು, 'ದಂಡ ಎಂದರೆ ಶಿಕ್ಷೆ. ತೀರ್ಥಕ್ಕೆ ಪ್ರಸಾದ ಎನ್ನುವುದುಂಟು. ಆಂಜನೇಯನ ಭಕ್ತನಿಗೆ ಮತ್ತು ಮಾರುತಿಗೆ ಮತ್ತೊಂದು ಹೆಸರು ಇದೇ ಆಗಿರುತ್ತದೆ. ಮೊದಲರ್ಧ ನೈಜ ಘಟನೆಯಲ್ಲಿ ಕಾಮಿಡಿ, ಉಳಿದದ್ದು ಕಾಲ್ಪನಿಕವಾಗಿ ರಿವೆಂಜ್ ಸ್ಟೋರಿಯಲ್ಲಿ ಸಾಗುತ್ತದೆ' ಎಂದರು.

'ಪ್ರಾಣ ಆಡಿಯೊ' ಮುಂದಿನ ದಿನಗಳಲ್ಲಿ ಶುರು ಮಾಡಲಾಗುತ್ತಿದೆ. ಹಾಗೂ 'ಪ್ರಾಣ ಎಂಟರ್‌ಟೈನ್‌ಮೆಂಟ್' ಮೂಲಕ ರಾಜ್ಯದಾದ್ಯಂತ ಡ್ಯಾನ್ಸರ್, ಗಾಯಕರಿಗೆ ವೇದಿಕೆ ಕಲ್ಪಿಸಲು ರಿಯಾಲಿಟಿ ಷೋ ನಡೆಸಲಾಗುವುದು. ಇದರಲ್ಲಿ ಗೆದ್ದ ಮೂವರಿಗೆ ಬಹುಮಾನ ನೀಡಿ, ಚಿತ್ರಗಳಿಗೆ ಇವರ ಹೆಸರನ್ನು ಶಿಫಾರಸು ಮಾಡಲಾಗುತ್ತದೆ ಎಂಬುದರ ಮಾಹಿತಿ ನೀಡಿದರು.

ತಾರಾಗಣದಲ್ಲಿ ಅವಿನಾಶ್(ಜ್ಯೂ.ದರ್ಶನ್), ರಜನಿಕಾಂತ್, ರೇಣುಕಪ್ರಸಾದ್, ಕುರಿಪ್ರತಾಪ್, ಚಂದ್ರಪ್ರಭ, ಜ್ಯೋತಿ, ದೇವು ಸಕಲೇಶಪುರ, ಖಳನಾಗಿ ಪುನೀತ್ ಮತ್ತು ಶರಣ್, ಬೇಬಿ ಶಾನ್ವಿ ನಾಯಕಿಯರಾಗಿ ಮಾನಸಗೌಡ, ಪೂಜರಾಮಚಂದ್ರ ಮುಂತಾದವರು ನಟಿಸುತ್ತಿದ್ದಾರೆ.

ಛಾಯಾಗ್ರಹಣ ಜಿ.ರಂಗಸ್ವಾಮಿ, ನೃತ್ಯ ಜಿ.ಪಿ. ಆರಾಧ್ಯ, ಕಾರ್ಯಕಾರಿ ನಿರ್ಮಾಪಕ ವಿಜಯ್, ವಸ್ತ್ರ ವಿನ್ಯಾಸ ಲೇಖನ ಅವರದ್ದಾಗಿದೆ.

'ಕಣ್ಣಾ ಮುಚ್ಚೆ' ಪ್ರೀತಿಯ ಸಂಕೇತ

'ಕಣ್ಣಾ ಮುಚ್ಚೆ' ಚಿತ್ರದ ಆರು ಹಾಡುಗಳ ಪೈಕಿ, ಮೂರು ಗೀತೆಗಳ ಲಿರಿಕಲ್ ವಿಡಿಯೊ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದಲ್ಲಿ ಅದ್ದೂರಿಯಾಗಿ ನಡೆಯಿತು.

ಕೃಷಿ ಸ್ಟುಡಿಯೋಸ್ ಮತ್ತು ಸಚಿತ್ ಫಿಲಿಂಸ್ ಹಾಗೂ ಶಿವ ಸಿನಿಮಾಸ್ ಬ್ಯಾನರ್‌ನಡಿ ವಿತರಕ ವೆಂಕಟ್‌ಗೌಡ, ಪತ್ನಿ ಮೀನಾ ವೆಂಕಟ್ ನಿರ್ಮಾಣ ಮಾಡಿದ್ದಾರೆ. ಜಿ.ವಿ. ವೆಂಕಟೇಶಬಾಬು-ಲೋಕೇಶ್.ಎನ್.ಬಿ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದಾರೆ.

ಹಲವು ವರ್ಷಗಳ ನಂತರ ಸಂಗೀತ ಸಂಯೋಜಿಸಿರುವ ರಾಜೇಶ್ ರಾಮನಾಥ್ ಮಾತನಾಡಿ, '2017ರಲ್ಲಿ ಅಪ್ಪನ ಕಾರ್ಖಾನೆ ನೋಡಿಕೊಳ್ಳುವ ಸಲುವಾಗಿ ಚಿತ್ರರಂಗದಿಂದ ದೂರ ಸರಿದಿದ್ದೆ. ಆದರೆ ಈ ತಂಡವು ಸಂಪರ್ಕಿಸಿ ನಾನೇ ಇರಬೇಕೆಂದು ಕೋರಿಕೊಂಡಿದ್ದರಿಂದ ಕೆಲಸ ಮಾಡಬೇಕಾಯಿತು. 'ಬೂಂ ಬೂಂ' ಗೀತೆಗೆ ಧ್ವನಿಯಾಗಿದ್ದೇನೆ. ಎಂದಿನಂತೆ ಇದರಲ್ಲೂ ಸಚ್ಚಿನ್ ಎನ್ನುವ ಗಾಯಕನನ್ನು ಪರಿಚಯಿಸಲಾಗಿದೆ. ಎ2 ಮ್ಯೂಸಿಕ್ ಸಂಸ್ಥೆಯು ಆಡಿಯೊ ಹಕ್ಕುಗಳನ್ನು ಪಡೆದುಕೊಂಡಿದೆ' ಎಂದರು.

'ಮಾಜರ್' ನಂತರ ಇದಕ್ಕೆ ಆಕ್ಷನ್ ಕಟ್ ಹೇಳಿದ್ದೇನೆ. ಪ್ರತಿಯೊಂದು ಹಾಡಿನಲ್ಲಿ ಒಂದೊಂದು ಕಥೆಯನ್ನು ಹೇಳಲಾಗಿದೆ. ಬೆಂಗಳೂರು, ರಾಮನಗರ, ಹೆಸರುಘಟ್ಟ ಸುಂದರ ತಾಣಗಲ್ಲಿ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. 'ಯುಎ' ಪ್ರಮಾಣಪತ್ರ ಸಿಕ್ಕಿದೆ ಎಂದು ನಿರ್ದೇಶಕ ಲೋಕಲ್ ಲೋಕಿ ಮಾಹಿತಿ ನೀಡಿದರು.

ನೃತ್ಯಪಟು ರವಿಕೃಷ್ಣ ನಾಯಕ. ತೇಜಸ್ವಿನಿ ಆನಂದಕುಮಾರ್ ನಾಯಕಿ. ಇವರೊಂದಿಗೆ ಉಗ್ರಂರವಿ, ನಾಗೇಂದ್ರ ಅರಸ್, ಕೃಷ್ಣ, ಮಮತ, ಪ್ರಶಾಂತ್ ಸಿದ್ದಿ, ಜಯಸೂರ್ಯ ಅಭಿನಯಿಸಿದ್ದಾರೆ. ಛಾಯಾಗ್ರಹಣ ಜಗನ್ ಬಾಬು, ಸಂಕಲನ ಇ.ಎಸ್.ಈಶ್ವರ್, ನೃತ್ಯ ಕಂಬಿರಾಜು-ವಿಜಯನಗರಮಂಜು-ಸದಾ ಅವರದ್ದಾಗಿದೆ.

'ಆನ್‌ಲೈನ್ ಮದುವೆ ಆಫ್ ಲೈನ್ ಶೋಭನ' ಟ್ರೈಲರ್ ಬಿಡುಗಡೆ

ಕಿರುತೆರೆ ಖ್ಯಾತಿಯ ಜೋಡಿ ಜಗ್ಗಪ್ಪ, ಸುಶ್ಮಿತಾ ಅಭಿನಯದ, ವೇಂಪಲ್ಲಿ ಬಾವಾಜಿ ಅವರ ನಿರ್ದೇಶನದ 'ಆನ್‌ಲೈನ್ ಮದುವೆ, ಆಫ್‌ಲೈನ್ ಶೋಭನ' ಚಿತ್ರದ ಟ್ರೈಲರ್ ಹಾಗೂ 2 ಹಾಡುಗಳ ಪ್ರದರ್ಶನ ಇತ್ತೀಚೆಗೆ ನಡೆಯಿತು.

ಆನ್‌ಲೈನ್ ಆ್ಯಪ್ ಮೂಲಕ ಜೊತೆಯಾದ ಯುವಜೋಡಿಯ ಸುತ್ತ ನಡೆಯುವ ಹಾಸ್ಯಪ್ರದಾನ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಅಪ್ಸರ ಮೂವೀಸ್ ಬ್ಯಾನರ್ ಅಡಿಯಲ್ಲಿ ವೇಂಪಲ್ಲಿ ಬಾವಾಜಿ ಅವರೇ ನಿರ್ಮಾಣ ಮಾಡಿದ್ದಾರೆ.

ಈಗಾಗಲೇ ಸೆನ್ಸಾರ್ ಮಂಡಳಿಯಿಂದ ಯು/ಎ ಸರ್ಟಿಫಿಕೇಟ್ ಪಡೆದಿರುವ ಈ ಚಿತ್ರವನ್ನು ಮುಂದಿನ ತಿಂಗಳು ತೆರೆಗೆ ತರುವ ಯೋಜನೆ ನಿರ್ಮಾಪಕರದ್ದು. ಜಗಪ್ಪ, ಸುಶ್ಮಿತ, ಸೀರುಂಡೆ ರಘು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ನಿರ್ದೇಶಕ ವೇಂಪಲ್ಲಿ ಬಾವಾಜಿ ಮಾತನಾಡಿ, ಇಡೀ ಚಿತ್ರದಲ್ಲಿ ನಗದೇ ಇರೋದಕ್ಕೆ ಗ್ಯಾಪ್ ಕೊಟ್ಟಿಲ್ಲ, ನಗದೇ ಇರುವವರಿಗೆ ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆ. ಈ ಚಿತ್ರಕ್ಕೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರದ ಅತ್ತಿಬೆಲೆ ಸುತ್ತಮುತ್ತ ಅಲ್ಲದೇ ಹಾಡುಗಳನ್ನು ಆನೇಕಲ್‌ನ ಸುಗ್ಗಿ ರೆಸಾರ್ಟ್ ಹಾಗೂ ಕೋರಮಂಗಲದ ಪಬ್‌ವೊಂದರಲ್ಲಿ ಚಿತ್ರೀಕರಣ ನಡೆಸಿದ್ದೇವೆ. ಈಗಿನ ಯೂಥ್ ಎಲ್ಲದಕ್ಕೂ ಸೋಷಿಯಲ್ ಮೀಡಿಯಾ ನೋಡುತ್ತಾರೆ, ಅದೇರೀತಿ ಇದ್ದ ನಾಯಕ ನಾಯಕಿ ಹೇಗೆ ಮದುವೆಯಾಗ್ತಾರೆ ಅಂತ ಸಿನಿಮಾದಲ್ಲಿ ಹೇಳಿದ್ದೇವೆ' ಎಂದರು.

ಗಜೇಂದ್ರ, ರಾಘವಿ ಸೇರಿದಂತೆ ಗಿಚ್ಚಿ ಗಿಲಿಗಿಲಿ, ಮಜಾಭಾರತ, ಕಾಮಿಡಿ ಕಿಲಾಡಿಗಳು, ಕಾರ್ಯಕ್ರಮದ ಅನೇಕ ಕಲಾವಿದರು ಅಲ್ಲದೆ ಯಶಸ್ವಿನಿ, ಚಂದನ, ಶರಣ್ಯರೆಡ್ಡಿ ಅಲ್ಲದೆ ಆ್ಯಂಕರ್ ದಯಾನಂದ್ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಾಹಿತ್ಯ ಹಾಗೂ ಸಂಭಾಷಣೆಯನ್ನು ನಿರ್ದೇಶಕ ವೇಂಪಲ್ಲಿ ಬಾವಾಜೀ ಅವರೇ ಬರೆದಿದ್ದಾರೆ. ಬಾಲು ಅವರ ಕ್ಯಾಮೆರಾ , ರೋಹಿತ್ ಅವರ ಸಂಕಲನ, ಅಲೆಕ್ಸ್ ಅವರ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ.

'ರಾನಿ' ಚಿತ್ರೀಕರಣ ಪೂರ್ಣ

ಗುರುತೇಜ್ ಶೆಟ್ಟಿ ನಿರ್ದೇಶನದ, ಕಿರಣ್‌ರಾಜ್ ನಾಯಕನಾಗಿ ನಟಿಸಿರುವ 'ರಾನಿ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಮೈಸೂರಿನ ವಿಷ್ಣುವರ್ಧನ್ ಸ್ಮಾರಕದಲ್ಲಿ ಕೊನೆಯ ಹಂತದ ಚಿತ್ರೀಕರಣ ಇತ್ತೀಚೆಗೆ ನಡೆಯಿತು.

ನಟರಾದ ರವಿಶಂಕರ್, 'ಮಠ' ಗುರುಪ್ರಸಾದ್, ಯಶ್ ಶೆಟ್ಟಿ, ಸೂರ್ಯ ಕುಂದಾಪುರ, ಧರ್ಮಣ್ಣ ಕಡೂರ್ ಅವರು ಈ ಹಂತದ ಚಿತ್ರೀಕರಣದಲ್ಲಿದ್ದರು. ಸ್ಟಾರ್ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಚಂದ್ರಕಾಂತ್ ಪೂಜಾರಿ, ಉಮೇಶ ಹೆಗ್ಡೆ ನಿರ್ಮಿಸುತ್ತಿರುವ ಮೊದಲ ಚಿತ್ರ ಇದಾಗಿದೆ. ಈಗಾಗಲೇ ಪೋಸ್ಟರ್, ಟೀಸರ್ ಮೂಲಕ ನಿರೀಕ್ಷೆ ಹುಟ್ಟಿಸಿರುವ ಈ ಚಿತ್ರದಲ್ಲಿ ಮೂವರು ನಾಯಕಿಯರಿದ್ದಾರೆ. ಕಿರಣ್ ರಾಜ್‌ಗೆ ರಾಧ್ಯ, ಸಮಿಕ್ಷಾ ಮತ್ತು ಅಪೂರ್ವ ಜೋಡಿಯಾಗಿದ್ದಾರೆ.

ಮೈಕೋ ನಾಗರಾಜ್, ಉಗ್ರಂ ಮಂಜು, ಉಗ್ರಂ ರವಿ, ಸುಜಯ್ ಶಾಸ್ತ್ರಿ, ಗಿರೀಶ್ ಹೆಗ್ಡೆ, ಬಿ. ಸುರೇಶ, ಶ್ರೀಧರ್, ಧರ್ಮೇಂದ್ರ ಅರಸ್, ಚೇತನ್ ದುರ್ಗ, ಅನಿಲ್ ಯಾದವ್, ಪ್ರಥ್ವಿ ರಾಜ್, ಅರ್ಜುನ್, ಕರಿ ಸುಬ್ಬು ಮುಂತಾದ ಕಲಾವಿದರಿದ್ದಾರೆ. ರಾಘವೇಂದ್ರ ಬಿ. ಕೋಲಾರ ಛಾಯಾಚಿತ್ರಗ್ರಹಣ, ಸತೀಶ್ ಕಲಾ ನಿರ್ದೇಶನ, ಉಮೇಶ ಸಂಕಲನ, ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಪ್ರಮೋದ ಮರವಂತೆ ಗೀತರಚನೆ, ವಿನೋದ್ ಸಾಹಸ ನಿರ್ದೇಶನ ಹಾಗೂ ಧನಂಜಯ ಅವರ ನೃತ್ಯ ನಿರ್ದೇಶನವಿದೆ. ಸದ್ಯದಲ್ಲೇ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಲಿದೆ ಎಂದಿದೆ ಚಿತ್ರತಂಡ.